ಮಂಗಳವಾರ, ನವೆಂಬರ್ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 331 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಕೋವಿಡ್-19 ಅಲೆಗಳು ತಾವಾಗಿಯೇ ಬರುವುದಿಲ್ಲ. ಬೇಜವಾಬ್ದಾರಿ ಸಮಾಜ ಅದನ್ನು ಬರಮಾಡಿಕೊಳ್ಳುತ್ತದೆ. ಅವಜ್ಞೆ ಹೆಚ್ಚಿದಷ್ಟೂ ಅವು ವೇಗವಾಗಿ, ತೀಕ್ಷ್ಣವಾಗಿ ಬರುತ್ತವೆ.

ಸಂಖ್ಯೆ-ಸುದ್ದಿ
ಕೋವಿಡ್ ಆಘಾತ ಮಕ್ಕಳು, ಸರ್ಕಾರಿ ಶಾಲೆಯತ್ತ

ಮುರಿಯದ 'ಬಾಲ'; ಟೆಸ್ಟ್ ರೋಚಕ ಡ್ರಾ 12

ಮಳೆ, ರೋಗಬಾಧೆಗೆ ತುತ್ತಾದ ದ್ರಾಕ್ಷಿ 4

ಸೆನ್ಸೆಕ್ಸ್	ನಿಫ್ಟಿ	₹/$
57,260 ▲	17,053 ▲	75.07 ▼

ಒಳ ಪುಟ

'ಆಕರ್ಷಕ' ಟ್ವೀಟ್‌ಗೆ ನೆಟ್ಟಿಗರ ಆಕ್ರೋಶ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೃಷಿ ಕಾಯ್ದೆಗಳನ್ನು ಹಿಂಪಡೆಯಲು ಉಭಯ ಸದನಗಳ ಅನುಮೋದನೆ

ಚರ್ಚೆ ಇಲ್ಲದೆ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ಕ್ಷೇತ್ರದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆಗೆ ಸಂಸತ್ತು ಸೋಮವಾರ ಆತುರದಲ್ಲಿ ಧ್ವನಿಮತದ ಒಪ್ಪಿಗೆ ನೀಡಿದೆ. ಚಳಿಗಾಲದ ಅಧಿವೇಶನದ ಮೊದಲ ದಿನವೇ ಮಸೂದೆ ಮಂಡನೆಯಾಗಿ, ಲೋಕಸಭೆ ಮತ್ತು ರಾಜ್ಯಸಭೆಯ ಅಂಗೀಕಾರವನ್ನೂ ಪಡೆದುಕೊಂಡಿದೆ. ಚರ್ಚೆ ಆಗಬೇಕು ಎಂಬ ವಿರೋಧ ಪಕ್ಷಗಳ ಆಗ್ರಹಕ್ಕೆ ಸರ್ಕಾರವು ಮಣಿಯಲಿಲ್ಲ.

ಲೋಕಸಭೆಯಲ್ಲಿ ಕೇವಲ ಮೂರು ನಿಮಿಷದಲ್ಲಿ ಮತ್ತು ರಾಜ್ಯಸಭೆಯಲ್ಲಿ ಒಂಬತ್ತು ನಿಮಿಷದಲ್ಲಿ 'ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆ 2021'ಕ್ಕೆ ಒಪ್ಪಿಗೆ ಕೊಡಲಾಯಿತು.

ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆಯ ಮೇಲೆ ಚರ್ಚೆ ಆಗಬೇಕು ಎಂದು ಲೋಕಸಭೆ ಮತ್ತು ರಾಜ್ಯಸಭೆಯ ಕಲಾಪ ಸಲಹಾ ಸಮಿತಿಯ ಸಭೆಯಲ್ಲಿಯೇ ವಿರೋಧ ಪಕ್ಷಗಳು ಒತ್ತಾಯಿಸಿದ್ದವು. ಸರ್ಕಾರ ಅದಕ್ಕೆ ಒಪ್ಪಲಿಲ್ಲ.

12 ಸದಸ್ಯರ ಅಮಾನತು: ಅಧಿವೇಶನ ಬಹಿಷ್ಕಾರಕ್ಕೆ ವಿಪಕ್ಷ ಯೋಚನೆ

ಮುಂಗಾರು ಅಧಿವೇಶನದಲ್ಲಿ 'ದುರ್ವರ್ತನೆ, ಉದ್ಧಟತನ, ಅಶಿಸ್ತು ಮತ್ತು ಹಿಂಸಾತ್ಮಕ ವರ್ತನೆ' ತೋರಿದ ಆರೋಪದಲ್ಲಿ ರಾಜ್ಯಸಭೆಯ 12 ಸದಸ್ಯರನ್ನು ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಲಾಗಿದೆ. ವಿರೋಧ ಪಕ್ಷಗಳ ಜತೆಗೆ ಮುಖಾಮುಖಿಗೆ ಸರ್ಕಾರವು ವೇದಿಕೆ ಸಜ್ಜು ಮಾಡಿದೆ ಎಂಬುದಾಗಿ ಇದನ್ನು ವಿಶ್ಲೇಷಿಸಲಾಗಿದೆ. ಇಡೀ ಅಧಿವೇಶನ ಬಹಿಷ್ಕರಿಸುವ ಬಗ್ಗೆ ವಿರೋಧ ಪಕ್ಷಗಳು ಯೋಚನೆ ಮಾಡುತ್ತಿವೆ.

ಅಮಾನತಾದವರಲ್ಲಿ ಕಾಂಗ್ರೆಸ್‌ನ ಆರು, ಶಿವಸೇನಾ ಮತ್ತು ಟಿಎಂಸಿಯ ತಲಾ ಇಬ್ಬರು, ಸಿಪಿಎಂ ಮತ್ತು ಸಿಪಿಐಯ ತಲಾ ಒಬ್ಬರು ಸಂಸದರು ಇದ್ದಾರೆ. 12 ಸಂಸದರಲ್ಲಿ ಐವರು ಮಹಿಳೆಯರಿದ್ದಾರೆ. ಕಾಂಗ್ರೆಸ್‌ನ ಸಯ್ಯದ್ ನಾಸಿರ್ ಹುಸೇನ್, ಶಿವಸೇನಾದ ಪ್ರಿಯಾಂಕಾ ಚತುರ್ವೇದಿ, ಸಿಪಿಎಂನ ಎಳಮರಂ ಕರೀಂ ಅಮಾನತಾದವರಲ್ಲಿ ಸೇರಿದ್ದಾರೆ.

10ನೇ ಪುಟ ನೋಡಿ

ಹಾಗಾಗಿ, ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವೆ ಕಲಾಪ ಸಲಹಾ ಸಮಿತಿ ಸಭೆಯಲ್ಲಿಯೇ ಜಟಾಪಟಿ ಆರಂಭವಾಗಿತ್ತು.

ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆಗಳ ಮೇಲೆ ಚರ್ಚೆಗೆ ಅವಕಾಶ ಇಲ್ಲ ಎಂದು ಸಚಿವರು ಹೇಳಿದರು. ಆದರೆ, ಮೀಸಾ ಮತ್ತು ಪೋಟಾ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಸಂದರ್ಭಗಳಲ್ಲಿ ಚರ್ಚೆ ಆಗಿದೆ ಎಂದು ವಿರೋಧ ಪಕ್ಷಗಳ ಸದಸ್ಯರು ನೆನಪಿಸಿದರು ಎಂದು ಮೂಲಗಳು ತಿಳಿಸಿವೆ.

ಮಸೂದೆಯ ಮೇಲೆ ಚರ್ಚೆಯ ಅಗತ್ಯವೇ ಇಲ್ಲ ಎಂದು ಹಿರಿಯ ಸಚಿವರೊಬ್ಬರು ಹೇಳಿದ್ದಕ್ಕೆ ವಿರೋಧ ಪಕ್ಷಗಳ ಸಂಸದರು ಬಲವಾದ ವಿರೋಧ ದಾಖಲಿಸಿದರು. ಚರ್ಚೆ ಬೇಕೇ ಬೇಡವೇ ಎಂಬ ವಾಗ್ವಾದ ಇದ್ದ ಕಾರಣ ರಾಜ್ಯಸಭೆಯ ಕಲಾಪ ಸಲಹಾ ಸಮಿತಿಯಲ್ಲಿ, ಮಸೂದೆಯ ಮಂಡನೆಯ ವಿಚಾರವನ್ನೇ ಕೈಗೆತ್ತಿಕೊಂಡಿಲ್ಲ.

10ನೇ ಪುಟ ನೋಡಿ

> **ಸರ್ಕಾರವು ಎಲ್ಲ ವಿಚಾರಗಳ ಬಗ್ಗೆ ಚರ್ಚೆಗೆ, ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧ. ಆದರೆ, ಸಂಸತ್ತು ಮತ್ತು ಸಭಾಧ್ಯಕ್ಷರ ಘನತೆಯನ್ನು ಕಾಯ್ದುಕೊಳ್ಳಬೇಕು**
> **ನರೇಂದ್ರ ಮೋದಿ,** ಪ್ರಧಾನಿ

> **ಕಾಯ್ದೆ ಹಿಂದಕ್ಕೆ ಪಡೆಯುವ ಮಸೂದೆ ಬಗ್ಗೆ ಚರ್ಚೆ ಇಲ್ಲ ಎಂಬುದು ಸರಿಯಲ್ಲ. ಇಂತಹ ಕನಿಷ್ಠ 17 ಮಸೂದೆಗಳ ಬಗ್ಗೆ ಈ ಹಿಂದೆ ಚರ್ಚೆ ನಡೆದಿದೆ**
> **ಮಲ್ಲಿಕಾರ್ಜುನ ಖರ್ಗೆ**
> ರಾಜ್ಯಸಭೆ ವಿರೋಧ ಪಕ್ಷದ ನಾಯಕ

'ಲಾಕ್‌ಡೌನ್ ಪ್ರಸ್ತಾವ ಇಲ್ಲ'

ಪ್ರಜಾವಾಣಿ ವಾರ್ತೆ



ದಾವಣಗೆರೆ: 'ರಾಜ್ಯದಲ್ಲಿ ಮತ್ತೆ ಲಾಕ್‌ಡೌನ್ ಮಾಡುವ ಯಾವುದೇ ಪ್ರಸ್ತಾವ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಪಷ್ಟಪಡಿಸಿದ್ದಾರೆ.

ಖಾಸಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಸೋಮವಾರ ನಗರಕ್ಕೆ ಬಂದಿದ್ದ ಅವರು ಸುದ್ದಿಗಾರರ ಜತೆಗೆ ಮಾತನಾಡಿದರು.

'ಜನರು ಆತಂಕ ಪಡುವ ಅಗತ್ಯವಿಲ್ಲ. ಲಾಕ್‌ಡೌನ್ ಜಾರಿಗೊಳಿಸುವುದಿಲ್ಲ. ಶಾಲಾ–ಕಾಲೇಜುಗಳಿಗೆ ರಜೆ ನೀಡುವ ಅಗತ್ಯವಿಲ್ಲ. ಆದರೆ, ನಿಗಾ ಇರಿಸಲಾಗುವುದು' ಎಂದು ತಿಳಿಸಿದರು.

'ಓಮೈಕ್ರಾನ್ ಸೋಂಕು ಕುರಿತಂತೆ ರಾಜ್ಯ ಸರ್ಕಾರ ತುರ್ತು ಕ್ರಮ ಕೈಗೊಳ್ಳುತ್ತಿದೆ. ವಿದೇಶಗಳಿಂದ ಬಂದವರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ದಕ್ಷಿಣ ಆಫ್ರಿಕಾದಿಂದ ಬಂದ ಒಬ್ಬರಲ್ಲಿ ವಿಭಿನ್ನ ಸೋಂಕಿನ ಲಕ್ಷಣ ಕಂಡುಬಂದಿದೆ. ಮಾದರಿಯನ್ನು ಐಸಿಎಂಆರ್‌ಗೆ ಪರೀಕ್ಷೆಗೆ ಕಳುಹಿಸಲಾಗಿದೆ. ವರದಿಗಾಗಿ ಕಾಯುತ್ತಿದ್ದೇವೆ' ಎಂದು ಹೇಳಿದರು.

ಓಮೈಕ್ರಾನ್ ವೈರಾಣು ಶಂಕೆ ಮಾದರಿ ಐಸಿಎಂಆರ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಆಫ್ರಿಕಾದಿಂದ ಬಂದಿರುವ ವ್ಯಕ್ತಿಗಳಲ್ಲಿ ಕೋವಿಡ್ ದೃಢಪಟ್ಟಿದ್ದ ಇಬ್ಬರ ಪೈಕಿ ಒಬ್ಬರಲ್ಲಿರುವ ವೈರಾಣು ತಳಿಯ ಕುರಿತು ಶಂಕೆ ಇದ್ದು, ಮಾದರಿಯನ್ನು ಹೆಚ್ಚಿನ ಪರೀಕ್ಷೆಗಾಗಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಗೆ (ಐಸಿಎಂಆರ್) ರವಾನಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ನವದೆಹಲಿ ವರದಿ: 'ಭಾರತದಲ್ಲಿ ಈವರೆಗೆ ಓಮೈಕ್ರಾನ್ ರೂಪಾಂತರ ತಳಿಯಿಂದ ಕೋವಿಡ್ ಬಂದಿರುವ ಒಂದು ಪ್ರಕರಣವೂ ದೃಢಪಟ್ಟಿಲ್ಲ' ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 10

58 ಸ್ಥಳೀಯ ಸಂಸ್ಥೆಗಳಿಗೆ ಡಿ.27ರಂದು ಚುನಾವಣೆ

ಬೆಂಗಳೂರು: ಐದು ನಗರಸಭೆಗಳೂ ಸೇರಿದಂತೆ ಚುನಾಯಿತ ಪ್ರತಿನಿಧಿಗಳ ಅವಧಿ ಪೂರ್ಣಗೊಂಡಿರುವ 58 ನಗರ ಸ್ಥಳೀಯ ಸಂಸ್ಥೆಗಳ 1,185 ವಾರ್ಡ್‌ಗಳ ಪ್ರತಿನಿಧಿಗಳ ಆಯ್ಕೆಗೆ ಡಿಸೆಂಬರ್ 27ರಂದು ಚುನಾವಣೆ ನಡೆಯಲಿದೆ. 8

'ಬಿಟ್‌ಕಾಯಿನ್‌ಗೆ ಕರೆನ್ಸಿ ಮಾನ್ಯತೆ ಇಲ್ಲ'

ನವದೆಹಲಿ (ಪಿಟಿಐ): ಬಿಟ್‌ಕಾಯಿನ್‌ಗೆ ಕರೆನ್ಸಿಯ ಮಾನ್ಯತೆ ನೀಡುವ ಯಾವುದೇ ಆಲೋಚನೆಯೂ ಸರ್ಕಾರಕ್ಕೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಗೆ ಸೋಮವಾರ ತಿಳಿಸಿದ್ದಾರೆ. 11

ರಿಲಯನ್ಸ್ ಕ್ಯಾಪಿಟಲ್ ಆಡಳಿತ ಮಂಡಳಿ ರದ್ದು

ಮುಂಬೈ: ನಷ್ಟದಲ್ಲಿರುವ ರಿಲಯನ್ಸ್ ಕ್ಯಾಪಿಟಲ್ ಲಿಮಿಟೆಡ್‌ನ (ಆರ್‌ಸಿಎಲ್) ಆಡಳಿತ ಮಂಡಳಿಯನ್ನು ರದ್ದು ಮಾಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ. 11

ಎನ್‌ಇಪಿ ಜಾರಿ: ಅಸ್ಸಾಂ ಸಿಎಂಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರನ್ನು ಕರ್ನಾಟಕದ ಉನ್ನತ ಶಿಕ್ಷಣ ಮತ್ತು ಐಟಿ, ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಸೋಮವಾರ ರಾತ್ರಿ ಇಲ್ಲಿ ಭೇಟಿ ಮಾಡಿ, ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ (ಎನ್‌ಇಪಿ) ಹಾಗೂ ಐಟಿ- ಬಿಟಿ, ನವೋದ್ಯಮ ಬೆಳವಣಿಗೆ ಕುರಿತ ವಿಚಾರಗಳನ್ನು ಹಂಚಿಕೊಂಡರು.

ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ಹಿಮಂತ ಬಿಸ್ವ ಶರ್ಮ ಅವರು ಅಸ್ಸಾಂಗೆ ಬಂದು ವಿಚಾರ ವಿನಿಮಯ ಮಾಡಿಕೊಳ್ಳುವಂತೆ ಅಶ್ವತ್ಥನಾರಾಯಣ ಅವರನ್ನು ಆಹ್ವಾನಿಸಿದ್ದರು. ಹೀಗಾಗಿ, ಅಧಿಕಾರಿಗಳ ತಂಡದೊಂದಿಗೆ ಸಚಿವರು ಗುವಾಹಟಿಗೆ ಭೇಟಿ ನೀಡಿದ್ದರು.

ಎನ್‌ಇಪಿ ಹೊರಟಾಗ ಎದುರಾದ ಪ್ರಶ್ನೆಗಳು, ಅನುಮಾನಗಳು, ಅವುಗಳಿಗೆ ಉತ್ತರ ಕಂಡುಕೊಳ್ಳಲಾದ ಕುರಿತು ಹಂಚಿಕೊಂಡ ಅಶ್ವತ್ಥ ನಾರಾಯಣ, ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಸದೃಢಗೊಳಿಸಲು ಮಾಡಲಾಗಿರುವ ತಾಂತ್ರಿಕ ನೆರವುಗಳ ಕುರಿತು ವಿವರಿಸಿದರು. ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್), ಸ್ಮಾರ್ಟ್ ಕ್ಲಾಸ್ ರೂಮ್‌ಗಳ ಸ್ಥಾಪನೆ, ಡಿಜಿಟಲ್ ಬೋಧನೆ-ಕಲಿಕೆಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಟ್ಯಾಬ್ಲೆಟ್ ನೀಡಿರುವುದು, ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್‌ಎಂಎಸ್), ಬೋಧನೆ-ಕಲಿಕೆ ಪ್ರಕ್ರಿಯೆಯ ಮೌಲ್ಯಮಾಪನಕ್ಕೆ ಕೊಡಲಾಗಿರುವ ಒತ್ತು, ಆ ಮೂಲಕ ಕಲಿಕಾ ಸರಪಳಿಯ ಯಾವ ಕೊಂಡಿಯೂ ತಪ್ಪಿಹೋಗದಂತೆ ಹೇಗೆ ಕ್ರಮ ವಹಿಸಲಾಗಿದೆ ಎಂಬ ಬಗ್ಗೆ ವಿವರಿಸಿದರು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರನ್ನು ಮೈಸೂರು ಪೇಟ ಮತ್ತು ಶಾಲು ಹೊದಿಸಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಸನ್ಮಾನಿಸಿದರು. ರಾಜ್ಯ ನವೋದ್ಯಮ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್, ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್ ಇದ್ದರು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ನ.30ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಉತ್ತರಹಳ್ಳಿ ರಸ್ತೆ, ಕೋಡಿಪಾಳ್ಯ, ದೊಡ್ಡಬೆಲೆ ರಸ್ತೆ, ಅಂದ್ರಹಳ್ಳಿ ಮುಖ್ಯರಸ್ತೆ, ವಿಜಯನಗರ, ಮಾರೇನಹಳ್ಳಿ, ಗೋವಿಂದರಾಜನಗರ, ಚಂದ್ರಾ ಬಡಾವಣೆ, ಕಾಮಾಕ್ಷಿಪಾಳ್ಯ, ಹೆಗ್ಗನಹಳ್ಳಿ, ಸುಂಕದಕಟ್ಟೆ, ,ಸುತ್ತಮುತ್ತಲಿನ ಪ್ರದೇಶಗಳು.

ಕಸಾಪಗೆ ಗೌರವ ಕಾರ್ಯದರ್ಶಿ ನೇಮಕ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯನ್ನಾಗಿ ನೇ.ಭ. ರಾಮಲಿಂಗಶೆಟ್ಟಿ ಅವರನ್ನು ಪರಿಷತ್ ಅಧ್ಯಕ್ಷ ಮಹೇಶ ಜೋಶಿ ನೇಮಕ ಮಾಡಿದ್ದಾರೆ.



ನೇ.ಭ. ರಾಮಲಿಂಗಶೆಟ್ಟಿ

ಪ್ರಯಾಣಿಕರ ಸಂಖ್ಯೆ: 2020ರವರೆಗೆ ಶೇ 27ರಷ್ಟು ಗುರಿ ಸಾಧನೆ ಮಾತ್ರ

ಗುರಿ ಮುಟ್ಟದ 'ನಮ್ಮ ಮೆಟ್ರೊ'

• ಪ್ರವೀಣ್ ಕುಮಾರ್ ಪಿ.ವಿ.

ಮೆಟ್ರೊ ದೈನಂದಿನ ಪ್ರಯಾಣಿಕರ ಸಂಖ್ಯೆ– ಗುರಿ ಹಾಗೂ ವಾಸ್ತವ (ಲಕ್ಷಗಳಲ್ಲಿ)

ನಗರಗಳು	ಗುರಿ			ವಾಸ್ತವ (ಸರಾಸರಿ)			ಗುರಿಸಾಧನೆ (ಸರಾಸರಿ ಶೇಕಡವಾರು)		
	2018	2019	2020	2018	2019	2020	2018	2019	2020
ದೆಹಲಿ	68	70	72	25	40	57	38	58	79
ಮುಂಬೈ	6	6	6	4	3	5	68	57	74
ಬೆಂಗಳೂರು	13	14	15	3	3	4	24	24	27
ಚೆನ್ನೈ	8	9	9	2	1	1	3	9	13

ಬೆಂಗಳೂರು: ನಗರದ 'ನಮ್ಮ ಮೆಟ್ರೊ' ರೈಲುಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಯಾಣಿಕರನ್ನು ಸೆಳೆಯುವಲ್ಲಿ ಸಫಲವಾಗಿಲ್ಲ. 2019–20ರ ಆರ್ಥಿಕ ವರ್ಷದವರೆಗೆ ಉದ್ದೇಶಿತ ಗುರಿಯಲ್ಲಿ ಶೇ 27ರಷ್ಟು ಮಾತ್ರ ಸಾಧನೆ ಮಾಡುವಲ್ಲಿ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಯಶಸ್ವಿಯಾಗಿದೆ.

ಸಾರ್ವಜನಿಕ ಸಾರಿಗೆಯ ಅಂತರರಾಷ್ಟ್ರೀಯ ಸಂಸ್ಥೆ 'ಯುಐಟಿಪಿ'ಯು ಭಾರತದ ಮೆಟ್ರೊ ಯೋಜನೆಗಳನ್ನು ಅಧ್ಯಯನ ಮಾಡಿದ್ದು, ಇದರ ಮುಖ್ಯಾಂಶಗಳನ್ನು ಜಗತ್ತಿನ ಇತರ ರಾಷ್ಟ್ರಗಳ ಮೆಟ್ರೊ ಯೋಜನೆಗಳ ಜೊತೆ ಹೋಲಿಸಿ ವಿಶ್ಲೇಷಣೆ ನಡೆಸಿದೆ. ಇದರ ಫಲಿತಾಂಶವನ್ನು ಆಧರಿಸಿದ ವರದಿಯನ್ನು 2021ರ ನವೆಂಬರ್‌ನಲ್ಲಿ ಪ್ರಕಟಿಸಿದೆ.

ಜಗತ್ತಿನ ಇತರ ರಾಷ್ಟ್ರಗಳ ಮೆಟ್ರೊ ಯೋಜನೆಗಳಿಗೆ ಹೋಲಿಸಿದರೆ ಭಾರತದ ಪ್ರಮುಖ ನಗರಗಳಲ್ಲಿ ಪ್ರತಿ ಕಿ.ಮೀ ಮೆಟ್ರೊ ಮಾರ್ಗದಲ್ಲಿ ಪ್ರಯಾಣಿಸುವವರ ಸಂಖ್ಯೆಯು ಕಳಪೆಯಾಗೇನೂ ಇಲ್ಲ. ಆದರೆ, ಭಾರತದ ಮೆಟ್ರೊ ಯೋಜನೆಗಳು ಆರಂಭವಾದಾಗ ಇಟ್ಟುಕೊಂಡಿದ್ದಷ್ಟು ನಿರೀಕ್ಷೆಯ ಪ್ರಮಾಣದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಿಲ್ಲ. ಗುರಿ ಹಾಗೂ ವಾಸ್ತವಗಳನ್ನು ಹೋಲಿಸಿ ನೋಡಿದಾಗ ಪ್ರಯಾಣಿಕರ ಸಂಖ್ಯೆಯು ನಿಗದಿತ ಗುರಿಗಿಂತ ತೀರಾ ಕಡಿಮೆ ಇದೆ ಎಂಬ ಅಂಶವನ್ನೂ ಈ ಅಧ್ಯಯನವು ತೋರಿಸಿದೆ. ದೆಹಲಿ ಮೆಟ್ರೊ ಯೋಜನೆಯು 2018ರವರೆಗೆ ಉದ್ದೇಶಿತ ಪ್ರಮಾಣಿಕರ ಸಂಖ್ಯೆಯಲ್ಲಿ ಶೇ 38ರಷ್ಟನ್ನು ಸಾಧಿಸುವಲ್ಲಿ ಸಫಲವಾಗಿತ್ತು. ಆದರೆ, 2020ಕ್ಕೆ ಈ ಪ್ರಮಾಣವು ಶೇ 79ಕ್ಕೆ ಹೆಚ್ಚಳವಾಗಿದೆ. ಪ್ರಯಾಣಿಕರನ್ನು ಎಣಿಸುವ ಕ್ರಮವನ್ನೂ ಬದಲಾವಣೆ ಮಾಡಿರುವುದೂ ಇದಕ್ಕೆ ಕಾರಣ ಎಂದು ಹೇಳಲಾಗಿದೆ. ಮುಂಬೈ ಮೆಟ್ರೊ 2020ರಲ್ಲೇ ಶೇ 74ರಷ್ಟು ಗುರಿ ಸಾಧನೆ ಮಾಡುವಲ್ಲಿ ಯಶಸ್ವಿಯಾಗಿದೆ.

ಆದರೆ, 2019ರಲ್ಲಿ ಪ್ರಯಾಣಿಕರ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿತ್ತು. ಚೆನ್ನೈ ಮೆಟ್ರೊ ಶೇ 13ರಷ್ಟು ಗುರಿ ಸಾಧನೆ ಮಾಡುವಲ್ಲಿ ಮಾತ್ರ ಶಕ್ತವಾಗಿದೆ.

ದೇಶದ ಇತರ ಮೆಟ್ರೊ ಯೋಜನೆಗಳ ಪೈಕಿ 22.9 ಕಿ.ಮೀ ಉದ್ದದ ಮಾರ್ಗವನ್ನು ಹೊಂದಿರುವ ಲಖನೌ ಶೇ 8.6ರಷ್ಟು, 25 ಕಿ.ಮೀ ಉದ್ದದ ಮೆಟ್ರೊ ಮಾರ್ಗವನ್ನು ಹೊಂದಿರುವ ಕೊಚ್ಚಿ ಶೇ 14.5ರಷ್ಟು, 67 ಕಿ.ಮೀ ಮೆಟ್ರೊ ಮಾರ್ಗವನ್ನು ಹೊಂದಿರುವ ಹೈದರಾಬಾದ್ ಶೇ 15.2ರಷ್ಟು, 12 ಕಿ.ಮೀ ಉದ್ದದ ಮಾರ್ಗವನ್ನು ಹೊಂದಿರುವ ಜೈಪುರ ಮೆಟ್ರೊ ಶೇ 7.6ರಷ್ಟು ಮಾತ್ರ ಗುರಿ ಸಾಧನೆ ಮಾಡಿವೆ.

ಮೂರು ವರ್ಷಗಳಲ್ಲಿ ಮೆಟ್ರೊ ಪ್ರಯಾಣಿಕರ ಸಂಖ್ಯೆ ಹೆಚ್ಚಳವನ್ನು ವಿಶ್ಲೇಷಣೆ ನಡೆಸುವಾಗ ಕೋವಿಡ್ ಸಾಂಕ್ರಾಮಿಕಕ್ಕೆ ಮುನ್ನ ಇದ್ದ ಆರ್ಥಿಕ ಚಟುವಟಿಕೆ, ಸೇವಾ ವಲಯ ಹಾಗೂ ಸಾರಿಗೆ ಬೇಡಿಕೆಗಳು ಪೂರ್ಣ ಪ್ರಮಾಣದಲ್ಲಿದ್ದಂತೆ ಪರಿಗಣಿಸಲಾಗಿದೆ ಎಂದು ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

2011ರಲ್ಲಿ ಮೂರು ಪ್ರಮುಖ ನಗರಗಳಲ್ಲಿ 222 ಕಿ.ಮೀ.ಗಳಷ್ಟು ಮೆಟ್ರೊ ಮಾರ್ಗಗಳಿದ್ದವು. 2021ರ ನವೆಂಬರ್ ವೇಳೆಗೆ ಮೆಟ್ರೊ ಜಾಲ 13 ನಗರಗಳಿಗೆ ವಿಸ್ತರಣೆಯಾಗಿದ್ದು, ಮಾರ್ಗದ ಒಟ್ಟು ಉದ್ದ 697 ಕಿ.ಮಿ.ಗೆ ಹೆಚ್ಚಳವಾಗಿದೆ. ಇನ್ನೂ 1,032 ಕಿ.ಮೀ ಉದ್ದದ ಮೆಟ್ರೊ ಮಾರ್ಗ ನಿರ್ಮಾಣಕ್ಕೆ ಮಂಜೂರಾತಿ ಸಿಕ್ಕಿದ್ದು, ಇವುಗಳು ನಿರ್ಮಾಣ ಹಂತದಲ್ಲಿವೆ. ಇನ್ನೂ ಐದು ವರ್ಷಗಳಲ್ಲಿ ಮೆಟ್ರೊ ರೈಲು ಯೋಜನೆಗಳಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಹಾಗೂ ಇತರ ಹಣಕಾಸು ಸಂಸ್ಥೆಗಳ ಬಂಡವಾಳ ಸೇರಿ ಒಟ್ಟು ₹ 3 ಲಕ್ಷ ಕೋಟಿಗಳಷ್ಟು ಹೂಡಿಕೆ ಮಾಡಲು ಮಂಜೂರಾತಿ ನೀಡಲಾಗಿದೆ.

ಪ್ರಜಾವಾಣಿ ವಿಶೇಷ

> ಕೋವಿಡ್‌ನಿಂದ ಪ್ರಯಾಣಿಕರ ದೈನಂದಿನ ಸರಾಸರಿ ಹೆಚ್ಚಿಸಲು ಸಾಧ್ಯವಾಗಿಲ್ಲ. ಈಗ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗುತ್ತಿದೆ. ಗುರಿ ತಲುಪುವ ವಿಶ್ವಾಸವಿದೆ
>
> **ಅಂಜುಂ ಪರ್ವೇಜ್**, ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್

ನಿಗದಿಯಂತೆ ಪರೀಕ್ಷೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ಪದವಿ ಪರೀಕ್ಷೆಗಳು ಈಗಾಗಲೇ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ನಡೆಯಲಿವೆ.

ವೇಳಾಪಟ್ಟಿಯಲ್ಲಿ ಬದಲಾವಣೆ ಇಲ್ಲ ಎಂದು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟ್ರೊ ಸಂಚಾರ 25 ನಿಮಿಷ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ–ದಕ್ಷಿಣ ಎತ್ತರಿಸಿದ ಕಾರಿಡಾರ್‌ನಲ್ಲಿ ಉಂಟಾದ ತಾಂತ್ರಿಕ ದೋಷದಿಂದಾಗಿ ಯಶವಂತಪುರ–ನಾಗಸಂದ್ರ ನಿಲ್ದಾಣಗಳ ನಡುವೆ 'ನಮ್ಮ ಮೆಟ್ರೊ' ಸೇವೆ ಸೋಮವಾರ ಮಧ್ಯಾಹ್ನ 25 ನಿಮಿಷಗಳ ಕಾಲ ಸ್ಥಗಿತಗೊಂಡಿದ್ದು, ಪ್ರಯಾಣಿಕರು ಸಮಸ್ಯೆ ಎದುರಿಸಿದರು.

ಮಧ್ಯಾಹ್ನ 1.10 ನಿಮಿಷಕ್ಕೆ ಯಶವಂತಪುರ– ನಾಗಸಂದ್ರ ನಡುವಿನ ಎತ್ತರಿಸಿದ ಮಾರ್ಗದಲ್ಲಿ ತಾಂತ್ರಿಕ ದೋಷವು ಕಾಣಿಸಿಕೊಂಡಿತು. ಈ ಮಾರ್ಗದ ನಿಲ್ದಾಣಗಳಲ್ಲಿ ಮೆಟ್ರೊಗಾಗಿ ಕಾಯುತ್ತಿದ್ದ ಪ್ರಯಾಣಿಕರು ಬಸ್, ಆಟೊ ಮೊರೆ ಹೋಗಬೇಕಾಯಿತು. ತಾಂತ್ರಿಕ ದೋಷ ಕಾಣಿಸಿಕೊಂಡ ಅವಧಿಯಲ್ಲೂ ಯಶವಂತಪುರ– ರೇಷ್ಮೆ ಸಂಸ್ಥೆ ನಡುವಿನ ಮೆಟ್ರೊ ಮಾರ್ಗಗಳಲ್ಲಿ ರೈಲುಗಳು ಎಂದಿನಂತೆ ಸಂಚರಿಸಿದವು.

ತಾಂತ್ರಿಕ ದೋಷವನ್ನು ಮಧ್ಯಾಹ್ನ 1.35 ಗಂಟೆ ವೇಳೆಗೆ ಸರಿಪಡಿಸಲಾಯಿತು. ನಂತರ ನಾಗಸಂದ್ರ ನಿಲ್ದಾಣದಿಂದ ರೇಷ್ಮೆ ಸಂಸ್ಥೆವರೆಗೂ ಮೆಟ್ರೊ ಸೇವೆ ಪುನರಾರಂಭಗೊಂಡಿತು. 'ವಿದ್ಯುತ್ ಸರ್ಕೀಟ್‌ಗೆ ಸಂಬಂಧಿಸಿದ ಉಪಕರಣ ಕೆಟ್ಟುಹೋಗಿದ್ದರಿಂದ ಮೆಟ್ರೊ ಸೇವೆಯಲ್ಲಿ ಏರುಪೇರಾಯಿತು. ಈ ಉಪಕರಣವನ್ನು ತಕ್ಷಣವೇ ಬದಲಾಯಿಸಿದ್ದೇವೆ. ಆದರೂ 25 ನಿಮಿಷ ಕಾಲ ಪ್ರಯಾಣಿಕರು ಸಮಸ್ಯೆ ಎದುರಿಸಬೇಕಾಯಿತು. ಇದಕ್ಕಾಗಿ ವಿಷಾದಿಸುತ್ತೇವೆ' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಜ.8ರಿಂದ 'ನುಡಿ ಸಾಮ್ರಾಜ್ಯದಲ್ಲಿ ಸ್ವರಾಜ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಖಿಲ ಭಾರತೀಯ ಸಾಹಿತ್ಯ ಪರಿಷತ್ ವತಿಯಿಂದ ಜನವರಿ 8 ಮತ್ತು 9ರಂದು 'ನುಡಿ ಸಾಮ್ರಾಜ್ಯದಲ್ಲಿ ಸ್ವರಾಜ್ಯ' ಎಂಬ ವಿಷಯ ಕುರಿತಾದ ಅಧಿವೇಶನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಪರಿಷತ್ತಿನ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ಟ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾರ್ಯಕ್ರಮವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಲಿದ್ದಾರೆ. ಸಾಹಿತಿ ನಾ.ಮೊಗಸಾಲೆ ಅಧ್ಯಕ್ಷತೆ ವಹಿಸಲಿದ್ದು, ರಂಗಕರ್ಮಿ ದಿವಾಕರ ಹೆಗಡೆ ಭಾಷಣ ಮಾಡಲಿದ್ದಾರೆ' ಎಂದರು.

'ಅಧಿವೇಶನದಲ್ಲಿ ನುಡಿ ಸ್ವರಾಜ್ಯ, ನುಡಿ ಸಂಪದ, ಸಾಹಿತ್ಯ ಸಂಸ್ಕೃತಿ, ಅವಿತಿಟ್ಟ ಅಂಬೇಡ್ಕರ್ ನಾಟಕ ಪುಸ್ತಕಗಳು ಬಿಡುಗಡೆಗೊಳ್ಳಲಿವೆ. ಸಾಹಿತ್ಯದ ಮೊದಲ ಸ್ವಾತಂತ್ರ್ಯ ಹೋರಾಟ, ಕ್ರಾಂತಿಸೂರ್ಯ ಸೇರಿ ವಿವಿಧ ಗೋಷ್ಠಿಗಳು, ಕನ್ನಡ ಸಾಹಿತಿಗಳು ಕಂಡ ಸ್ವರಾಜ್ಯ ವಸ್ತು ಪ್ರದರ್ಶನ, ಮೆರವಣಿಗೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. (ಎಡದಿಂದ) ಎಲ್‌ಐಎಸ್ ಅಕಾಡೆಮಿ ಅಧ್ಯಕ್ಷ ಪಿ.ವಿ.ಕೊಣ್ಣೂರ,ವಿಟಿಯು ಕುಲಪತಿ ಪ್ರೊ.ಕರಿಸಿದ್ದಪ್ಪ ಹಾಗೂ ಕುಲಸಚಿವ ಪ್ರೊ.ಎ.ಎಸ್‌ದೇಶಪಾಂಡೆ ಇದ್ದಾರೆ.

ಗ್ರಂಥಪಾಲಕರಿಗೆ ತಾಂತ್ರಿಕ ಕೌಶಲ ಕೋರ್ಸ್

ಬೆಂಗಳೂರು: ಗ್ರಂಥಪಾಲಕರಿಗೆ ತಾಂತ್ರಿಕ ಕೌಶಲ ಹೆಚ್ಚಿಸುವ ಉದ್ದೇಶದಿಂದ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಗ್ರಂಥಾಲಯ ವಿಜ್ಞಾನ ತರಬೇತಿ ಆರಂಭಿಸಲು ಬೆಂಗಳೂರಿನ ಎಲ್‌ಐಎಸ್ ಅಕಾಡೆಮಿ ಜೊತೆ ಒಪ್ಪಂದ ಮಾಡಿಕೊಂಡಿದೆ.

ನಗರದ ವಿಟಿಯು ಪ್ರಾದೇಶಿಕ ಕಚೇರಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

'ಉನ್ನತ ಶಿಕ್ಷಣದಲ್ಲಿ ಗ್ರಂಥಪಾಲಕರ ಪಾತ್ರ ಮಹತ್ವದ್ದು. ಶೈಕ್ಷಣಿಕ ಬೆಳವಣಿಗೆಗೆ ಪೂರಕವಾದ ಮಾಹಿತಿ ವಿಜ್ಞಾನ ವಿಷಯಗಳನ್ನು ತಾಂತ್ರಿಕವಾಗಿ ಬೋಧಿಸಲು ಗ್ರಂಥಪಾಲಕರಿಗೆ ಗ್ರಂಥಾಲಯ ವಿಜ್ಞಾನ ಕೌಶಲಾಭಿವೃದ್ಧಿ ಕೋರ್ಸ್ ಹಾಗೂ ಎಂಜಿನಿಯರಿಂಗ್–ವಿಜ್ಞಾನ ವಿದ್ಯಾರ್ಥಿಗಳಿಗೆ 'ಮಾಸ್ಟರ್ ಆಫ್ ಸೈನ್ಸ್ ಇನ್ ಲೈಬ್ರರಿ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್' (ಎಂಎಸ್‌ಸಿ-ಎಲ್‌ಟಿಎಂ) ಸ್ನಾತಕೋತ್ತರ ಪದವಿ ಕೋರ್ಸ್ ಪ್ರಾರಂಭಿಸಲಾಗುತ್ತಿದ್ದು, ಇದಕ್ಕಾಗಿ ಎಲ್‌ಐಎಸ್ ಅಕಾಡೆಮಿ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ವಿಟಿಯು ಕುಲಪತಿ ಪ್ರೊ. ಕರಿಸಿದ್ದಪ್ಪ ತಿಳಿಸಿದರು.

ಎಲ್‌ಐಎಸ್ ಅಕಾಡೆಮಿ ಅಧ್ಯಕ್ಷ ಪಿ.ವಿ.ಕೊಣ್ಣೂರ, 'ಗ್ರಂಥಪಾಲಕರಿಗೆ ಕೌಶಲಾಭಿವೃದ್ಧಿ ಕೋರ್ಸ್‌ಗಳ ಮೂಲಕ ಯಶಸ್ವಿಯಾಗಿ ಶಿಕ್ಷಣ ನೀಡಲು ವಿಟಿಯು ಸಹಕರಿಸಬೇಕು' ಎಂದರು.

ಭೂ ಸ್ವಾಧೀನ ಪ್ರಶ್ನಿಸಿದ್ದ ಅರ್ಜಿ ವಜಾ

ಹೈಕೋರ್ಟ್ ಸುದ್ದಿ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆ ಭೂ ಸ್ವಾಧೀನ ಅಧಿಸೂಚನೆ ಪ್ರಶ್ನಿಸಿದ್ದ 39 ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಬಿ.ಎನ್.ಸದಾಶಿವ ಸೇರಿದಂತೆ 38 ಜನರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಆದೇಶ ಕಾಯ್ದಿರಿಸಿದ್ದ ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸೋಮವಾರ ಅರ್ಜಿ ವಜಾಗೊಳಿಸಿ ಆದೇಶಿಸಿದೆ.

'ಅರ್ಜಿದಾರರ ವಿರುದ್ಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂಬ ಈ ಮೊದಲಿನ ಮಧ್ಯಂತರ ಆದೇಶ ಡಿಸೆಂಬರ್ 29ರವರೆಗೆ ಜಾರಿಯಲ್ಲಿ ಇರುತ್ತದೆ' ಎಂದು ನ್ಯಾಯಪೀಠ ಹೇಳಿದೆ.

'ವಿಪರೀತ ವಿಳಂಬ ನೀತಿ ಅನುಸರಿಸುತ್ತಿರುವ ಬಿಡಿಎಗೆ, ಶಿವರಾಮ ಕಾರಂತ ಬಡಾವಣೆಯನ್ನು ಅಭಿವೃದ್ಧಿಪಡಿಸುವ ಇರಾದೆ ಇದ್ದಂತಿಲ್ಲ. ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನುದಾರರಿಗೆ ಹಣ ಪಾವತಿಸಲು ಬಿಡಿಎ ಬಳಿ ಹಣ ಇಲ್ಲದಂತಾಗಿದೆ. ಈಗಾಗಲೇ ಹೈಕೋರ್ಟ್ ಏಕಸದಸ್ಯ ಪೀಠ ಈ ಮೊದಲು ಅರ್ಜಿದಾರರ ಪರ ನೀಡಿದ್ದ ಆದೇಶದ ಅನುಸಾರ ನಿರಾಕ್ಷೇಪಣ ಪತ್ರ ಪಡೆದಿರುವವರು ನಿವೇಶನಗಳನ್ನು ಮಾರಾಟ ಮಾಡಿದ್ದು ಅಂತಹ ಕಡೆ ಬಡಾವಣೆ ಅಭಿವೃದ್ಧಿ ಆಗುತ್ತಿದೆ. ಆದ್ದರಿಂದ, ಅಧಿಸೂಚನೆ ರದ್ದುಗೊಳಿಸಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಗೆ ಸಂಬಂಧಿಸಿದಂತೆ 2008ರ ಡಿಸೆಂಬರ್ 31ರಂದು ಪ್ರಾಥಮಿಕ ಹಾಗೂ 2018ರ ನವೆಂಬರ್ 1ರಂದು ಅಂತಿಮ ಅಧಿಸೂಚನೆ ಅಧಿಸೂಚನೆ ಹೊರಡಿಸಲಾಗಿತ್ತು. 2014ರ ಜುಲೈ 26ರಂದು ಬಿಡಿಎ ಅರ್ಜಿದಾರರಿಗೆ ನಿರಾಕ್ಷೇಪಣ ಪತ್ರ ನೀಡಿತ್ತು. ಈ ಮೊದಲು, ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಗಳೆರಡನ್ನೂ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

NOTICE
The State Level Environmental Impact Assessment Authority, Karnataka (constituted by the ministry of Environment Forests and climate change Government of India) has accorded the Environmental Clearance to M/S. Nestled Haven Developers LLP. Rep, by its Designated Partner Mr. Rishad Gev Khergamwala, for Construction of Residential Apartment "27 SUMMIT" on plot area of 9,076 Sqm. The total built up area is 53,827 Sqm. bearing Municipal No.18 and PID No.77-35-18 at Ram Mandira Road, Sampangiramanagara, BBMP Ward No.110, Bangalore, Karnataka,vide No. SEIAA 87 CON 2021, EC Identification No.EC21B038KA121325, Dated 20th November 2021. The said copy of Environmental Clearance is available with Karnataka State Pollution Control Board and website of the State Level Environmental Impact Assessment Authority, Karnataka at http://seiaa.kar.nic.in.

MATRIMONIAL

Grooms Wanted

Hindu

ವರ ಬೇಕಾಗಿದೆ
ಬೆಂಗಳೂರು ರಹವಾಸಿ ಯುಕೆ ದೇಶದಲ್ಲಿ ಉದ್ಯೋಗ ಮಾಡುತ್ತಿರುವ ಸುಮಾರು 33 ವರ್ಷ ವಯಸ್ಸಿನ ಸ್ನಾತಕೋತ್ತರ ವೈದ್ಯ ಪದವೀಧರ ವಧುವಿಗೆ ಭಾರತೀಯ ವರ ಬೇಕಾಗಿದೆ. ವರ ಸುಮಾರು 32 ರಿಂದ 35 ವರ್ಷದವನಾಗಿರಬೇಕು ಮತ್ತು ಸ್ನಾತಕೋತ್ತರ ಪದವೀಧರ (ಮೆಡಿಸಿನ್/ಇಂಜಿನಿಯರಿಂಗ್/ಐಐಎಂ, ಐಐಎಸ್ಸಿ, ಐಐಟಿ – ಎಂಬಿಎ/ಸಿಎ/ಐಸಿಡಬ್ಲ್ಯುಎ/ಸಿಎಫ್‌ಎ/ಎಸಿಎಸ್) ಆಗಿರಬೇಕು ಅಥವಾ ಯುಕೆ ದೇಶದಲ್ಲಿ ಉದ್ಯೋಗಿಯಾಗಿರಬೇಕು ಅಥವಾ ಇಲ್ಲಿಯೆ ನೆಲೆಸಿ ಕನಿಷ್ಠ 3 ವರ್ಷ ಕಾಲ ಕೆಲಸ ಮಾಡಲು ಸಿದ್ಧವಾಗಿರಬೇಕು. ಜಾತಿ ಅಭ್ಯಂತರವಿಲ್ಲ, ಆದರೆ ಹಿಂದೂ ಆಗಿರಬೇಕು. ವಿಚ್ಛೇದಿತರಿಗೆ ಅವಕಾಶವಿಲ್ಲ. ಆಸಕ್ತಿಯುಳ್ಳವರು ಸಂಪರ್ಕಿಸಿ 9900422872/ 9845154344 ಅಥವಾ ಇ–ಮೇಲ್: annapurneshwari6161@yahoo.com

CONNECT ಕ್ಲಾಸಿಫೈಡ್ಸ್

Falcon Events Presents
Entry Free
ಆರ್ಟಿಸನ್ಸ್ ಬಜಾರ್
ARTISANS BAZAAR
Date: 26th Nov to 5th Dec'21
10 Days Exhibition
Timings: 11AM - 7PM
Art, Craft & Handlooms Exhibition
Venue: Karnataka Chitrakala Parishath
Kumara Krupa Road, Bengaluru
Your safety is our Priority, We have taken precaution & Safety Measures to prevent transmission of covid19
For Details Contact : 9611835597 / 6364685716 | Direct from The Artisans

Fire Show Live
Date: 4th Dec 2021
Timings: 5:30 PM - 6:30 PM

Djembe Show Live
Date: 5th Dec 2021
Timings: 5 PM - 7 PM

80+ Shopping Stalls | Live Performance | Much More!

JOB OPPORTUNITIES

General

REQUIRED-BE MECH Auto Cad & Solid Works Experience, Sr.Accountant (Male), ITI Fitters, Quality Engineer. Resume to alm.hr2005@gmail.com

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/- Contact: 9741401834

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call: 080-45687736

Marketing & Sales

LEADING AGRITECH Company wants District Incharge EXECUTIVES for its operations for ALL DISTICTS in KARNATAKA. Salary /Remuneration 2,50,000+ /PA. Please call: 9019136179

BUSINESS

Business Offers

Finance

NRI'S INVESTMENT
And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

WANTED BUSINESS Partner with 5 Lakhs to 10 Lakhs Investment, Good Returns. Contact: 9606701007/ 8892501007

Business For Sale

MYSORE GOOD Running Petrol Bunk for Sale 15000 Sqft in Prime Location Contact: 9845995486

PERSONAL

Change of Name

PINKEY SINGH W/o 14832232K NK SK Singh, Vill Gosaipur Molanapur Maharajganj UP, my name PINKEY SINGH to PINKY SINGH, Notary KV Mani, Bangalore

I, VANSH S/o. Pushpendra Maheshwary residing at #B-1004, Nitesh Hyde park apartments, 341/ 1M1, 2nd Cross road, Near Meenakshi Mall, Hulimavu, Bangalore North, Karnataka- 560076, have changed my name to VANSH CHOKHDA vide affidavit dated 27/11/2021 before notary B.L Kumayu, Barwaha District, Khargone.

I, Gouse Khan Dhundshi S/o Abdul Khadar Khan Dhundshi residing at Channarayapattana, Mandibele Road, Ward-09, Vijayapura, Bangalore Rural: 562135, hereby state that my name has been mentioned as Gousekhan Urf Shams Tabrezkhan Khadar Khan. Both the above mentioned names belong to me only, I am the same person being called by two names vide affidavit dated: 19.11.2021 Sworn before Notary G.R. Ravichandra Reddy, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ನೈಋತ್ಯ ರೈಲ್ವೆ
TENDER NOTICE No. CN/08/2021
Dated: 25.11.2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:
ಸಂಕ್ಷಿಪ್ತ ವಿವರಣೆ : ಮಲ್ಟಿ ಸೆಕ್ಷನ್ ಡಿಜಿಟಲ್ ಆಕ್ಸಲ್ ಕೌಂಟರ್ (MSDAC): ಇತ್ತೀಚಿನ ತಿದ್ದುಪಡಿಗಳು STR ಸಂಖ್ಯೆ SIQ 0001 Ver.2.0 ಅಥವಾ ಇತ್ತೀಚಿನದು ರೊಂದಿಗೆ RDSO ಸ್ಪೆಸಿಫಿಕೇಶನ್ ಸಂಖ್ಯೆ. RDSO/SPN/176/2013 version.3 ರ ಪ್ರಕಾರ ಮಲ್ಟಿ ಸೆಕ್ಷನ್ ಡಿಜಿಟಲ್ ಆಕ್ಸಲ್ ಕೌಂಟರ್ (MSDAC) ಸಂಪೂರ್ಣ ಸಿಸ್ಟಮ್‌ನ ಪೂರೈಕೆ, ವಿನ್ಯಾಸ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ (ಪ್ರಮಾಣ: 69 ಸೆಟ್‌ಗಳು) (ಟೆಂಡರ್ ಸಂಖ್ಯೆ: 95215631)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22–12–2021, 14:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್
PUB/314/AASP/PRB/SWR/2021-22
S.W.Railways SWRRLY SWRRLY

ನೈಋತ್ಯ ರೈಲ್ವೆ
TENDER NOTICE No. 25/2021 Dated: 26/11/2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ–ಓಪನ್ ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯ ಸಮಯ: 14:00 ಗಂಟೆಗಳು

ಕ್ರ.	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಕೊನೆಯ ದಿನಾಂಕ
1	81215003	ಲಿಕ್ವಿಡ್ ಪೆಟ್ರೋಲಿಯಂ ಗ್ಯಾಸ್ 19 ಕೆಜಿ ಸಾಮರ್ಥ್ಯ	36850 ಕೆಜಿ	17.12.2021
2	31215005	ಟ್ರಾಕ್ಷನ್ ಮೋಟರ್ ಕಂಪ್ಲೀಟ್ ವಿಥ್ ಪಿನಿಯನ್	03 ಸಂ	20.12.2021
3	31215006	ಸೆಟ್ ಇಪಿ ಬ್ರೇಕ್ ಉಪಕರಣಗಳ ಸ್ಥಾಪನೆ ಕಾರ್ಯಾರಂಭ	11 ಸಂ	20.12.2021
4	33211268	ಎಲ್‌ಎಚ್‌ಬಿ ಕೋಚ್‌ಗಳಿಗಾಗಿ ಸೈಡ್ ಬಫರ್ ಅಸೆಂಬ್ಲಿ ಸೆಟ್	45 ಸಂ	20.12.2021
5	77211003 A	ಹೌಸ್ ಹೋಲ್ಡ್‌ಗಾಗಿ ಪ್ಯಾಂಟ್ ಎನಾಮೆಲ್ ವೈಟ್ ಇಂಟೀರಿಯರ್ ಫಿನಿಶಿಂಗ್	24870 ಲೀಟರ್	22.12.2021
6	18211229 A	ಇಎಂಡಿ ಭಾಗ ಸಂಖ್ಯೆ 8298178 ಗೆ ಸ್ವಿಚ್ ರೋಲರ್	889 ಸಂ	23.12.2021

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ
PUB/315/AASP/PRB/SWR/2021-22 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನಂದರೆ ನನ್ನ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಬೆಂಗಳೂರು–560024, ಹೆಬ್ಬಾಳ, ವೂಡ್ಸ್‌ಮನ್ ಎಸ್ಟೇಟ್ ಗೋಡ್ರೇಜ್ ಅಪಾರ್ಟ್‌ಮೆಂಟ್, ಟವರ್–5, ನಂ. 602 ಬಿ ರಲ್ಲಿ ವಾಸವಾಗಿರುವ ಶ್ರೀ ಲೇಟ್ ಶ್ರೀ ಕೆ.ಪಿ.ವಿಮಲ್ ಕುಮಾರ್ ರವರ ಮಗ ಸುಮಾರು 62 ವರ್ಷ ವಯಸ್ಸುಳ್ಳ ಶ್ರೀ ಜಿನೇಶ್ ಕುಮಾರ್ ಬಿ.ವಿ., ಷೆಡ್ಯೂಲ್ ಸ್ವತ್ತನ್ನು ಖರೀದಿಮಾಡಲು ನಿರ್ಧರಿಸಿ ಒಪ್ಪಂದ ಮಾಡಿಕೊಂಡಿರುತ್ತಾರೆ, ಆದ್ದರಿಂದ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ ಅಥವಾ ಸದರಿ ಸ್ವತ್ತಿನ ಬಗ್ಗೆ ಹಿತಾಸಕ್ತಿವುಳ್ಳವರು ಯಾರಾದರು ಇದ್ದರೆ ಈ ಪ್ರಕಟಣೆ ಪ್ರಕಟವಾದ ಹತ್ತು ದಿನಗಳ ಒಳಗೆ ತಮ್ಮ ಅಹವಾಲನ್ನು ದಾಖಲೆಗಳೊಂದಿಗೆ ಈ ಕೆಳಗೆ ತಿಳಿಸಿರುವ ವಿಳಾಸಕ್ಕೆ ಸಲ್ಲಿಸತಕ್ಕದ್ದು/ಸಂಪರ್ಕಿಸತಕ್ಕದ್ದು, ಒಂದು ವೇಳೆ ಹತ್ತು ದಿನಗಳ ನಂತರ ಬಂದಂತಹ ಅಹವಾಲು ಅಥವಾ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯತಕ್ಕದ್ದು.
–: ಷೆಡ್ಯೂಲ್ ಸ್ವತ್ತಿನ ವಿವರ :–
ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಉಲ್ಲಾಳು ಗ್ರಾಮಕ್ಕೆ ಸೇರಿದ ಭೂ ಪರಿವರ್ತನೆ ಹೊಂದಿರುವ ಹಳೇ ಸರ್ವೆ ನಂ.205, ತದನಂತರ ಸರ್ವೆ ನಂ.205/1, ಹಾಲಿ ಸರ್ವೆ ನಂ.205/3 ರಲ್ಲಿ ಇರುವ 31 ಗುಂಟೆ ಮತ್ತು 2 ಗುಂಟೆ ಖರಾಬು ಪ್ರದೇಶಕ್ಕೆ ಚಕ್ಕುಬಂದಿ.
ಪೂರ್ವಕ್ಕೆ : ಹಳೇ ಸರ್ವೆ ನಂಬರ್ 205, ಹೊಸ ಸರ್ವೆ ನಂ.205/1 ರಲ್ಲಿ ಇರುವ ಉಳಿಕೆ ಜಮೀನು
ಪಶ್ಚಿಮಕ್ಕೆ : ಬಿಡಿಎ ಬಡಾವಣೆ,
ಉತ್ತರಕ್ಕೆ : ಬಿಡಿಎ ರಸ್ತೆ,
ದಕ್ಷಿಣಕ್ಕೆ : ಹಳೇ ಸರ್ವೆ ನಂಬರ್ 205, ಹೊಸ ಸರ್ವೆ ನಂ.205/1 ರಲ್ಲಿ ಇರುವ ಉಳಿಕೆ ಜಮೀನು
ಶ್ರೀ ಟಿ.ಶೇಷಗಿರಿ ರಾವ್ ಬಿ.ಎಸ್.ಸಿ., ಎಲ್.ಎಲ್‌ಎಲ್.ಬಿ, ವಕೀಲರು
ನಂ.230, 2ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ,
ಮಹಾಲಕ್ಷ್ಮಿಲೇಔಟ್, ಬೆಂಗಳೂರು–560 0086. ದೂರವಾಣಿ: 080–23494850

Canara Bank | Syndicate
ಹಾರೋಹಳ್ಳಿ ಶಾಖೆ, ಬೆಂಗಳೂರು.
ಫೋನ್: 080–27562235.
ಮೋ : 9483530433.
ಇ–ಮೈಲ್ : cb0433@canarabank.com

ವಾಹನಗಳ ಹರಾಜು ಮಾರಾಟ ಸೂಚನೆ
ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸಾಲಗಾರರು ಈ ಕೆಳಕಂಡ ಆಧಾರ ಮಾಡಿರುವ ಚರ ಸ್ವತ್ತುಗಳುನ್ನು ಸೆಕ್ಯೂರ್ಡ್ ಕ್ರೆಡಿಟರ್ ಆದ ಕೆನರಾ ಬ್ಯಾಂಕ್, ಹಾರೋಹಳ್ಳಿ ಶಾಖೆ ಇವರು ಆಧಾರ ಮಾಡಿರುವ ಅಗ್ರಿಮೆಂಟ್‌ನ ಒಪ್ಪಂದದ ಪ್ರಕಾರ ಪ್ರದತ್ತವಾದ ಅಧಿಕಾರದ ಅನ್ವಯ ಭೌತಿಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು, "ಎಲ್ಲಿದೆಯೋ ಹಾಗೆ", "ಏನಿದೆಯೋ ಹಾಗೆ" , ಮತ್ತು "ಹೇಗಿದೆಯೋ ಹಾಗೆ" ಆಧಾರದ ಮೇಲೆ ಬ್ಯಾಂಕಿಗೆ ಬರಬೇಕಾದ ಬಾಕಿ ಮೊತ್ತ ರೂ.10,53,267.00 (ರೂಪಾಯಿ ಹತ್ತು ಲಕ್ಷದ ಐವತ್ತ ಮೂರು ಸಾವಿರದ ಎರಡು ನೂರ ಅರುವತ್ತೇಳು ಮಾತ್ರ) ಗಳನ್ನು ಮತ್ತು 20.11.2021 ರಿಂದ ಬಡ್ಡಿ ಮತ್ತು ಇತರೆ ವೆಚ್ಚಗಳೊಂದಿಗೆ ವಸೂಲಿ ಮಾಡಲು ದಿನಾಂಕ 18.12.2021 ರಂದು ಮಾರಾಟ ಮಾಡಲಾಗುವುದು.
ಶ್ರೀಮತಿ.ನಳಿನಿ ಬಾಲಿ, ನಿವಾಸ : ಬಾಲಾಜಿರವರ ಪತ್ನಿ, ಸಂಖ್ಯೆ.912, 4ನೇ ಕ್ರಾಸ್, 9ನೇ ಮೇನ್, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು.

ವಾಹನದ ಸಂಖ್ಯೆ	ನೋಂದಣಿಯಾದ ತಿಂಗಳು/ವರ್ಷ	ನೋಂದಣಿ ಸಂ.	ಮೀಸಲು ಬೆಲೆ	ಇ.ಎಂ.ಡಿ ಮೊತ್ತ
RITZ ZDI BS IV KA 42 M6778	12.11.2014	KA.42. M.6778	ರೂ.3,50,000.00	ರೂ.87,500.00

1. ಮೇಲೆ ಸೂಚಿಸಿರುವ ಮುಂಗಡ ಠೇವಣಿಯನ್ನು ದಿನಾಂಕ : 16.12.2021 ರಂದು ಸಂಜೆ 5.00 ಗಂಟೆಯ ಒಳಗೆ ಪಾವತಿಸಬೇಕು. ಇಎಂಡಿ ಮೊತ್ತವನ್ನು ಡಿಡಿ ಮೂಲಕ ಕೆನರಾ ಬ್ಯಾಂಕ್, ಹಾರೋಹಳ್ಳಿ ಶಾಖೆ, ಇವರಿಗೆ ಅಥವಾ ಆನ್‌ಲೈನ್ ((RTGS/NEFT/IMPS) ಮೂಲಕ ಅಕೌಂಟ್ ಸಂಖ್ಯೆ.7954295000001, ((IFSC Code : CNRB0007954) ಕೆನಾರ ಬ್ಯಾಂಕ್, ಹಾರೋಹಳ್ಳಿ ಶಾಖೆ, ಬೆಂಗಳೂರು ಇವರಿಗೆ ಪಾವತಿಸಬೇಕು.
2. ವಾಹನಗಳ ಹರಾಜನ್ನು ದಿನಾಂಕ 18.12.2021 ರಂದು ಬೆಳಿಗ್ಗೆ 11.00 ರಿಂದ 11.30 ಗಂಟೆವರೆಗೆ, ಸೇವಾಪೂರೈಕೆದಾರರಾದ ಮೆ.ಅಂಟರೇಸ್ ಸಿಸ್ಟಮ್ಸ್ ಲಿಮಿಟೆಡ್, ಬೆಂಗಳೂರು, (ಸಂಪರ್ಕಿಸುವ ಸಂಖ್ಯೆ : 9686196756/080–49352000, ಇ–ಮೇಲ್ : manohar.s@antaressystems.com) ಇವರು ನಡೆಸುವರು. ಬಿಡ್ ಗುಣಾಂಕ ಮೊತ್ತ ರೂ.5000/–.
3. ಆಸಕ್ತ ಖರೀದಿದಾರು ವಾಹನಗಳನ್ನು ವೀಕ್ಷಿಸಿ ಸಮಾಧಾನಕರವಾಗಿ ಕಂಡುಬಂದಲ್ಲಿ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದು.
4. ಆಸಕ್ತ ಬಿಡ್‌ದಾರರು ಬಿಡ್ ಅರ್ಜಿಯೊಂದಿಗೆ ಕೆವೈಸಿ ದಾಖಲೆಗಳನ್ನು ಸಲ್ಲಿಸಬೇಕು.
5. ಯಶಸ್ವಿ ಬಿಡ್‌ದಾರರು ಬಾಕಿ ಮೊತ್ತವನ್ನು ಹರಾಜು ಮಾರಾಟದ ದಿನಾಂಕದಿಂದ 3 ದಿನಗಳ ಒಳಗೆ ಪಾವತಿಸಬೇಕು. ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಅದನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಸಂಬಂಧಪಟ್ಟ ಎಲ್ಲ ವರ್ಗಾವಣಾ ಶುಲ್ಕವನ್ನು ನೋಂದಣಿ ಶುಲ್ಕ ಇತ್ಯಾದಿಗಳನ್ನು ಯಶಸ್ವಿ ಖರೀದಿದಾರರೇ ಭರಿಸಬೇಕು.
6. ಬ್ಯಾಂಕ್ ಮಾರಾಟವನ್ನು ಮುಂದೂಡುವ / ರದ್ದುಗೊಳಿಸುವ ಅಥವಾ ಮಾರಾಟದ ನಿಯಮಗಳನ್ನು ಯಾವುದೇ ನೋಟೀಸನ್ನು ನೀಡದೆ ಬದಲಾಯಿಸುವ ಹಕ್ಕನ್ನು ಕಾಯ್ದಿರಿಸಿದೆ.
7. ಹೆಚ್ಚಿನ ವಿವರಗಳಿಗೆ ಪ್ರಬಂಧಕರು, ಕೆನರಾ ಬ್ಯಾಂಕ್, ಹಾರೋಹಳ್ಳಿ ಶಾಖೆ, ಬೆಂಗಳೂರು, ಫೋನ್ ನಂ. : 080–27562235, ಮೊಬೈಲ್ : 9483530433, ಇವರನ್ನು ಯಾವುದೇ ಕೆಲಸದ ದಿನದಂದು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 29.11.2021
ಸ್ಥಳ : ಬೆಂಗಳೂರು
ಮುಖ್ಯ ಪ್ರಬಂಧಕರು
ಕೆನರಾ ಬ್ಯಾಂಕ್

ಬಾಡಿಗೆ ಕಟ್ಟಡಗಳಲ್ಲೇ ಕಾರ್ಯನಿರ್ವಹಿಸುತ್ತಿರುವ ಉಪ ನೋಂದಣಾಧಿಕಾರಿಗಳ ಕಚೇರಿಗಳು; ಮೂಲ ಸೌಕರ್ಯಗಳು ಸಿಗದೆ ಜನರ ಪರದಾಟ

ಖಜಾನೆ ತುಂಬಿಸುವ ಕಚೇರಿಗಳಿಗೇ ಸ್ವಂತ ಕಟ್ಟಡವಿಲ್ಲ

• ಜಿ.ಶಿವಕುಮಾರ

₹12,658 ಕೋಟಿ ಈ ವರ್ಷದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ವರಮಾನದ ಗುರಿ

₹8,000 ಕೋಟಿ ಈ ವರೆಗೆ ಸಂಗ್ರಹವಾಗಿರುವ ವರಮಾನ

43 ಬೆಂಗಳೂರಿನಲ್ಲಿರುವ ಉಪ ನೋಂದಣಾಧಿಕಾರಿಗಳ ಕಚೇರಿಗಳು

ಬೆಂಗಳೂರು: ಆ ಕಚೇರಿಗಳಿಂದ ಸರ್ಕಾರದ ಬೊಕ್ಕಸಕ್ಕೆ ವರ್ಷಕ್ಕೆ ಕೋಟಿ ಕೋಟಿ ಆದಾಯ ಹರಿದು ಬರುತ್ತದೆ. ಅವು ಸದಾ ಸಾರ್ವಜನಿಕರಿಂದ ಗಿಜಿಗುಡುತ್ತಿರುತ್ತವೆ. ಹೀಗಿದ್ದರೂ ಆ ಕಚೇರಿಗಳಿಗೆ ಸ್ವಂತ ಕಟ್ಟಡಗಳೇ ಇಲ್ಲ!

ನಗರದ ಬಹುಪಾಲು ಉಪ ನೋಂದಣಾಧಿಕಾರಿ ಕಚೇರಿಗಳ ವ್ಯಥೆ ಇದು.

ಆಸ್ತಿ ನೋಂದಣಿ ಮಾಡುವ ಈ ಕಚೇರಿಗಳು ಈಗಲೂ ಬಾಡಿಗೆ ಕಟ್ಟಡಗಳಲ್ಲೇ ಕಾರ್ಯನಿರ್ವಹಿಸುತ್ತಿವೆ. ಕಟ್ಟಡದ ಮಾಲೀಕರು ಸೂಚಿಸಿದರೆ ಮರು ಮಾತನಾಡದೇ ಜಾಗ ಖಾಲಿ ಮಾಡಬೇಕು. ಹೀಗಾಗಿ ಕಚೇರಿ ಸ್ಥಳಾಂತರದ ಜಂಜಡದಿಂದಲೇ ಅಧಿಕಾರಿಗಳು ಅರ್ಧ ಹೈರಾಣಾಗಿದ್ದಾರೆ. ನಾಗರಿಕರ ಪರದಾಟಕ್ಕೂ ಕೊನೆ ಇಲ್ಲದಂತಾಗಿದೆ. ನೂರಾರು ವರ್ಷಗಳಷ್ಟು ಹಳೆಯದಾದ ದಾಖಲೆಗಳ ಸಂರಕ್ಷಣೆಯೂ ಸವಾಲಾಗಿದೆ.

ನಗರದಲ್ಲಿ 43 ಉಪ ನೋಂದಣಾಧಿಕಾರಿ ಕಚೇರಿಗಳಿವೆ. ಈ ಪೈಕಿ ನೋಂದಣಿ ಮಹಾ ಪರಿವೀಕ್ಷಕ ಮತ್ತು ಆಯುಕ್ತರು, ಬಿಡಿಎ, ಆನೇಕಲ್, ಬ್ಯಾಟರಾಯನಪುರ ಹಾಗೂ ಯಲಹಂಕದಲ್ಲಿನ ಕಚೇರಿಗಳಿಗೆ ಸ್ವಂತ ಕಟ್ಟಡಗಳಿವೆ. ಉಳಿದವುಗಳಿಗೆ ಈ 'ಭಾಗ್ಯ' ಇಲ್ಲ.

ರಸ್ತೆ ದಾಟುವ ಸವಾಲು: ವಿಜಯನಗರ, ಕೋಣನಕುಂಟೆ ಕ್ರಾಸ್, ಗಾಂಧಿ ಬಜಾರ್, ಜಯನಗರ, ದೊಮ್ಮಲೂರು ಸೇರಿದಂತೆ ಹಲವು ಉಪ ನೋಂದಣಾಧಿಕಾರಿ ಹಾಗೂ ವಿವಾಹ ನೋಂದಣಾಧಿಕಾರಿಗಳ ಕಚೇರಿಗಳು ಮುಖ್ಯ ರಸ್ತೆಗೆ ತಾಗಿಕೊಂಡಂತೆಯೇ ಇವೆ. ಈ ಕಚೇರಿಗಳನ್ನು ತಲುಪಲು ನಾಗರಿಕರು ಪರದಾಡುವಂತಾಗಿದೆ. ವಾಹನಗಳಿಂದ ಗಿಜಿಗುಡುವ ರಸ್ತೆಗಳನ್ನು ದಾಟಬೇಕಾದರೆ ಮೈಯೆಲ್ಲಾ ಕಣ್ಣಾಗಿರಬೇಕು. ಇ–ಸ್ಟ್ಯಾಂಪ್ ಹಾಗೂ ಜೆರಾಕ್ಸ್ ಅಂಗಡಿಗಳಿಗೆ ಹೋಗಬೇಕಾದರೂ ಪ್ರಯಾಸ ಪಡಬೇಕು. ಹೀಗಾಗಿ ವೃದ್ಧರು ಹಾಗೂ ಮಹಿಳೆಯರು ಪರಿತಪಿಸುವಂತಾಗಿದೆ. ಪುಟ್ಟ ಮಕ್ಕಳನ್ನು ಕಂಗಳಲ್ಲಿ ಹೊತ್ತು ಬರುವ ಮಹಿಳೆಯರು ರಸ್ತೆ ದಾಟುವ ಧಾವಂತದಲ್ಲಿ ಅಪಘಾತಕ್ಕೊಳಗಾಗುವ ಅಪಾಯವೂ ಇದೆ.

ವಾಹನ ನಿಲುಗಡೆಯದ್ದೆ ದೊಡ್ಡ ಸಮಸ್ಯೆ: ವಿವಿಧ ಕೆಲಸಗಳಿಗಾಗಿ ನಿತ್ಯವೂ ನೂರಾರು ಮಂದಿ ಈ ಕಚೇರಿಗಳಿಗೆ ನೀಡುತ್ತಿರುತ್ತಾರೆ. ದ್ವಿಚಕ್ರ ವಾಹನ ಹಾಗೂ ಕಾರುಗಳ ಮೂಲಕ ಕಚೇರಿ ತಲುಪುವವರು ಅವುಗಳ ನಿಲುಗಡೆಗೆ ಸೂಕ್ತ ಸ್ಥಳವಿಲ್ಲದೆ ಒದ್ದಾಡುವಂತಾಗಿದೆ

ಕೋಣನಕುಂಟೆ ಕ್ರಾಸ್‌ನಲ್ಲಿರುವ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಅಂತರ ಮರೆತು ನಿಂತಿರುವ ನಾಗರಿಕರು
ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ಕೆಲವರು ದೂರದಲ್ಲೆಲ್ಲೊ ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಿ ಅಲ್ಲಿಂದ ನಡೆದುಕೊಂಡೇ ಕಚೇರಿಗೆ ಬರುವುದುಂಟು. ಇನ್ನೂ ಕೆಲವರು ಗೊತ್ತಿಲ್ಲದೆಯೇ 'ನೋ ಪಾರ್ಕಿಂಗ್' ಜಾಗದಲ್ಲಿ ವಾಹನ ನಿಲ್ಲಿಸಿಬಿಡುತ್ತಾರೆ. ಆ ವಾಹನಗಳನ್ನು ಸಂಚಾರ ಪೊಲೀಸರು 'ಟೋಯಿಂಗ್' ಮಾಡಿಬಿಡುತ್ತಾರೆ. ಅದನ್ನು ಬಿಡಿಸಿಕೊಂಡು ಬರಲು ಅವರು ಸಂಚಾರ ಪೊಲೀಸ್ ಠಾಣೆಗೆ ಹೋಗಬೇಕು. ಅಲ್ಲಿ ₹200 ಅಥವಾ ₹500 ದಂಡವನ್ನೂ ಕಟ್ಟಬೇಕು.

'ಕೆಲಸಕ್ಕೆ ರಜೆ ಹಾಕಿ ಬಂದಿದ್ದೇನೆ. ಇಲ್ಲಿ ಬೈಕ್ ನಿಲ್ಲಿಸಲೂ ಜಾಗವಿಲ್ಲ. ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿ ಬಂದರೆ ಸಂಚಾರ ಪೊಲೀಸರು ಟೋಯಿಂಗ್ ಮಾಡುತ್ತಾರೆ. ಅವರು ವಾಹನ ಹೊತ್ತೊಯ್ದರೆ ಅದನ್ನು ಬಿಡಿಸಿಕೊಂಡು ಬರಲು ಠಾಣೆಗೆ ಹೋಗಬೇಕು. ಇದು ನನ್ನೊಬ್ಬನ ಸಮಸ್ಯೆಯಲ್ಲ. ಕಚೇರಿಗೆ ನಿತ್ಯ ಬರುವ ನೂರಾರು ಮಂದಿ ಇದೇ ಗೋಳು ಅನುಭವಿಸುವಂತಾಗಿದೆ' ಎಂದು ಜಯನಗರದ ಕಚೇರಿಗೆ ಬಂದಿದ್ದ ವಾಸುದೇವ್ ಬೇಸರ ವ್ಯಕ್ತಪಡಿಸಿದರು.

ಲಿಫ್ಟ್ ಇಲ್ಲದೆ ತೊಂದರೆ: 'ಉಪ ನೋಂದಣಾಧಿಕಾರಿಗಳ ಕಚೇರಿಗಳಿರುವ ಬಹುಪಾಲು ಕಟ್ಟಡಗಳಲ್ಲಿ 'ಲಿಫ್ಟ್' ವ್ಯವಸ್ಥೆಯೇ ಇಲ್ಲ. ಇದರಿಂದ ಅಂಗವಿಕಲರಿಗೆ ಹೆಚ್ಚು ತೊಂದರೆಯಾಗುತ್ತಿದೆ. ವೃದ್ಧರು, ಚಿಕ್ಕ ಮಕ್ಕಳೊಂದಿಗೆ ಬರುವ ಮಹಿಳೆಯರು ಮೆಟ್ಟಿಲುಗಳನ್ನು ಹತ್ತಿಕೊಂಡೇ ಎರಡು ಅಥವಾ ಮೂರನೇ ಮಹಡಿಯಲ್ಲಿರುವ ಕಚೇರಿಗಳನ್ನು ತಲುಪಬೇಕು' ಎಂದು ಕೋಣನಕುಂಟೆ ನಿವಾಸಿ ಸಲೀಂ ಹೇಳಿದರು.

'ನೆಲ ಮಹಡಿಯಿಂದ ಮೊದಲನೇ ಮಹಡಿಗೆ ತಲುಪುವಷ್ಟರಲ್ಲೇ ಕೆಲವರು ದಣಿದುಬಿಡುತ್ತಾರೆ. ಬಳಿಕ ಮೆಟ್ಟಿಲ ಮೇಲೆ ಕುಳಿತು ದಣಿವಾರಿಸಿಕೊಂಡು ನಂತರ ಮತ್ತೊಂದು ಮಹಡಿಯತ್ತ ಹೆಜ್ಜೆ ಹಾಕುವ ದೃಶ್ಯ ಕೆಲ ಕಚೇರಿಗಳಲ್ಲಿ ಕಾಣಸಿಗುತ್ತದೆ' ಎಂದರು.

'ಸಿಎ ನಿವೇಶನ ಗುರುತಿಸಲು ಸೂಚಿಸಲಾಗಿದೆ'

ಪಿ.ಎನ್. ರವೀಂದ್ರ

'ಬೆಂಗಳೂರಿನ ಬಹುಪಾಲು ಕಚೇರಿಗಳು ಬಾಡಿಗೆ ಕಟ್ಟಡಗಳಲ್ಲೇ ನಡೆಯುತ್ತಿವೆ. ತಮ್ಮ ವ್ಯಾಪ್ತಿಯಲ್ಲಿ ಸಿಎ ನಿವೇಶನ ಇದ್ದರೆ ಗುರುತಿಸಿ ಆ ಬಗ್ಗೆ ಮಾಹಿತಿ ನೀಡುವಂತೆ ಎಲ್ಲ ಉಪ ನೋಂದಣಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ನೋಂದಣಿ ಮಹಾ ಪರಿವೀಕ್ಷಕ ಮತ್ತು ಆಯುಕ್ತ ಪಿ.ಎನ್.ರವೀಂದ್ರ 'ಪ್ರಜಾವಾಣಿ'ಗೆ ಹೇಳಿದರು.

'ಕಚೇರಿಯ ಕಟ್ಟಡಗಳು ಸಾಧ್ಯವಾದಷ್ಟು ನೆಲ ಮಹಡಿಯಲ್ಲೇ ಇರುವಂತೆ ನೋಡಿಕೊಳ್ಳಬೇಕು ಎಂದು ನಿರ್ದೇಶಿಸಲಾಗಿದೆ. ವಿಶಾಲವಾದ ಹಾಗೂ ಮೂಲ ಸೌಕರ್ಯವನ್ನೊಳಗೊಂಡ ಕಟ್ಟಡಗಳು ದೊರೆತರೆ ಆ ಬಗ್ಗೆ ಮಾಹಿತಿ ನೀಡುವಂತೆಯೂ ತಿಳಿಸಲಾಗಿದೆ. ಅಂತಹ ಕಟ್ಟಡಗಳು ಸಿಕ್ಕರೆ ಸರ್ಕಾರದ ಅನುಮೋದನೆ ಪಡೆದು ಅಲ್ಲಿಗೆ ಕಚೇರಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

'ಕೆಲ ಪ್ರದೇಶಗಳಲ್ಲಿ ಹಳೆಯ ಕಟ್ಟಡಗಳಲ್ಲೇ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಆ ಭಾಗಗಳಲ್ಲಿ ವಿಶಾಲವಾದ ಕಟ್ಟಡಗಳು ಸಿಗದಿರುವುದರಿಂದ ಅವುಗಳನ್ನು ಬೇರೆಡೆ ಸ್ಥಳಾಂತರಿಸುವುದು ಅಸಾಧ್ಯವಾಗಿದೆ. ನಗರದಲ್ಲಿ ಸಿಎ ನಿವೇಶನಗಳು ಸಿಗುವುದೂ ಕಷ್ಟ. ಹೀಗಾಗಿ ಸ್ವಂತ ಕಟ್ಟಡ ಹೊಂದುವ ಕನಸಿಗೆ ಹಿನ್ನಡೆಯಾಗುತ್ತಿದೆ' ಎಂದು ಹೇಳಿದರು.

'ಮೂಲ ಸೌಕರ್ಯಕ್ಕೆ ಒತ್ತು ನೀಡಲಿ'

ರಾಜ್‌ಕುಮಾರ್ ದುಗಾರ್

'ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ದೊಡ್ಡ ಮೊತ್ತದ ವ್ಯವಹಾರಗಳು ನಡೆಯುತ್ತವೆ. ಆಸ್ತಿ ಮಾರಲು, ಆಸ್ತಿ ಕೊಳ್ಳಲು, ವಿವಾಹ ನೋಂದಣಿ ಹೀಗೆ ಹಲವು ಕೆಲಸಗಳಿಗಾಗಿ ನಿತ್ಯ ನೂರಾರು ಮಂದಿ ಕಚೇರಿಗಳಿಗೆ ಭೇಟಿ ನೀಡುತ್ತಿರುತ್ತಾರೆ. ಹಾಗೆ ಬಂದವರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು. ಅದು ಸರ್ಕಾರ ಹಾಗೂ ಅಧಿಕಾರಿಗಳ ಜವಾಬ್ದಾರಿ' ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಸಂಘಟನೆಯ ಸಂಸ್ಥಾಪಕ ರಾಜ್‌ಕುಮಾರ್ ದುಗಾರ್ ಹೇಳಿದರು.

'ಆನ್‌ಲೈನ್ ಸೇವೆ ಇದ್ದರೂ ಸಾಕಷ್ಟು ಮಂದಿ ಕಚೇರಿಗಳಿಗೆ ಹೋಗುತ್ತಾರೆ. ವ್ಯವಹಾರ ಮಾಡಲು ಬರುವವರಿಗೆ ಯಾವ ತೊಂದರೆಯೂ ಆಗಬಾರದು. ಈಗ ಓ ಮೈಕ್ರಾನ್ ತಳಿಯ ವೈರಾಣು ಹರಡುವ ಭೀತಿ ಎದುರಾಗಿದೆ. ಇಂತಹ ಸಮಯದಲ್ಲಿ ಅಂತರ ನಿಯಮ ಕಡ್ಡಾಯವಾಗಿ ಪಾಲಿಸಬೇಕು. ಅದಕ್ಕೆ ಅಗತ್ಯವಿರುವ ವ್ಯವಸ್ಥೆ ಮಾಡಬೇಕು' ಎಂದರು.

'ಅಧಿಕಾರಿಗಳಿಗೇ ಮನಸ್ಸಿಲ್ಲ'

ಮೋಹನ್ ದಾಸರಿ

'ನಗರದಲ್ಲಿ ಹಲವು ಬಿಡಿಎ ಸಂಕೀರ್ಣಗಳು, ಬಿಬಿಎಂಪಿ ಕಟ್ಟಡಗಳು ಖಾಲಿ ಇವೆ. ಅಲ್ಲಿ ಎಲ್ಲ ಸೌಕರ್ಯಗಳೂ ಇವೆ. ಸಿಎ ನಿವೇಶನಗಳೂ (ನಾಗರಿಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ) ಇವೆ. ಆ ಜಾಗಗಳನ್ನು ಖರೀದಿಸಿ ಸ್ವಂತ ಕಟ್ಟಡ ನಿರ್ಮಿಸಬಹುದು' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ತಿಳಿಸಿದರು.

'ದೊಮ್ಮಲೂರಿನ ಬಿಡಿಎ ಸಂಕೀರ್ಣದಲ್ಲಿರುವ ಉಪ ನೋಂದಣಾಧಿಕಾರಿಗಳ ಕಚೇರಿ ಎದುರು ವಾಹನ ನಿಲುಗಡೆಗೂ ಸ್ಥಳ ಇಲ್ಲ. ಕಚೇರಿಯೊಳಗೆ ಜನ ಒತ್ತೊತ್ತಾಗಿ ನಿಂತಿರುತ್ತಾರೆ. ವಯಸ್ಸಾದವರಿಗೆ ಕೂರಲು ಆಸನದ ವ್ಯವಸ್ಥೆಯೂ ಇಲ್ಲ. ಹೀಗಾಗಿ ದಿನವಿಡೀ ನಿಂತುಕೊಂಡೇ ಇರಬೇಕಾಗುತ್ತದೆ' ಎಂದರು.

ಜಯನಗರದಲ್ಲಿರುವ ಉಪನೋಂದಣಾಧಿಕಾರಿಗಳ ಕಚೇರಿ ಎದುರು ದ್ವಿಚಕ್ರ ವಾಹನ ನಿಲುಗಡೆ ಮಾಡಲು ನಾಗರಿಕರು ಪರದಾಡುವಂತಾಗಿದೆ

ನಗರದಲ್ಲಿ ನಡೆದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಕುಲಪತಿ ನಿಸಾರ್ ಅಹಮದ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು

ಪ್ರೆಸಿಡೆನ್ಸಿ ವಿ.ವಿ. ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ನಾಲ್ಕನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ 10 ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

2300 ವಿದ್ಯಾರ್ಥಿಗಳಿಗೆ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್‌.ಡಿ ಪದವಿಗಳನ್ನು ಇದೇ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದರು. ನ್ಯಾಕ್ ನಿರ್ದೇಶಕ ಡಾ.ಎಸ್‌.ಸಿ. ಶರ್ಮಾ, ಐಐಟಿ ಜಮ್ಮುವಿನ ಡೀನ್‌ನ ಡಾ.ಎ.ಕೆ. ಸರ್ಕಾರ್ ಪಾಲ್ಗೊಂಡಿದ್ದರು.

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಪತಿ ನಿಸಾರ್ ಅಹಮದ್ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ವೇತನ ಬಾಕಿ: ವಿಕ್ಟೋರಿಯಾ ಆಸ್ಪತ್ರೆ ಸಿಬ್ಬಂದಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ಟೋಬರ್ ವೇತನ ಪಾವತಿ ಮಾಡಿಲ್ಲ' ಎಂದು ಆರೋಪಿಸಿ ವಿಕ್ಟೋರಿಯಾ ಆಸ್ಪತ್ರೆಯ ಸಿಬ್ಬಂದಿ ಸೋಮವಾರ ಪ್ರತಿಭಟನೆ ನಡೆಸಿದರು.

'ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು)' ನೇತೃತ್ವದಲ್ಲಿ ಆಸ್ಪತ್ರೆಯ ಆವರಣದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಆಸ್ಪತ್ರೆಯ ಸ್ವಚ್ಛತೆ ಕಾರ್ಮಿಕರು, ಕೊಠಡಿ ಸಹಾಯಕರು, ಲಿಫ್ಟ್ ನಿರ್ವಹಣೆಗಾರು, ಡಾಟಾ ಎಂಟ್ರಿ ಆಪರೇಟರ್ಸ್‌ಗಳು ಹಾಗೂ ಭದ್ರತಾ ಸಿಬ್ಬಂದಿ ಪ್ರತಿಭಟನೆಯಲ್ಲಿದ್ದರು.

'ಚಾಲ್ತಿಯಲ್ಲಿರುವ ಕಾನೂನಿನ್ವಯ ಪ್ರತಿ ತಿಂಗಳು 7ರೊಳಗೆ ಕಾರ್ಮಿಕರಿಗೆ ವೇತನ ಪಾವತಿ ಮಾಡಬೇಕು. ಆದರೆ, ಅಕ್ಟೋಬರ್ ಮುಗಿದು ನವೆಂಬರ್ ಆರಂಭವಾದರೂ ವೇತನ ನೀಡಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಆಡಳಿತ ಮಂಡಳಿಯವರಿಂದ ಯಾವುದೇ ಸ್ಪಂದನೆ ಸಿಗುತ್ತಿಲ್ಲ' ಎಂದು ಪ್ರತಿಭಟನಕಾರರು ದೂರಿದರು.

'ಬಾಕಿ ವೇತನ ಪಾವತಿ ಮಾಡಬೇಕು' ಎಂದು ಒತ್ತಾಯಿಸಿ ವಿಕ್ಟೋರಿಯಾ ಆಸ್ಪತ್ರೆಯ ಸಿಬ್ಬಂದಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

'ವೇತನವನ್ನೇ ನಂಬಿಕೊಂಡು ಸಿಬ್ಬಂದಿ ಜೀವನ ಸಾಗಿಸುತ್ತಿದ್ದಾರೆ. ವೇತನ ಬಾರದಿದ್ದರಿಂದ ಸಿಬ್ಬಂದಿ, ಮನೆ ಬಾಡಿಗೆ ಪಾವತಿ ಮಾಡಲಾಗದೇ ಕಷ್ಟ ಅನುಭವಿಸುತ್ತಿದ್ದಾರೆ. ಕೆಲವರು, ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಬಾಕಿ ವೇತನವನ್ನು ಕೂಡಲೇ ಪಾವತಿಸಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದೂ ಎಚ್ಚರಿಸಿದರು.

ಸಾಧಕ ವಿದ್ಯಾರ್ಥಿಗಳ ಜೊತೆ ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸುವ ದೊಡ್ಡ ಹೊಣೆಗಾರಿಕೆ ಮಕ್ಕಳಲ್ಲಿದೆ. ಹೀಗಾಗಿ, ಮಕ್ಕಳಿಗೆ ಮೌಲ್ಯಾಧರಿತ ಶಿಕ್ಷಣ ನೀಡಬೇಕಿದೆ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿರುವ ಚಿಲ್ಡ್ರನ್ ಸ್ಪೇಸ್ ಕ್ಲಬ್ ಆಫ್ ಇಂಡಿಯಾದ ಸಂಸ್ಥಾಪಕರಾದ ಗುಂಡ್ಲಮಡಗು ಶಾಂತಾ ಮೂರ್ತಿ ನೇತೃತ್ವದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಕ್ಕಳು ತಮ್ಮ ಪೋಷಕರ ಜೊತೆ ರಾಜಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿದರು.

ಈ ವೇಳೆ ಮಾತನಾಡಿದ ಅವರು, 'ಮಕ್ಕಳಿಗೆ ಪ್ರೋತ್ಸಾಹ ನೀಡಿ, ಅವರ ಬೆಳವಣಿಗೆಯನ್ನು ಹತ್ತಿರದಿಂದ ನೋಡಿ ಸಂಭ್ರಮಿಸುವುದು ಬದುಕಿನ ಸುಂದರ ಕ್ಷಣಗಳು' ಎಂದೂ ಬಣ್ಣಿಸಿದರು. ಮಕ್ಕಳಿಗೆ ಕೌಶಲ ಶಿಕ್ಷಣ ನೀಡುವ ಚಿಲ್ಡ್ರನ್ ಸ್ಪೇಸ್ ಕ್ಲಬ್‌ನ ಸಾಧನೆಗೆ ರಾಜ್ಯಪಾಲರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ವಲಯ ಸಮನ್ವಯಕಾರರಾದ ವಾಸಂತಿ ಅಣ್ಣಾಮಲೈ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ತರುಣ್ ಎಸ್., ವಿಹಾನ್ ಸತೀಶ್, ಮೇಧಾ ಉಮೇಶ್ ಮತ್ತು ಆರುಷಿ ದಾಸ್ ಇದ್ದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು ಚಿಲ್ಡ್ರನ್ ಸ್ಪೇಸ್ ಕ್ಲಬ್ ಆಫ್ ಇಂಡಿಯಾದ ಸಂಸ್ಥಾಪಕರಾದ ಗುಂಡ್ಲಮಡಗು ಶಾಂತಾ ಮೂರ್ತಿ ನೇತೃತ್ವದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿದರು

ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ

ಬೆಂಗಳೂರು: ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸಿ.ಆರ್. ಮನೋಹರ್ ಸದಸ್ಯತ್ವಕ್ಕೆ ಸೋಮವಾರ ರಾಜೀನಾಮೆ ನೀಡಿದ್ದಾರೆ. ಸಭಾಪತಿ ಬಸವರಾಜ ಹೊರಟ್ಟಿ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

ಮನೋಹರ್

ಕೋಲಾರ–ಚಿಕ್ಕಬಳ್ಳಾಪುರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಮನೋಹರ್ ಕಳೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದರು. ಜೆಡಿಎಸ್ ತೊರೆದು ಬಿಜೆಪಿ ಸೇರಿ, ಆ ಪಕ್ಷದಿಂದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಣಕ್ಕಿಳಿಸಲು ನಿರ್ಧರಿಸಿದ್ದರು. ಆದರೆ, ಬಿಜೆಪಿಯಲ್ಲೂ ಟಿಕೆಟ್ ದೊರಕಿರಲಿಲ್ಲ. ಈಗ ಕಾಂಗ್ರೆಸ್ ಸೇರಲು ಮುಂದಾಗಿರುವ ಅವರು ಪರಿಷತ್ ಸದಸ್ಯತ್ವ ಹಾಗೂ ಜೆಡಿಎಸ್ ಪ್ರಾಥಮಿಕ ಸದಸ್ಯತ್ವ ಎರಡಕ್ಕೂ ರಾಜೀನಾಮೆ ನೀಡಿದ್ದಾರೆ ಎಂಬ ಮಾಹಿತಿ ಲಭಿಸಿದೆ.

ಭಾನುವಾರವೇ ರಾಜೀನಾಮೆಗೆ ಮುಂದಾಗಿದ್ದ ಮನೋಹರ್, ಸಭಾಪತಿಯವರ ಗೃಹ ಕಚೇರಿಗೆ ಹೋಗಿದ್ದರು. ಆದರೆ, ಹೊರಟ್ಟಿ ದೆಹಲಿ ಪ್ರವಾಸದಲ್ಲಿದ್ದರು. ಸೋಮವಾರ ರಾತ್ರಿ ಪುನಃ ಸಭಾಪತಿಯವರನ್ನು ಭೇಟಿಮಾಡಿ ರಾಜೀನಾಮೆ ಸಲ್ಲಿಸಿದರು.

ಚಿತ್ರಾವಳಿ

ಶಂಕರನಾಗ್ ನಾಟಕೋತ್ಸವದ ಅಂಗವಾಗಿ ರಂಗಪಯಣ ತಂಡವು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ನಂದಗೋಕುಲ ತಂಡದ ಕಲಾವಿದರು 'ಉಡಿಯೊಳಗಣ ಕಿಚ್ಚು' ನಾಟಕವನ್ನು ಸೋಮವಾರ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ


ಸಂಪಂಗಿರಾಮನಗರ ಕಲ್ಯಾಣಿ ದೀಪೋತ್ಸವದಲ್ಲಿ ಭಕ್ತರು ಹಣತೆಗಳನ್ನು ಬೆಳಗಿಸಿದ್ದು ಗಮನಸೆಳೆಯಿತು
ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ನಗರದಲ್ಲಿ ಇಂದು

ಕನ್ನಡ ರಾಜ್ಯೋತ್ಸವ: ಅಧ್ಯಕ್ಷತೆ–ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, ಧ್ವಜಾರೋಹಣ–ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ–ಬಿಡಿಎ ಆಯುಕ್ತ ಎಂ.ಬಿ. ರಾಜೇಶ್ ಗೌಡ, ಅತಿಥಿ–ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ, ಸ್ಥಳ–ಬಿಡಿಎ ಕೇಂದ್ರ ಕಚೇರಿ, ಬೆಳಿಗ್ಗೆ 10.30

ರಸಗೊಬ್ಬರ ಮಾರಾಟಗಾರರಿಗೆ 'ಸಮಗ್ರ ಪೋಷಕಾಂಶಗಳ ನಿರ್ವಹಣೆ' ತರಬೇತಿ: ಉದ್ಘಾಟನೆ–ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ (ಕೆಎಸ್‌ಸಿಎಂಎಫ್) ವ್ಯವಸ್ಥಾಪಕ ನಿರ್ದೇಶಕ ಎಸ್.ಶ್ರೀಧರ್, ಅತಿಥಿ–ಸಿ.ಪಿಳ್ಳೇಗೌಡ, ಅಧ್ಯಕ್ಷತೆ–ಎನ್.ದೇವ ಕುಮಾರ್, ಆಯೋಜನೆ–ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸಹಯೋಗ–ಕೆಎಸ್‌ಸಿಎಂಎಫ್, ಸ್ಥಳ–ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಳಿಗ್ಗೆ 11

ಶಂಕರನಾಗ್ ನಾಟಕೋತ್ಸವ–'ಆರ್ಕೆಸ್ಟ್ರಾ ಮತ್ತು ಮಹಿಳೆಯರು' ಸಂವಾದ (ಸಂಜೆ 4.30): ಅತಿಥಿಗಳು–ಗಾಯತ್ರಿ ಮೋಹನ್, ಸವಿತಕ್ಕ, ಸಂಜೆ 5.30ಕ್ಕೆ ನಾಗರಕಟ್ಟೆ–ಸುನೇತ್ರಾ ಪಂಡಿತ್, ಗಾಯತ್ರಿ ಶಿವರಾಜು, ಜಯಶ್ರೀ, ಸಂಜೆ 6.45ಕ್ಕೆ ಸಾರಾ ಅಬೂಬಕ್ಕರ್ ಅವರ ಕುರಿತು ಮಾತು–ಲಲಿತಾ ಸಿದ್ದಬಸವಯ್ಯ, ಮೇಘಾ ಯಲಿಗಾರ್, ಸಂಜೆ 7.10ಕ್ಕೆ 'ಚಂದ್ರಗಿರಿ ತೀರದಲ್ಲಿ' ನಾಟಕ ಪ್ರದರ್ಶನ–ರಂಗಪಯಣ, ಸ್ಥಳ–ರವೀಂದ್ರ ಕಲಾಕ್ಷೇತ್ರ

ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಸನ್ಮಾನ: ಅಧ್ಯಕ್ಷತೆ–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪ್ರದಾನ–ಶಾಸಕ ಎಸ್. ಸುರೇಶ್ ಕುಮಾರ್, ಅತಿಥಿಗಳು–ಸಂತೋಷ ಹಾನಗಲ್ಲ, ಎಂ.ಸಂಜೀವ ರತ್ನಂ, ಆಯೋಜನೆ–ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ಕಾರ್ಮಿಕ ಲೋಕ, ಸ್ಥಳ–ಬಿಎಂಶ್ರೀ ಪ್ರತಿಷ್ಠಾನದ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5


ಗೊ.ರು. ಚನ್ನಬಸಪ್ಪ

ಪ್ರಜಾವಾಣಿ
Compassion Unlimited Plus Action
ಮೂಕ ಕಥೆಗಳು

ದತ್ತು ಪಡೆಯಿರಿ ಜಾಕ್ ಮತ್ತು ಜೋ
ಕಾಯುವ ಕೈ ಎಂದೆಂದಿಗೂ ಮೇಲು

ಇದೋ ನೋಡಿ ಜಾಕ್ ಮತ್ತು ಜೋ, ಲ್ಯಾಬ್ ಮತ್ತು ಬಾಕ್ಸರ್ ಮಿಶ್ರ ಜೋಡಿ. ಜಾಕ್ ಮತ್ತು ಜೋ 8 ವರ್ಷ ಪ್ರಾಯದ ಚುರುಕುಮತಿ ಸಾಹಸಿ ಮತ್ತು ಮೋಜುಗಾರ ಜೋಡಿ. ನೀವು ಈಗಾಗಲೇ ನಾಯಿ ಸಾಕಿದ ಅನುಭವಿಗಳಾಗಿರಲಿ ಅಥವಾ ಈಗಷ್ಟೆ ಸಾಕಲು ಯೋಚಿಸುತ್ತಿರುವವರಾಗಲಿ... ಈ ಮೂಕಜೀವಿಗಳು ನಿಮ್ಮ ಕುಟುಂಬಕ್ಕೆ ಪ್ರೀತಿಯ ಸೇರ್ಪಡೆಯಾಗುತ್ತವೆ! ಇವೆರಡಕ್ಕೂ ಉತ್ತಮ ತರಬೇತಿ ಲಭಿಸಿದೆ ಮತ್ತು ಅಗಲಿಕೆಯ ಖಿನ್ನತೆಗೆ ಈಡಾಗುವುದಿಲ್ಲ. ಮಕ್ಕಳೊಂದಿಗೆ ಹಾಗೂ ಇತರ ಶ್ವಾನಗಳೊಂದಿಗೆ ಬಹುಬೇಗ ಹೊಂದಿಕೊಳ್ಳುತ್ತವೆ. ನಿಮ್ಮ ಮನೆಗೆ ನಾಯಿ ತರಬೇಕೆಂದುಕೊಂಡಿದ್ದರೆ, ಇವುಗಳ ವಯಸ್ಸಿನ ಬಗ್ಗೆ ಚಿಂತಿಸದಿರಿ, ಏಕೆಂದರೆ ಒಂದು ಹಿರಿಯ ನಾಯಿಯ ಪ್ರೀತಿ ನಿಜವಾಗ್ಯೂ ವರ್ಣಿಸಲಾಗದ ಅನುಭೂತಿ ನೀಡುತ್ತದೆ. ನಿಮ್ಮ ಮನಸ್ಸು ವಿಶಾಲಗೊಳಿಸಿ ಮತ್ತು ಬಂಗಾರದಂಥ ಈ ಜೀವಿಗಳಿಗೆ ಆಶ್ರಯದಾತರಾಗಿ.

ಹೆಚ್ಚಿನ ವಿವರಗಳಿಗಾಗಿ, ನಮಗೆ ಬರೆಯಿರಿ
cupablr@cupaindia.org

ದತ್ತು ಪಡೆಯದಿದ್ದರೆ, ದಯವಿಟ್ಟು ಮಾಹಿತಿ ಹಂಚಿರಿ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ₹35.50 ಕೋಟಿ ವೆಚ್ಚದ ಕಾಮಗಾರಿ

ವೈಟ್‌ಟಾಪಿಂಗ್ ಹೆಸರಲ್ಲಿ ದುಂದುವೆಚ್ಚ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್ ಟಾಪಿಂಗ್ ಎರಡನೇ ಹಂತದ ಯೋಜನೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ 1.03 ಕಿಲೋ ಮೀಟರ್ ಉದ್ದದ ರಸ್ತೆಗೆ ಮರು ಟೆಂಡರ್ ಪ್ರಕ್ರಿಯೆಯನ್ನೇ ನಡೆಸದೆ ₹35.50 ವೆಚ್ಚ ಮಾಡಲು ಬಿಬಿಎಂಪಿ ಮುಂದಾಗಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಮೈಸೂರು ರಸ್ತೆಯಿಂದ ಹಾಸ್ಟೆಲ್ ಜಂಕ್ಷನ್ ತನಕ (1,035 ಮೀಟರ್) 6 ಪಥದ ರಸ್ತೆ, ಎರಡೂ ಬದಿಯಲ್ಲಿ ಆರ್‌ಸಿಸಿ ಬಾಕ್ಸ್ ಡಕ್ಟ್, ಸೈಕಲ್ ಪಥ, ಪಾದಚಾರಿ ಮಾರ್ಗ, 900 ಮಿಲಿಮೀಟರ್ ವ್ಯಾಸದ ಮಳೆ ನೀರಿನ ಚರಂಡಿ, ರಸ್ತೆ ಪೀಠೋಪಕರಣ, ಸೂಚನಾ ಫಲಕ ಅಳವಡಿಕೆ, ಎಲ್‌ಇಡಿ ಬೀದಿ ದೀಪ ಅಳವಡಿಕೆ, ಪಾದಚಾರಿ ಮಾರ್ಗದಲ್ಲಿ ಬೊಲ್ಲಾರ್ಡ್ ಅಳವಡಿಕೆ ಒಳಗೊಂಡಿದೆ.

ಮೈಸೂರು ರಸ್ತೆ ಜಂಕ್ಷನ್ ಬಳಿ ರೈಲ್ವೆ ಸೇತುವೆ ವಿಸ್ತರಿಸಲು ಅನುವಾಗುವಂತೆ ಮತ್ತೊಂದು ಬಾಕ್ಸ್ ಅಳವಡಿಸಲು ಅಂದಾಜು ಪಟ್ಟಿಯಲ್ಲಿ ಇಡುಗಂಟು ಮೊತ್ತ ಮೀಸಲಿಡಲಾಗುತ್ತಿದೆ ಎಂದು ಅಂದಾಜು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಎರಡನೇ ಹಂತದ ಪ್ಯಾಕೇಜ್-1ರಲ್ಲಿನ ಉಳಿತಾಯ ಮೊತ್ತ ಆಗಿರುವುದರಿಂದ ಟೆಂಡರ್ ಪ್ರಕ್ರಿಯೆ ನಡೆಸದೆ ಪ್ಯಾಕೇಜ್‌ನ ಮೂಲ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲು ಅವಕಾಶ ಇದೆ ಎಂಬುದು ಸರ್ಕಾರದ ವಾದ.

ಟೆಂಡರ್ ಪ್ರಕ್ರಿಯೆ ನಡೆಸದೆ ಯಾವುದೇ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಲ್ಲಿ ಅವಕಾಶ ಇಲ್ಲ ಎಂಬುದು ತಜ್ಞರ ಅಭಿಪ್ರಾಯ.

‘ಒಂದು ಕಿ.ಮೀಗೆ ₹35 ಕೋಟಿ ಏಕೆ’

ಉಳಿತಾಯದ ಮೊತ್ತವಾದರೂ ಮರು ಟೆಂಡರ್ ಕರೆದೇ ಗುತ್ತಿಗೆ ನಿಗದಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಕೆಟಿಪಿಪಿ ಕಾಯ್ದೆಯ ಉಲ್ಲಂಘನೆ ಆಗಲಿದೆ. ಕಾಂಗ್ರೆಸ್ ಅವಧಿಯಲ್ಲಿ ಒಂದು ಕಿಲೋ ಮೀಟರ್‌ಗೆ ₹12 ಕೋಟಿ ಖರ್ಚು ಮಾಡಲಾಗಿತ್ತು. ಅದನ್ನೇ ಭಾರಿ ಅಕ್ರಮ ನಡೆದಿದೆ ಎಂದು ಬಿಜೆಪಿ ಆರೋಪಿಸಿತ್ತು. ಸ್ಮಾರ್ಟ್‌ಸಿಟಿ ಯೋಜನೆಯಡಿ ಒಂದು ಕಿಲೋ ಮೀಟರ್‌ಗೆ ₹16 ಕೋಟಿ ಖರ್ಚು ಮಾಡಲಾಗುತ್ತಿದೆ. ಜ್ಞಾನಭಾರತಿ ಆವರಣಕ್ಕೆ ₹35.50 ಕೋಟಿ ಖರ್ಚು ಮಾಡಲು ಹೊರಟಿರುವುದು ಏಕೆ. ಶೇ 40ರಷ್ಟು ಲಂಚ ಕೊಡಬೇಕಾಗಿದೆ ಎಂದು ಗುತ್ತಿಗೆದಾರರ ಸಂಘವೇ ಆರೋಪಿಸಿದೆ. ಈ ಬಗ್ಗೆ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ₹35.50 ಕೋಟಿ ಅನುಮೋದನೆ ಪಡೆದಿರುವ ಬಗ್ಗೆಯೇ ತನಿಖೆ ಮಾಡಿಸಲಿ.

–ಅಬ್ದುಲ್ ವಾಜೀದ್, ಕಾಂಗ್ರೆಸ್ ಮುಖಂಡ

‘ತಜ್ಞರಿಂದ ಪರಿಶೀಲನೆ ಆಗಲಿ’

ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ಒಂದು ಕಿಲೋ ಮೀಟರ್ ವೈಟ್ ಟಾಪಿಂಗ್ ಕಾಮಗಾರಿ ಮೊತ್ತ ₹12 ಕೋಟಿ ದಾಟಿರಲಿಲ್ಲ. ಅದನ್ನೇ ದುಬಾರಿ ಎಂದು ಬಿಜೆಪಿ ಆರೋಪಿಸಿತ್ತು. ಈಗ ₹35.50 ಕೋಟಿ ಖರ್ಚು ಮಾಡು ತ್ತಿರುವುದಕ್ಕೆ ಏಕೆ. ಈ ಬಗ್ಗೆ ತಾಂತ್ರಿಕ ತಜ್ಞರಿಂದ ಪರಿಶೀಲನೆ ಮಾಡಿಸಬೇಕು.

–ರಾಮಲಿಂಗಾರೆಡ್ಡಿ, ಶಾಸಕ

ಕನಿಷ್ಠ ₹12 ಕೋಟಿ ಲಂಚಕ್ಕೆ ಬೇಕಲ್ಲವೇ?

1 ಕಿಲೋ ಮೀಟರ್‌ಗೆ ₹35.50 ಕೋಟಿ ಖರ್ಚು ಮಾಡುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಗುತ್ತಿಗೆದಾರರ ಸಂಘವೇ ಪ್ರಧಾನಮಂತ್ರಿಗೆ ದೂರು ನೀಡಿರುವಂತೆ ಶೇ 40ರಷ್ಟು ಅಂದರೆ ಕನಿಷ್ಠ ₹12 ಕೋಟಿಯಾದರೂ ಲಂಚಕ್ಕೆ ಹಂಚಿಕೆಯಾಗಬೇಕಿದೆ. ಗುತ್ತಿಗೆದಾರರ ಸಂಘವೇ ದೂರು ನೀಡಿರುವುದರಿಂದ ಮೇಲ್ನೋಟಕ್ಕೆ ಸುಳ್ಳು ಎನ್ನಲಾಗದು. ಈ ರಾಜ್ಯ ಯಾವ ರೀತಿಯಲ್ಲೂ ಉದ್ಧಾರ ಸಾಧ್ಯವಿಲ್ಲ. ಭ್ರಷ್ಟಾಚಾರ ಕೆಲವೇ ಜನರಿಗೆ ಸೀಮಿತ ಅಲ್ಲ. ಇದಕ್ಕೆ ಮೂಲ ಕಾರಣ ವ್ಯಕ್ತಿಗಳಲ್ಲ, ಸಮಾಜ. ಶ್ರೀಮಂತಿಕೆ ಮತ್ತು ಅಧಿಕಾರವನ್ನು ಸಮಾಜ ಪೂಜಿಸುತ್ತಿದೆ. ಆದ್ದರಿಂದಾಗಿ, ಸಾಮಾಜಿಕ ಭಯ ಇಲ್ಲವಾಗಿದೆ. ಈ ರೀತಿಯ ವ್ಯಕ್ತಿಗಳನ್ನು ಹಿಂದೆ ಬಹಿಷ್ಕರಿಸಲಾಗುತ್ತಿತ್ತು. ಭ್ರಷ್ಟಾಚಾರಿಗಳು, ಅತ್ಯಾಚಾರಿಗಳನ್ನು ಸಮಾಜ ದೂರ ಇಡುತ್ತಿತ್ತು. ಆದ್ದರಿಂದ ಜನರಿಗೆ ಹೆದರಿಕೆ ಇತ್ತು. ಈಗ ಅದು ಇಲ್ಲವಾಗಿದೆ. ಇದೆಲ್ಲರದ ಪರಿಣಾಮವಾಗಿ ಹೊಸದಾಗಿ ನಿರ್ಮಾಣವಾದ ರಸ್ತೆಗಳು ಒಂದೇ ಮಳೆಗೆ ಗುಂಡಿ ಬೀಳುತ್ತಿವೆ.

ಎನ್.ಸಂತೋಷ್ ಹೆಗ್ಡೆ, ನಿವೃತ್ತ ನ್ಯಾಯಮೂರ್ತಿ

‘ವೈಟ್ ಕಾಲರ್ ಕ್ರೈಮ್’

ವೈಟ್ ಟಾಪಿಂಗ್ ಎನ್ನುವುದು ದೊಡ್ಡ ಮೋಸದ, ಭ್ರಷ್ಟಾಚಾರದ ರಸ್ತೆ ನಿರ್ಮಾಣ ಕಾರ್ಯಕ್ರಮ. ಪಕ್ಕಾ ವೈಟ್ ಕಾಲರ್ ಕ್ರೈಮ್. ಟೆಂಡರ್ ಶೂರ್ ಹೆಸರಿನಲ್ಲಿ ಆರಂಭವಾದಾಗಿನಿಂದಲೂ ‘ಟೆಂಡರ್ ಲೆಸ್’ ಕಾಮಗಾರಿಯೇ. ರಾಜ್ಯದ ಮೂರೂ ಭ್ರಷ್ಟ ಜೆಸಿಬಿ (ಜೆಡಿಎಸ್, ಕಾಂಗ್ರೆಸ್, ಬಿಜೆಪಿ) ಪಕ್ಷಗಳು ತಾವು ಅಧಿಕಾರದಲ್ಲಿ ಇಲ್ಲದಿರುವಾಗ ಈ ಯೋಜನೆಯನ್ನು ವಿರೋಧಿಸಿ, ಅಧಿಕಾರಕ್ಕೆ ಬಂದಾಗ ಕನಿಷ್ಠ ಸಂಕೋಚವೂ ಇಲ್ಲದೆ ಜನರ ತೆರಿಗೆ ಹಣ ಲೂಟಿ ಮಾಡುವ ಕೆಟ್ಟ ದಂಧೆಯಲ್ಲಿ ಮುಳುಗಿವೆ. ಈಗಿನ ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ಹಿಂದಿನ ಎಲ್ಲ ಸರ್ಕಾರಗಳನ್ನು ಮೀರಿಸುತ್ತಿದೆ. ಟೆಂಡರ್ ರಹಿತ ವೈಟ್ ಟಾಪಿಂಗ್ ಕಾಮಗಾರಿಯೇ ಅದಕ್ಕೆ ಜ್ವಲಂತ ಉದಾಹರಣೆ. **ರವಿ ಕೃಷ್ಣಾರೆಡ್ಡಿ,** ರಾಜ್ಯಾಧ್ಯಕ್ಷ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ

ಸುದ್ದಿ 2 ನಿಮಿಷ

ಸ್ಥಾನಿಕ ವೈದ್ಯರ ಪ್ರತಿಭಟನೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸ್ಥಾನಿಕ ವೈದ್ಯರು ವಿಕ್ಟೋರಿಯಾ ಆಸ್ಪತ್ರೆ ಎದುರು ಸೋಮವಾರ ಪ್ರತಿಭಟನೆ ನಡೆಸಿದರು. ಹೀಗಾಗಿ ಹೊರರೋಗಿಗಳು ಪರದಾಡುವಂತಾಯಿತು.

‘ಕೋವಿಡ್ ಅಪಾಯ ಭತ್ಯೆ ನೀಡುವುದಾಗಿ ಹೇಳಿದ್ದ ಸರ್ಕಾರ ಮಾತು ತಪ್ಪಿದೆ. ಈ ಭತ್ಯೆಯನ್ನು ಕೂಡಲೇ ಪಾವತಿಸಬೇಕು. ಶೈಕ್ಷಣಿಕ ಶುಲ್ಕ ಪರಿಷ್ಕರಿಸಬೇಕು. ಸ್ನಾತಕೋತ್ತರ ಪದವೀಧರ ವಿದ್ಯಾರ್ಥಿಗಳು ಹಾಗೂ ವೃತ್ತಿ ತರಬೇತಿ ಪಡೆಯುತ್ತಿರುವ ವೈದ್ಯರಿಗೆ ಕೂಡಲೇ ವೇತನ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಆರೋಗ್ಯ ಸಚಿವ ಸುಧಾಕರ್ ಅವರು ಹತ್ತು ದಿನಗಳಲ್ಲಿ ಸಮಸ್ಯೆ ಪರಿಹರಿಸುವುದಾಗಿ ಹೇಳಿದ್ದರು. ಅವರು ಮಾತು ಮರೆತಿದ್ದಾರೆ. ಈವರೆಗೆ ನಮ್ಮ ಒಂದೂ ಬೇಡಿಕೆ ಈಡೇರಿಸಿಲ್ಲ. ಹೀಗಾಗಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿದ್ದೇವೆ’ ಎಂದು ತಿಳಿಸಿದ್ದಾರೆ.

‘ಮುಂದಿನ ಮೂರು ದಿನಗಳಲ್ಲಿ ಎಲ್ಲಾ ವೈದ್ಯರಿಗೂ ಅಪಾಯ ಭತ್ಯೆ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಹೀಗಾಗಿ ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗಿ’ ಎಂದು ಸಚಿವ ಡಾ.ಕೆ.ಸುಧಾಕರ್ ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ.

ಭಕ್ತಾದಿಗಳಿಂದ ನಾಗನಾಥೇಶ್ವರನಿಗೆ ಲಕ್ಷ ದೀಪೋತ್ಸವ

ಬೊಮ್ಮನಹಳ್ಳಿ: ಬೇಗೂರಿನ ಇತಿಹಾಸ ಪ್ರಸಿದ್ಧ ಪಂಚಲಿಂಗಗಳ ನಾಗನಾಥೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಸೋಮವಾರ ಅದ್ದೂರಿ ಲಕ್ಷ ದೀಪೋತ್ಸವ ನಡೆಯಿತು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತಾದಿಗಳು ನಾಗನಾಥನಿಗೆ ದೀಪದ ಕಾಣಿಕೆ ಅರ್ಪಿಸಿ ದೈವಕೃಪೆಗೆ ಪಾತ್ರರಾದರು.

ಬೆಳಿಗ್ಗೆ 8 ಗಂಟೆಯಿಂದ ಸ್ವಾಮಿಗೆ ಅಭಿಷೇಕ ಮಾಡುವ ಮೂಲಕ ಪೂಜಾ ಕೈಂಕರ್ಯಗಳು ಪ್ರಾರಂಭವಾದವು. ಪುರೋಹಿತರ ತಂಡ ಹೋಮ-ಹವನ ನಡೆಸಿತು. ಸಂಜೆ 6.30 ಗಂಟೆಗೆ ದೇವಾಲಯದ ಮಧ್ಯ ಭಾಗದಲ್ಲಿರುವ ಗರುಡಗಂಬಕ್ಕೆ ದೀಪ ಹಚ್ಚುವ ಮೂಲಕ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಲಾಯಿತು.

ಕಾರ್ತಿಕ ಮಾಸದ ವಿಶೇಷ ಪೂಜೆ, ಅಲಂಕಾರ, ಮಂಗಳಾರತಿ 15 ದಿನಗಳಿಂದಲೂ ನಡೆದಿತ್ತು. ಉದ್ಯಮಿ ಪ್ರಭಾಕರ ರೆಡ್ಡಿ ಅವರು ಅನ್ನದ ರಾಶಿಗೆ ಪೂಜೆ ಸಲ್ಲಿಸಿ ಅನ್ನ ಸಂತರ್ಪಣೆಗೆ ಚಾಲನೆ ನೀಡಿದರು. ಬಳಿಕ 20 ಸಾವಿರಕ್ಕೂ ಹೆಚ್ಚು ಜನ ಅನ್ನ ಸಂತರ್ಪಣೆಯ ಪ್ರಸಾದ ಸ್ವೀಕರಿಸಿದರು.

ಡಿ.2ರಿಂದ ಕಟ್ಟಡ ಕಾರ್ಮಿಕರ ಮುಷ್ಕರ

ಬೆಂಗಳೂರು: ‘ಕಟ್ಟಡ ಕಾರ್ಮಿಕರಿಗೆ ಲಾಕ್‌ಡೌನ್ ಪರಿಹಾರ ಪಾವತಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದೇಶದಾದ್ಯಂತ ಡಿ. 2 ಮತ್ತು 3ರಂದು ಮುಷ್ಕರ ಹಮ್ಮಿಕೊಳ್ಳಲಾಗಿದ್ದು, ನಗರದಲ್ಲೂ ಪ್ರತಿಭಟನೆ ನಡೆಸಲಿದ್ದೇವೆ’ ಎಂದು ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಡಿ.2ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಹಾಗೂ 3ರಂದು ಡೈರಿ ವೃತ್ತದ ಬಳಿ ಇರುವ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಎದುರು ಪ್ರತಿಭಟನೆ ನಡೆಯಲಿದೆ’ ಎಂದರು.

‘ಲಾಕ್‌ಡೌನ್ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದ ಎಲ್ಲ ಕಾರ್ಮಿಕರಿಗೆ ಹಣ ಪಾವತಿ, ಮರಣ ಪರಿಹಾರ ಮೊತ್ತವನ್ನು ₹ 2 ಲಕ್ಷಕ್ಕೆ ಹೆಚ್ಚಿಸುವುದು, ಅಪಘಾತದಲ್ಲಿ ಮೃತರಾದವರಿಗೆ ₹10 ಲಕ್ಷ ಪರಿಹಾರ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರಗಳ ಮುಂದಿಡಲಾಗುವುದು’ ಎಂದರು.

ಮೂಲೆ ಸೇರಿದ್ದ ಕಡತಗಳನ್ನು ಮತ್ತೆ ತರಿಸಿಕೊಂಡ ಸಿ.ಎಂ • ಉನ್ನತ ಅಧಿಕಾರಿಗಳ ಜೊತೆ ಸಮಾಲೋಚನೆ

ವೈಟ್‌ಟಾಪಿಂಗ್: 3ನೇ ಹಂತಕ್ಕೆ ಮಂಜೂರಾತಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು, 2019ರ ಮಧ್ಯದಲ್ಲಿ ಶೈತ್ಯಾಗಾರಕ್ಕೆ ಸೇರಿಸಲಾಗಿದ್ದ ವೈಟ್‌ಟಾಪಿಂಗ್ ಯೋಜನೆಯ ಮೂರನೇ ಹಂತಕ್ಕೆ ಮಂಜೂರಾತಿ ನೀಡಲು ಮತ್ತೆ ಆಸಕ್ತಿ ತೋರಿಸಿದೆ.

ವೈಟ್‌ಟಾಪಿಂಗ್ ಯೋಜನೆಯ ಮೂರನೇ ಹಂತವನ್ನು ಸರ್ಕಾರ ₹ 1,154 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಈ ಹಿಂದೆ ಯೋಜನೆ ರೂಪಿಸಿತ್ತು.

ಆದರೆ, ಇದು ಇನ್ನೂ ಅನುಷ್ಠಾನವಾಗಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಯೋಜನೆಗೆ ವಿಶೇಷ ಅನುದಾನ ಒದಗಿಸುವ ಬಗ್ಗೆ ಉನ್ನತ ಅಧಿಕಾರಿಗಳ ಜೊತೆ ಎರಡು ಸುತ್ತಿನ ಮಾತುಕತೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ವೈಟ್‌ಟಾಪಿಂಗ್ ಮೂರನೇ ಹಂತದಲ್ಲಿ 121.70 ಕಿ.ಮೀ ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರ ತೀರ್ಮಾನಿಸಿತ್ತು. ಆದರೆ, ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದ ಬಳಿಕ ಈ ಯೋಜನೆಗೆ ಮಂಜೂರಾಗಿದ್ದ ಅನುದಾನವನ್ನು ಹಿಂಪಡೆದಿದ್ದರು. ಈ ಯೋಜನೆಯ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಹಾಗೂ ವೈಟ್‌ಟಾಪಿಂಗ್ ಯೋಜನೆಯ ಮೊದಲ ಹಂತ (94 ಕಿ.ಮೀ) ಹಾಗೂ ಎರಡನೇ ಹಂತದ (63 ಕಿ.ಮೀ) ಕಾಮಗಾರಿಗಳ ಅನುಷ್ಠಾನ ವಿಳಂಬವಾಗಿದೆ ಎಂಬ ಟೀಕೆ ವ್ಯಕ್ತವಾಗಿದ್ದರಿಂದ ಈ ನಿರ್ಧಾರ ತಳೆದಿದ್ದರು.

ಮೂರು ವರ್ಷಗಳವರೆಗೆ ಮರೆಯಲ್ಲೇ ಉಳಿದಿದ್ದ ಈ ಯೋಜನೆಯ ಕಡತಗಳನ್ನು ಮತ್ತೆ ಮುಖ್ಯಮಂತ್ರಿಯವರು ಇತ್ತೀಚೆಗೆ ತರಿಸಿಕೊಂಡಿದ್ದಾರೆ. ಈಗಾಗಲೇ ಪೂರ್ಣಗೊಂಡಿರುವ ಟೆಂಡರ್ ಪ್ರಕ್ರಿಯೆ ಪ್ರಕಾರ ಕಾಮಗಾರಿ ಗುತ್ತಿಗೆ ಪಡೆದ ಕಂಪನಿಗಳಿಗೇ ಕಾರ್ಯಾದೇಶ ನೀಡಬಹುದು ಅಥವಾ ಹೊಸತಾಗಿ ಟೆಂಡರ್ ಕರೆಯುವಂತೆ ಬಿಬಿಎಂಪಿಗೆ ಸೂಚಿಸಬಹುದು ಎಂದು ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನೂ ಹೊಂದಿರುವ ಬಸವರಾಜ ಬೊಮ್ಮಾಯಿ ಅವರು ಸಲಹೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಒಟ್ಟು ಆರು ಪ್ಯಾಕೇಜ್‌ಗಳಲ್ಲಿ ವೈಟ್‌ಟಾಪಿಂಗ್ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮೂರನೇ ಹಂತದಲ್ಲಿ ಒಟ್ಟು 89 ರಸ್ತೆಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಪ್ರತಿ ಪ್ಯಾಕೇಜ್ 8 ರಿಂದ 19 ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಒಳಗೊಂಡಿದೆ.

ಜೆಎಂಸಿ ಪ್ರಾಜೆಕ್ಟ್ಸ್, ಜೆಎಸ್‌ಪಿ ಪ್ರಾಜೆಕ್ಟ್ಸ್, ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್, ರಾಮಲಿಂಗಂ ಕನ್‌ಸ್ಟ್ರಕ್ಷನ್ಸ್, ಆರ್‌ಪಿಎನ್ ಇನ್‌ಫ್ರಾಟೆಕ್ ಹಾಗೂ ಆರ್‌ಪಿಪಿ ಇನ್‌ಫ್ರಾ ಪ್ರಾಜೆಕ್ಟ್ಸ್‌ಗಳು ಅತಿ ಕಡಿಮೆ ಮೊತ್ತ ನಮೂದಿಸಿದ ಕಂಪನಿಗಳು. ಈ ಯೋಜನೆಗೆ ರಾಜ್ಯ ಸರ್ಕಾರವೇ ಅನುದಾನ ನೀಡುತ್ತಿದೆ. ಹಾಗಾಗಿ ಈ ಟೆಂಡರ್‌ಗಳ ಕಡತಗಳಿಗೆ ಮುಖ್ಯಮಂತ್ರಿಯವರ ಅನುಮೋದನೆಗಾಗಿ ಈ ಗುತ್ತಿಗೆದಾರರು ಎದುರು ನೋಡುತ್ತಿದ್ದಾರೆ.

ಶೇ 19ರಷ್ಟು ಟೆಂಡರ್ ಪ್ರೀಮಿಯಂ

ವಿವಿಧ ಮೂಲಗಳ ಪ್ರಕಾರ, ಟೆಂಡರ್ ಪ್ರೀಮಿಯಂ ಮೊತ್ತ ಭಾರಿ ಹೆಚ್ಚು ಇರುವುದೇ ಈಗಾಗಲೇ ಅಂತಿಮಗೊಂಡಿರುವ ಟೆಂಡರ್‌ಗಳಿಗೆ ಮಂಜೂರಾತಿ ನೀಡುವುದಕ್ಕೆ ತೊಡಕಾಗಿಬಿಟ್ಟಿದೆ. ಪ್ರತಿ ಪ್ಯಾಕೇಜ್‌ನಲ್ಲೂ ಅತ್ಯಂತ ಕಡಿಮೆ ದರವನ್ನು ನಮೂದಿಸಿರುವ ಗುತ್ತಿಗೆದಾರರು ಉಲ್ಲೇಖಿಸಿರುವ ಮೊತ್ತವೇ ಅಂದಾಜು ಮೊತ್ತಕ್ಕಿಂತ ಶೇ 15ರಿಂದ ಶೇ 19ರಷ್ಟು ಹೆಚ್ಚು ಇದೆ.

ಮಂಜೂರಾತಿ ನೀಡುವ ಮುನ್ನವೇ ವೈಜ್ಞಾನಿಕ ಅಧ್ಯಯನ ಕೈಗೊಳ್ಳಬೇಕು. ವೈಟ್‌ಟಾಪಿಂಗ್ ಮಾಡಲಾದ ರಸ್ತೆಗಳು ಗುಂಡಿಗಳಿಂದ ಮುಕ್ತವಾಗಿವೆಯೇ ಎಂದೂ ತಜ್ಞರಿಂದ ಪರಿಶೀಲನೆ ನಡೆಸಬೇಕು

ಶ್ರೀನಿವಾಸ ಅಲವಿಲ್ಲಿ, ಜನಾಗ್ರಹ

ಪಾದಚಾರಿಗಳ ಕುರಿತು ಹೆಚ್ಚಿನ ಕಾಳಜಿ ಅಗತ್ಯ. ರಸ್ತೆ ಅಭಿವೃದ್ಧಿ ಯೋಜನೆ ಇರಲಿ, ಅದರಲ್ಲಿ ಪಾದಚಾರಿ ಸ್ನೇಹಿ ಮೂಲಸೌಕರ್ಯ ಅಳವಡಿಸಿಕೊಳ್ಳಬೇಕು

ಅಖಿಲಾ ಸೂರಿ

ವರ್ಲ್ಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್

‘ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಒತ್ತಾಯಿಸಿ ಬ್ಯಾಂಕ್‌ನ ಠೇವಣಿದಾರರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರ

ಸಿಬಿಐ ತನಿಖೆಗೆ ಒತ್ತಾಯಿಸಿ ಠೇವಣಿದಾರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್ ಅವ್ಯವಹಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಒತ್ತಾಯಿಸಿ ಬ್ಯಾಂಕ್‌ನ ಠೇವಣಿದಾರರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಠೇವಣಿದಾರರು, ‘ವಂಚಕರನ್ನು ಗಲ್ಲಿಗೇರಿಸಿ’, ‘ನಮ್ಮ ಹಣ ನಮಗೆ ಬೇಕು’ ಹಾಗೂ ‘ಹಿರಿಯ ನಾಗರಿಕರಿಗೆ ನ್ಯಾಯ ಕೊಡಿಸಿ’ ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ‘ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣೆ ವೇದಿಕೆ’ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ವೇದಿಕೆಯ ಡಾ. ಶಂಕರ್ ಗುಹಾ ದ್ವಾರಕಾನಾಥ್ ಬೆಳ್ಳೂರು, ‘ಅವ್ಯವಹಾರದ ವಿರುದ್ಧ ಒಂದು ವರ್ಷದಿಂದ ನಿರಂತರವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ. ನೊಂದ ಠೇವಣಿದಾರರಿಗೆ ರಾಜ್ಯ ಸರ್ಕಾರದಿಂದ ಯಾವುದೇ ನ್ಯಾಯ ಸಿಗುತ್ತಿಲ್ಲ. ವಂಚನೆ ಮಾಡಿರುವ ಪ್ರಭಾವಿಗಳನ್ನು ರಕ್ಷಿಸುವ ಕೆಲಸವಾಗುತ್ತಿದೆ. ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಬೇಕು’ ಎಂದರು.

‘ಸ್ಥಳೀಯ ಶಾಸಕ ಎಲ್‌.ಎ. ರವಿ ಸುಬ್ರಹ್ಮಣ್ಯ, ಸಂಸದ ತೇಜಸ್ವಿ ಸೂರ್ಯ ಅವರು ಅವ್ಯವಹಾರದ ಬಗ್ಗೆ ಮೌನ ವಹಿಸಿದ್ದಾರೆ. ಇದು ಅವರ ಮೇಲೆಯೇ ಅನುಮಾನ ಮೂಡುವಂತೆ ಮಾಡಿದೆ. ಇವರಿಬ್ಬರು ಜನರ ಪರವೇ ಅಥವಾ ವಂಚಕರ ಪರವೇ ಎಂಬ ಪ್ರಶ್ನೆ ಮೂಡಿದೆ’ ಎಂದೂ ಅವರು ಹೇಳಿದರು.

ಹಿರಿಯ ನಾಗರಿಕರೇ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ‘ಠೇವಣಿ ಇಟ್ಟಿರುವ ಹಣ ವಾಪಸು ಕೊಡಿಸಿ’ ಎಂದು ಹಲವರು ಕಣ್ಣೀರಿಟ್ಟರು.

ಕೊರೊನಾ ವೈರಸ್ ಭೀತಿ: ಮತ್ತೆ ಆನ್‌ಲೈನ್ ತರಗತಿಗಳು!

ಬೆಂಗಳೂರು: ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಗರದ ಕೆಲವು ಖಾಸಗಿ ಅನುದಾನರಹಿತ ಶಾಲೆಗಳು ಮತ್ತೆ ಆನ್‌ಲೈನ್ ತರಗತಿಗಳನ್ನು ಆರಂಭಿಸಿವೆ.

ಈ ಬಗ್ಗೆ ಶಾಲೆಯ ಆಡಳಿತ ಮಂಡಳಿಗಳು ಪೋಷಕರಿಗೆ ನೋಟಿಸ್ ಜಾರಿಗೊಳಿಸಿದ್ದು, ಡಿ. 1ರಿಂದ ಆಫ್‌ಲೈನ್ ತರಗತಿಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ತಿಳಿಸಿವೆ.

ಆಫ್‌ಲೈನ್ ತರಗತಿಗಳನ್ನು ರದ್ದುಪಡಿಸುವಂತೆ ಹಲವು ಪೋಷಕರು ಸಹ ಒತ್ತಾಯಿಸಿದ್ದಾರೆ ಎಂದು ಶಿಕ್ಷಕರು ತಿಳಿಸಿದ್ದಾರೆ.

‘ಆಫ್‌ಲೈನ್ ತರಗತಿಗಳನ್ನು ರದ್ದುಪಡಿಸುವಂತೆ ಹಲವು ಪೋಷಕರು ಮನವಿ ಮಾಡುತ್ತಿದ್ದಾರೆ. ಸದ್ಯ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳನ್ನು ನಡೆಸುತ್ತಿದ್ದೇವೆ. ಹೀಗಾಗಿ, ಆಫ್‌ಲೈನ್ ತರಗತಿಗಳನ್ನು ರದ್ದುಪಡಿಸುವ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಆದರೆ, ಆಫ್‌ಲೈನ್‌ಗೆ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆ ಕಡಿಮೆಯಾದರೆ ಆನ್‌ಲೈನ್ ಮೂಲಕ ಮಾತ್ರ ತರಗತಿಗಳನ್ನು ನಡೆಸಲಾಗುವುದು’ ಎಂದು ಬೆಂಗಳೂರು ಉತ್ತರದಲ್ಲಿನ ಶಾಲೆಯ ಪ್ರಾಂಶುಪಾಲರೊಬ್ಬರು ತಿಳಿಸಿದ್ದಾರೆ.

‘ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಿದ್ಧರಿಲ್ಲ. ಹೀಗಾಗಿ, ನಾವು ಇನ್ನೂ ಭೌತಿಕ ತರಗತಿಗಳನ್ನು ಆರಂಭಿಸಿಲ್ಲ. ಜನವರಿ ಮೊದಲ ವಾರದಲ್ಲಿ ಶಾಲೆ ತೆರೆಯಲು ಉದ್ದೇಶಿಸಿದ್ದೇವೆ’ ಎಂದು ದೆಹಲಿ ಪಬ್ಲಿಕ್ ಸ್ಕೂಲ್ ಪೂರ್ವದ ಪ್ರಾಂಶುಪಾಲರಾದ ಮನಿಲಾ ಕರ್ವಾಲ್ಹೊ ತಿಳಿಸಿದ್ದಾರೆ.

‘ಹವಾಮಾನ ವೈಪರೀತ್ಯ ಸಮಸ್ಯೆಯಾಗಿದೆ. ಹೊಸ ತಳಿ ಪತ್ತೆ ಮತ್ತು ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಜನರು ಆತಂಕಕ್ಕೆ ಒಳಗಾಗಿದ್ದಾರೆ. ಇದರಿಂದ ಹಲವು ಪೋಷಕರು ಆನ್‌ಲೈನ್ ತರಗತಿಗಳನ್ನು ನಡೆಸುವಂತೆ ಮನವಿ ಮಾಡುತ್ತಿದ್ದಾರೆ’ ಎಂದು ನಾಗರಬಾವಿಯ ಆಕ್ಸ್‌ಫರ್ಡ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಪ್ರಾಂಶುಪಾಲ ಸುಪ್ರೀತ್ ಬಿ.ಆರ್. ತಿಳಿಸಿದ್ದಾರೆ.

‘ರಕ್ಷಣಾ ನಿಯಮ ರೂಪಿಸಿ’

ಬೆಂಗಳೂರು: ‘ಮಕ್ಕಳ ಹಿತಾಸಕ್ತಿ ದೃಷ್ಟಿಯಿಂದ ಆನ್‌ಲೈನ್ ತರಗತಿಗಳ ಬಗ್ಗೆ ರಕ್ಷಣಾ ನಿಯಮಗಳನ್ನು ರೂಪಿಸುವುದು ಅಗತ್ಯ’ ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ಪ್ರತಿಪಾದಿಸಿದೆ.

‘ಶಾಲೆಗಳು ಆರಂಭವಾಗಿ ಆನ್‌ಲೈನ್ ತರಗತಿಗಳು ಸ್ಥಗಿತಗೊಳ್ಳಬಹುದು ಎಂದು ಹಲವು ಪೋಷಕರು ಯೋಚಿಸಿದ್ದರು. ಆದರೆ, ಕೊರೊನಾ ಭೀತಿಯಿಂದಾಗಿ ಇನ್ನೂ ಹಲವು ಶಾಲೆಗಳು ತೆರೆದಿಲ್ಲ. ಆನ್‌ಲೈನ್ ತರಗತಿಗಳನ್ನು ಮುಂದುವರಿಸಿವೆ. ಸದ್ಯದ ಪರಿಸ್ಥಿತಿಯನ್ನು ಗಮನಿಸಿದರೆ ಇನ್ನೂ ಹಲವು ದಿನಗಳ ಕಾಲ ಆನ್‌ಲೈನ್ ತರಗತಿಗಳು ಮುಂದುವರಿಯುವ ಸಾಧ್ಯತೆಗಳು ಹೆಚ್ಚಾಗಿವೆ. ಹೀಗಾಗಿ, ರಕ್ಷಣಾ ನಿಯಮಗಳನ್ನು ರೂಪಿಸುವುದು ಅತ್ಯಗತ್ಯ’ ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್‌ನ ನಾಗಸಿಂಹ ಜಿ. ರಾವ್ ತಿಳಿಸಿದ್ದಾರೆ.

‘ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನಿಯಮಗಳನ್ನು 2016ರಲ್ಲೇ ಸರ್ಕಾರ ಸಿದ್ಧಪಡಿಸಿದೆ. ಆದರೆ, ಇನ್ನೂ ಅನೇಕ ಖಾಸಗಿ ಶಾಲೆಗಳು, ಸರ್ಕಾರಿ ಶಾಲೆಗಳು ಮಕ್ಕಳ ರಕ್ಷಣಾ ನಿಯಮಗಳನ್ನು ಅಳವಡಿಸಿಕೊಂಡಿಲ್ಲ. ರಾಜ್ಯದ ಪ್ರತಿಯೊಂದು ಶಾಲೆಗಳು ಮಕ್ಕಳ ರಕ್ಷಣಾ ನಿಯಮಗಳನ್ನು ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಕೆಲ ಶಿಫಾರಸುಗಳು

- ಆನ್‌ಲೈನ್ ತರಗತಿಯ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಳ್ಳುವುದು ಮತ್ತು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು ಶಿಕ್ಷಕರಿಗೆ ತರಬೇತಿ ನೀಡಬೇಕು.
- ಯಾವ ಲಿಂಕ್ ತೆರೆಯಬಹುದು. ಯಾವುದು ತೆರೆದರೆ ತೊಂದರೆ ಎನ್ನುವ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಬೇಕು.
- ತೊಂದರೆ ಅನುಭವಿಸಿದ ಶಾಲೆಗಳಲ್ಲಿ ಆನ್‌ಲೈನ್ ತರಗತಿ ನಡೆಯುವಾಗ ಸೈಬರ್ ಪೊಲೀಸರು ಹಾಜರಿದ್ದು, ದುರುಪಯೋಗಪಡಿಸಿಕೊಳ್ಳುವ ವ್ಯಕ್ತಿಗಳನ್ನು ಬಂಧಿಸಿ, ಶಿಕ್ಷೆಗೆ ಒಳಪಡಿಸಬೇಕು

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,56,267 ಒಟ್ಟು ಸೋಂಕಿತರು (12,56,136 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,308	12,34,627	16,331

ದಿನದ ಏರಿಕೆ

ಹೊಸ ಪ್ರಕರಣ	131
ಗುಣಮುಖ	108
ಸಾವು	02

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	26.21 ಕೋಟಿ	3.45 ಕೋಟಿ
ಸಕ್ರಿಯ ಪ್ರಕರಣ	2.01ಕೋಟಿ	1.03 ಲಕ್ಷ
ಗುಣಮುಖ	23.66 ಕೋಟಿ	3.40 ಕೋಟಿ
ಸಾವು	52.21 ಲಕ್ಷ	4.68 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.95 ಲಕ್ಷ	8,309
ಗುಣಮುಖ	3.08 ಲಕ್ಷ	9,905
ಸಾವು	4,550	236

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಜರ್ಮನಿ	ರಷ್ಯಾ	ಫ್ರಾನ್ಸ್
38,444	33,548	31,648

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
94.20	10.29	10.17

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.40 ಲಕ್ಷ
ತಮಿಳುನಾಡು	36,463
ಕೇರಳ	39,838

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.34
ಕೇರಳ	51.33
ತಮಿಳುನಾಡು	27.25

ಪ್ರಜಾವಾಣಿ ಗ್ರಾಫಿಕ್ಸ್

₹ 30 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ನೈಜೀರಿಯಾ ಪ್ರಜೆಯೊಬ್ಬರಿಂದ ಡ್ರಗ್ಸ್ ಖರೀದಿಸಿ ತರುತ್ತಿದ್ದ ಆರೋಪಿಗಳು, ಎಲೆಕ್ಟ್ರಾನಿಕ್ ಸಿಟಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ದಾಳಿ ಮಾಡಿ ಬಂಧಿಸಲಾಗಿದೆ. ಆರೋಪಿಗಳ ಹೆಸರು ಗೋಪ್ಯವಾಗಿರಿಸಲಾಗಿದೆ’ ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

‘ನಗರದ ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು. ದಾಳಿ ವೇಳೆ ಆರೋಪಿಗಳಿಂದ ₹ 30 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ.’

‘ಎಂಡಿಎಂಎ ಮಾತ್ರೆಗಳು, ಚರಸ್ ಹಾಗೂ ಗಾಂಜಾ ಪತ್ತೆ ಆಗಿದೆ. ಆರೋಪಿಗಳ ಜೊತೆ ಮತ್ತಷ್ಟು ಮಂದಿ ಭಾಗಿಯಾಗಿದ್ದು, ತನಿಖೆ ಮುಂದುವರಿದಿದೆ’ ಎಂದೂ ಮೂಲಗಳು ತಿಳಿಸಿವೆ.

ಮಾರಕಾಸ್ತ್ರ ತೋರಿಸಿ ₹ 25 ಸಾವಿರ ಸುಲಿಗೆ

ಬೆಂಗಳೂರು: ವಸಂತನಗರದ 8ನೇ ಅಡ್ಡರಸ್ತೆಯಲ್ಲಿ ಬೈಕ್ ಸವಾರರೊಬ್ಬರನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ಮಾರಕಾಸ್ತ್ರ ತೋರಿಸಿ ಬೆದರಿಸಿ ₹ 25 ಸಾವಿರ ಸುಲಿಗೆ ಮಾಡಿದ್ದಾರೆ.

ಭಾನುವಾರ ಸಂಜೆ 5.30ಕ್ಕೆ ನಡೆದಿರುವ ಘಟನೆ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಬೈಕ್ ಸವಾರ ನೀಡಿರುವ ದೂರು ಆಧರಿಸಿ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಅಂಗಡಿ ಇಟ್ಟುಕೊಂಡಿರುವ ದೂರುದಾರ, ವ್ಯಾಪಾರ ಮುಗಿಸಿ ಬೈಕ್‌ನಲ್ಲಿ ಮನೆಗೆ ಹೊರಟಿದ್ದರು. ಅದೇ ಸಂದರ್ಭದಲ್ಲೇ ಬೈಕ್ ಅಡ್ಡಗಟ್ಟಿ ದುಷ್ಕರ್ಮಿಗಳು ಕೃತ್ಯ ಎಸಗಿ ಪರಾರಿಯಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೋವಿಡ್ ಲಸಿಕೆ ನೆಪ: ಪಿಸ್ತೂಲ್ ತೋರಿಸಿ ಚಿನ್ನಾಭರಣ ಸುಲಿಗೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೋವಿಡ್ ಲಸಿಕೆ ನೀಡುವ ನೆಪದಲ್ಲಿ ಮನೆಯೊಂದಕ್ಕೆ ನುಗ್ಗಿದ್ದ ದುಷ್ಕರ್ಮಿಗಳ ತಂಡ, ಪಿಸ್ತೂಲ್ ತೋರಿಸಿ ಮಹಿಳೆಯರಿಬ್ಬರನ್ನು ಬೆದರಿಸಿ ₹ 50 ಗ್ರಾಂ ಚಿನ್ನಾಭರಣ ಸುಲಿಗೆ ಮಾಡಿದೆ.

ಯಶವಂತಪುರ ಬಳಿಯ ಬೃಂದಾವನ ನಗರದ 6ನೇ ಅಡ್ಡರಸ್ತೆಯಲ್ಲಿರುವ ಸಂಪತ್ ಸಿಂಗ್ ಎಂಬುವರ ಮನೆಯಲ್ಲಿ ಈ ಕೃತ್ಯ ನಡೆದಿದ್ದು, ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸಂಪತ್ ಸಿಂಗ್ ಕೆಲಸ ನಿಮಿತ್ತ ಹೊರಗಡೆ ಹೋಗಿದ್ದರು. ಅವರ ಪತ್ನಿ ಪಿಸ್ತಾದೇವಿ ಹಾಗೂ ಸೊಸೆ ರಕ್ಷಾ ಮಾತ್ರ ಮನೆಯಲ್ಲಿದ್ದರು. ಕಾರಿನಲ್ಲಿ ಬೆಳಿಗ್ಗೆ 11.30ರ ಸುಮಾರಿಗೆ ಆರೋಪಿಗಳು ಮನೆ ಬಳಿ ಬಂದಿದ್ದರು. ವೈದ್ಯರ ಸಮವಸ್ತ್ರ ಧರಿಸಿದ್ದ ವ್ಯಕ್ತಿಯೊಬ್ಬ, ಮನೆ ಬಳಿ ಹೋಗಿ ಬಾಗಿಲು ಬಡಿದಿದ್ದ’ ಎಂದು ಯಶವಂತಪುರ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಬಾಗಿಲು ತೆರೆದಿದ್ದ ಮಹಿಳೆಯರ ಜೊತೆ ಮಾತನಾಡಿದ್ದ ಆರೋಪಿ, ‘ನಾನು ಆರೋಗ್ಯ ಇಲಾಖೆ ವೈದ್ಯ. ಕೋವಿಡ್‌ನ ಓಮೈಕ್ರಾನ್ ರೂಪಾಂತರಿ ತಳಿ ಎಲ್ಲೆಡೆ ಹರಡುತ್ತಿದೆ. ಅದರ ನಿಯಂತ್ರಣಕ್ಕಾಗಿ ಜನರಿಗೆ ಲಸಿಕೆ ಹಾಕುತ್ತಿದ್ದೇವೆ. ನಿಮಗೂ ಲಸಿಕೆ ನೀಡುತ್ತೇವೆ’ ಎಂದಿದ್ದ.’

‘ಆರೋಪಿ ಬಗ್ಗೆ ಅನುಮಾನಗೊಂಡಿದ್ದ ಪಿಸ್ತಾದೇವಿ, ಪತಿಗೆ ಕರೆ ಮಾಡಲು ಯತ್ನಿಸಿದ್ದರು. ಮೊಬೈಲ್ ಕಸಿದುಕೊಂಡಿದ್ದ ಆರೋಪಿ, ಪಿಸ್ತಾದೇವಿ ಹಣೆಗೆ ಪಿಸ್ತೂಲ್ ಹಿಡಿದಿದ್ದ. ಇತರೆ ಆರೋಪಿಗಳೂ ಮನೆಯೊಳಗೆ ಬಂದಿದ್ದರು. ಇಬ್ಬರ ಮಹಿಳೆಯರನ್ನು ಬೆದರಿಸಿ, ಅವರ ಚಿನ್ನಾಭರಣ ಕಿತ್ತುಕೊಂಡಿದ್ದರು. ಇದೇ ಸಂದರ್ಭದಲ್ಲೇ ಸಂಪತ್ ಸಿಂಗ್ ಅವರ ಮಗ ವಿಕ್ರಂ ಮನೆಗೆ ಬಂದಿದ್ದ. ಆತನನ್ನು ನೋಡಿ ಆರೋಪಿಗಳು ಓಡಿ ಹೋಗಿದ್ದಾರೆ’ ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

ಆನೇಕಲ್ ತಾಲ್ಲೂಕು ಗಡಿ ಭಾಗದಲ್ಲಿ ತಪಾಸಣೆ ಚುರುಕು

ಪ್ರತಿನಿತ್ಯ 3 ಸಾವಿರ ಕೋವಿಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಆನೇಕಲ್: ‘ಓಮೈಕ್ರಾನ್ ರೂಪಾಂತರ ತಳಿಯ ಹಾವಳಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಬಿಗಿ ಕ್ರಮಕೈಗೊಂಡಿದ್ದು ಗಡಿ ಭಾಗದಲ್ಲಿ ತಪಾಸಣೆಯನ್ನು ಚುರುಕುಗೊಳಿಸಲಾಗಿದೆ’ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ವಿನಯ್ ತಿಳಿಸಿದರು.

ಆನೇಕಲ್‌ನ ಗಡಿಭಾಗವಾದ ಅತ್ತಿಬೆಲೆಯಲ್ಲಿ ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವ ವಾಹನಗಳ ತಪಾಸಣೆಯನ್ನು ಚುರುಕುಗೊಳಿಸಲಾಗಿದೆ. ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವವರಿಗೆ ಆರ್‌ಟಿಪಿಸಿಆರ್ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ. ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ತಪಾಸಣೆಯನ್ನು ಚುರುಕುಗೊಳಿಸಲಾಗಿದ್ದು, ಪ್ರತಿದಿನ 3 ಸಾವಿರ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಓಮೈಕ್ರಾನ್ ರೂಪಾಂತರ ತಳಿಯ ಹಾವಳಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಗಡಿಯಲ್ಲಿ ತಪಾಸಣೆಯನ್ನು ಬಿಗಿಗೊಳಿಸಲಾಗಿದೆ

ತಾಲ್ಲೂಕಿನಲ್ಲಿ 130 ಕೊರೊನಾ ಸಕ್ರಿಯ ಪ್ರಕರಣಗಳಿವೆ. 72 ಮಂದಿಯನ್ನು ಹೋಮ್ ಐಸೋಲೇಷನ್‌ಗೆ ಒಳಪಡಿಸಲಾಗಿದೆ. 58 ಮಂದಿಯನ್ನು ಆಸ್ಪತ್ರೆ ಮತ್ತು ಕೋವಿಡ್ ಕೇರ್ ಕೇಂದ್ರಗಳಲ್ಲಿ ದಾಖಲಿಸಲಾಗಿದೆ ಎಂದು ತಿಳಿಸಿದರು.

ತಾಲ್ಲೂಕಿನಾದ್ಯಂತ ಲಸಿಕೆಗೆ ವೇಗ ನೀಡಲು ಕ್ರಮವಹಿಸಲಾಗಿದೆ. ಡಿ. 10ರೊಳಗೆ ತಾಲ್ಲೂಕಿನ 18 ವರ್ಷ ಮೇಲ್ಪಟ್ಟ ಎಲ್ಲರಿಗೂ 2ನೇ ಡೋಸ್ ನೀಡಲಾಗುವುದು. ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಲಸಿಕೆ ಕೇಂದ್ರ ಮತ್ತು ಉಪ ಕೇಂದ್ರಗಳನ್ನು ಹೆಚ್ಚಿಸಿ ಪ್ರತಿಯೊಬ್ಬರು ಲಸಿಕೆ ಪಡೆಯಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಗರದ ಬಸವನಗುಡಿಯಲ್ಲಿ ಸೋಮವಾರ ಕಡಲೆಕಾಯಿ ಪರಿಷೆ ಅಂಗವಾಗಿ ಕಡಲೆಕಾಯಿಗಳಿಂದ ಬಸವಣ್ಣನ ವಿಗ್ರಹದ ತುಲಾಭಾರ ನಡೆಯಿತು. ಎಲ್‌.ಎ. ರವಿ ಸುಬ್ರಹ್ಮಣ್ಯ, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ, ಆಡಳಿತಾಧಿಕಾರಿ ರಾಕೇಶ್ ಸಿಂಗ್, ಶಾಸಕ ಉದಯ ಬಿ. ಗರುಡಾಚಾರ್ ಇದ್ದರು. (ಎಡ ಚಿತ್ರ), ನಗರದ ಬಸವನಗುಡಿಯಲ್ಲಿ ಸೋಮವಾರ ಆರಂಭವಾದ ಕಡಲೆಕಾಯಿ ಪರಿಷೆಯಲ್ಲಿ ವಿದ್ಯಾರ್ಥಿನಿಯರು ಕಡಲೆಕಾಯಿ ಖರೀದಿಸಿದರು —ಪ್ರಜಾವಾಣಿ ಚಿತ್ರಗಳು

ಬಸವನಗುಡಿ ರಸ್ತೆಗಳಲ್ಲಿ ಮರುಕಳಿಸಿದ ಸಂಭ್ರಮ: ಜಾತ್ರೆಗೆ ಹರಿದು ಬಂದ ಜನಸಾಗರ

ಕಡಲೆಕಾಯಿ ಪರಿಷೆಗೆ ವೈಭವದ ಮೆರುಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ರಸ್ತೆಯ ಇಕ್ಕೆಲಗಳಲ್ಲಿ ಸೋಮವಾರ ಸಂಭ್ರಮದ ವಾತಾವರಣ.

'ಬಡವರ ಬಾದಾಮಿ' ಕಡಲೆಕಾಯಿಯ ರಾಶಿಗಳೇ ಎಲ್ಲೆಡೆ ಆವರಿಸಿಕೊಂಡಿದ್ದವು. ಬಸವಣ್ಣನ ಕ್ಷೇತ್ರದಲ್ಲಿ ವರ್ಷಕ್ಕೊಮ್ಮೆ ನಡೆಯುವ ಈ ಜಾತ್ರೆಗೆ ಜನಸಾಗರವೇ ಹರಿದು ಬಂದಿತ್ತು. ವಿದ್ಯಾರ್ಥಿಗಳು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಜನರ ಉತ್ಸಾಹ ಕೋವಿಡ್ ಕರಿನೆರಳನ್ನು ಮರೆಮಾಚಿತ್ತು. ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಸೋಂಕಿನ ಭೀತಿಯ ನಡುವೆಯೂ ಸಂಭ್ರಮ ಕಳೆಗಟ್ಟಿತ್ತು.

ಬಸವನಗುಡಿಯ ಐತಿಹಾಸಿಕ ಕಡಲೆಕಾಯಿ ಪರಿಷೆಯಲ್ಲಿ ಕಂಡುಬಂದ ದೃಶ್ಯಗಳಿವು. ಕಾರ್ತಿಕ ಮಾಸದ ಕೊನೆಯ ಸೋಮವಾರ ಕಡಲೆಕಾಯಿ ಪರಿಷೆ ನಡೆಯುತ್ತದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮುಜರಾಯಿ ಇಲಾಖೆ, ಬಿಬಿಎಂಪಿ ಸಹಯೋಗದಲ್ಲಿ ನಡೆಯುವ ಈ ಕಡಲೆಕಾಯಿ ಪರಿಷೆಗೆ ಶಾಸಕರಾದ ಎಲ್‌.ಎ. ರವಿಸುಬ್ರಹ್ಮಣ್ಯ, ಉದಯ್ ಬಿ. ಗರುಡಾಚಾರ್ ಚಾಲನೆ ನೀಡಿದರು. ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ವಲಯ ಆಯುಕ್ತ ತುಳಸಿ ಮದ್ದಿನೇನಿ, ವಲಯ ಜಂಟಿ ಆಯುಕ್ತ ಜಗದೀಶ್ ನಾಯಕ್ ಇದ್ದರು.

ಪರಿಷೆ ಅಂಗವಾಗಿ ದೊಡ್ಡ ಬಸವಣ್ಣ ಮತ್ತು ದೊಡ್ಡ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಅಭಿಷೇಕಗಳು ನಡೆದವು. ಕಡಲೆಕಾಯಿಯ ವಿಶೇಷ ಅಭಿಷೇಕ ನಡೆಸಲಾಯಿತು. ಕಡಲೆಕಾಯಿಯಿಂದ ಬಸವಣ್ಣನ ವಿಗ್ರಹದ ತುಲಾಭಾರ ನಡೆಸಿ ಸಾರ್ವಜನಿಕರಿಗೆ ಪ್ರಸಾದ ರೂಪದಲ್ಲಿ ವಿತರಿಸಲಾಯಿತು.

ರಸ್ತೆಯ ಅಕ್ಕಪಕ್ಕ ಎರಡು ಸಾವಿರ ತಾತ್ಕಾಲಿಕ ಮಳಿಗೆಗಳನ್ನು ತೆರೆಯಲಾಗಿದೆ. ಇವುಗಳಲ್ಲಿ ಕಡಲೆಕಾಯಿ ಮಾರಾಟ ಮಳಿಗೆಗಳೇ ಹೆಚ್ಚು. ತಿಂಡಿ–ತಿನಿಸು, ಬಣ್ಣ ಬಣ್ಣದ ಬಲೂನು, ಬಗೆ ಬಗೆಯ ಆಟಿಕೆ, ಅಲಂಕಾರಿಕ ವಸ್ತುಗಳು, ಗೃಹೋಪಯೋಗಿ ವಸ್ತುಗಳನ್ನು ಮಾರುವ ಮಳಿಗೆಗಳು ಸಹ ಜನರನ್ನು ಸೆಳೆಯುತ್ತಿವೆ. ಕೆಲವು ವ್ಯಾಪಾರಿಗಳು ಒಂದು ದೊಡ್ಡ ಸೇರು ಹಸಿ ಕಡಲೆಕಾಯಿಗೆ ₹50 ಮತ್ತು ಸಣ್ಣ ಸೇರು ಕಡಲೆಕಾಯಿಗಳನ್ನು ₹25ಗೆ ಮಾರಾಟ ಮಾಡಿದರು.

ಮಾಗಡಿ, ರಾಮನಗರ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಕೋಲಾರ, ತಮಿಳುನಾಡು ಮತ್ತು ಆಂಧ್ರಪ್ರದೇಶ ಸೇರಿದಂತೆ ವಿವಿಧ ಭಾಗಗಳ ರೈತರು ಮತ್ತು ವ್ಯಾಪಾರಿಗಳು ಕಡಲೆಕಾಯಿ ಮಾರಾಟಕ್ಕಿಟ್ಟಿದ್ದಾರೆ. ಬೇಯಿಸಿದ ಕಡಲೆಕಾಯಿ, ಹಸಿ ಕಡಲೆಕಾಯಿಗಳು ಇಲ್ಲಿ ಲಭ್ಯ. ಡಿ.1ರವರೆಗೆ ಪರಿಷೆ ನಡೆಯಲಿದೆ.

ಪರಿಷೆಯ ಮುನ್ನಾ ದಿನವಾದ ಭಾನುವಾರವೇ ಒಂದು ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡಿದ್ದರು. ಈ ಮೂರು ದಿನಗಳಲ್ಲಿ ಸುಮಾರು 6 ಲಕ್ಷ ಜನ ಪರಿಷೆಗೆ ಭೇಟಿ ನೀಡುವ ನಿರೀಕ್ಷೆ ಇದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ ಕಾರಣಕ್ಕೆ ಪರಿಷೆಯನ್ನು ಕಳೆದ ವರ್ಷ ಸಂಭ್ರಮದಿಂದ ನಡೆಸಲು ಸಾಧ್ಯವಾಗಿರಲಿಲ್ಲ. ಈಗ ಹಳೆಯ ಸಂಪ್ರದಾಯಕ್ಕೆ ಮೆರುಗು ಬಂದಿದೆ.
ಎಲ್‌.ಎ. ರವಿ ಸುಬ್ರಹ್ಮಣ್ಯ, ಶಾಸಕ

ಕಡಲೆ ಕಾಯಿ ಪರಿಷೆ ನೋಡಿ ಖುಷಿಯಾಗಿದೆ. ಬಹು ದಿನಗಳ ನಂತರ ಇಂತಹ ಜಾತ್ರೆಗೆ ಬಂದಿದ್ದೇನೆ. ಮನೆಯಲ್ಲಿಯೇ ಇದ್ದು ಬೇಸರವಾಗಿತ್ತು.
ಸಂಗೀತಾ, ವಿದ್ಯಾರ್ಥಿನಿ

ಕೊರೊನಾ ತೊಲಗಿ ಉತ್ಸವಗಳು ನಿರಂತರವಾಗಿ ನಡೆಯಲಿ. ಈ ರೀತಿ ಪರಿಷೆಗಳಿಂದ ರೈತರಿಗೂ, ವ್ಯಾಪಾರಸ್ಥರಿಗೂ ಅನುಕೂಲವಾಗುತ್ತದೆ.
ಮಂಜುನಾಥ್, ನಾಗರಿಕ

ಇಷ್ಟೊಂದು ಪ್ರಮಾಣದಲ್ಲಿ ಕಡಲೆಕಾಯಿ ವ್ಯಾಪಾರ ನೋಡಿದ್ದು ಇದೇ ಮೊದಲು. ಈ ಪರಿಷೆ ಬಗ್ಗೆ ಕೇಳಿದ್ದೆ. ಆದರೆ, ನೋಡಿರಲಿಲ್ಲ.
ಪ್ರಣತಿ, ವಿದ್ಯಾರ್ಥಿನಿ

ಪರಿಷೆಯಲ್ಲಿ ಲಸಿಕಾ ಕೇಂದ್ರ

ಪರಿಷೆಯಲ್ಲಿ ಲಸಿಕಾ ಕೇಂದ್ರಗಳನ್ನು ಸಹ ಸ್ಥಾಪಿಸಲಾಗಿದೆ. ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವಂತೆ ಅರಿವು ಮೂಡಿಸಲು ಹೆಚ್ಚಿನ ಸಂಖ್ಯೆಯಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ. ಜನರ ಸುರಕ್ಷತೆಗಾಗಿ 500ಕ್ಕೂ ಹೆಚ್ಚು ಪೊಲೀಸರು, ಹೋಂ ಗಾರ್ಡ್‌ಗಳನ್ನು ನಿಯೋಜಿಸಲಾಗಿದೆ.

30ಕ್ಕಿಂತ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. 12 ಕಾವಲು ಸ್ಥಾವರಗಳನ್ನು ಸ್ಥಾಪಿಸಲಾಗಿದೆ.ಪ್ಲಾಸ್ಟಿಕ್ ನಿಷೇಧ: ಪರಿಷೆಯಲ್ಲಿ ಪ್ಲಾಸ್ಟಿಕ್ ನಿಷೇಧಿಸಲಾಗಿದೆ. ಜನರು ಪೇಪರ್ ಬ್ಯಾಗ್ ಅಥವಾ ಬಟ್ಟೆ ಚೀಲಗಳನ್ನು ತರಬೇಕು ಎಂದು ಬಿಬಿಎಂಪಿ ಮನವಿ ಮಾಡಿದೆ.

'ಒಣ ಕೊಬ್ಬರಿ' ಸೂಟ್‌ಕೇಸ್ ಜಪ್ತಿ

ಬೆಂಗಳೂರು: 'ಒಣ ಕೊಬ್ಬರಿ' ಬಚ್ಚಿಟ್ಟು ಸಾಗಿಸುತ್ತಿದ್ದ ಸೂಟ್‌ಕೇಸ್‌ನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ಜಪ್ತಿ ಮಾಡಿದ್ದು, ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಯುವತಿಯೊಬ್ಬರು ಟ್ವೀಟ್ ಮಾಡಿದ್ದಾರೆ.

ನಗರದ ನಿವಾಸಿಯಾದ ಯುವತಿ, ಸಂಬಂಧಿಕರ ಮದುವೆಗೆಂದು ತಾಯಿ ಜೊತೆಗೆ ದೆಹಲಿಗೆ ಹೊರಟಿದ್ದರು. ನಿಲ್ದಾಣಕ್ಕೆ ಬಂದಿದ್ದ ಅವರ ಬಳಿ ಎರಡು ಸೂಟ್‌ಕೇಸ್‌ಗಳಿದ್ದವು. ವಿಮಾನದ ಲಗೇಜು ಭಾಗದಲ್ಲಿ ಇರಿಸುವುದಕ್ಕಾಗಿ ಎರಡೂ ಸೂಟ್‌ಕೇಸ್‌ಗಳನ್ನು ಸಿಬ್ಬಂದಿಗೆ ನೀಡಿದ್ದರು. ನಂತರ, ಇಬ್ಬರೂ ಏರ್ ಇಂಡಿಯಾ ವಿಮಾನ ಏರಿದ್ದರು.

ಬೆಂಗಳೂರಿನಿಂದ ಹೊರಟು ದೆಹಲಿ ನಿಲ್ದಾಣ ತಲುಪಿದ್ದ ವಿಮಾನದಿಂದ ಇಳಿದ ಯುವತಿ, ಸೂಟ್‌ಕೇಸ್ ಪಡೆಯಲು ಹೋಗಿದ್ದರು. ಆಗ ಇನ್ನೊಂದು ಸೂಟ್‌ಕೇಸ್ ಇರಲಿಲ್ಲ. ಆತಂಕಗೊಂಡ ಅವರು, ಏರ್ ಇಂಡಿಯಾ ವಿಮಾನಯಾನ ಕಂಪನಿ ಪ್ರತಿನಿಧಿಗಳನ್ನು ಸಂಪರ್ಕಿಸಿದ್ದರು.

ಸೂಟ್‌ಕೇಸ್ ಬಗ್ಗೆ ಪರಿಶೀಲಿಸಿದ್ದ ವಿಮಾನಯಾನ ಅಧಿಕಾರಿಗಳು, 'ನಿಮ್ಮ ಸೂಟ್‌ಕೇಸ್‌ನಲ್ಲಿ 8 ಒಣ ಕೊಬ್ಬರಿ ಇದ್ದವು. ಅದೇ ಕಾರಣಕ್ಕೆ, ಬೆಂಗಳೂರಿನಲ್ಲೇ ಭದ್ರತಾ ಸಿಬ್ಬಂದಿ ಜಪ್ತಿ ಮಾಡಿದ್ದಾರೆ' ಎಂಬುದಾಗಿ ಹೇಳಿದ್ದರು.

ಆಕ್ರೋಶ ವ್ಯಕ್ತಪಡಿಸಿದ್ದ ಯುವತಿ, 'ಸಂಬಂಧಿಕರ ಮದುವೆಗೆಂದು ಒಳ ಕೊಬ್ಬರಿ ತರಲಾಗಿತ್ತು. ಅದರ ಜೊತೆ ನನ್ನ ಬಟ್ಟೆಗಳೂ ಇದ್ದವು. ಅದು ಹೇಗೆ ಜಪ್ತಿ ಮಾಡಿದ್ದಾರೆ' ಎಂದು ಪ್ರಶ್ನಿಸಿದ್ದರು.

ಅಧಿಕಾರಿಗಳು, 'ಬೆಂಕಿ ಹೊತ್ತಿಕೊಳ್ಳುವ ವಸ್ತುಗಳನ್ನು ಪ್ರಯಾಣದ ವೇಳೆ ಸಾಗಿಸಬಾರದೆಂಬ ನಿಯಮವಿದೆ. ಈ ಪಟ್ಟಿಯಲ್ಲಿ ಒಣ ಕೊಬ್ಬರಿ ಸಹ ಇದೆ. ನಿಮ್ಮ ಟಿಕೆಟ್ ಮೇಲೆಯೂ ಅದನ್ನು ಮುದ್ರಿಸಲಾಗಿದೆ' ಎಂದು ಉತ್ತರಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರಿನ ಭದ್ರತಾ ಅಧಿಕಾರಿಗಳನ್ನೇ ವಿಚಾರಿಸುವಂತೆ ತಿಳಿಸಿದ್ದಾರೆ.

'ಆರೋಪ ಮಾಡಿದವರ ವಿರುದ್ಧ ಮೊಕದ್ದಮೆ'

ಹೊಸಪೇಟೆ(ವಿಜಯನಗರ): 'ಬೋಧಕ ಹುದ್ದೆಗಳನ್ನು ಹರಾಜು ಮಾಡಲಾಗುತ್ತಿದೆ ಎಂದು ನನ್ನ ವಿರುದ್ಧ ಗುರುತರ ಆರೋಪ ಮಾಡಿರುವವರ ಮೇಲೆ ಮಾನನಷ್ಟ ಮೊಕದ್ದಮೆ ಹೂಡುವೆ' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸ.ಚಿ. ರಮೇಶ ತಿಳಿಸಿದರು.

'ನೇಮಕಾತಿ ಪ್ರಕ್ರಿಯೆಯೇ ಆರಂಭವಾಗಿಲ್ಲ. ಈಗಲೇ ಹರಾಜು ಮಾಡಲಾಗುತ್ತಿದೆ ಎಂದು ವಿನಾಕಾರಣ ಆರೋಪಿಸುತ್ತಿರುವುದು ಸರಿಯಲ್ಲ. ಮೀಸಲಾತಿ ನಿಗದಿಗೊಳಿಸಲು ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ನನ್ನ ವಿರುದ್ಧದ ಆರೋಪಕ್ಕೆ ಸಾಕ್ಷ್ಯ ಒದಗಿಸಲಿ. ಇಲ್ಲದಿದ್ದರೆ ವಿನಾಕಾರಣ ತೇಜೋವಧೆ ಆಗುತ್ತದೆ. ಜತೆಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಬರುತ್ತದೆ' ಎಂದು ಸೋಮವಾರ ವಿಶ್ವವಿದ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಇತ್ತೀಚೆಗೆ ನಡೆದ ನೌಕರರ ಸಂಘದ ಸಭೆಯಲ್ಲಿ ಡಾ. ಸಂಪತ್ ಕುಮಾರ್ ತೆಗ್ಗಿ ಅವರು, 'ಸಂಬಳ ಬಿಡುಗಡೆಗೆ ಕಮಿಷನ್ ಪಡೆದಿದ್ದಾರೆ' ಎಂದು ಆರೋಪಿಸಿದ್ದರು.

ಕೆಯುಡಬ್ಲ್ಯುಜೆ ಚುನಾವಣೆ: ಹೈಕೋರ್ಟ್ ಅಂಕುಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) ಕಾರ್ಯಕಾರಿ ಸಮಿತಿ ಚುನಾವಣೆಯಲ್ಲಿ ಸ್ಪರ್ಧಿಸುವವರು ನೈಜ ಪತ್ರಕರ್ತರೇ ಆಗಿರಬೇಕು ಮತ್ತು ಕರ್ನಾಟಕ ಟ್ರೇಡ್ ಯೂನಿಯನ್ ಮಾದರಿ ನಿಯಮಗಳು–1953ರ ಅನುಸಾರ ಕಟ್ಟುನಿಟ್ಟಿನ ಚುನಾವಣೆ ನಡೆಯುವಂತೆ ನೋಡಿಕೊಳ್ಳಬೇಕು' ಎಂದು ಹೈಕೋರ್ಟ್, ಕಾರ್ಮಿಕ ಇಲಾಖೆಗೆ ಕಟ್ಟುನಿಟ್ಟಿನ ತಾಕೀತು ಮಾಡಿದೆ.

ಈ ಸಂಬಂಧ ರಾಯಚೂರಿನ 'ಈಶಾನ್ಯ ಟೈಂಸ್' ಸಂಪಾದಕ ಎನ್. ನಾಗರಾಜ, ಶಿವಮೊಗ್ಗದ 'ಕ್ರಾಂತಿದೀಪ' ದಿನಪತ್ರಿಕೆ ಸಂಪಾದಕ ಎನ್. ಮಂಜುನಾಥ ಮತ್ತು ರಾಯಚೂರಿನ 'ಸುದ್ದಿ ಮೂಲ' ದಿನಪತ್ರಿಕೆ ಮುಖ್ಯ ವರದಿಗಾರ ಬಿ.ವೆಂಕಟಸಿಂಗ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ನವೆಂಬರ್ 8ರಂದು ವಿಲೇವಾರಿ ಮಾಡಿದ್ದು, 'ಯಾವುದೇ ತಕರಾರು ಉದ್ಭವವಾದಲ್ಲಿ ಅರ್ಜಿದಾರರು ಪುನಃ ಹೈಕೋರ್ಟ್ ಕದ ಬಡಿಯಬಹುದು' ಎಂದು ತಿಳಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ್ದ ವಕೀಲ ಹರೀಶ್ ಗಣಪತಿ, 'ಪತ್ರಕರ್ತರ ಸಂಘದಲ್ಲೇ ನ್ಯೂನತೆಗಳು ಗೂಡು ಕಟ್ಟಿಕೊಂಡಿವೆ!. ಸಂಘದಲ್ಲಿ ಟ್ರೇಡ್ ಯೂನಿಯನ್ ನಿಯಮಗಳ ಅನುಸಾರ ಮಾಲೀಕರೂ ಸದಸ್ಯತ್ವ ಹೊಂದಿರುವುದು ಆಕ್ಷೇಪಾರ್ಹ. ಸಂಘದಲ್ಲಿ 7,800 ಸದಸ್ಯರು ಇದ್ದಾರೆ. ಆದರೆ, ಇವರಲ್ಲಿ ನೈಜ ಪತ್ರಕರ್ತರ ಸಂಖ್ಯೆ ತುಂಬಾ ಕಡಿಮೆ ಇದೆ. ಆದ್ದರಿಂದ, 2018–2021ರ ಸಾಲಿಗೆ ಮರುಚುನಾವಣೆಗೆ ಆದೇಶಿಸಲು ನಿರ್ದೇಶಿಸಬೇಕು' ಎಂದು ಕೋರಿದ್ದರು.

'ಟ್ರೇಡ್ ಯೂನಿಯನ್ ಕಾಯ್ದೆ –1926ರ ಅನುಸಾರ ಕೆಯುಡಬ್ಲ್ಯುಜೆ ನೋಂದಣಿಯಾಗಿದ್ದು ಕರ್ನಾಟಕ ವೃತ್ತಿಪರ ಸಂಘಗಳ ಚುನಾವಣಾ (ಮಾದರಿ) ನಿಯಮಗಳು–1953ರ ಅಡಿಯಲ್ಲೇ ಚುನಾವಣೆ ನಡೆಯಬೇಕು. ಸಂಘದಲ್ಲಿನ ಅವ್ಯವಹಾರಗಳ ಬಗ್ಗೆ 2018ರಲ್ಲಿ ಸಲ್ಲಿಸಲಾದ ರಿಟ್ ಅರ್ಜಿಗೆ (ಸಂಖ್ಯೆ 33642/2018) ಸಂಬಂಧಿಸಿದಂತೆ 2018ರ ಆಗಸ್ಟ್ 21ರಂದು ತೀರ್ಪು ನೀಡಿದ್ದ ಏಕಸದಸ್ಯ ನ್ಯಾಯಪೀಠವು, ಅರ್ಜಿದಾರರ ಮನವಿ ಪರಿಗಣಿಸಲು ಕಾರ್ಮಿಕ ಆಯುಕ್ತರಿಗೆ ಆದೇಶಿಸಿತ್ತು' ಎಂದು ವಿವರಿಸಿದ್ದರು.

ಈ ಮೊದಲಿನ ಅರ್ಜಿದಾರ ಎಂ.ವೆಂಕಟೇಶ ಸಿಂಹ ಭೋವಿ ಸಲ್ಲಿಸಿದ್ದ ಮನವಿಯನ್ನು ಅಂದಿನ ಸಹಾಯಕ ಕಾರ್ಮಿಕ ಆಯುಕ್ತ ಎಚ್.ಎಲ್.ಗುರುಪ್ರಸಾದ್ ಅವರಿದ್ದ ಅರೆನ್ಯಾಯಿಕ ಪೀಠವು ವಿಚಾರಣೆ ನಡೆಸಿ, 'ಅರ್ಜಿದಾರರು ತಕರಾರು ಎತ್ತಿರುವ ಅಂಶಗಳ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿ ಪರಿಹಾರ ಕಂಡುಕೊಳ್ಳಬಹುದು' ಎಂದು 2018ರ ಡಿಸೆಂಬರ್ 15ರಂದು ಆದೇಶಿಸಿತ್ತು. 'ಈ ಆದೇಶ ಕಾನೂನು ಬಾಹಿರ ಮತ್ತು ಏಕಪಕ್ಷೀಯವಾಗಿದೆ' ಎಂದು ಎನ್. ನಾಗರಾಜ ಮತ್ತು ಇತರರು ಆಕ್ಷೇಪಿಸಿದ್ದರು.

ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಖಜಾಂಚಿ, ಚುನಾವಣಾಧಿಕಾರಿ, ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಆಯುಕ್ತರು, ಬನ್ನೇರುಘಟ್ಟ ರಸ್ತೆಯಲ್ಲಿರುವ ನಾಲ್ಕನೇ ವಿಭಾಗದ ಕಾರ್ಮಿಕ ಆಯುಕ್ತರು ಹಾಗೂ ಕೆಯುಡಬ್ಲ್ಯುಜೆ ಮಾಜಿ ಅಧ್ಯಕ್ಷರೂ ಆದ ಚಿಕ್ಕಮಗಳೂರಿನ ಎನ್. ರಾಜು ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು. ಸರ್ಕಾರದ ಪರ ಕೆ.ಆರ್.ರೂಪಾ ವಾದ ಮಂಡಿಸಿದ್ದರು.

ಮಹದೇಶ್ವರ ಬೆಟ್ಟ: ಕಾರ್ತಿಕ ಜಾತ್ರೆ ಸಂಭ್ರಮ

ಮಹದೇಶ್ವರ ಬೆಟ್ಟ: ಇಲ್ಲಿನ ಪ್ರಸಿದ್ಧ ಯಾತ್ರಾಸ್ಥಳ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಕಡೆ ಕಾರ್ತಿಕ ಸೋಮವಾರ ನಡೆದ ವಿಶೇಷ ಪೂಜೆ ಕಾರ್ಯಕ್ರಮದಲ್ಲಿ ತುಂತುರು ಮಳೆಯನ್ನೂ ಲೆಕ್ಕಿಸದೆ ಸಾವಿರಾರು ಭಕ್ತರು ಪಾಲ್ಗೊಂಡು ದರ್ಶನ ಪಡೆದರು.

ಮಹದೇಶ್ವರ ಸ್ವಾಮಿಗೆ ನುಸುಕಿನಿಂದಲೇ ವಿಶೇಷ ಪೂಜೆ, ಬಿಲ್ವಾರ್ಚನೆ, ಮಹಾ ಮಂಗಳಾರತಿ, ಗಂಧದ ಅಭಿಷೇಕ, ಪುಷ್ಪಾರ್ಚನೆ, ರುದ್ರಾಭಿಷೇಕ ನಡೆಯಿತು.

ಬೆಳಗಿದ ಮಹಾ ಜ್ಯೋತಿ: ಬೆಟ್ಟದ ದೀಪದಗಿರಿ ಒಡ್ಡುವಿನಲ್ಲಿ ಸೋಮವಾರ ರಾತ್ರಿ ಮಹಾಜ್ಯೋತಿಯನ್ನು ಬೆಳಗಿಸಲಾಯಿತು.

ಅದಕ್ಕೂ ಮುನ್ನ ದೇವಾಲಯದಿಂದ ಆಗ್ನೇಯ ದಿಕ್ಕಿನಲ್ಲಿರುವ ದೀಪದ ಗಿರಿ ಒಡ್ಡುವಿಗೆ ಸ್ವಾಮಿಯ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ದು, ಅಲ್ಲಿ ಬೇಡಗಂಪಣ ಸಮುದಾಯದ ಸಂಪ್ರದಾಯದಂತೆ ಪೂಜೆ ನೆರವೇರಿಸಲಾಯಿತು.

ಬೆಟ್ಟದ ದೊಡ್ಡಕೆರೆಯಲ್ಲಿ ಅಭಿವೃದ್ಧಿ ಕೆಲಸ ನಡೆಯುತ್ತಿರುವುದರಿಂದ ಈ ಬಾರಿ ತೆಪ್ಪೋತ್ಸವ ನಡೆಯಲಿಲ್ಲ.

ವಿವಿಧ ರಾಜ್ಯಗಳ ವಿ.ವಿ.ಗಳ ಅಂಕಪಟ್ಟಿಯೂ ನಕಲಿ • ನಾಲ್ವರ ಬಂಧಿಸಿದ ಅಮೃತಹಳ್ಳಿ ಪೊಲೀಸರು

₹ 20 ಸಾವಿರಕ್ಕೆ ಎಸ್ಸೆಸ್ಸೆಲ್ಸಿ ನಕಲಿ ಅಂಕಪಟ್ಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಪರೀಕ್ಷಾ ಮಂಡಳಿಗಳು ಹಾಗೂ ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿ ತಯಾರಿಸಿ ಮಾರುತ್ತಿದ್ದ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಅಮೃತಹಳ್ಳಿ ಠಾಣೆ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಮರಿಯಣ್ಣಪಾಳ್ಯದ ಎಂ. ರಾಕೇಶ್ (37), ಹೆಬ್ಬಾಳ ಕೆಂಪಾಪುರದ ಕೆ. ಕೃಷ್ಣ (27), ಕೊತ್ತನೂರಿನ ಹನುಮಂತಪ್ಪ ಲೇಔಟ್‌ನ ತನ್ವಯ್ ದೇಬ್‌ರಾಯ್ (33) ಹಾಗೂ ಎಚ್‌ಬಿಆರ್ ಲೇಔಟ್‌ನ ಹೈದರ್ ಅಲಿ (37) ಬಂಧಿತರು. ಅವರಿಂದ 682 ನಕಲಿ ಅಂಕಪಟ್ಟಿಗಳು ಹಾಗೂ 18 ನಕಲಿ ಶಾಲಾ ವರ್ಗಾವಣೆ ಪ್ರಮಾಣ ಪತ್ರಗಳನ್ನು (ಟಿ.ಸಿ) ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಡ್ರೀಮ್ ಎಜ್ಯುಕೇಷನ್ ಸರ್ವೀಸಸ್' ಹೆಸರಿನಲ್ಲಿ ನಗರದ ಹೆಬ್ಬಾಳ ಕೆಂಪಾಪುರದಲ್ಲಿ ಕಚೇರಿ ತೆರೆದಿದ್ದ ಆರೋಪಿಗಳು, ದೂರ ಶಿಕ್ಷಣದ ನೆಪದಲ್ಲಿ ಪ್ರಚಾರ ಮಾಡಿ, ವಿದ್ಯಾರ್ಥಿಗಳನ್ನು ಸಂಪರ್ಕಿಸುತ್ತಿದ್ದರು. ನಕಲಿ ಅಂಕಪಟ್ಟಿಗಳನ್ನೇ ಅಸಲಿ ಎಂಬುದಾಗಿ ಹೇಳಿ ನಂಬಿಸಿ ಮಾರುತ್ತಿದ್ದರು. ಈ ಬಗ್ಗೆ ಎಚ್.ಎಸ್. ಮೋಹನ್‌ಕುಮಾರ್ ಎಂಬುವರು ದೂರು ನೀಡಿದ್ದರು' ಎಂದೂ ತಿಳಿಸಿದರು.

ಪ್ರತಿಯೊಂದು ಕೋರ್ಸ್‌ಗೂ ದರ ನಿಗದಿ: 'ಪರೀಕ್ಷಾ ಮಂಡಳಿಗಳು ಹಾಗೂ ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದಿರುವುದಾಗಿ ಸುಳ್ಳು ಹೇಳುತ್ತಿದ್ದ ಆರೋಪಿಗಳು, ಎಲ್ಲ ಬಗೆಯ ಕೋರ್ಸ್‌ಗಳ ಅಂಕಪಟ್ಟಿಗಳನ್ನು ಕೊಡಿಸುವುದಾಗಿ ತಿಳಿಸುತ್ತಿದ್ದರು. ಪ್ರತಿಯೊಂದು ಕೋರ್ಸ್‌ಗೂ ಪ್ರತ್ಯೇಕ ಶುಲ್ಕ ನಿಗದಿ ಮಾಡಿದ್ದರು' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

'ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಕರ್ನಾಟಕ ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಶಿವಮೊಗ್ಗ ಕುವೆಂಪು ವಿ.ವಿ, ಹುಬ್ಬಳ್ಳಿ ಬೋರ್ಡ್ ಆಫ್ ಎಕ್ಸಾಮಿನೇಷನ್ ಹೆಸರಿನಲ್ಲಿರುವ ನಕಲಿ ಅಂಕಪಟ್ಟಿಗಳು ಆರೋಪಿಗಳ ಬಳಿ ಸಿಕ್ಕಿವೆ.'

'ಎಸ್ಸೆಸ್ಸೆಲ್ಸಿ ನಕಲಿ ಅಂಕಪಟ್ಟಿಯನ್ನು ₹ 20 ಸಾವಿರಕ್ಕೆ ಆರೋಪಿಗಳು ಮಾರುತ್ತಿದ್ದರು. ಪಿಯುಸಿ ಅಂಕಪಟ್ಟಿಗೆ ₹ 25 ಸಾವಿರ ಹಾಗೂ ಪದವಿ ಅಂಕಪಟ್ಟಿಗೆ ₹ 40 ಸಾವಿರ ಪಡೆದುಕೊಳ್ಳುತ್ತಿದ್ದರು' ಎಂದೂ ಅಧಿಕಾರಿ ತಿಳಿಸಿದರು.

ಆರೋಪಿಗಳಾದ ಎಂ. ರಾಕೇಶ್, ಕೆ. ಕೃಷ್ಣ, ತನ್ವಯ್ ದೇಬ್‌ರಾಯ್, ಹೈದರ್ ಅಲಿ

ಅಪರಾಧ ಸುದ್ದಿ

ಹೊರ ರಾಜ್ಯಗಳ ಅಂಕಪಟ್ಟಿಗಳೂ ಪತ್ತೆ: 'ಕೇರಳ, ಉತ್ತರ ಪ್ರದೇಶ, ತಮಿಳುನಾಡು, ಬಿಹಾರ, ದೆಹಲಿ ಹಾಗೂ ಇತರೆ ರಾಜ್ಯಗಳ ಪರೀಕ್ಷಾ ಮಂಡಳಿಗಳ ನಕಲಿ ಅಂಕಪಟ್ಟಿಗಳೂ ಆರೋಪಿಗಳ ಬಳಿ ಪತ್ತೆಯಾಗಿವೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಹಿಮಾಚಲ ಪ್ರದೇಶದ ಐಇಸಿ, ಅರ್ನಿ ವಿಶ್ವವಿದ್ಯಾಲಯ, ಮೀರತ್ ಚೌಧರಿ ಚರಣ್‌ಸಿಂಗ್ ವಿಶ್ವವಿದ್ಯಾಲಯ, ಕಾನ್ಪುರದ ಛತ್ರಪತಿ ಸಾಹು ಮಹಾರಾಜ್, ದೆಹಲಿಯ ಮಹಾಮಾಯಿ, ಮೇಘಾಲಯದ ವಿಲಿಯಂ ಕ್ಯಾರಿ, ರಾಯಪುರದ ಕಳಿಂಗ, ಪುದುಚೇರಿ ವಿಶ್ವವಿದ್ಯಾಲಯ, ಸಿಕ್ಕಿಂ ರಾಜ್ಯ ವಿಶ್ವವಿದ್ಯಾಲಯ, ಅಲಹಾಬಾದ್ ವಿಶ್ವವಿದ್ಯಾಲಯ, ತಮಿಳುನಾಡಿನ ಪೆರಿಯಾರ್ ಹಾಗೂ ಇತರೆ ರಾಜ್ಯಗಳ ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿಗಳನ್ನೂ ಜಪ್ತಿ ಮಾಡಲಾಗಿದೆ' ಎಂದರು.

'ಪ್ರತಿಯೊಂದು ವಿಶ್ವವಿದ್ಯಾಲಯ ಹಾಗೂ ಪರೀಕ್ಷಾ ಮಂಡಳಿಗಳ ಹೆಸರಿನಲ್ಲಿ ನಕಲಿ ಸೀಲ್‌ಗಳನ್ನು ಆರೋಪಿಗಳು ತಯಾರಿಸಿಟ್ಟುಕೊಂಡಿದ್ದರು. ಅಸಲಿ ಅಂಕಪಟ್ಟಿಯನ್ನು ಹೋಲುವಂತೆ ನಕಲಿ ಅಂಕಪಟ್ಟಿ ಸಿದ್ಧಪಡಿಸಿ ಸೀಲ್ ಹಾಕುತ್ತಿದ್ದರು' ಎಂದೂ ಹೇಳಿದರು.

120 ಕಾರು ಕಳವು ಆರೋಪ; ಟ್ರಾವೆಲ್ಸ್ ಮಾಲೀಕ ಪರಾರಿ

ಬೆಂಗಳೂರು: ಸಾರ್ವಜನಿಕರು ಬಾಡಿಗೆಗೆ ನೀಡಿದ್ದ ಸುಮಾರು 120 ಕಾರುಗಳನ್ನು ಕಳ್ಳತನ ಮಾಡಿರುವ ಆರೋಪದಡಿ 'ಆರ್.ಎಸ್. ಟೂರ್ಸ್ ಆ್ಯಂಡ್ ಟ್ರಾವೆಲ್ಸ್' ಮಾಲೀಕ ಶಿವಕುಮಾರ್ ವಿರುದ್ಧ ಬಾಗಲಗುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಸದ್ಯ ಆರೋಪಿ ತಲೆಮರೆಸಿಕೊಂಡಿದ್ದಾನೆ.

ತಮಿಳುನಾಡಿನ ಶಿವಕುಮಾರ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದು ಸರ್ಜಾಪುರದಲ್ಲಿ ವಾಸವಿದ್ದ. ನಾಗಸಂದ್ರದ ಎಂಇಐ ಲೇಔಟ್‌ನಲ್ಲಿ ಟ್ರಾವೆಲ್ಸ್ ಕಚೇರಿ ತೆರೆದಿದ್ದ. ಆತನ ವಿರುದ್ಧ ಕಾರುಗಳ ಮಾಲೀಕರು ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಾಗಿದ್ದು, ಇನ್‌ಸ್ಪೆಕ್ಟರ್ ಎಚ್.ಬಿ. ಸುನೀಲ್ ನೇತೃತ್ವದ ತಂಡ ತನಿಖೆ ಆರಂಭಿಸಿದೆ.

'ಸಾರ್ವಜನಿಕರ ಜೊತೆ ಒಪ್ಪಂದ ಮಾಡಿಕೊಂಡು, ಅವರ ಮಾಲೀಕತ್ವದ ಕಾರುಗಳನ್ನು ಆರೋಪಿ ಬಾಡಿಗೆಗೆ ಪಡೆಯುತ್ತಿದ್ದ. ಅದೇ ಕಾರುಗಳನ್ನು ತನ್ನ ಟ್ರಾವೆಲ್ಸ್ ಮೂಲಕ ಬೇರೆ ಬೇರೆ ಕಂಪನಿಗಳಿಗೆ ಬಾಡಿಗೆಗೆ ನೀಡುತ್ತಿದ್ದ. ಬಂದ ಲಾಭದಲ್ಲೇ ಕಾರಿನ ಮಾಲೀಕರಿಗೂ ಪಾಲು ನೀಡುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರತಿ ತಿಂಗಳು 8ನೇ ತಾರೀಖಿನೊಳಗೆ ಹಣ ಪಾವತಿ ಮಾಡುವುದಾಗಿ ಕಾರಿನ ಮಾಲೀಕರಿಗೆ ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ಸಾರ್ವಜನಿಕರು, ತಮ್ಮ ಇನ್ನೋವಾ, ಸ್ವಿಫ್ಟ್ ಇತರೆ ಕಾರುಗಳನ್ನು ಆರೋಪಿಗೆ ನೀಡಿದ್ದರು.'

'ಅಕ್ಟೋಬರ್ ಮುಗಿದು ನವೆಂಬರ್ ಬಂದರೂ ಮಾಲೀಕರ ಖಾತೆಗಳಿಗೆ ಆರೋಪಿ ಹಣ ಹಾಕಿರಲಿಲ್ಲ. ಇತ್ತೀಚೆಗೆ ಟ್ರಾವೆಲ್ಸ್ ಕಚೇರಿಗೆ ಬೀಗ ಹಾಕಿಕೊಂಡು ಆರೋಪಿ ಪರಾರಿಯಾಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

'ಆರೋಪಿ ಇದುವರೆಗೂ ₹ 10 ಕೋಟಿ ಮೌಲ್ಯದ 120 ಕಾರುಗಳನ್ನು ಸಾರ್ವಜನಿಕರಿಂದ ಬಾಡಿಗೆ ಪಡೆದಿದ್ದನೆಂದು ಗೊತ್ತಾಗಿದೆ. 120 ಕಾರುಗಳು ಎಲ್ಲಿವೆ ಎಂಬ ಮಾಹಿತಿ ಲಭ್ಯವಾಗಿಲ್ಲ. ನಗರದಲ್ಲೇ ಕಾರುಗಳನ್ನು ಬಚ್ಚಿಟ್ಟು ಅಥವಾ ಯಾರಿಗೂ ಮಾರಾಟ ಮಾಡಿ ಆರೋಪಿ ತಲೆಮರೆಸಿಕೊಂಡಿರುವ ಸಾಧ್ಯತೆ ಇದೆ' ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

'ಇ– ಪ್ರಾಫಿಟ್ ಶ್ಯೂರ್' ಸಂಸ್ಥಾಪಕ ಬಂಧನ

ಬೆಂಗಳೂರು: ಆರ್ಥಿಕ ಸಲಹೆ ನೀಡುವ ನೆಪದಲ್ಲಿ ಹಣ ಪಡೆದು ವಂಚಿಸಿದ್ದ ಆರೋಪದಡಿ 'ಇ– ಪ್ರಾಫಿಟ್ ಶ್ಯೂರ್' ಜಾಲತಾಣದ ಸಂಸ್ಥಾಪಕ ಸಿ.ಎಸ್. ನಿಶ್ಚಿತ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಸ್ಟೇಕ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್' ಕಂಪನಿಯ ಪಾಲುದಾರನಾಗಿದ್ದ ನಿಶ್ಚಿತ್, ಅದೇ ಕಂಪನಿಯಡಿ ಜಾಲತಾಣ ಅಭಿವೃದ್ಧಿಪಡಿಸಿದ್ದ. ಸಾಮಾಜಿಕ ಮಾಧ್ಯಮ ಹಾಗೂ ಜಾಲತಾಣದ ಮೂಲಕ ಜನರನ್ನು ಸಂಪರ್ಕಿಸಿ ವಂಚಿಸುತ್ತಿದ್ದ. ಆತ ಹಾಗೂ ಇತರರ ವಿರುದ್ಧ ನಗರದ ಠಾಣೆಗಳಲ್ಲಿ ಮೂರು ಹಾಗೂ ಕೇರಳದಲ್ಲಿ ಒಂದು ಪ್ರಕರಣ ದಾಖಲಾಗಿತ್ತು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ವಿಮೆ ಮಾಡಿಸಲು ಇಚ್ಛಿಸುವ ಗ್ರಾಹಕರ ಮಾಹಿತಿ ನೀಡುವುದಾಗಿ ಹೇಳಿದ್ದ ಆರೋಪಿಗಳು, ಎಲ್‌ಐಸಿ ಏಜೆಂಟರೊಬ್ಬರಿಂದ ₹ 14 ಲಕ್ಷ ಪಡೆದು ವಂಚಿಸಿದ್ದ. ಈ ಬಗ್ಗೆ ಬೆಂಗಳೂರು ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದೂ ತಿಳಿಸಿದರು.

ಸಿ.ಎಸ್. ನಿಶ್ಚಿತ್

'ರಿಯಲ್ ಎಸ್ಟೇಟ್, ತೆರಿಗೆ ಯೋಜನೆ, ಆರ್ಥಿಕ ಯೋಜನೆ, ಸಾಲ, ಹಣಕಾಸಿನ ನಿರ್ವಹಣೆ ಹಾಗೂ ಆಸಕ್ತ ಗ್ರಾಹಕರ ಮಾಹಿತಿ ಹಂಚಿಕೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಸಲಹೆ ನೀಡುವುದಾಗಿ ಆರೋಪಿಗಳು ಹೇಳುತ್ತಿದ್ದರು. ಅದನ್ನು ನಂಬಿ ಸಾವಿರಾರು ಮಂದಿ ಆರೋಪಿಗಳನ್ನು ಸಂಪರ್ಕಿಸಿದ್ದರು. ಬಹುತೇಕ ಮಂದಿ ವಂಚನೆಗೀಡಾಗಿದ್ದಾರೆ' ಎಂದೂ ಅಧಿಕಾರಿ ಹೇಳಿದರು.

'ಇನ್ಫೊಸಿಸ್ ಕಂಪನಿ ನಕಲಿ ಗುರುತಿನ ಚೀಟಿ': 'ಇನ್ಫೊಸಿಸ್ ಕಂಪನಿಯಲ್ಲಿ ಮಾನವ ಸಂಪನ್ಮೂಲ (ಎಚ್‌ಆರ್) ಅಧಿಕಾರಿ' ಎಂಬುದಾಗಿ ಹೇಳುತ್ತಿದ್ದ ಆರೋಪಿ ನಿಶ್ಚಿತ್, ಕಂಪನಿಯ ಉದ್ಯೋಗಿಗಳ ಮಾಹಿತಿ ನೀಡುವುದಾಗಿ ಏಜೆಂಟರಿಗೆ ಭರವಸೆ ನೀಡಿ ವಂಚಿಸುತ್ತಿದ್ದ. ಇನ್ಫೊಸಿಸ್ ಕಂಪನಿಯ ನಕಲಿ ಗುರುತಿನ ಚೀಟಿ ಹೊಂದಿದ್ದ. ಅದನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಚಿತ್ರಾವಳಿ

ಉತ್ತರಹಳ್ಳಿಯಲ್ಲಿ ರಾಮ್‌ರಾಜ್ ಕಾಟನ್‌ನ ನೂತನ ಮಳಿಗೆಯನ್ನು ಶಾಸಕ ಎಂ.ಕೃಷ್ಣಪ್ಪ ಸೋಮವಾರ ಉದ್ಘಾಟಿಸಿದರು. ಬೆಂಗಳೂರು ಪಶ್ಚಿಮ ವಿಭಾಗದ ಅಬಕಾರಿ ಉಪ ಆಯುಕ್ತ ಬಿ.ಆರ್‌.ಹಿರೇಮಠ್ ಹಾಗೂ ಇತರರು ಇದ್ದರು.

ಜನ ಪ್ರಕಾಶನ, ಪರ್ಯಾಯ ಕಾನೂನು ವೇದಿಕೆ ಹಾಗೂ 'ಮಾರ್ಗ' ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸಂವಿಧಾನ ಪೀಠಿಕೆ ಒಂದು ಪುಟ್ಟ ಮುನ್ನುಡಿ' ಪುಸ್ತಕವನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಬಿಡುಗಡೆ ಮಾಡಿದರು. ಸೇಂಟ್ ಜೋಸೆಫ್ ಕಾಲೇಜಿನ ನಿರ್ದೇಶಕ ಎಸ್‌.ಜೆ. ಜೆರಾಲ್ಡ್ ಡಿಸೋಜ, ಆಲ್ ಅಮೀನ್ ಕಾಲೇಜು ಸಹಾಯಕ ಪ್ರಾಧ್ಯಾಪಕಿ ಡಾ. ಷಾಕಿರಾ ಖಾನಂ, ದಲಿತ ಸಂಘರ್ಷ ಸಮಿತಿಯ ಮುಖಂಡ ಎನ್‌. ವೆಂಕಟೇಶ, ಹೋರಾಟಗಾರ್ತಿ ಡಾ. ಅಕ್ಕೈ ಪದ್ಮಶಾಲಿ, ಗಾಯಕಿ ಎಂ.ಡಿ. ಪಲ್ಲವಿ ಇದ್ದರು —ಪ್ರಜಾವಾಣಿ ಚಿತ್ರಗಳು

ಹೋರಾಟಕ್ಕೆ ಸಿದ್ಧರಾಮ ಚೈತನ್ಯ ಸ್ವಾಮೀಜಿ ಬೆಂಬಲ

ಬಿಬಿಎಂಪಿ ಕಸ ಮಾಫಿಯಾ: ಆರೋಗ್ಯ ಹಾಳು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: 'ಬೆಂಗಳೂರು ನಗರದಿಂದ ಕಸ ಹೊರಗೆ ಹೋಗಬೇಕು ಎನ್ನುವುದಷ್ಟೇ ತ್ಯಾಜ್ಯ ವಿಲೇವಾರಿಯ ಟೆಂಡರ್ ಪಡೆದವರ ಏಕೈಕ ಉದ್ದೇಶವಾಗಿದೆ. ಕಸದ ರಾಶಿ ಹಾಕುವ ಪ್ರದೇಶದಲ್ಲಿನ ಜನರ ಆರೋಗ್ಯದ ಬಗ್ಗೆ ಅವರಿಗೆ ಕಿಂಚಿತ್ತೂ ಕಾಳಜಿ ಇಲ್ಲ' ಎಂದು ಕುಣಿಗಲ್ ತಾಲ್ಲೂಕಿನ ಕಿತ್ನಾಮಂಗಲ-ಕಾಡುಮತ್ತಿಕೆರೆಯ ಅರೆಶಂಕರ ಮಠದ ಸಿದ್ಧರಾಮ ಚೈತನ್ಯ ಶ್ರೀ ದೂರಿದರು.

ತಾಲ್ಲೂಕಿನ ಚಿಗರನೇಹಳ್ಳಿಯ ಎಂಎಸ್‌ಜಿಪಿ ಕಸ ವಿಲೇವಾರಿ ಘಟಕದ ವಿರುದ್ಧ ಗ್ರಾಮಸ್ಥರು ನಡೆಸುತ್ತಿರುವ ಧರಣಿಯಲ್ಲಿ ಸೋಮವಾರ ಭಾಗವಹಿಸಿ ಅವರು ಮಾತನಾಡಿದರು.

ಅವೈಜ್ಞಾನಿಕ ಕಸ ವಿಲೇವಾರಿಯಿಂದ ಇಲ್ಲಿನ ಗ್ರಾಮಗಳ ಜನರ ಬದುಕು ನರಕಮಯವಾಗಿದೆ. ಈ ಕುರಿತು ಹಲವಾರು ಬಾರಿ ಪ್ರತಿಭಟನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅವಕಾಶ ನೀಡಿದ್ದಾರೆ. ಆದರೂ, ತಪ್ಪು ತಿದ್ದಿಕೊಂಡಿಲ್ಲ. ಹೀಗಾಗಿ ಕಸ ಬರುವುದನ್ನು ನಿಲ್ಲಿಸುವವರೆಗೂ ಧರಣಿ ಮುಂದುವರಿಸಬೇಕು ಎಂದರು.

ನವ ಬೆಂಗಳೂರು ಹೋರಾಟ ಸಮಿತಿಯ ಗೌರವಾಧ್ಯಕ್ಷ ಕೆ.ವಿ. ಸತ್ಯಪ್ರಕಾಶ್ ಮತ್ತು ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಆರ್. ಸಿದ್ದಲಿಂಗಯ್ಯ ಮಾತನಾಡಿ, '2015ರಿಂದ ಕಸ ವಿಲೇವಾರಿಯನ್ನು ವಿರೋಧಿಸುತ್ತಲೇ ಬಂದಿದ್ದೇವೆ. ದಿನಕ್ಕೆ 400 ಮೆಟ್ರಿಕ್ ಟನ್ ಕಸ ವಿಲೇವಾರಿ ಮಾಡುವುದಾಗಿ ಹೇಳಲಾಗಿತ್ತು. ಈಗ ದಿನಕ್ಕೆ 4,500 ಸಾವಿರ ಮೆಟ್ರಿಕ್ ಟನ್ ಕಸವನ್ನು ಇಲ್ಲಿಗೆ ತಂದು ಸುರಿಯಲಾಗುತ್ತಿದೆ ಎಂದು ದೂರಿದರು.

ಗ್ರಾಮಗಳಿಗೆ ಬಿಬಿಎಂಪಿ ನೀಡುವ ಸೌಲಭ್ಯ ನಮಗೆ ಬೇಕಿಲ್ಲ. ಎಂಎಸ್‌ಜಿಪಿ ಘಟಕವನ್ನು ಇಲ್ಲಿಂದ ಎತ್ತಂಗಡಿ ಮಾಡಿ ನಮ್ಮ ಬದುಕನ್ನು ಉಳಿಸಲಿ ಎಂದರು.

ಪ್ರತಿಭಟನೆಯಲ್ಲಿ ಹೋರಾಟ ಸಮಿತಿ ಅಧ್ಯಕ್ಷ ಜಿ.ಎನ್. ಪ್ರದೀಪ್, ಮುಖಂಡರಾದ ಅಶ್ವತ್ಥನಾರಾಯಣ, ದೇವರಾಜಮ್ಮ, ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಲತಾ, ಪ್ರಸನ್ನ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಅಧಿಕಾರಿಗಳಿಗೆ ತರಾಟೆ

ಎಂಎಸ್‌ಜಿಪಿ ಕಸ ವಿಲೇವಾರಿ ಘಟಕ ಇಷ್ಟೊಂದು ದಾರಿತಪ್ಪಿ ನಡೆಯಲು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯೇ ಹೊಣೆಯಾಗಿದೆ. ಹೀಗಾಗಿ, ಇಲ್ಲಿಗೆ ಭೇಟಿ ನೀಡಲು ಅವಕಾಶ ನೀಡುವುದಿಲ್ಲ ಎಂದು ಧರಣಿನಿರತರು ಆಕ್ರೋಶ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಧರಣಿ ನಿರತರಿಗೆ ತಿಳಿಯದಂತೆ ಎಂಎಸ್‌ಜಿಪಿ ಘಟಕ ಪ್ರವೇಶ ಮಾಡಿದ್ದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಸುನಿತಾ, ಸಹಾಯಕ ಅಧಿಕಾರಿ ವಾಣಿ ಅವರನ್ನು ಹಿಂಬಾಲಿಸಿ ಹೋಗಿ ಕಸದಿಂದ ಹೊರ ಬಂದಿರುವ ಕಲುಷಿತ ನೀರನ್ನು ಸಂಗ್ರಹ ಮಾಡಿಕೊಳ್ಳಬೇಕು. ಅಲ್ಲಿನ ವಾಸ್ತವ ಸ್ಥಿತಿ ಕುರಿತು ವರದಿ ನೀಡಬೇಕು ಎಂದು ಮನವಿ ಮಾಡಿದರು.

'ಇಲ್ಲಿ ಆಗುತ್ತಿರುವ ತೊಂದರೆ ಕುರಿತಂತೆ ಹಲವಾರು ಬಾರಿ ಮಂಡಳಿಯ ಅಧಿಕಾರಿಗಳಿಗೆ ನೋಂದಾಯಿತ ಅಂಚೆ ಮೂಲಕ ದೂರು ನೀಡಿದ್ದರು ಒಂದು ಪತ್ರಕ್ಕೂ ಉತ್ತರ ನೀಡಿಲ್ಲ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿಲ್ಲ. ಧರಣಿ ಆರಂಭಿಸಿದ್ದರಿಂದ ಇಂದು ಇಲ್ಲಿಗೆ ಭೇಟಿ ನೀಡಿದ್ದೀರಿ. ಈಗಲಾದರು ಸರಿಯಾದ ರೀತಿಯಲ್ಲಿ ವರದಿ ನೀಡಿ' ಎಂದು ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿದ್ದಲಿಂಗಯ್ಯ ಅಧಿಕಾರಿಗಳಿಗೆ ತರಾಟೆ ತೆಗೆದುಕೊಂಡರು.

ಇದಕ್ಕೆ ಉತ್ತರಿಸಿದ ಅಧಿಕಾರಿ ಸುನಿತಾ, 'ನಮಗೆ ಇದುವರೆಗೂ ಯಾವುದೇ ಮನವಿ ಬಂದಿಲ್ಲ' ಎಂದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಗರನೇಹಳ್ಳಿ ಎಂಎಸ್‌ಜಿಪಿ ಕಸ ವಿಲೇವಾರಿ ಘಟಕದ ವಿರುದ್ಧ ಧರಣಿ ನಡೆಸುತ್ತಿರುವ ಸ್ಥಳಕ್ಕೆ ಸೋಮವಾರ ಅರೆಶಂಕರ ಮಠದ ಸಿದ್ಧರಾಮ ಚೈತನ್ಯ ಸ್ವಾಮೀಜಿ ಭೇಟಿ ನೀಡಿ ಹೋರಾಟಕ್ಕೆ ಬೆಂಬಲ ಘೋಷಿಸಿದರು

5 ಜಿಲ್ಲೆಗಳ ವ್ಯಾಪ್ತಿಯಲ್ಲಿ ಶೇ 60ರಿಂದ ಶೇ 65ರಷ್ಟು ಬೆಳೆ ಹಾನಿ ● ತೀವ್ರ ಸಂಕಷ್ಟದಲ್ಲಿ ದ್ರಾಕ್ಷಿ ಬೆಳೆಗಾರರು

ಮಳೆ, ರೋಗಬಾಧೆಗೆ ತುತ್ತಾದ ದ್ರಾಕ್ಷಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇತ್ತೀಚೆಗೆ ಸುರಿದ ಮಳೆ, ಮೋಡ ಕವಿದ ವಾತಾವರಣ ಹಾಗೂ ರೋಗಬಾಧೆಯಿಂದ ರಾಜ್ಯದಲ್ಲಿ ದ್ರಾಕ್ಷಿ ಬೆಳೆ ಅಪಾರ ಹಾನಿಗೊಳಗಾಗಿದೆ. ದ್ರಾಕ್ಷಿ ಬೆಳೆಯುವ ಸುಮಾರು 32,000 ಹೆಕ್ಟೇರ್ ಪ್ರದೇಶದ ಪೈಕಿ ಶೇ 60ರಿಂದ ಶೇ 65ರಷ್ಟು ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

ರಾಜ್ಯದಲ್ಲಿ ಬೆಳಗಾವಿ, ವಿಜಯಪುರ, ಬಾಗಲಕೋಟೆಯಲ್ಲಿ ಅಂದಾಜು 26,500 ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಉಳಿದಂತೆ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಬೆಳೆಯಲಾಗುತ್ತಿದೆ.

ಸಾಮಾನ್ಯವಾಗಿ ದ್ರಾಕ್ಷಿ ಗಿಡವನ್ನು ಚಾಟ್ನಿ (ಪ್ರುನಿಂಗ್) ಮಾಡಿದ 30ರಿಂದ 40 ದಿನಗಳಲ್ಲಿ ಹೂವು ಬಿಟ್ಟು, ಕಾಯಿ ಕಟ್ಟುತ್ತವೆ. ಇದೇ ಅಂದಾಜಿನ ಮೇಲೆ ರೈತರು ಕಳೆದ ತಿಂಗಳು ಚಾಟ್ನಿ ಮಾಡಿದ್ದರು. ಈ ತಿಂಗಳ ಮೊದಲ ವಾರದಿಂದ ಹೂವು ಅರಳುವ ಹಾಗೂ ಕಾಯಿ ಕಟ್ಟುವ ವೇಳೆ ಮಳೆಯಾಗಿರುವುದು ಹಾನಿಗೆ ಕಾರಣವಾಗಿದೆ.

ರೋಗಕ್ಕೆ ತುತ್ತಾಗಿರುವ ಎಲೆಯ ಚಿತ್ರ

'ಪ್ರತಿಕೂಲ ಹವಾಮಾನದಿಂದಾಗಿ ಶಿಲೀಂಧ್ರ ರೋಗ (ಡೌನಿ ಮಿಲ್ಡ್ಯೂ), ಕೊಳೆ ರೋಗ ಕಾಣಿಸಿಕೊಂಡಿದೆ. ಹೂ ಹಂತದಲ್ಲಿ ರೋಗ ಬಾಧೆಯಿಂದ ಗೊಂಚಲುಗಳಲ್ಲಿನ ಕಾಯಿಗಳು ಸುಟ್ಟು ಕರಕಲಾಗಿ ಉದುರುತ್ತಿವೆ. ಸದ್ಯದ ಸ್ಥಿತಿ ನೋಡಿದರೆ ಮಾಡಿದ ಖರ್ಚು ಸಿಗುವುದೂ ಅನುಮಾನ. ಚಾಟ್ನಿ, ಕಡ್ಡಿ ತಯಾರಿಕೆ, ಗೊಬ್ಬರ, ಔಷಧಿ ಸೇರಿ ಎಕರೆಗೆ ₹ 1.50 ಲಕ್ಷಕ್ಕೂ ಹೆಚ್ಚು ಖರ್ಚಾಗಿದೆ. ನಷ್ಟಕ್ಕೆ ಸಿಲುಕಿದ್ದೇವೆ' ಎಂದು ಬೆಳಗಾವಿ ಜಿಲ್ಲೆಯ ತೆಲಸಂಗದ ರೈತ ಸುನೀಲ ಕಾಳೆ ಅಳಲು ತೋಡಿಕೊಂಡರು. ಅಥಣಿ, ಕಾಗವಾಡ ತಾಲ್ಲೂಕಿನ ರೈತರ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಜಿಲ್ಲೆಯಲ್ಲಿ ಒಟ್ಟು 4,688 ಮಂದಿ ಬೆಳೆಗಾರರು ನಷ್ಟ ಅನುಭವಿಸಿದ್ದಾರೆ.

ಜಮಖಂಡಿ ತಾಲ್ಲೂಕಿನ ಕಾಜಿ ಬೀಳಗಿ ಗ್ರಾಮದ ಆಲಗೊಂಡ ಚನವೀರ ತೋಟದಲ್ಲಿ ದ್ರಾಕ್ಷಿ ಬಳ್ಳಿಯಲ್ಲಿ ಮೊಗ್ಗು ಒಡಮೂಡಿ ನಂತರ ಮಳೆಯಿಂದ ಉದುರಿದೆ

ದ್ರಾಕ್ಷಿ ಕಣಜ ಎಂದೇ ಹೆಸರಾದ ವಿಜಯಪುರ ಜಿಲ್ಲೆಯ ರೈತರ ಸ್ಥಿತಿ ಇನ್ನೂ ಶೋಚನೀಯವಾಗಿದೆ. ತಿಕೋಟಾ, ಬಬಲೇಶ್ವರ, ಬಾಬಾನಗರ, ಬಿಜ್ಜರಗಿ, ನಿಡೋಣಿ, ಹೊರ್ತಿ, ದೇವರ ಹಿಪ್ಪರಗಿ, ಮನಗೂಳಿ ಭಾಗದ ರೈತರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಕೆಲವು ಪ್ರದೇಶಗಳಲ್ಲಿ ಮಳೆಯಿಂದ ಈಗಾಗಲೇ ಹಣ್ಣಾಗಿರುವ ದ್ರಾಕ್ಷಿ ಸೀಳು ಬಿಟ್ಟಿವೆ.

ಜಿಲ್ಲೆ	ದ್ರಾಕ್ಷಿ ಬೆಳೆಯುವ ಪ್ರದೇಶ
ವಿಜಯಪುರ	17,000
ಬೆಳಗಾವಿ	5,200
ಬಾಗಲಕೋಟೆ	2,900
ಚಿಕ್ಕಬಳ್ಳಾಪುರ	2,800
ಬೆಂಗಳೂರು ಗ್ರಾಮಾಂತರ	2,197

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಹೋಬಳಿಯಲ್ಲಿ ಮೊಗ್ಗು ಮತ್ತು ಎಳೆಕಾಯಿಗಳು ಉದುರಿ ಬಿದ್ದಿವೆ. ಸಾವಳಗಿ ಭಾಗದ 2,900 ಹೆಕ್ಟೇರ್ ಪ್ರದೇಶದ ದ್ರಾಕ್ಷಿಯಲ್ಲಿ ಶೇ 70 ರಷ್ಟು ನಾಶವಾಗಿದೆ.

ಪ್ರಜಾವಾಣಿ ವಿಶೇಷ

ಚಿಕ್ಕಬಳ್ಳಾಪುರದಲ್ಲಿ ತೀವ್ರವಾಗಿ ಕಾಣಿಸಿಕೊಂಡಿರುವ ಶಿಲೀಂಧ್ರ ರೋಗವನ್ನು ನಿಯಂತ್ರಿಸಲು ಬೆಳೆಗಾರರು ಹೇರಳವಾಗಿ ಔಷಧಿ ಸಿಂಪಡಿಸುತ್ತಿದ್ದಾರೆ. ದ್ರಾಕ್ಷಿ ಕಡ್ಡಿ ಉಳಿಸಿಕೊಂಡರೆ ಸಾಕು ಎನ್ನುವ ಮನಸ್ಥಿತಿಯಲ್ಲಿದ್ದಾರೆ.

'1984ರಿಂದ ದ್ರಾಕ್ಷಿ ಬೆಳೆಯುತ್ತಿದ್ದೇವೆ. ಈಗ 10 ಎಕರೆಯಲ್ಲಿ ದ್ರಾಕ್ಷಿ ಇದೆ. ವಾಡಿಕೆಗಿಂತ ಮೂರ್ನಾಲ್ಕು ಪಟ್ಟು ಮಳೆ ಹೆಚ್ಚಾಗಿದೆ. ಶಿಲೀಂಧ್ರ ರೋಗ ವ್ಯಾಪಿಸಿದೆ. ಲಾಭ ಬರದಿದ್ದರೂ ಪರವಾಗಿಲ್ಲ ದ್ರಾಕ್ಷಿ ಕಡ್ಡಿಗಳು ಉಳಿದರೆ ಸಾಕು ಎನಿಸಿದೆ' ಎನ್ನುತ್ತಾರೆ ಚಿಕ್ಕಬಳ್ಳಾಪುರ ತಾಲ್ಲೂಕು ಅಜ್ಜಾವರ ಗ್ರಾಮದ ರೈತ ಕೆ.ಆರ್.ರೆಡ್ಡಿ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ತಾಲ್ಲೂಕಿನಲ್ಲಿಯೂ ಶಿಲೀಂಧ್ರ ರೋಗ ಕಾಣಿಸಿಕೊಂಡಿದೆ. ಪಾನೀಯ ತಯಾರಿಸಲು ಬಳಸುವ ನೀಲಿಬಣ್ಣದ ದ್ರಾಕ್ಷಿ ಬೆಳೆ ಪೂರ್ಣವಾಗಿ ಹಾಳಾಗಿದೆ.

ಅಧ್ಯಯನ ತಂಡ: 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ವಿಜಯಪುರ ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಎಸ್.ಎಂ.ಬರಗಿಮಠ, ದ್ರಾಕ್ಷಿ ಬೆಳೆ ಹಾನಿ ಕುರಿತು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡ ವಿಜಯಪುರ, ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸುತ್ತಿದೆ. ವರದಿ ಕೊಟ್ಟ ಬಳಿಕ ಎಷ್ಟು ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ ಎಂಬ ಲೆಕ್ಕ ಸಿಗಲಿದೆ ಎಂದರು.

ಪ್ಯಾಕೇಜ್‌ಗೆ ಬೆಳೆಗಾರರ ಆಗ್ರಹ

ಮಳೆ, ಮೋಡದಿಂದ ನಷ್ಟಕ್ಕೊಳಗಾದ ದ್ರಾಕ್ಷಿ ಬೆಳೆಗಾರಿಗೆ ಸರ್ಕಾರ ವಿಶೇಷ ಪ್ಯಾಕೇಜ್ ನೀಡಬೇಕು ಎಂದು ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಡಾ.ಕೆ.ಎಚ್. ಮುಂಬಾರೆಡ್ಡಿ ಆಗ್ರಹಿಸಿದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಹೆಕ್ಟೇರ್‌ಗೆ ₹ 18 ಸಾವಿರ ಮಾತ್ರ ಪರಿಹಾರ ಸಿಗಲಿದೆ. ಗರಿಷ್ಠ 2 ಹೆಕ್ಟೇರ್‌ಗೆ ಮಾತ್ರ ಪರಿಹಾರ ದೊರೆಯಲಿದೆ. ಇದು ಯಾವುದಕ್ಕೂ ಸಾಲದು. ರಾಜ್ಯ ಸರ್ಕಾರ ವಿಶೇಷ ಪ್ಯಾಕೇಜ್ ಅಡಿ ಬೆಳೆಗಾರರಿಗೆ ಪರಿಹಾರ ನೀಡಬೇಕು ಎಂದು ಅವರು ಒತಾಯಿಸಿದರು.

ಕಳೆದ ವರ್ಷದ 2020–21ನೇ ಸಾಲಿನ ಬೆಳೆ ವಿಮೆ ಪರಿಹಾರದ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಮಳೆ: ಬೆಳೆ ಹಾನಿ ಸಮೀಕ್ಷೆಗೆ ಕೇಂದ್ರಕ್ಕೆ ಮನವಿ: ಬೊಮ್ಮಾಯಿ

ತುಮಕೂರು: ರಾಜ್ಯದಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದ ಹಾನಿಗೀಡಾದ ಬೆಳೆಗೆ ಹೆಚ್ಚಿನ ಪರಿಹಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಕೇಂದ್ರ ತಂಡ ಬಂದು ಪರಿಶೀಲಿಸಿ ವರದಿ ಸಲ್ಲಿಸಿದ ನಂತರ ಮತ್ತಷ್ಟು ಪರಿಹಾರ ಸಿಗಬಹುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಳೆ ನಷ್ಟಕ್ಕೆ ರೈತರು ಹೆಚ್ಚಿನ ಪರಿಹಾರ ಕೇಳುತ್ತಿದ್ದಾರೆ. ಪರಿಹಾರ ಮೊತ್ತವನ್ನು ಹೆಚ್ಚಿಸುವ ಸಂಬಂಧ ನಿರ್ಧಾರವನ್ನು ಕೇಂದ್ರ ಸರ್ಕಾರವೇ ತೆಗೆದುಕೊಳ್ಳಬೇಕಿದೆ ಎಂದೂ ಸ್ಪಷ್ಟಪಡಿಸಿದರು.

ಸಿದ್ಧಗಂಗಾ ಮಠದಲ್ಲಿ ಸೋಮವಾರ ಕಡೆ ಕಾರ್ತೀಕ ಸೋಮವಾರದಂದು ಲಕ್ಷ ಬಿಲ್ವಾರ್ಚಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಅಕಾಲಿಕ ಮಳೆಯಿಂದಾದ ಬೆಳೆ ಹಾನಿಗೆ ಪರಿಹಾರ ನೀಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಬಳಿ ₹685 ಕೋಟಿ ಹಣವಿದ್ದು, ಬಳಸಿಕೊಳ್ಳಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಸಿದ್ಧಗಂಗಾ ಮಠದ ದಿ.ಶಿವಕುಮಾರ ಸ್ವಾಮೀಜಿ ಜನ್ಮದಿನವನ್ನು ದಾಸೋಹ ದಿನವನ್ನಾಗಿ ಆಚರಿಸಲು ಸರ್ಕಾರ ತೀರ್ಮಾನಿಸಿದೆ.



ಕಾರ್ಯಕ್ರಮದ ರೂಪುರೇಷೆ ಯಾವ ರೀತಿ ಇರಬೇಕು ಎಂಬುದರ ಬಗ್ಗೆ ಸಿದ್ಧಲಿಂಗ ಸ್ವಾಮೀಜಿ ಜತೆ ಚರ್ಚಿಸಿ ಜಾರಿ ಮಾಡಲಾಗುವುದು ಎಂದರು.

ಧರ್ಮಸ್ಥಳ: ಲಕ್ಷ ದೀಪೋತ್ಸವಕ್ಕೆ ಚಾಲನೆ

ಉಜಿರೆ: ಹೊಸಕಟ್ಟೆ ಉತ್ಸವದೊಂದಿಗೆ ಸೋಮವಾರ ಧರ್ಮಸ್ಥಳದಲ್ಲಿ ಪ್ರಸಕ್ತ ಸಾಲಿನ ಲಕ್ಷ ದೀಪೋತ್ಸವ ಕಾರ್ಯಕ್ರಮಗಳಿಗೆ ಚಾಲನೆ ಲಭಿಸಿತು. ಡಿ.3ರಂದು ಲಕ್ಷದೀಪೋತ್ಸವ ನಡೆಯಲಿದೆ. ಡಿ.4ರಂದು ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆಯೊಂದಿಗೆ ಲಕ್ಷದೀಪೋತ್ಸವ ಸಮಾಪನಗೊಳ್ಳಲಿದೆ.

ನ.30ರಂದು ಕೆರೆಕಟ್ಟೆ ಉತ್ಸವ, ಡಿ.1ರಂದು ಲಲಿತೋದ್ಯಾನ ಉತ್ಸವ, ಡಿ.2ರಂದು ಕಂಚಿಮಾರುಕಟ್ಟೆ ಉತ್ಸವ, ಡಿ.3ರಂದು ಗೌರಿಮಾರುಕಟ್ಟೆ ಉತ್ಸವ ನಡೆಯಲಿವೆ. ಡಿ.2ರಂದು ಸಂಜೆ 5 ಗಂಟೆಗೆ ಅಮೃತವರ್ಷಿಣಿ ಸಭಾ ಭವನದಲ್ಲಿ ಸರ್ವಧರ್ಮ ಸಮ್ಮೇಳನವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಉದ್ಘಾಟಿಸುವರು.

ಬೆಂಗಳೂರಿನ ಎಸ್. ವ್ಯಾಸ ಯೋಗ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ರಾಮಚಂದ್ರ ಭಟ್ ಅಧ್ಯಕ್ಷತೆ ವಹಿಸುವರು. ಅಂದು ಸಾಹಿತ್ಯ ಸಮ್ಮೇಳನವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಉದ್ಘಾಟಿಸುವರು. ಕರ್ನಾಟಕ ಸಂಸ್ಕೃತ ವಿ.ವಿ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಅಧ್ಯಕ್ಷತೆ ವಹಿಸುವರು. ಲಕ್ಷ ದೀಪೋತ್ಸವ ನಿಮಿತ್ತ ಸೋಮವಾರ ಉಜಿರೆಯಿಂದ ಧರ್ಮಸ್ಥಳಕ್ಕೆ ನಡೆದ ಪಾದಯಾತ್ರೆಯಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಪುನೀತ್ ಸಮಾಧಿಗೆ ದೊಡ್ಮನೆ ಕುಟುಂಬದಿಂದ ಪೂಜೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರ ಮೊದಲ ತಿಂಗಳ ಪುಣ್ಯಸ್ಮರಣೆ ಸೋಮವಾರ ನಡೆಯಿತು. ಈ ಸಂದರ್ಭದಲ್ಲಿ ನಟರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ ಅವರ ಪತ್ನಿ ಅಶ್ವಿನಿ ಸೇರಿದಂತೆ ದೊಡ್ಮನೆ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

46 ವರ್ಷದ ಪುನೀತ್, ಕಳೆದ ಅ.29ರಂದು ಹೃದಯ ಸ್ತಂಭನದಿಂದ ನಿಧನರಾಗಿದ್ದರು. ಕಂಠೀರವ ಸ್ಟುಡಿಯೊದಲ್ಲಿ ಸಮಾಧಿಗೆ ಪೂಜೆ ಸಲ್ಲಿಸಿದ ಬಳಿಕ ಪುನೀತ್ ಅವರ ನಿವಾಸದಲ್ಲೂ ಪುಣ್ಯಸ್ಮರಣೆಯ ಪೂಜೆ ನಡೆಯಿತು.

ಪುಣ್ಯಸ್ಮರಣೆ ಕಾರಣ ಸೋಮವಾರ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಕಂಠೀರವ ಸ್ಟುಡಿಯೊಗೆ ಆಗಮಿಸಿದ್ದರು. ಬೆಳಗ್ಗೆ ದೊಡ್ಮನೆ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊಗೆ ಬಂದ ಸಂದರ್ಭದಲ್ಲಿ ಕೆಲ ಹೊತ್ತು ಸಮಾಧಿಯ ಬಳಿಗೆ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ರಾಜ್ಯದಾದ್ಯಂತ ಸಾವಿರಾರು ಅಭಿಮಾನಿಗಳು ಪುನೀತ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಹಲವೆಡೆ ನೇತ್ರದಾನ, ರಕ್ತದಾನ ಹಾಗೂ ಅನ್ನ ಸಂತರ್ಪಣೆ ಮಾಡುವ ಮುಖಾಂತರ ನೆಚ್ಚಿನ ನಟ ಅಪ್ಪುವನ್ನು ನೆನೆದರು.

ಶೀಘ್ರದಲ್ಲೇ 'ಗಂಧದ ಗುಡಿ'

ರಾಘವೇಂದ್ರ ರಾಜ್‌ಕುಮಾರ್

ಪುನೀತ್ ಅವರ ಕನಸಿನ ಪ್ರಾಜೆಕ್ಟ್ ಕುರಿತು ಮಾತನಾಡಿದ ರಾಘವೇಂದ್ರ ರಾಜ್‌ಕುಮಾರ್, 'ಗಂಧದ ಗುಡಿ ಒಂದು ಸಾಕ್ಷ್ಯಚಿತ್ರ. ಅದನ್ನು ಅಪ್ಪು, ಪುನೀತ್ ರಾಜ್‌ಕುಮಾರ್ ಆಗಿ ಮಾಡಿಲ್ಲ. ಬದಲಾಗಿ ಸಾಮಾನ್ಯ ವ್ಯಕ್ತಿಯಾಗಿ ಯಾವುದೇ ಮೇಕ್‌ಅಪ್ ಇಲ್ಲದೆ ನಟಿಸಿ ಒಂದು ಉತ್ತಮ ಸಂದೇಶವನ್ನು ನೀಡಿದ್ದಾನೆ. ಅದು ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ವನ್ಯಜೀವಿ, ವನ್ಯಲೋಕ ಎಷ್ಟು ಪ್ರಮುಖ ಹಾಗೂ ಅದರ ರಕ್ಷಣೆ ಎಷ್ಟು ಮುಖ್ಯ ಎನ್ನುವುದು ಇದರಲ್ಲಿದೆ. ಜೊತೆಗೆ ಕಾಡು ನಾಶ ತಡೆ ಹಾಗೂ ಬುಡಕಟ್ಟು ಜನರ ಬಗ್ಗೆಯೂ ಇಲ್ಲಿ ಮಾಹಿತಿ ಇದೆ. ಇದು ಇಡೀ ಪ್ರಪಂಚಕ್ಕೆ ಅನ್ವಯಿಸುತ್ತದೆ. ಅಪ್ಪು ಬಿಟ್ಟುಹೋಗಿರುವ ಕೊನೆಯ ಆಸ್ತಿಯಿದು' ಎಂದರು.

'ಏನೇ ಸಹಾಯ ಮಾಡಿದರೂ ಅದು ಇತರರಿಗೆ ಗೊತ್ತಾಗಬಾರದು ಎಂಬ ದಾರಿಯಲ್ಲಿ ಅಪ್ಪು ನಡೆದಿದ್ದ. ನಾವು ಅವನ ಕೆಲಸವನ್ನು ಮುಂದುವರಿಸಿಕೊಂಡು ಹೋಗುವ ಬಗ್ಗೆ ಬಹಿರಂಗವಾಗಿ ಹೇಳಿದರೆ ಆತನಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಅಪ್ಪು ಕನಸು ಹಾಗೂ ಕೆಲಸಗಳನ್ನು ಪ್ರತಿಯೊಬ್ಬರೂ ನಡೆಸಿಕೊಂಡು ಹೋಗುತ್ತೇವೆ' ಎಂದರು.

'ಪುನೀತ್ ವ್ಯಕ್ತಿತ್ವ ಎಲ್ಲರ ಗಮನ ಸೆಳೆದಿದೆ. ಈ ಗುಣವನ್ನು ಇಷ್ಟ ಚಿಕ್ಕ ವಯಸ್ಸಿನಲ್ಲೇ ಅಪ್ಪು ಪಡೆದಿದ್ದ. ಅದು ತಂದೆಯದ್ದೇ ಗುಣ. ಇಷ್ಟು ಬೇಗ ಬಿಟ್ಟು ಹೋಗಲು ನಮ್ಮ ಪ್ರೀತಿ ಜಾಸ್ತಿ ಆಯ್ತಾ ಅಥವಾ ಅವನಿಗೆ ಪ್ರೀತಿ ಸಾಲಲಿಲ್ಲವೇ ಎಂದು ತಿಳಿಯುತ್ತಿಲ್ಲ' ಎಂದು ಭಾವುಕರಾದರು.

ಹೊಸ ಪ್ರಕರಣಗಳ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳು ಇಳಿಮುಖವಾಗಿವೆ. ಸೋಮವಾರ 257 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಈವರೆಗೆ ಸೋಂಕಿಗೊಳಪಟ್ಟವರ ಸಂಖ್ಯೆ 29.95 ಲಕ್ಷಕ್ಕೆ ಮುಟ್ಟಿದ್ದು, ಸೋಂಕು ದೃಢ ಪ್ರಮಾಣವು ಶೇ 0.45ಕ್ಕೆ ತಗ್ಗಿದೆ.

ಕೋವಿಡ್ ಪೀಡಿತರ ಪೈಕಿ ಮತ್ತೆ 5 ಮಂದಿ ಅಸುನೀಗಿದ್ದಾರೆ. ಹೀಗಾಗಿ ಮೃತರ ಒಟ್ಟು ಸಂಖ್ಯೆ 38,203ಕ್ಕೆ ಏರಿದೆ. ಮರಣ ಪ್ರಮಾಣ ದರವು ಶೇ 1.94ರಷ್ಟಿದೆ.

ಒಂದು ದಿನದಲ್ಲಿ 205 ಜನರಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 29.50 ಲಕ್ಷದಷ್ಟಿದೆ. ಸಕ್ರಿಯ ಪ್ರಕರಣಗಳು ಹೆಚ್ಚಿದ್ದು, ಸದ್ಯ 6,878 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಕಡಿಮೆಯಾಗಿದೆ. ಹಿಂದಿನ 24 ಗಂಟೆಗಳಲ್ಲಿ 56,825 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರಿನಲ್ಲಿ ಹೊಸದಾಗಿ 131 ಜನರಿಗೆ ಸೋಂಕು ತಗುಲಿರುವುದು ಸೋಮವಾರ ದೃಢಪಟ್ಟಿದೆ. ದಕ್ಷಿಣ ಕನ್ನಡ ಮತ್ತು ಧಾರವಾಡದಲ್ಲಿ ತಲಾ 11, ಹಾಸನದಲ್ಲಿ 21, ಕೊಡಗು ಜಿಲ್ಲೆಯಲ್ಲಿ 14, ಮೈಸೂರಿನಲ್ಲಿ 15 ಹಾಗೂ ತುಮಕೂರಿನಲ್ಲಿ 23 ಪ್ರಕರಣಗಳು ವರದಿಯಾಗಿವೆ.

ಬೆಂಗಳೂರಿನಲ್ಲಿ ಇಬ್ಬರು ಮೃತಪಟ್ಟಿದ್ದು, ಕೋಲಾರ, ತುಮಕೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ಒಬ್ಬರು ಅಸುನೀಗಿದ್ದಾರೆ.

ಪ್ರಸಾರ ಭಾರತಿ
ದೂರದರ್ಶನ ಕೇಂದ್ರ
ಬೆಂಗಳೂರು–560006

ವೀಕ್ಷಕರ ಮಾಹಿತಿಗಾಗಿ

ಪ್ರಸಾರ ಭಾರತಿ ನಿರ್ಧಾರದ ಮೇರೆಗೆ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಕೋಲಾರ ಗೋಲ್ಡ್ ಫೀಲ್ಡ್‌ನಲ್ಲಿನ ದೂರದರ್ಶನ ಲೊ ಪವರ್ ಟ್ರಾನ್ಸ್‌ಮಿಟರ್, ಚಾನಲ್ ನಂ. 31ರಲ್ಲಿ ಪ್ರಸಾರವಾಗುತ್ತಿರುವ ಡಿಡಿ ಚಂದನ ಸೇವೆಯ ಕಾರ್ಯಾಚರಣೆಯು 31–12–2021 ರಿಂದ ಸ್ಥಗಿತಗೊಳ್ಳುತ್ತದೆ.

ದೂರದರ್ಶನ, ಬೆಂಗಳೂರು–560006

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ

ಸಿಐಎನ್: U85110KA1970SGC001919

ಸಂಖ್ಯೆ : ಇಇ(ಒಎಲ್‌ಎ)/ಬಿಟಿಪಿಎಸ್/ಎನ್‌ಐಟಿ/307 ದಿನಾಂಕ:27.11.2021

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ನೋಂದಾಯಿತ ತೃತೀಯ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ **"Repairs / Renovation to silo utility buildings of Unit-1 & 2 at BTPS."** ಕಾಮಗಾರಿಗೆ ದ್ವಿಲಕೋಟೆ ಪದ್ಧತಿಯನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಅಂದಾಜು ಮೊತ್ತ : **ರೂ. 21.59 ಲಕ್ಷಗಳು.** **ಇಎಂಡಿ:** ವಿನಾಯಿತಿ ನೀಡಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ : **4 ತಿಂಗಳು (ಮಳೆಗಾಲ ಸೇರಿದಂತೆ).** ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **13.12.2021, 16.00 ಗಂಟೆಯವರೆಗೆ.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನ್ನು ನೋಡಬಹುದು. ಯಾವುದೇ ಸ್ಪಷ್ಟೀಕರಣಕ್ಕಾಗಿ ಕಾರ್ಯನಿರ್ವಾಹಕ ಅಭಿಯಂತರರು (ಒಎಲ್‌ಎ), ಬಿಟಿಪಿಎಸ್, ಕೆಪಿಸಿಎಲ್, ಕುಡತಿನಿ – 583152, ಬಳ್ಳಾರಿ (ಜಿಲ್ಲೆ), ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಮೊಬೈಲ್ ಸಂಖ್ಯೆ: 94482 90774.

ಬಳ್ಳಾರಿ ಜಿಲ್ಲೆಯಲ್ಲಿ ಅಕಾಲಿಕ ಮಳೆ ಪರಿಣಾಮ ● ಆತಂಕದಲ್ಲಿ ರೈತರು

ಲಕ್ಷ ಎಕರೆಯಲ್ಲಿ ಮೆಣಸಿನಕಾಯಿ ಬೆಳೆ ನಷ್ಟ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ 42,644 ಹೆಕ್ಟೇರ್‌ನಲ್ಲಿ (1,06,610 ಎಕರೆ) ಮೆಣಸಿನಕಾಯಿ ಬೆಳೆ ನಾಶವಾಗಿದೆ. 11,563 ಹೆಕ್ಟೇರ್‌ನಲ್ಲಿ ಭತ್ತ, 1,209 ಹೆಕ್ಟೇರ್‌ನಲ್ಲಿ ಕಡಲೆ ಬೆಳೆಗೆ ಹಾನಿಯಾಗಿದ್ದು ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

ಅಂದಾಜಿನ ಪ್ರಕಾರ, ಜಿಲ್ಲೆಯಲ್ಲಿ ₹ 1,500 ಕೋಟಿ ಮೌಲ್ಯದ ಆಸ್ತಿಪಾಸ್ತಿ ಮತ್ತು ಬೆಳೆ ನಷ್ಟವಾಗಿದೆ. ಆದರೆ, ಜಿಲ್ಲಾಡಳಿತ ನಡೆಸಿದ ಸಮೀಕ್ಷೆ ಪ್ರಕಾರ ₹ 75 ಕೋಟಿಗೂ ಅಧಿಕ ನಷ್ಟವಾಗಿದೆ.

'ಜಿಲ್ಲೆಯಲ್ಲಿ ಪ್ರಮುಖವಾಗಿ 70 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆದಿದ್ದು, 42,644 ಹೆಕ್ಟೇರ್‌ನಲ್ಲಿ ಬೆಳೆ ಹಾಳಾಗಿದೆ' ಎಂದು ಜಿಲ್ಲಾಧಿಕಾರಿ ಪವನ್ ಕುಮಾರ್ ಮಾಲಪಾಟಿ ತಿಳಿಸಿದ್ದಾರೆ.

ಕುರುಗೋಡು ತಾಲ್ಲೂಕಿನ ಬಾದನಹಟ್ಟಿಯಲ್ಲಿ ಐದು ಎಕರೆಯಲ್ಲಿ ಮೆಣಸಿನಕಾಯಿ ಬೆಳೆದಿದ್ದ ರೈತರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ರೈತರು ಆತಂಕಕ್ಕೆ ಒಳಗಾಗಿ ಆತ್ಮಹತ್ಯೆಯಂಥ ದುಡುಕಿನ ಕ್ರಮಕ್ಕೆ ಮುಂದಾಗಬಾರದು. ಸರ್ಕಾರ ನೆರವಿಗೆ ಬರಲಿದೆ' ಎಂದು ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ.

> **ಸಮೀಕ್ಷೆ ಪೂರ್ಣಗೊಳ್ಳಲು 20 ದಿವಸ ಹಿಡಿಯಬಹುದು, ಮನೆ ಕಳೆದುಕೊಂಡವರಿಗೆ ತೊಂದರೆ ಆಗಬಾರದೆಂದು ತಕ್ಷಣ ಹಣ ಬಿಡುಗಡೆ ಮಾಡಲಾಗುತ್ತಿದೆ**
> **ಪವನ್ ಕುಮಾರ್ ಮಾಲಪಾಟಿ,** ಜಿಲ್ಲಾಧಿಕಾರಿ

ಆರಂಭದಲ್ಲಿ ಜಿಲ್ಲಾಡಳಿತ 10 ಸಾವಿರ ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಿತ್ತು. ಸಮೀಕ್ಷೆಯಲ್ಲಿ ಒಂದು ಲಕ್ಷ ಎಕರೆಗೂ ಅಧಿಕ ಪ್ರದೇಶದಲ್ಲಿ ಮೆಣಸಿನಕಾಯಿ ನಾಶವಾಗಿದೆ ಎಂದು ತಿಳಿದಂತೆ, ಸತ್ಯಾಸತ್ಯತೆಯನ್ನು ಅರಿಯಲು ಜಿಲ್ಲೆಗೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಕರೆಸಿತು.

ಅದರಂತೆ, ಭಾನುವಾರ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಧನರಾಜ್, ಮಂಜುನಾಥ್ ನಾರಾಯಣಪುರ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಜಮೀನುಗಳಿಗೆ ತೆರಳಿ ತೆರಳಿ ಪರಿಶೀಲಿಸಿ, ಬೆಳೆ ನಷ್ಟ ದೃಢಪಡಿಸಿತು.

ಬಳ್ಳಾರಿ ತಾಲೂಕಿನ ಲಕ್ಷ್ಮೀನಗರ ಕ್ಯಾಂಪ್‌ನಲ್ಲಿ ಅಕಾಲಿಕ ಮಳೆಗೆ ಸಿಕ್ಕಿ ನಾಶವಾಗಿರುವ ಮೆಣಸಿನಕಾಯಿ ಗಿಡಗಳು

ಬಹುತೇಕ ರೈತರು ಎಕರೆಗೆ ಸರಾಸರಿ ₹ 30 ಸಾವಿರಕ್ಕೆ ಜಮೀನು ಗುತ್ತಿಗೆ ಹಿಡಿದಿದ್ದರು. ಎಕರೆಗೆ ₹ 1 ಲಕ್ಷಕ್ಕೂ ಅಧಿಕ ಖರ್ಚು ಮಾಡಿದ್ದಾರೆ. ಆದರೆ, ಸರ್ಕಾರಿ ನೀರಾವರಿ ಜಮೀನಿನಲ್ಲಿ ಎಕರೆಗೆ ₹13,500 ಹಾಗೂ ಮಳೆ ಆಶ್ರಿತ ಜಮೀನಿಗೆ ಎಕರೆಗೆ ₹ 6,500 ಪರಿಹಾರ ನಿಗದಿಪಡಿಸಿದೆ. ಗರಿಷ್ಠ ಐದು ಎಕರೆಯವರೆಗೆ ಪರಿಹಾರ ದೊರೆಯಲಿದೆ.

ಅಲ್ಲದೆ, ಜಿಲ್ಲೆಯಲ್ಲಿ ಮಳೆಗೆ 538 ಮನೆಗಳೂ ಬಿದ್ದಿವೆ. ಮನೆಗಳನ್ನು ಕಳೆದುಕೊಂಡವರಿಗೆ ಪರಿಹಾರ ವಿತರಿಸುವ ಕಾರ್ಯ ಆರಂಭವಾಗಿದೆ ಎಂದೂ ಜಿಲ್ಲಾಧಿಕಾರಿ ವಿವರಿಸಿದರು.

ಬಿಲ್ವಾರ್ಚನೆ ಕಾರ್ತೀಕ ಮಾಸದ ಕೊನೆ ಸೋಮವಾರ ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ನಡೆದ ಲಕ್ಷ ಪುಷ್ಪ ಬಿಲ್ವಾರ್ಚನೆ ಕಾರ್ಯಕ್ರಮಕ್ಕೆ ಸೇರಿದ್ದ ಭಕ್ತರ ಸಮೂಹ. ಇದೇ ಸಂದರ್ಭದಲ್ಲಿ ಹೆಲಿಕಾಪ್ಟರ್‌ನಿಂದ ಪುಷ್ಪವೃಷ್ಟಿಯೂ ನಡೆಯಿತು –ಪ್ರಜಾವಾಣಿ ಚಿತ್ರ

ಹಿಂದೂಗಳ ವಿರುದ್ಧ ಅಸಹನೆ: ಪೇಜಾವರ ಶ್ರೀ ಬೇಸರ

ಬಾಗಲಕೋಟೆ: 'ದೇಶದಲ್ಲಿ ಹಿಂದೂಗಳ ಬೆಳವಣಿಗೆಯ ವಿರುದ್ಧ ಅಸಹನೆ ಬೆಳೆಯುತ್ತಿದೆ. ಅದು ನಮ್ಮ (ಹಿಂದೂಗಳ) ಸಹನೆಯ ದೌರ್ಭಾಗ್ಯ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. 'ಬಿಜೆಪಿ ಸರ್ಕಾರ ಇರುವ ಹಿನ್ನೆಲೆಯಲ್ಲಿಯೇ ವಿರೋಧ ನಡೆಯುತ್ತಿದೆ. ಇದಕ್ಕೆ ಸರ್ಕಾರ ಎಷ್ಟು ಸಾಧ್ಯವೋ ಅಷ್ಟು ಕಡಿವಾಣ ಹಾಕಬೇಕು. ಹಾಗೆಂದು ಜನರ ವಿರೋಧಗಳನ್ನು ನೇರವಾಗಿ ಕಾನೂನು ಮೂಲಕ ಹತ್ತಿಕ್ಕುವುದು ಸರಿಯಲ್ಲ' ಎಂದು ಹೇಳಿದರು.

'ಕೇಂದ್ರ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗಲೇ ಹಿಂದೂ ಧರ್ಮದ ಮೇಲೆ ಟೀಕಾ ಪ್ರಹಾರ ಹೆಚ್ಚುತ್ತಿದೆಯಲ್ಲ' ಎಂಬ ಮಾಧ್ಯಮದವರ ಪ್ರಶ್ನೆಗೆ ಈ ಪ್ರತಿಕ್ರಿಯೆ ನೀಡಿದರು.

ನಿಧನ ವಾರ್ತೆ

ಬಯಲಾಟ ಕಲಾವಿದೆ ಪದ್ಮಮ್ಮ

ಬಳ್ಳಾರಿ: ಬಯಲಾಟ ಕಲಾವಿದೆ ಕಪ್ಪಗಲ್ ಪದ್ಮಮ್ಮ (80) ಸೋಮವಾರ ಹೃದಯಾಘಾತದಿಂದ ಇಲ್ಲಿನ ದೇವಿನಗರದಲ್ಲಿ ನಿಧನರಾದರು.

ಅವರಿಗೆ 8 ಮಂದಿ ಪುತ್ರರು ಹಾಗೂ ಪುತ್ರಿ ಇದ್ದಾರೆ. ಮಂಗಳವಾರ ಬೆಳಿಗ್ಗೆ 10 ಗಂಟೆಗೆ ತಾಳೂರು ರಸ್ತೆಯಲ್ಲಿರುವ ಹರಿಶ್ಚಂದ್ರಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

4ನೇ ತರಗತಿವರೆಗೆ ಮಾತ್ರ ಶಾಲೆ ಕಲಿತಿದ್ದ ಅವರು ಬಯಲಾಟದಲ್ಲಿ 45 ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿದ್ದರು. ಅವರಿಗೆ 2004ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2008–09ರಲ್ಲಿ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ, ನಾಡೋಜ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಸಂದಿದ್ದವು.

ಪಾಂಡು ವಿಜಯ–ರತಿ ಕಲ್ಯಾಣದಲ್ಲಿ ದ್ರೌಪತಿ, ಶಶಿರೇಖಾ ಭರಣ–ಅಭಿಮನ್ಯು ಕಾಳಗದಲ್ಲಿ ಸುಭದ್ರ, ಗಿರಿಜಾ ಕಲ್ಯಾಣದಲ್ಲಿ ರತಿ, ರಾಮಾಯಣದಲ್ಲಿ ಸೀತೆ, ಇತ್ಯಾದಿ ಪಾತ್ರಗಳನ್ನು ಮಾಡಿದ್ದರು.

ಕೊಚ್ಚಿಹೋಗಿದ್ದ ಇಬ್ಬರ ಶವ ಪತ್ತೆ

ಕುಣಿಗಲ್ (ತುಮಕೂರು): ತಾಲ್ಲೂಕಿನ ಮಾರ್ಕೋನಹಳ್ಳಿ ಜಲಾಶಯದ ಕೋಡಿಹಳ್ಳದಲ್ಲಿ ಭಾನುವಾರ ಕೊಚ್ಚಿಹೋಗಿದ್ದ ನಾಲ್ವರ ಪೈಕಿ ಇಬ್ಬರ ಶವಗಳನ್ನು ಸೋಮವಾರ ಮಂಡ್ಯ ಜಿಲ್ಲೆಯ ನಾಗಮಂಗಲ ಬಳಿಯ ಹರಿದುಹೋಗುವ ಹಳ್ಳದಲ್ಲಿ ಪತ್ತೆ ಹಚ್ಚಲಾಗಿದೆ.

ಕೊಚ್ಚಿಹೋಗಿರುವ ಇನ್ನೂ ಇಬ್ಬರ ಪತ್ತೆಗೆ ಶೋಧ ಕಾರ್ಯವನ್ನು ಕತ್ತಲಾದ ಕಾರಣ ಸ್ಥಗಿತಗೊಳಿಸಲಾಗಿದೆ. ಮಂಗಳವಾರ ಮತ್ತೆ ಮುಂದುವರೆಯಲಿದೆ. ಪಟ್ಟಣದ ಕೋಟೆ ಪ್ರದೇಶದ ಸಾಧಿಕಾ (17) ಮತ್ತು ಎಡೆಯೂರಿನ ಅಪ್ಪು (23) ಅವರ ಶವಗಳು ಪತ್ತೆಯಾಗಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE

ಕನ್ನಡ ಧ್ವನಿ

Prajavani.net/podcast

ದಿನದ ವಿಶೇಷ : ಪ್ರತೀ ದಿನ ಬೆಳಿಗ್ಗೆ 7 **ವಚನವಾಣಿ,** ಬೆ. 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9.30 **ಸಂಪಾದಕೀಯ,** ಬೆಳಿಗ್ಗೆ 9 **ಪ್ರಚಲಿತ**

Prajavani.net
Prajavani Prajavani

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	7,232	7,006
ಹಾರಂಗಿ	2,859	2,857.39	473	600
ಕಬಿನಿ	2284.00	2,283.74	1,100	700
ಹೇಮಾವತಿ	2,922	2,913.76	2,280	730
ಲಿಂಗನಮಕ್ಕಿ	1,819	1,812.60	-	-
ಸೂಪಾ (ಮೀ)	564	554.91	360	2,089
ಮಾಣಿ	594	586.52	-	-
ತುಂಗಭದ್ರಾ	1,633	1,632.99	12,435	12,255
ಮಲಪ್ರಭಾ	2079.5	2,077.10	569	569
ಘಟಪ್ರಭಾ	2175	2,165.78	175	175
ಭದ್ರಾ	186	186.11	549	1
ಆಲಮಟ್ಟಿ (ಮೀ)	519.6	518.51	2,316	530
ನಾರಾಯಣಪುರ (ಮೀ)	492.25	492.08	1,341	120

* ನೆಲಮಟ್ಟದಿಂದ

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 11ನೇ ಘಟಿಕೋತ್ಸವ

ಚಿನ್ನದ ಪದಕ ವಿಜೇತೆಗೆ ಪ್ರಾಧ್ಯಾಪಕಿಯಾಗುವ ಗುರಿ

ಪ್ರಜಾವಾಣಿ ವಾರ್ತೆ

ರಾಯಚೂರು: ಉತ್ತಮ ಅಂಕ ಗಳಿಕೆ ಸಾಧನೆಯೊಂದಿಗೆ 6 ಚಿನ್ನದ ಪದಕ ವಿಜೇತರಾದ ವಿದ್ಯಾರ್ಥಿನಿಗೆ ಪ್ರಾಧ್ಯಾಪಕಿಯಾಗುವ ಗುರಿ ಇದ್ದರೆ, ಐದು ಪದಕ ವಿಜೇತರಾದ ವಿದ್ಯಾರ್ಥಿಗೆ ಕೃಷಿ ವಿಜ್ಞಾನಿಯಾಗುವ ಕನಸು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 11ನೇ ಘಟಿಕೋತ್ಸವದಲ್ಲಿ ಕೇರಳದ ಗೀತಿಕಾ ಟಿ.ವಿ ಮತ್ತು ಬಿಹಾರದ ವಿದ್ಯಾರ್ಥಿ ಕೇಸರಿ ಸುಂದರ ವರ್ಮಾ ಕ್ರಮವಾಗಿ 6 ಮತ್ತು 5 ಪದಕಗಳು, ಪ್ರಮಾಣಪತ್ರ ಸ್ವೀಕರಿಸಿ ಸಂಭ್ರಮಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪದಕ, ಪ್ರಮಾಣಪತ್ರ ಪ್ರದಾನ ಮಾಡಿದರು.

ಆಟೊ ಚಾಲಕ ಕೆ.ಸುರೇಶಕುಮಾರ್ ಅವರ ಪುತ್ರಿ ಗೀತಿಕಾ ಅವರು ಕೃಷಿ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗುವ ಕನಸು ಹೊಂದಿದ್ದಾರೆ. ಹೆಚ್ಚು ಚಿನ್ನದ ಪದಕಗಳು ಬಂದಿರುವುದಕ್ಕೆ ಖುಷಿಯಾಗಿದೆ ಎಂದು ಪ್ರತಿಕ್ರಿಯಿಸಿದರು.

'ಶಿಕ್ಷಕರ ಸಲಹೆಯಂತೆ ಕೃಷಿ ಪದವಿ ಪೂರ್ಣಗೊಳಿಸಿರುವೆ. ಕೇರಳದ ಕೃಷಿ ವಿ.ವಿ.ಯಲ್ಲಿ ಸಸ್ಯ ರೋಗಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಿದಿದ್ದೇನೆ' ಎಂದು ಗೀತಿಕಾ 'ಪ್ರಜಾವಾಣಿ'ಗೆ ತಿಳಿಸಿದರು.

45 ಚಿನ್ನದ ಪದಕಗಳ ಪ್ರದಾನ: ವಿವಿಧ ವಿಭಾಗಗಳಲ್ಲಿ 32 ವಿದ್ಯಾರ್ಥಿಗಳು ಚಿನ್ನದ ಪದಕಗಳಿಗೆ ಪಾತ್ರರಾದರು. ಪದವಿಯಲ್ಲಿ 21, ಸ್ನಾತಕೋತ್ತರ ಪದವಿಯಲ್ಲಿ 14, ಡಾಕ್ಟರೇಟ್ ಪದವಿಯಲ್ಲಿ 10 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು. 303 ಪದವಿ, 107 ಸ್ನಾತಕೋತ್ತರ, 26 ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡಲಾಯಿತು.

ಬಿಹಾರದ ವಿದ್ಯಾರ್ಥಿಗೆ 5 ಚಿನ್ನದ ಪದಕ

ಕೇಸರಿ ಸುಂದರ ವರ್ಮಾ

ಕೃಷಿ ಎಂಜಿನಿಯರಿಂಗ್ ಪದವಿಯಲ್ಲಿ ಗರಿಷ್ಠ ಅಂಕ ಪಡೆದ ಬಿಹಾರದ ವಿದ್ಯಾರ್ಥಿ ಕೇಸರಿ ಸುಂದರ್ ವರ್ಮಾ, 5 ಚಿನ್ನದ ಪದಕ ಮತ್ತು ಎರಡು ನಗದು ಬಹುಮಾನಕ್ಕೆ ಪಾತ್ರರಾದರು.

ನಳಂದಾ ಜಿಲ್ಲೆಯ ರಾಜಗೀರ್ ಗ್ರಾಮದಿಂದ, ವ್ಯಾಸಂಗಕ್ಕಾಗಿ ರಾಯಚೂರಿಗೆ ಬಂದಿರುವ ಅವರಿಗೆ ಕೃಷಿ ವಿಜ್ಞಾನಿಯಾಗುವ ಕನಸಿದೆ.

'ಖರಗಪುರ ಐಐಟಿಯಲ್ಲಿ ಎಂ.ಟೆಕ್ ಪ್ರವೇಶ ಪಡೆದಿದ್ದೇನೆ. ಕೃಷಿ ವಿಜ್ಞಾನಿಯಾಗುವ ಆಸೆಯಿದೆ. ತಂದೆ ವಿಮಾ ಏಜೆಂಟ್, ತಾಯಿ ಕಾಲೇಜು ಉಪನ್ಯಾಸಕಿ' ಎಂದು ಕೇಸರಿ ಸುಂದರ್ ತಿಳಿಸಿದರು. 'ವಿಳಂಬವಾಗಿ ಹಾಜರಾದ್ದರಿಂದ ಅವರಿಗೆ ರಾಜ್ಯಪಾಲರಿಂದ ಪದಕ ಪಡೆಯಲು ಆಗಲಿಲ್ಲ. ಆನಂತರ ಕುಲಪತಿ ಸಮ್ಮುಖದಲ್ಲಿ ವಿತರಿಸಲಾಗುವುದು' ಎಂದು ಪ್ರಾಧ್ಯಾಪಕರು ತಿಳಿಸಿದ್ದಾರೆ.

11ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗೀತಿಕಾ ಟಿ.ವಿ. ಅವರಿಗೆ ಚಿನ್ನದ ಪದಕಗಳು ಮತ್ತು ಪ್ರಮಾಣಪತ್ರ ಪ್ರದಾನ ಮಾಡಿದರು. ನವದೆಹಲಿಯ ಕೃಷಿ ಅನುಸಂಧಾನ ಪರಿಷತ್ ಉಪ ಮಹಾನಿರ್ದೇಶಕ ಎ.ಕೆ.ಸಿಂಗ್ ಇದ್ದರು

ವಿದ್ಯಾವರ್ಧಕ ಸಂಘದ ಚುನಾವಣೆ: ಬೆಲ್ಲದ ಮುನ್ನಡೆ

ಪ್ರಜಾವಾಣಿ ವಾರ್ತೆ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದ ತ್ರೈವಾರ್ಷಿಕ ಚುನಾವಣೆಯ ಮತಎಣಿಕೆ ಸೋಮವಾರ ನಡೆದಿದ್ದು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಅವರು ಮುನ್ನಡೆ ಕಾಯ್ದು ಕೊಂಡಿದ್ದಾರೆ.

15 ಸ್ಥಾನಗಳಿಗೆ ಭಾನುವಾರ ಮತದಾನ ನಡೆದಿತ್ತು. 7,568 ಮತದಾರರಲ್ಲಿ 3,618 ಮತದಾರರು ಹಕ್ಕು ಚಲಾಯಿಸಿದ್ದರು.

ಬೆಲ್ಲದ 2,382 ಮತ ಹಾಗೂ ಸಮೀಪದ ಸ್ಪರ್ಧಿ ಪ್ರೊ.ಬಿ.ಎಸ್. ಶಿರೋಳ 732 ಮತ ಪಡೆದಿದ್ದಾರೆ.

ಉಪಾಧ್ಯಕ್ಷ ಸ್ಥಾನದಲ್ಲಿ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಕಾರ್ಯಾಧ್ಯಕ್ಷ–ಬಸವಪ್ರಭು ಹೊಸಕೇರಿ, ಪ್ರಧಾನ ಕಾರ್ಯದರ್ಶಿ–ಶಂಕರ ಹಲಗತ್ತಿ, ಸಹ ಕಾರ್ಯದರ್ಶಿ– ಶಂಕರ ಕುಂಬಿ. ಕಾರ್ಯಕಾರಿ ಮಂಡಳಿಯಲ್ಲಿ ಮಹಿಳಾ ಸ್ಥಾನದಲ್ಲಿ ವಿಶ್ವೇಶ್ವರಿ ಹಿರೇಮಠ, ಪರಿಶಿಷ್ಟ ಜಾತಿ ಹಾಗೂ ಪಂಗಡ ಸ್ಥಾನಕ್ಕೆ ಪ್ರೊ. ಧನವಂತ ಹಾಜವಗೋಳ, ಸಾಮಾನ್ಯ ಸ್ಥಾನದಲ್ಲಿ– ಡಾ. ಸಂಜೀವ ಕುಲಕರ್ಣಿ, ಡಾ. ಶೈಲಜಾ ಅಮರಶೆಟ್ಟಿ, ವೀರಣ್ಣ ಒಡ್ಡೀನ, ಡಾ. ಶ್ರೀಶೈಲ ಹುದ್ದಾರ, ಗುರು ಹಿರೇಮಠ, ಮಹೇಶ ಹೊರಕೇರಿ, ಡಾ. ಜಿನದತ್ತ ಹಡಗಲಿ ಮುನ್ನಡೆ ಕಾಯ್ದುಕೊಂಡಿದ್ದಾರೆ. ಕೋಶಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶಿವಾನಂದ ಭಾವಿಕಟ್ಟಿ ಹಾಗೂ ಸತೀಶ ಜಿ. ತುರಮರಿ ಅವರು ತಲಾ 1,687 ಮತಗಳನ್ನು ಪಡೆದು ಸಮಬಲ ಕಾಯ್ದುಕೊಂಡರು.



ಚಂದ್ರಕಾಂತ ಬೆಲ್ಲದ

'ಡಿ.12ರಂದು ನಡೆಯಲಿರುವ ಸಂಘದ ಸಾಮಾನ್ಯ ಸಭೆಯಲ್ಲಿ ಫಲಿತಾಂಶ ಘೋಷಿಸಲಾಗುವುದು. ಅಂದೇ ಕೋಶಾಧ್ಯಕ್ಷರ ಆಯ್ಕೆಯೂ ತೀರ್ಮಾನವಾಗಲಿದೆ' ಎಂದು ಚುನಾವಣಾಧಿಕಾರಿ ಸಿ.ಎಸ್. ನೇಗಿನಹಾಳ ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಸಮುದಾಯ ಸೇವಾ ಕಾರ್ಯಕ್ರಮ

ದುರ್ಬಲ ವರ್ಗದ ಕುಟುಂಬಗಳ ಶಾಶ್ವತ ಸಬಲೀಕರಣ

||ಓಂ ಶ್ರೀ ಮಂಜುನಾಥಾಯ ನಮಃ||

ದುರ್ಬಲ ವರ್ಗದ ಕುಟುಂಬಗಳ ಶಾಶ್ವತ ಸಬಲೀಕರಣಕ್ಕೆ ಸಮುದಾಯ ಸೌಕರ್ಯ ಅಭಿವೃದ್ಧಿ ಅತೀ ಅಗತ್ಯವೆಂದು ಮನಗಂಡ ಪೂಜ್ಯ ಡಾ. ವೀರೇಂದ್ರ ಹೆಗ್ಗಡೆಯವರು ಸಮುದಾಯ ಸೇವಾ ಕಾರ್ಯಕ್ರಮಗಳಿಗೆ ವಿಶೇಷ ಆದ್ಯತೆಯನ್ನು ನೀಡಿದ್ದಾರೆ. ಗ್ರಾಮೀಣ ಶಿಕ್ಷಣದಿಂದ ಕೆರೆ ಪುನಶ್ಚೇತನ ಕಾರ್ಯಕ್ರಮಗಳವರೆಗೆ ಧರ್ಮಸ್ಥಳದ ಸಮುದಾಯ ಸೇವಾ ಚಟುವಟಿಕೆಗಳ ವಿಸ್ತಾರವಾಗುತ್ತಿದೆ. ಇವುಗಳ ಪಕ್ಷಿನೋಟ ಈ ಕೆಳಕಂಡಂತೆ.

ನಮ್ಮೂರು ನಮ್ಮ ಕೆರೆ ಕಾರ್ಯಕ್ರಮ:

ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಲ್ಲಿ, ಊರ ಕೆರೆಯನ್ನು ಪುನಶ್ಚೇತನಗೊಳಿಸಿ ರಕ್ಷಿಸುವ ಪ್ರಯತ್ನವನ್ನು ಯೋಜನೆಯು ಊರಿನವರ ಸಹಭಾಗಿತ್ವದಿಂದ ಹಮ್ಮಿಕೊಳ್ಳುತ್ತದೆ. 2016ರಿಂದ ಪ್ರಾರಂಭವಾದ 'ನಮ್ಮೂರು - ನಮ್ಮ ಕೆರೆ' ಕಾರ್ಯಕ್ರಮದಂತೆ ಇದುವರೆಗೆ ರಾಜ್ಯದಲ್ಲಿ 302 ಕೆರೆಗಳ ಪುನಶ್ಚೇತನ ಕಾರ್ಯ ನಡೆಸಲಾಗಿದೆ. ಇದಕ್ಕಾಗಿ ಸಂಸ್ಥೆಯಿಂದ ₹21.95 ಕೋಟಿ ಮೊತ್ತ ವಿನಿಯೋಗಿಸಲಾಗಿದೆ.

ಸಂಸ್ಥೆಯ ವತಿಯಿಂದ ನಡೆದ ಕೆರೆ ಪುನಶ್ಚೇತನ ಕಾರ್ಯ ಗಮನಿಸಿದ ಕರ್ನಾಟಕ ಸರ್ಕಾರ 'ಕೆರೆ ಸಂಜೀವಿನಿ ಯೋಜನೆ'ಯ ಆರ್ಥಿಕ ನೆರವಿನೊಂದಿಗೆ ಸಂಸ್ಥೆಯ ಮೂಲಕ ರಾಜ್ಯದಲ್ಲಿ 65 ಕೆರೆಗಳ ಪುನಶ್ಚೇತನ ಕಾರ್ಯ ನಡೆಸಲಾಗಿದೆ. ಇದಕ್ಕಾಗಿ ಸರ್ಕಾರದಿಂದ ₹45.69 ಕೋಟಿ ಅನುದಾನ ಬಳಸಲಾಗಿದೆ.

ಈ ರೀತಿ ರಾಜ್ಯದಾದ್ಯಂತ ಒಟ್ಟು 367 ಕೆರೆಗಳ ಪುನಶ್ಚೇತನ ಕಾರ್ಯ ನಡೆಸಲಾಗಿದ್ದು, ತುಂಬಿದ ಕೆರೆಯಿಂದಾಗಿ 33,347 ಬೋರ್‌ವೆಲ್‌ಗಳು, 21,653 ತೆರೆದ ಬಾವಿಗಳು ಮರುಪೂರಣಗೊಂಡಿದೆ. ಒಟ್ಟು 2,69,463 ಮಂದಿ ರೈತರು ಪ್ರಯೋಜನ ಪಡೆದುಕೊಂಡಿರುತ್ತಾರೆ. ನಮ್ಮೂರು ನಮ್ಮ ಕೆರೆ ಕಾರ್ಯಕ್ರಮ ಸ್ವಯಂಸೇವಾ ಸಂಸ್ಥೆಯೊಂದು ಗ್ರಾಮೀಣ ಜಲ ನಿರ್ವಹಣೆಯಲ್ಲಿ ಹೇಗೆ ಸಹಭಾಗಿತ್ವದ ಕಾರ್ಯಕ್ರಮಗಳನ್ನು ಅನುಷ್ಠಾನಿಸಬಹುದು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

ಗ್ರಾಮೀಣ ಶಾಲೆಗಳಿಗೆ ಪೀಠೋಪಕರಣ

ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಜ್ಞಾನದೀಪ ಹಾಗೂ ಪೂಜ್ಯರ ವಿಶೇಷ ಅನುದಾನ ಕಾರ್ಯಕ್ರಮದಡಿ ಪೀಠೋಪಕರಣಗಳ ಕೊರತೆಯಿರುವ ಸರ್ಕಾರಿ ಶಾಲೆಗಳಿಗೆ ಪ್ರಸ್ತುತ ಫೈಬರ್ ಮಾದರಿಯ ಡೆಸ್ಕ್ ಬೆಂಚ್‌ಗಳನ್ನು ಪೂರೈಕೆ ಮಾಡುತ್ತಿದ್ದು, ಅಧಿಕ ಬಾಳಿಕೆ ಹಾಗೂ ಕಡಿಮೆ ಭಾರವನ್ನು ಹೊಂದಿರುತ್ತದೆ. ಅನೇಕ ಗ್ರಾಮೀಣ ಶಾಲೆಗಳಲ್ಲಿ ಡೆಸ್ಕ್ ಬೆಂಚುಗಳ ಕೊರತೆಯನ್ನು ನೀಗಿಸಲು ಶಾಲೆಗಳಿಗೆ 8 ರಿಂದ ಗರಿಷ್ಠ 10 ಜೊತೆ ಡೆಸ್ಕ್ ಬೆಂಚ್‌ಗಳನ್ನು ಒದಗಿಸಲಾಗುತ್ತಿದ್ದು, ಯೋಜನೆಯ ವತಿಯಿಂದಲೇ ಶಾಲೆಗಳಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಇದುವರೆಗೆ ಕರ್ನಾಟಕ ರಾಜ್ಯದ 30 ಜಿಲ್ಲೆಯ 167 ತಾಲ್ಲೂಕುಗಳ 10,054 ಶಾಲೆಗಳಿಗೆ 62,383 ಜೊತೆ ಡೆಸ್ಕ್ ಬೆಂಚ್‌ಗಳನ್ನು ಒದಗಿಸಲಾಗಿದೆ. ಕ್ಷೇತ್ರದಿಂದ ಶೇ 80ರ ಸಹಾಯಧನದಂತೆ ₹19.43 ಕೋಟಿ ವಿನಿಯೋಗಿಸಲಾಗಿದೆ. ಇದರಿಂದಾಗಿ 2.85 ಲಕ್ಷ ವಿದ್ಯಾರ್ಥಿಗಳಿಗೆ ಉತ್ತಮ ಆಸನದ ವ್ಯವಸ್ಥೆಯನ್ನು ಕಲ್ಪಿಸಿದಂತಾಗಿದೆ.

ಶುದ್ಧಗಂಗಾ ಕಾರ್ಯಕ್ರಮ:

ರಾಜ್ಯದ ವಿವಿಧೆಡೆಯಲ್ಲಿ ಫ್ಲೋರೈಡ್ ಹಾಗೂ ಅಶುದ್ಧ ನೀರಿನಿಂದಾಗಿ ಜನತೆಯ ಆರೋಗ್ಯ ಸಮಸ್ಯೆಯನ್ನು ಗಮನಿಸಿ ಕರ್ನಾಟಕದಲ್ಲಿ ಪ್ರಥಮವಾಗಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆ ಮಾಡುವ ನಿರ್ಧಾರ ಕೈಗೊಳ್ಳಲಾಯಿತು. ಇದರಂತೆ 04.10.2009ರಂದು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಯಗಟಿಯಲ್ಲಿ ಮೊದಲ ಶುದ್ಧ ಕುಡಿಯುವ ನೀರಿನ ಘಟಕವನ್ನು ಪ್ರಾರಂಭಿಸಲಾಯಿತು.

'ಶುದ್ಧಗಂಗಾ' ಎಂಬ ಹೆಸರಿನಲ್ಲಿ ಇದುವರೆಗೆ 324 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಪ್ರತೀ ಲೀಟರ್‌ಗೆ 15 ಪೈಸೆಯಂತೆ ಪ್ರತೀ ನಿತ್ಯ 81,756 ಬಳಕೆದಾರರು ಶುದ್ಧ ನೀರನ್ನು ತೆಗೆದುಕೊಂಡುಹೋಗುತ್ತಿದ್ದಾರೆ. ಈ ಕಾರ್ಯಕ್ರಮ ಜನ ಮಾನ್ಯತೆ ಪಡೆದಿದೆ. ಕ್ಷೇತ್ರದ ಈ ಮಹತ್ವಕಾಂಕ್ಷೆ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಗಳು ಕೈ ಜೋಡಿಸಿವೆ.

ಜನಮಂಗಲ ಕಾರ್ಯಕ್ರಮ:

ಕೆಲವರಿಗೆ ಹುಟ್ಟಿನಿಂದಲೇ ಕುರುಡು, ಅಂಗವಿಕಲತೆ ಸಮಸ್ಯೆಗಳು ಬಂದರೆ, ಇನ್ನು ಕೆಲವರಿಗೆ ದುರದೃಷ್ಟವಶಾತ್ ಅಪಘಾತಗಳು, ಮಾರಕ ರೋಗಗಳು ಹಾಗೂ ವಯಸ್ಸಾದಾಗ ಕಾಣಿಸಿಕೊಳ್ಳುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ಮನಗಂಡು ಪೂಜ್ಯರು ವಿಶೇಷ ಚೇತನರಿಗೆ ವಿವಿಧ ಸಲಕರಣೆಗಳನ್ನು ನೀಡುವ 'ಜನಮಂಗಲ' ಎನ್ನುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಗಾಲಿಕುರ್ಚಿ (ವೀಲ್ ಚಯರ್), ಶೌಚಾಲಯದ ಬಳಕೆಗಾಗಿ ಗಾಲಿಕುರ್ಚಿ (ಕಮೋಡ್ ವೀಲ್ ಚಯರ್), ನೀರಹಾಸಿಗೆ (ವಾಟರ್ ಬೆಡ್), ನಡುಗೋಲು (ಯು ಶೇಪ್ ವಾಕರ್), ಮೊಣಕೈ ಊರುಗೋಲು (ಎಲ್ಬೋ ಕ್ರಚಸ್), ಊರುಗೋಲು (ಆಕ್ಸಿಲರಿ ಕ್ರಚಸ್), ಏಕಕಾಲಿನ ಕೈಗೋಲು (ಸಿಂಗಲ್ ಲೆಗ್ ವಾಕಿಂಗ್ ಸ್ಟಿಕ್), ಮೂರುಕಾಲಿನ ಕೈಗೋಲು (ತ್ರಿ ಲೆಗ್ ವಾಕಿಂಗ್ ಸ್ಟಿಕ್) ಮೊದಲಾದ ಸಲಕರಣೆಗಳನ್ನು ವಿತರಿಸಲಾಗುತ್ತಿದೆ.

ಈ ಕಾರ್ಯಕ್ರಮದನ್ವಯ ಇದುವರೆಗೆ 11,124 ಫಲಾನುಭವಿಗಳಿಗೆ ಸಲಕರಣೆ ಪೂರೈಕೆ ಮಾಡಲಾಗಿದೆ.

ಅಸಹಾಯಕರಿಗೆ ಮಾಸಾಶನ:

ಅಶಕ್ತರು, ಅನಾಥರು, ನಿರ್ಗತಿಕರು, ಅಂಗವಿಕಲರು ಇಂದಿಗೂ ತಮ್ಮ ಜೀವನ ನಿರ್ವಹಣೆಗೆ ಔಷಧೋಚಾರಕ್ಕೆ ಕಷ್ಟ ಪಡುತ್ತಿರುವುದನ್ನು ಮನಗಂಡ ಪೂಜ್ಯರು ಅವರ ದಿನನಿತ್ಯದ ಜೀವನಕ್ಕಾಗಿ 'ಮಾಸಾಶನ' ಕಾರ್ಯಕ್ರಮವನ್ನು ಆರಂಭಿಸಿರುತ್ತಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಪ್ರತೀ ತಿಂಗಳು ರಾಜ್ಯದ 11,343 ಮಂದಿ ನಿರ್ಗತಿಕರು, ಅಂಗವಿಕಲರು ಹಾಗೂ ಅನಾರೋಗ್ಯ ಪೀಡಿತರು ಮುಂತಾದ ಅಸಹಾಯಕ ಕುಟುಂಬಗಳ ಆಯ್ದ ಫಲಾನುಭವಿಗಳ ಮನೆ ಬಾಗಿಲಿಗೆ ಪೀಡಿತರ ಅಗತ್ಯಕ್ಕೆ ತಕ್ಕಂತೆ ₹750 ರಿಂದ ₹3,000 ದವರೆಗೆ ಮಾಸಾಶನವನ್ನು ತಲುಪಿಸಲಾಗುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ ಇದುವರೆಗೆ 64,848 ಮಂದಿಗೆ ಒಟ್ಟು ₹50.20 ಕೋಟಿ ಮೊತ್ತದ ಮಾಸಾಶನ ಪಾವತಿಸಲಾಗಿದೆ.

ಹಾಲು ಸಂಘದ ಕಟ್ಟಡ ರಚನೆ:

ಕರ್ನಾಟಕವು ಭಾರತದಲ್ಲಿ ಹಾಲು ಉತ್ಪಾದನೆಯಲ್ಲಿ 2ನೇ ಸ್ಥಾನವನ್ನು ಪಡೆದಿದೆ. ಗ್ರಾಮೀಣಬಡವರಿಗೆ ತಮ್ಮ ದೈನಂದಿನ ಜೀವನ ನಿರ್ವಹಣೆಗೆ ಹಾಲು ಉತ್ಪಾದನೆಯೇ ಮುಖ್ಯ ಕಸುಬು.ಎಂತಹ ಸಂದರ್ಭದಲ್ಲಿಯೂ ತಮ್ಮ ಕೈಬಿಡದ ಹೈನುಗಾರಿಕೆ ಕುರಿತು ಗ್ರಾಮೀಣ ಜನರಿಗೆ ಎಲ್ಲಿಲ್ಲದ ನಂಬಿಕೆ.

ಹೈನುಗಾರಿಕೆಯನ್ನು ಅವಲಂಬಿಸಿದ ಕುಟುಂಬಗಳಿಗೆ ಸ್ಥಳೀಯ ಯೋಗ್ಯ ಮಾರುಕಟ್ಟೆ, ಮೂಲ ಸೌಕರ್ಯಗಳು ಬೇಕಾಗುತ್ತವೆ. ಇದನ್ನರಿತ ಪೂಜ್ಯ ಹೆಗ್ಗಡೆಯವರು ಹೈನುಗಾರರನ್ನು ಪ್ರೋತ್ಸಾಹಿಸುವ ಸಲುವಾಗಿ ಮುಖ್ಯವಾಗಿ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಟ್ಟಡ ನಿರ್ಮಾಣ, ಶೀತಲೀಕರಣ ಕೇಂದ್ರ, ಸಾಮೂಹಿಕ ಹಾಲು ಕರೆಯುವ ಘಟಕಗಳು, ಮಿಲ್ಕೊಟೆಸ್ಟರ್, ತೂಕದ ಯಂತ್ರಗಳ ಖರೀದಿಗೆ ಪೂರಕ ಸಹಾಯಧನ ಸಂಸ್ಥೆಯಿಂದ ನೀಡಲಾರಂಭಿಸಿದರು.

> 'ನಾಡಿನ ಸರ್ವಜನತೆಗೂ ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ಲಕ್ಷದೀಪೋತ್ಸವದ ಶುಭಾಶಯಗಳು'.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕರ್ನಾಟಕದ ಕ್ಷೀರಕ್ರಾಂತಿಯಲ್ಲಿ ಯೋಜನೆಯ ಕೊಡುಗೆಯು ಬಹು ಮುಖ್ಯ ಪಾತ್ರವಹಿಸಿದೆ ಎಂಬುದು ಉಲ್ಲೇಖನೀಯ. ಇದುವರೆಗೆ ಹಾಲು ಉತ್ಪಾದಕರ ಸಹಕಾರಿ ಸಂಘದ 3,963 ಕಟ್ಟಡಗಳಿಗೆ ಒಟ್ಟು ₹21.62 ಕೋಟಿ ಅನುದಾನ ನೀಡಲಾಗಿದೆ

ವಾತ್ಸಲ್ಯ ಕಾರ್ಯಕ್ರಮ:

ಯೋಜನೆಯ ಟ್ರಸ್ಟಿಗಳಾಗಿರುವ ಶ್ರೀಮತಿ ಹೇಮಾವತಿ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಸಮಾಜದಲ್ಲಿರುವ ಅತೀ ದುರ್ಬಲ ಮತ್ತು ಅಸಹಾಯ ಸ್ಥಿತಿಯಲ್ಲಿರುವ ಕುಟುಂಬದ ವೈಯಕ್ತಿಕ ಸರ್ವೇಕ್ಷಣೆ ನಡೆಸಿ, ಅವರಿಗೆ ಬೇಕಾಗುವ ಅತೀ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿರುವ ಕಾರ್ಯಕ್ರಮವೇ 'ವಾತ್ಸಲ್ಯ'. ಈ ಕಾರ್ಯಕ್ರಮದ ಮುಖೇನ ಸುಮಾರು 5,798 ಸದಸ್ಯರಿಗೆ ವಾತ್ಸಲ್ಯ ಕಿಟ್ ಒದಗಿಸಲಾಗಿದೆ.

ಹಿಂದೂ ರುದ್ರಭೂಮಿ ಅಭಿವೃದ್ಧಿ:

ರಾಜ್ಯದ ವಿವಿಧ ಜಿಲ್ಲೆಗಳ ಹಿಂದೂ ರುದ್ರಭೂಮಿಗಳ ದುರವಸ್ಥೆಯನ್ನು ಮನಗಂಡ ಪೂಜ್ಯ ಹೆಗ್ಗಡೆಯವರು ರುದ್ರಭೂಮಿ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮವನ್ನು ರೂಪಿಸಿದ್ದು, ಈ ತನಕ ಒಟ್ಟು ₹45.66 ಕೋಟಿ ಮೌಲ್ಯದ 550 ರುದ್ರಭೂಮಿ ಅಭಿವೃದ್ಧಿ ಕಾಮಗಾರಿಗಳಿಗೆ ₹6.76 ಕೋಟಿ ಮೊತ್ತವನ್ನು ಅನುದಾನ ರೂಪದಲ್ಲಿ ಶ್ರೀ ಕ್ಷೇತ್ರದಿಂದ ಒದಗಿಸಲಾಗಿದೆ. ಈ ಕಾರ್ಯಕ್ರಮದಿಂದಾಗಿ ರುದ್ರಭೂಮಿಗಳ ಅಭಿವೃದ್ಧಿಗಳ ಬಗ್ಗೆ ಜನಸಾಮಾನ್ಯರಲ್ಲಿ ಹೆಚ್ಚಿನ ಒಲವು ಮೂಡಿದೆ.

ಗ್ರಾಮಕಲ್ಯಾಣ ಯೋಜನೆ:

ಈ ಯೋಜನೆಯನ್ವಯ ರಾಜ್ಯದ ವಿವಿಧ ಜಿಲ್ಲೆಗಳ ಸಮುದಾಯ ಅಭಿವೃದ್ಧಿಗೆ ಸಂಬಂಧಪಟ್ಟ ಕಾಮಗಾರಿಗಳಾದ ಹಾಲು ಉತ್ಪಾದಕರ ಸಹಕಾರಿ ಸಂಘ ಕಟ್ಟಡ ರಚನೆ, ಸಮುದಾಯ ಭವನ ಕಟ್ಟಡ, ಗ್ರಂಥಾಲಯ ಕಟ್ಟಡಗಳು, ಸಾರ್ವಜನಿಕ ಶೌಚಾಲಯ, ಪಶು ಆಸ್ಪತ್ರೆ ಕಟ್ಟಡ, ಆರೋಗ್ಯ ಉಪಕೇಂದ್ರ ಕಟ್ಟಡ, ಗ್ರಾಮೀಣ ಸಂಪರ್ಕ ರಸ್ತೆ, ಕಿರು ನೀರು ಸರಬರಾಜು ಯೋಜನೆ, ಅಂಗನವಾಡಿ ಕಟ್ಟಡ ರಚನೆ, ಜಲ ವಿದ್ಯುತ್ ಯೋಜನೆ ಮೊದಲಾದವುಗಳಿಗೆ ಪೂರಕ ನೆರವು ನೀಡಲಾಗುತ್ತಿದೆ. ಈ ತನಕ ಯೋಜನೆಯನ್ವಯ ಒಟ್ಟು ₹455.17 ಕೋಟಿ ಮೌಲ್ಯದ 8,125 ಕಾಮಗಾರಿಗಳಿಗೆ ₹39.62 ಕೋಟಿ ನೆರವು ನೀಡಲಾಗಿದೆ.

ಕೃಷಿ ಯಂತ್ರಧಾರೆ:

ಕೃಷಿಯನ್ನು ಲಾಭದಾಯಕವೆಂದು ಗ್ರಾಮೀಣ ಜನತೆ ಪರಿಗಣಿಸಿದರೆ ಯುವ ಜನಾಂಗ ಕೃಷಿಯ ಕಡೆಗೆ ಆಕರ್ಷಿತರಾಗಬಹುದೆಂದು ಯೋಜನೆಯು ಕರ್ನಾಟಕ ಸರ್ಕಾರದ 'ಕೃಷಿ ಯಂತ್ರಧಾರಾ' ಕಾರ್ಯಕ್ರಮದ ಸಹಭಾಗಿಗಳಾಗಿ ಯಂತ್ರೋಪಕರಣಗಳ ಶಾಖೆಗಳನ್ನು ತೆರೆದಿರುತ್ತದೆ. ಕೃಷಿ ಉಪಕರಣಗಳ ಬಳಕೆ ಮತ್ತು ಆಧುನಿಕ ಕೃಷಿ ಪದ್ಧತಿಯನ್ನು ಪ್ರೇರೇಪಿಸಲಾಗುತ್ತಿದೆ.

ಡಾ.ಎಲ್.ಎಚ್. ಮಂಜುನಾಥ್
ಕಾರ್ಯನಿರ್ವಾಹಕ ನಿರ್ದೇಶಕರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ.

ಸುಜ್ಞಾನನಿಧಿ ಶಿಷ್ಯವೇತನ ಕಾರ್ಯಕ್ರಮ

ಬಡತನ, ಸೂಕ್ತ ಪ್ರೋತ್ಸಾಹ ಹಾಗೂ ಮಾರ್ಗದರ್ಶನ, ಮೂಲಸೌಕರ್ಯಗಳ ಕೊರತೆ, ದೂರದಲ್ಲಿರುವ ಶಿಕ್ಷಣ ಸಂಸ್ಥೆಗಳು ಮೊದಲಾದ ಕಾರಣಗಳಿಗಾಗಿ ಪ್ರತಿಭಾನ್ವಿತ ಗ್ರಾಮೀಣ ವಿದ್ಯಾರ್ಥಿಗಳು ವೃತ್ತಿ ಹಾಗೂ ತಾಂತ್ರಿಕ ಶಿಕ್ಷಣದಿಂದ ಹೊರಗುಳಿಯುವಂತಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಂಘದ ಸದಸ್ಯರ ಮಕ್ಕಳ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಅನುಕೂಲವಾಗುವಂತೆ ಎರಡು ಮತ್ತು ಮೂರು ವರ್ಷದ ಅವಧಿಯ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ₹400 ರಂತೆ ಹಾಗೂ ಮೂರು ವರ್ಷಗಳಿಗೂ ಮೇಲ್ಪಟ್ಟ ಅವಧಿಗೆ ಮಾಸಿಕ ₹1,000 ದಂತೆ ಶಿಷ್ಯವೇತನ ಪಾವತಿಸಲಾಗುತ್ತಿದೆ. ಒಬ್ಬ ಸಾಮಾನ್ಯ ಬಡಕುಟುಂಬದಿಂದ ಬಂದ ವಿದ್ಯಾರ್ಥಿಯೂ ಉನ್ನತ ಶಿಕ್ಷಣ ಪಡೆಯಬಹುದೆಂದು ಈ ಕಾರ್ಯಕ್ರಮ ನಿರೂಪಿಸಿದೆ. ಈ ಕಾರ್ಯಕ್ರಮದಡಿಯಲ್ಲಿ ಇದುವರೆಗೆ 39,537 ವಿದ್ಯಾರ್ಥಿಗಳಿಗೆ ₹54.83 ಕೋಟಿ ಮೊತ್ತ ಶಿಷ್ಯವೇತನ ಒದಗಿಸಲಾಗಿದೆ.

ಜ್ಞಾನದೀಪ ಶಾಲಾ ಶಿಕ್ಷಣ ಕಾರ್ಯಕ್ರಮ

ಜ್ಞಾನದೀಪದ ಮೂಲಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಲು, ಮೂಲ ಸೌಲಭ್ಯಗಳನ್ನು ನಿರ್ಮಿಸಲು ಮತ್ತು ಕಲಿಕಾ ವಾತಾವರಣ ನಿರ್ಮಾಣಕ್ಕೆ ಪ್ರಯತ್ನಿಸಲಾಗಿದೆ.

- ಶಿಕ್ಷಕರ ಕೊರತೆ ಇರುವ ಸರ್ಕಾರಿ ಹಾಗೂ ಆಯ್ದ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಸ್ವಯಂಸೇವಕ ಶಿಕ್ಷಕ/ಶಿಕ್ಷಕಿಯರನ್ನು ಒದಗಿಸಿ, ಸಂಸ್ಥೆಯ ವತಿಯಿಂದ ನೆರವು ನೀಡಲಾಗುತ್ತಿದೆ. ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ಸೇರ್ಪಡೆಗೊಳಿಸುವುದು ಹಾಗೂ ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಶ್ರಮಿಸಲಾಗಿರುತ್ತದೆ.
- ಕಿರಿಯ ಪ್ರಾಥಮಿಕ ಮಟ್ಟದ ನಾಲ್ಕನೇ ತರಗತಿ ಮುಗಿದ ಬಳಿಕ ಶಾಲೆ ಬಿಡುವವರ ಮನವೊಲಿಸಿ, ಹಿರಿಯ ಪ್ರಾಥಮಿಕ ಶಾಲೆಗೆ ಸೇರ್ಪಡೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ಪ್ರತೀ ವಿದ್ಯಾರ್ಥಿಯೂ ಹತ್ತನೇ ತರಗತಿ ತನಕವಾದರೂ ಪೂರ್ಣ ವಿದ್ಯಾಭ್ಯಾಸ ಪಡೆಯಲು ಪ್ರೇರಣೆ ನೀಡುವಂತೆ ಹೆತ್ತವರ ಮನವೊಲಿಸಲಾಗಿದೆ.
- ಇದರಂತೆ ಪ್ರಸ್ತುತ ವರ್ಷ 750 ಸ್ವಯಂಸೇವಕರನ್ನು ರಾಜ್ಯದ ವಿವಿಧ ಶಿಕ್ಷಣದ ಕೊರತೆಯಿರುವ ಶಾಲೆಗಳಿಗೆ ನಿಯೋಜನೆ ಮಾಡಿದೆ.

ಈ ಕಾರ್ಯಕ್ರಮದಡಿ ಶಾಲಾ ಕಟ್ಟಡ ರಚನೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸಂಪರ್ಕ, ಶಾಲಾ ಶೌಚಾಲಯಗಳ ರಚನೆ, ಶಾಲಾ ಕಟ್ಟಡ ದುರಸ್ತಿ, ಶಾಲಾ ಆವರಣ ನಿರ್ಮಾಣ, ಶಾಲಾ ಆಟದ ಮೈದಾನ ರಚನೆ ಮತ್ತು ಬೋಧನಾಸಾಮಗ್ರಿ ಮತ್ತು ಕ್ರೀಡಾ ಸಾಮಗ್ರಿಗಳ ಒದಗಿಸಲಾಗಿದೆ. ಈ ಕಾರ್ಯಕ್ರಮದಡಿ ಶೇ 80 ರಷ್ಟು ಸರ್ಕಾರಿ ಹಾಗೂ ಶೇ 20 ರಷ್ಟು ಅನುದಾನಿತ ಶಾಲೆಗಳಿಗೆ ಅನುದಾನ ನೀಡಲಾಗುತ್ತಿದೆ.

ನಮ್ಮೂರು ನಮ್ಮ ಕೆರೆ ಕಾರ್ಯಕ್ರಮ

'ಶೌರ್ಯ' ವಿಪತ್ತು ನಿರ್ವಹಣಾ ಕಾರ್ಯಕ್ರಮ

ಅನಿರೀಕ್ಷಿತವಾಗಿ ನೈಸರ್ಗಿಕವಾಗಿ ಉಂಟಾಗುವ ಅತಿವೃಷ್ಟಿ, ಪ್ರವಾಹ,ಭೂಕುಸಿತ, ದುರಂತ, ಅಪಘಾತಗಳ ಸಂದರ್ಭದಲ್ಲಿ ಉಂಟಾಗುವ ಪರಿಸ್ಥಿತಿಯ ತುರ್ತು ರಕ್ಷಣೆಗೆಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಸ್ವಯಂ ಸೇವಕರನ್ನು ಒಳಗೊಂಡ 'ಶೌರ್ಯ' ಸಮಿತಿಯನ್ನು ಯೋಜನೆಯು ಆರಂಭಿಸಿರುತ್ತದೆ.

ವಿಪತ್ತು ನಿರ್ವಹಣ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ಜನಜಾಗೃತಿ ವೇದಿಕೆ, ಪ್ರಗತಿಬಂಧು ಒಕ್ಕೂಟಗಳು, ಜ್ಞಾನವಿಕಾಸ ಕೇಂದ್ರಗಳು, ಸ್ವಸಹಾಯ ಸಂಘಗಳು ಜಂಟಿ ಬಾಧ್ಯತಾ ಗುಂಪುಗಳಿಂದ ಆಯ್ದ ಸದಸ್ಯರ ತಂಡವನ್ನು ತಾಲ್ಲೂಕು ಮಟ್ಟದಲ್ಲಿ ರಚಿಸಿ, ಇವರಿಗೆ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯಿಂದ ತರಬೇತಿ ನೀಡಲಾಗಿದೆ. ಕಾರ್ಯಾಚರಣೆಯನ್ನು ನಿರ್ವಹಿಸಲು ಬೇಕಾಗುವ ಲೈಫ್‌ಜಾಕೆಟ್, ಲ್ಯಾಡರ್, ಸ್ಟ್ರೆಚರ್, ಫೈಯರ್ ಎಕ್ಸಟಿಂಗ್ವಿಶರ್, ಸೇಫ್ಟಿ ಹೆಲ್ಮೇಟ್, ಫಸ್ಟ್ ಏಯ್ಡ್ ಕಿಟ್ ಇತ್ಯಾದಿ ಎಲ್ಲ ಪರಿಕರಗಳನ್ನು ಒಳಗೊಂಡಿರುತ್ತದೆ. ಯಾವುದೇ ಅವಘಢಗಳು ಸಂಭವಿಸಿದಾಗ ಈ ತಂಡವು ಕೂಡಲೇ ಸ್ಪಂದನೆಯನ್ನು ನೀಡುತ್ತದೆ.

|| ಓಂ ಶ್ರೀ ಮಂಜುನಾಥಾಯ ನಮಃ || || ಓಂ ಶ್ರೀ ಚಂದ್ರನಾಥಾಯ ನಮಃ ||

ಶ್ರೀ ಕ್ಷೇತ್ರ ಧರ್ಮಸ್ಥಳ

ಲಕ್ಷದೀಪೋತ್ಸವ



ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಕಾಲಾವಧಿಯಂತೆ ಶ್ರೀ ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ಜರಗುವ ಲಕ್ಷದೀಪೋತ್ಸವವು

ತಾ. 29-11-2021 ರಿಂದ ತಾ. 03-12-2021ರ ವರೆಗೆ ನಡೆಯಲಿದ್ದು

ಡಿಸೆಂಬರ್ 02 ಮತ್ತು 03ರಂದು 89ನೇ ವರ್ಷದ

ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳು ನಡೆಯಲಿವೆ.

ಧಾರ್ಮಿಕ ಕಾರ್ಯಕ್ರಮಗಳು ಪ್ರತಿದಿನ ರಾತ್ರಿ ಗಂಟೆ 9-00ರ ನಂತರ

29-11-2021	ಸೋಮವಾರ	ಹೊಸಕಟ್ಟೆ ಉತ್ಸವ
30-11-2021	ಮಂಗಳವಾರ	ಕೆರೆಕಟ್ಟೆ ಉತ್ಸವ
01-12-2021	ಬುಧವಾರ	ಲಲಿತೋದ್ಯಾನ ಉತ್ಸವ
02-12-2021	ಗುರುವಾರ	ಕಂಚಿಮಾರು ಕಟ್ಟೆ ಉತ್ಸವ
03-12-2021	ಶುಕ್ರವಾರ	ಗೌರಿಮಾರು ಕಟ್ಟೆ ಉತ್ಸವ
04-12-2021	ಶನಿವಾರ	ಶ್ರೀ ಚಂದ್ರನಾಥ ಸ್ವಾಮಿ ಸಮವಸರಣ ಪೂಜೆ

ಲಲಿತಕಲಾಗೋಷ್ಠಿ

ದಿನಾಂಕ : 01-12-2021ನೇ ಬುಧವಾರ ಸ್ಥಳ : 'ಅಮೃತವರ್ಷಿಣಿ' ಸಭಾಭವನ

ಸಂಜೆ ಗಂಟೆ 5.30 ರಿಂದ 7.00
ವಾದ್ಯಗೋಷ್ಠಿ

ಸಂಜೆ ಗಂಟೆ 7.00 ರಿಂದ 8.30
ತತ್ವಸಿಂಚನ - ಗಾಯನ ಡಾ. ಪದ್ಮಿನಿ ಓಕ್ ಮತ್ತು ತಂಡದವರಿಂದ, ಬೆಂಗಳೂರು

ರಾತ್ರಿ ಗಂಟೆ 8.30 ರಿಂದ 10.00
ನೃತ್ಯರೂಪಕ - ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ(ರಿ.), ಬೆಂಗಳೂರು

LIVE ಶ್ರೀ ಕ್ಷೇತ್ರದ ಅಧಿಕೃತ ಯುಟ್ಯೂಬ್ ಮತ್ತು ಫೇಸ್‌ಬುಕ್
YouTube www.youtube.com/c/SriKshetraDharmasthalaManjunatha
facebook.com/Sri.Kshetra.Dharmasthala.Manjunatha
ನಮ್ಮ ಕುಡ್ಲ ಮಂಗಳೂರು ಯುಪ್ಲಸ್ ಚಾನೆಲ್ ಉಜಿರೆ

ವಿ.ಸೂ.: ಕೊರೊನಾ ತಡೆ ಬಗ್ಗೆ ಎಲ್ಲಾ ಸಾರ್ವಜನಿಕರು ಸರ್ಕಾರದ ಮಾರ್ಗಸೂಚಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ಸರ್ವಧರ್ಮ ಸಮ್ಮೇಳನ 02-12-2021ನೇ ಗುರುವಾರ | ಸ್ಥಳ : 'ಅಮೃತವರ್ಷಿಣಿ' ಸಭಾಭವನ | ಸಮಯ : ಸಂಜೆ ಗಂಟೆ 5-00ರಿಂದ

ಉದ್ಘಾಟಕರು : ಶ್ರೀಯುತ ಥಾವರ್ ಚಂದ್ ಗೆಹ್ಲೋಟ್, ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ
ಅಧ್ಯಕ್ಷತೆ : ಪ್ರೊ. ರಾಮಚಂದ್ರ ಜಿ. ಭಟ್ಟ, ವಿಶ್ರಾಂತ ಕುಲಪತಿಗಳು, ಎಸ್. ವ್ಯಾಸ ಯೋಗ ವಿಶ್ವವಿದ್ಯಾಲಯ, ಬೆಂಗಳೂರು
ಉಪನ್ಯಾಸಕರು : ಡಾ. ಸರ್ಫ್ರಾಜ್ ಚಂದ್ರಗುತ್ತಿ, ಪ್ರಾಧ್ಯಾಪಕರು ಮತ್ತು ಸಾಹಿತಿಗಳು, ಸಾಗರ
: ಡಾ. ಎಂ.ಎಸ್. ಪದ್ಮ, ವಿಶ್ರಾಂತ ಪ್ರಾಧ್ಯಾಪಕರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ
: ವಂದನೀಯ ಫಾದರ್ ವೀರೇಶ್ ವಿ. ಮೊರಾಸ್, ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕ್ರೈಸ್ತ ಧರ್ಮಪ್ರಾಂತ್ಯ, ಶಿವಮೊಗ್ಗ

ಸಾಂಸ್ಕೃತಿಕ ಕಾರ್ಯಕ್ರಮಗಳು
ರಾತ್ರಿ ಗಂಟೆ 8-00 ರಿಂದ 9-30 - ಶಾಸ್ತ್ರೀಯ ಸಂಗೀತ ಶ್ರೀಕೃಷ್ಣ ಮೋಹನ್ ಮತ್ತು ಶ್ರೀ ರಾಮ್ ಕುಮಾರ್ ಮೋಹನ್ (ತ್ರಿಶೂರ್ ಬ್ರದರ್ಸ್), ತ್ರಿಶೂರ್
ರಾತ್ರಿ ಗಂಟೆ 9-30 ರಿಂದ 11-00 - ಪುಣ್ಯಭೂಮಿಭಾರತ - ನುಡಿನಾದನಾಟ್ಯಾಮೃತ ರಾಷ್ಟ್ರದೇವೋಭವ ಖ್ಯಾತಿಯ ಸನಾತನ ನಾಟ್ಯಾಲಯ, ಮಂಗಳೂರು

ಸಾಹಿತ್ಯ ಸಮ್ಮೇಳನ 03-12-2021ನೇ ಶುಕ್ರವಾರ | ಸ್ಥಳ : 'ಅಮೃತವರ್ಷಿಣಿ' ಸಭಾಭವನ | ಸಮಯ : ಸಂಜೆ ಗಂಟೆ 5-00ರಿಂದ

ಉದ್ಘಾಟಕರು : ಡಾ. ಕೆ. ಸುಧಾಕರ್, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಅಧ್ಯಕ್ಷತೆ : ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಹಿರಿಯ ಸಾಹಿತಿಗಳು, ವಿಶ್ರಾಂತ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
ಉಪನ್ಯಾಸಕರು : ಡಾ. ಗಜಾನನ ಶರ್ಮ, ಸಾಹಿತಿಗಳು ಹಾಗೂ ವಿಶ್ರಾಂತ ಅಧೀಕ್ಷಕ ಇಂಜಿನಿಯರ್, ಸಾಗರ
ಡಾ. ಪಿ. ಚಂದ್ರಿಕಾ, ಕಿರುಚಿತ್ರ ನಿರ್ದೇಶಕರು ಹಾಗೂ ಸಾಹಿತಿಗಳು, ಚಳ್ಳಕೆರೆ, ಚಿತ್ರದುರ್ಗ
ಡಾ. ಕೆ. ಪಿ. ಪುತ್ತೂರಾಯ, ವಿಶ್ರಾಂತ ನಿರ್ದೇಶಕರು, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಸಾಂಸ್ಕೃತಿಕ ಕಾರ್ಯಕ್ರಮಗಳು
ರಾತ್ರಿ ಗಂಟೆ 8-00 ರಿಂದ 10-00 - ನೃತ್ಯಸಂಭ್ರಮ ಸಪ್ತಸ್ವರ ಆರ್ಟ್ಸ್ ಮತ್ತು ಕ್ರಿಯೇಷನ್ಸ್ ಕಲಾವಿದರು, ಬೆಂಗಳೂರು
ನಿರ್ದೇಶನ : ಶ್ರೀಮತಿ ಮಂಜುಳಾ ಪರಮೇಶ್
ರಾತ್ರಿ ಗಂಟೆ 10-00 ರಿಂದ 11-30 - ಗಾನಲಹರಿ ಶ್ವೇತಾ ದೇವನಹಳ್ಳಿ ಮತ್ತು ತಂಡದವರು

manjushri printers ujire

ನಿಮಗೆ ಆದರದ ಆಮಂತ್ರಣ
ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಅಧ್ಯಕ್ಷರು, ಸ್ವಾಗತ ಸಮಿತಿ, ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು, ಧರ್ಮಸ್ಥಳ – 574 216, ದ.ಕ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಎಲ್ಲ ಗುರಿಗಳ ಗುರಿಯು ಸಂತೋಷವೇ ಆಗಿರುತ್ತದೆ. ನಮ್ಮ ಭಾವನೆಗಳು ಸಂತೋಷದ ಗುರಿಯೆಡೆಗಿನ ಆ ಪ್ರಯಾಣದ ರಸ್ತೆ ಸೂಚಕಗಳು ಇದ್ದಂತೆ. -ದೀಪಕ್ ಚೋಪ್ರಾ

ಆರೋಗ್ಯ ಸ್ಥಿತಿಗತಿ: ಆಗಬೇಕಿದೆ ಸುಧಾರಣೆ, ಬೇಕು ಬದ್ಧತೆ

ಮಕ್ಕಳನ್ನು ಪಡೆಯುವ ಒಟ್ಟು ಫಲವಂತಿಕೆ ದರವು (ಟೋಟಲ್ ಫರ್ಟಿಲಿಟಿ ರೇಟ್– ಟಿಎಫ್‌ಆರ್) ದೇಶದಲ್ಲಿ 2.2ರಿಂದ 2ಕ್ಕೆ ಕುಸಿದಿದೆ. ಇದು, ಜನಸಂಖ್ಯಾ ಸ್ಥಿರತೆಯ ತಡೆಯ ಸೂಚಕವಾಗಿದೆ. ಹೊಸ ತಲೆಮಾರಿನ ಸೃಷ್ಟಿಗೆ ಅಪೇಕ್ಷಣೀಯವಾದ ದರಕ್ಕಿಂತಲೂ (2.1) ಟಿಎಫ್‌ಆರ್‌ನ ಪ್ರಮಾಣ ಈಗ ಕಡಿಮೆ ಆಗಿದೆ. ಇದರಿಂದ ದೀರ್ಘಾವಧಿಯಲ್ಲಿ ಆಗಬಹುದಾದ ಪರಿಣಾಮಗಳನ್ನು ಎದುರಿಸಲು ಯೋಜನೆಗಳನ್ನು ರೂಪಿಸಬೇಕು. 2015-16ರಲ್ಲಿ ಟಿಎಫ್‌ಆರ್ 2.2ರಷ್ಟು ಇತ್ತು. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್)–5ರ ಎರಡನೇ ಹಂತದ ವರದಿಯು ಈಚೆಗಷ್ಟೇ ಬಿಡುಗಡೆಯಾಗಿದ್ದು, ಟಿಎಫ್‌ಆರ್ ಮಾತ್ರವಲ್ಲದೆ ಮಕ್ಕಳು ಮತ್ತು ಮಹಿಳೆಯರು ಎದುರಿಸುತ್ತಿರುವ ರಕ್ತಹೀನತೆ ಸೇರಿದಂತೆ ಹಲವು ಮಹತ್ವದ ಆರೋಗ್ಯ ಸಮಸ್ಯೆಗಳ ಮೇಲೂ ಈ ವರದಿ ಬೆಳಕು ಚೆಲ್ಲಿದೆ. ಟಿಎಫ್‌ಆರ್ ಅನ್ನು ಸುಲಭವಾಗಿ ಅರ್ಥೈಸಿ ಹೇಳುವುದಾದರೆ, ಇದು ಸಂತಾನೋತ್ಪತ್ತಿ ವಯೋಮಾನದ ಪ್ರತಿಯೊಬ್ಬ ಮಹಿಳೆಯು ಮಕ್ಕಳನ್ನು ಪಡೆಯುವ ಸರಾಸರಿ ಸಾಮರ್ಥ್ಯದ ಸೂಚ್ಯಂಕ. ದೇಶದ ಒಟ್ಟು ಜನನ ಪ್ರಮಾಣವನ್ನು, ಸಂತಾನೋತ್ಪತ್ತಿ ವಯೋಮಾನದ ಒಟ್ಟು ಮಹಿಳೆಯರ ಸಂಖ್ಯೆಯೊಂದಿಗೆ ತಾಳೆ ಮಾಡಿ ಫಲವಂತಿಕೆ ದರವನ್ನು ಲೆಕ್ಕ ಹಾಕಲಾಗುತ್ತದೆ. ಫಲವಂತಿಕೆ ದರ 2 ಎಂದರೆ ಸಂತಾನೋತ್ಪತ್ತಿ ವಯೋಮಾನದ ಪ್ರತೀ ಮಹಿಳೆ ಸರಾಸರಿ ಇಬ್ಬರು ಮಕ್ಕಳನ್ನು ಪಡೆಯುವ ಸಾಮರ್ಥ್ಯ ಹೊಂದಿದ್ದಾಳೆ ಎಂದರ್ಥ. ನಗರ ಮತ್ತು ಗ್ರಾಮಾಂತರ ಭಾಗದ ಮಹಿಳೆಯರ ನಡುವೆ ಈ ಸಾಮರ್ಥ್ಯದಲ್ಲಿ ತೀವ್ರ ವ್ಯತ್ಯಾಸ ಇರುವುದು ಕೂಡ ಸಮೀಕ್ಷೆಯಲ್ಲಿ ಎದ್ದು ಕಂಡಿದೆ. ಗ್ರಾಮಾಂತರ ಭಾಗದಲ್ಲಿ ಟಿಎಫ್‌ಆರ್ 2.1ರಷ್ಟಿದ್ದರೆ, ನಗರ ಪ್ರದೇಶದಲ್ಲಿ ಆ ಪ್ರಮಾಣ 1.6ರಷ್ಟಿದೆ.

ಎನ್‌ಎಫ್‌ಎಚ್‌ಎಸ್–5ರ ಮೊದಲ ಹಂತದ ವರದಿ 2020ರ ಡಿಸೆಂಬರ್‌ನಲ್ಲಿಯೇ ಬಿಡುಗಡೆ ಆಗಿತ್ತು. ಆ ಹಂತದಲ್ಲಿ ಸಮೀಕ್ಷೆಗೆ ಒಳಗಾಗಿದ್ದ ಕರ್ನಾಟಕದಲ್ಲಿ ಟಿಎಫ್‌ಆರ್ 1.7ಕ್ಕೆ ಕುಸಿದಿದೆ. 'ದೇಶದಾದ್ಯಂತ ಟಿಎಫ್‌ಆರ್ ಕುಸಿತಕ್ಕೆ ಗರ್ಭನಿರೋಧಕಗಳ ಬಳಕೆ ಪ್ರಮಾಣ ಹೆಚ್ಚಿರುವುದೇ ಪ್ರಮುಖ ಕಾರಣ. ಗರ್ಭನಿರೋಧಕಗಳನ್ನು ಬಳಕೆ ಮಾಡುವವರ ಪ್ರಮಾಣ ಕಳೆದ ನಾಲ್ಕು ವರ್ಷಗಳಲ್ಲಿ ಶೇ 54ರಿಂದ ಶೇ 67ಕ್ಕೆ ಹೆಚ್ಚಿದೆ' ಎಂದೂ ಸಮೀಕ್ಷೆ ಹೇಳಿದೆ. ಆದರೆ, ತಜ್ಞರು ಗುರುತಿಸಿರುವ ಕಾರಣಗಳು ಬೇರೆ ಇವೆ. ದಿನದಿಂದ ದಿನಕ್ಕೆ ಒತ್ತಡವನ್ನು ಹೆಚ್ಚಿಸುತ್ತಿರುವ ನಗರ ಜೀವನ, ತುಂಬಾ ವಿಳಂಬವಾಗಿ ನಡೆಯುವ ಮದುವೆ, ಬದಲಾದ ಜೀವನಶೈಲಿ, ಮಕ್ಕಳನ್ನು ಪಡೆಯಲು ದಂಪತಿಗಳಲ್ಲಿ ಹೆಚ್ಚುತ್ತಿರುವ ನಿರಾಸಕ್ತಿ, ತೀವ್ರಗೊಳ್ಳುತ್ತಿರುವ ಬಂಜೆತನದ ಪ್ರಮಾಣದಂತಹವು ಫಲವಂತಿಕೆ ದರ ಕುಸಿಯಲು ಕಾರಣಗಳು ಎಂದು ತಜ್ಞರು ಹೇಳುತ್ತಾರೆ. ಸರ್ಕಾರ–ಸಮಾಜ ಎರಡೂ ಕುರಿತು ಗಂಭೀರವಾಗಿ ಯೋಚಿಸಬೇಕಾದ ಸಂಗತಿಗಳು ಇವು.

ದೇಶದಲ್ಲಿ ಆರೋಗ್ಯ ಸ್ಥಿತಿಗತಿ ಉತ್ತಮವಾಗಿಲ್ಲ ಎಂಬುದನ್ನು ಸಮೀಕ್ಷೆಯ ವರದಿಯಲ್ಲಿರುವ ಕೆಲವು ಪ್ರಮುಖ ಅಂಶಗಳು ತೋರಿಸುತ್ತವೆ. ಆರೋಗ್ಯ ಇಲಾಖೆಯು ಎಚ್ಚೆತ್ತು ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಜರುಗಿಸಬೇಕು

ಎನ್‌ಎಫ್‌ಎಚ್‌ಎಸ್‌ನ ವರದಿ ಕುರಿತ ಚರ್ಚೆಯನ್ನು ಫಲವಂತಿಕೆ ದರದ ಕುಸಿತಕ್ಕೆ ಮಾತ್ರ ಸೀಮಿತಗೊಳಿಸಬಾರದು. ಕೌಟುಂಬಿಕ ಹಿಂಸೆ ತಡೆಯಲು ಎಷ್ಟೆಲ್ಲ ಕಾಯ್ದೆಗಳನ್ನು ರೂಪಿಸಿದರೂ ವಿವಾಹಿತ ಮಹಿಳೆಯರ ಮೇಲಿನ ಹಿಂಸೆಯ ಪ್ರಮಾಣವು ಶೇ 31.2ರಿಂದ ಶೇ 29.3ಕ್ಕೆ ಅಲ್ಪ ಕುಸಿತ ಕಂಡಿದೆ. ಶೇ 3.1ರಷ್ಟು ಗರ್ಭಿಣಿಯರೂ ಹಿಂಸೆಗೆ ಒಳಗಾಗಿದ್ದಾರೆ. ಹದಿನೆಂಟರ ಹರೆಯದ ಶೇ 1.5ರಷ್ಟು ಯುವತಿಯರು ಲೈಂಗಿಕ ದೌರ್ಜನ್ಯ ಅನುಭವಿಸಿದ್ದಾರೆ. ಮಕ್ಕಳಲ್ಲಿನ ಅಪೌಷ್ಟಿಕತೆ ಸಮಸ್ಯೆಯನ್ನು ನೀಗಿಸುವ ದಿಸೆಯಲ್ಲಿ ಕೂಡ ಹೆಚ್ಚಿನ ಪ್ರಗತಿ ಸಾಧಿಸಲಾಗಿಲ್ಲ. ಮಕ್ಕಳಲ್ಲಿನ ಅಪೌಷ್ಟಿಕತೆಯು ಶೇ 38ರಿಂದ ಶೇ 36ಕ್ಕೆ ಕುಸಿತವಾಗಿದೆ ಅಷ್ಟೆ. ಶೇ 50ರಷ್ಟು ಮಹಿಳೆಯರನ್ನು ರಕ್ತಹೀನತೆ ಈಗಲೂ ಕಾಡುತ್ತಿದೆ. ಕಬ್ಬಿಣಾಂಶದ ಮಾತ್ರೆಗಳನ್ನು ವಿತರಿಸಿದರೂ ರಕ್ತಹೀನತೆ ಸಮಸ್ಯೆ ಹಾಗೇ ಉಳಿದಿದ್ದೇಕೆ ಎಂಬ ಪ್ರಶ್ನೆ ಕಾಡುತ್ತಿದೆ. ದೇಶದಲ್ಲಿ ಆರೋಗ್ಯ ಸ್ಥಿತಿಗತಿ ಉತ್ತಮವಾಗಿಲ್ಲ ಎಂಬುದನ್ನು ಸಮೀಕ್ಷೆಯ ವರದಿಯಲ್ಲಿರುವ ಪ್ರಮುಖ ಅಂಶಗಳು ತೋರಿಸುತ್ತವೆ. ಆರೋಗ್ಯ ಇಲಾಖೆಯು ಕುಂಭಕರ್ಣ ನಿದ್ರೆಯಿಂದ ಎಚ್ಚರಗೊಳ್ಳಬೇಕು. ರಕ್ತಹೀನತೆ–ಅಪೌಷ್ಟಿಕತೆ ಸಮಸ್ಯೆ ನೀಗಿಸಲು ಈವರೆಗೆ ತಾನು ಕೈಗೊಂಡ ಕ್ರಮ ಏನೇನೂ ಸಾಲದು ಎಂಬುದನ್ನು ಅರಿತು, ಸಮಸ್ಯೆಯ ಮೂಲೋತ್ಪಾಟನೆಗೆ ಸಮರ್ಪಕ ಯೋಜನೆ ರೂಪಿಸಿ, ಕಟಿಬದ್ಧವಾಗಿ ಆ ಇಲಾಖೆ ಕೆಲಸ ಮಾಡಬೇಕು. ಕೌಟುಂಬಿಕ ಹಿಂಸೆಯನ್ನು ತಹಬಂದಿಗೆ ತರಲು ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಸೂಕ್ತ ದಾರಿಯನ್ನು ಕಂಡುಕೊಳ್ಳಬೇಕು.

ದಿನದ ಟ್ವೀಟ್

ತಪ್ಪು ಯಾರದು?

ಮದುವೆ, ಸಾವಿಗೆ ದುಡ್ಡು. ಗಂಡಸರಿಗೆ ಉಚಿತ ಶಬರಿಮಲೆ ಯಾತ್ರೆ, ಹೆಂಗಸರಿಗೆ ಉಚಿತ ಮೇಲ್ಮರುವತ್ತೂರು ಯಾತ್ರೆ. ಕರ್ನಾಟಕ ರಾಜ್ಯೋತ್ಸವ, ಅಣ್ಣಮ್ಮ, ಗಣೇಶ ಹಬ್ಬದ ಖರ್ಚು. ಇನ್ನು ಅಭಿಮಾನಿಗಳ ಹುಟ್ಟುಹಬ್ಬ ಆಚರಣೆಗಳ ಖರ್ಚು... ಹೀಗೆ ಜನರಿಂದ ಜನಪ್ರತಿನಿಧಿಗೆ ಬೇಡಿಕೆಯ ಲಿಸ್ಟ್. ಆತನು ಪರ್ಸೆಂಟೇಜ್ ಹಣ ಪಡೆದೇ ಪೂರೈಸುವ ಅನಿವಾರ್ಯ. ತಪ್ಪು ಯಾರದು?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆ– 2021 ಅನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು ಮತ್ತು ಯಾವುದೇ ಚರ್ಚೆಯಿಲ್ಲದೆ ಅಂಗೀಕರಿಸಲಾಯಿತು! ನಮ್ಮ ಪ್ರಜಾಸತ್ತಾತ್ಮಕ ಗುಣಲಕ್ಷಣಗಳು ಮತ್ತು ಸಂಸದೀಯ ನಡಾವಳಿಗಳನ್ನು ಕ್ರಮೇಣ ಹತ್ತಿಕ್ಕುವುದನ್ನು ಬಿಜೆಪಿಯು ಮುಂದುವರಿಸಿದೆ. ಬಿಜೆಪಿ ನೇತೃತ್ವದ ಸರ್ಕಾರವು ಚರ್ಚೆಯಿಂದ ಹಿಂದೆ ಸರಿಯುತ್ತಿರುವುದೇಕೆ?

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 30-11-1996

• ಪಟೇಲ್ ಬದಲಾವಣೆಗೆ ದಳ ಭಿನ್ನರ ಪಟ್ಟು

ಬೆಂಗಳೂರು, ನ. 29– 'ರಾಜ್ಯದಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲರ ನಾಯಕತ್ವ ಬದಲಾಗಬೇಕು; ಇದು ನಮ್ಮ ಬಿಡದ ಪಟ್ಟು' ಹೀಗೆಂದವರು ಭಿನ್ನಮತೀಯ ಗುಂಪಿನ ನಾಯಕರಾದ ವೈಜನಾಥ ಪಾಟೀಲ್.

'ಈ ಬಾರಿ ನಾಯಕತ್ವದಲ್ಲಿ ಬದಲಾವಣೆ ಆಗಬೇಕು ಎಂಬ ವಿಚಾರದಲ್ಲಿ ಯಾವುದೇ ರಾಜಿಯೂ ಇಲ್ಲ. ಅದಕ್ಕೆಂದೇ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಒತ್ತಾಯಿಸಿ ಮನವಿ ಕೊಟ್ಟಿದ್ದೇವೆ. ಈ ಸಭೆ ಕರೆಯುವಂತೆ ಒತ್ತಾಯಿಸುವುದು ಶಾಸಕರಾಗಿ ನಮ್ಮ ಹಕ್ಕು. ಅದನ್ನು ಯಾರೂ ಪ್ರಶ್ನಿಸುವಂತಿಲ್ಲ' ಎಂದು ಅವರು ಈ ಸಂಬಂಧ ಕೇಳಿಬಂದಿರುವ ಟೀಕೆಗೆ ಪ್ರತಿಕ್ರಿಯಿಸಿದರು.

ಶಾಸಕಾಂಗ ಪಕ್ಷದ ನಾಯಕತ್ವದಲ್ಲಿ ಅವಿಶ್ವಾಸ ವ್ಯಕ್ತಪಡಿಸಿ ಶಾಸಕಾಂಗದ ಸಭೆ ಕರೆಯುವಂತೆ ಮುಖ್ಯಮಂತ್ರಿ ಜೆ.ಎಚ್. ಪಟೇಲರನ್ನು ಒತ್ತಾಯಿಸಿರುವ 23 ಶಾಸಕರೊಂದಿಗೆ ಚರ್ಚಿಸಿ ಸಮಸ್ಯೆಗೆ ಪರಿಹಾರೋಪಾಯ ರೂಪಿಸುವುದಕ್ಕಾಗಿ ರಚನೆ ಆಗಿದೆ ಎನ್ನಲಾದ ಸಚಿವ ಸಮಿತಿಯ ವಿಚಾರ ತಮಗೆ ಇನ್ನೂ ಅಧಿಕೃತವಾಗಿ ಗೊತ್ತಾಗಿಲ್ಲ ಎಂದರು.

• ಸರ್ವನದಿ ಸಂಪರ್ಕ ಅಧ್ಯಯನಕ್ಕೆ ಸಮಿತಿ ರಚನೆ: ಪ್ರಧಾನಿ

ನವದೆಹಲಿ, ನ. 29 (ಪಿಟಿಐ)– ದೇಶದ ಪ್ರಮುಖ ನದಿಗಳನ್ನು ಸೇರಿಸಿ ಕೊರತೆಯುಳ್ಳ ಪ್ರದೇಶಗಳಿಗೆ ನೀರು ಪೂರೈಸುವ ಬಗೆಗೆ ಅಧ್ಯಯನ ನಡೆಸಲು ತಜ್ಞರ ಸಮಿತಿಯೊಂದನ್ನು ಕೇಂದ್ರ ಸರ್ಕಾರ ರಚಿಸಿದೆ ಎಂದು ಪ್ರಧಾನಿ ಎಚ್.ಡಿ. ದೇವೇಗೌಡರು ಇಂದು ಲೋಕಸಭೆಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 30-11-1971

• ಕಾಂಗ್ರೆಸ್ ಭವನಕ್ಕೆ ಬೀಗಮುದ್ರೆ

ಬೆಂಗಳೂರು, ನ. 29– ಇಂದು ಮಧ್ಯಾಹ್ನ ಆಡಳಿತ ಕಾಂಗ್ರೆಸ್ಸಿನ ಯುವ ಕಾಂಗ್ರೆಸ್ಸಿಗರು ಅನಿರೀಕ್ಷಿತವಾಗಿ ವಶಕ್ಕೆ ತೆಗೆದುಕೊಂಡ ಸಂಸ್ಥಾ ಕಾಂಗ್ರೆಸ್ ಭವನಕ್ಕೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ಆಜ್ಞೆಯಂತೆ ರಾತ್ರಿ ಪೊಲೀಸರು ಬೀಗಮುದ್ರೆ ಹಾಕಿದರು.

ವಿದೇಶ ಪ್ರವಾಸದಿಂದ ಹಿಂದಿರುಗಿದ ಆಡಳಿತ ಕಾಂಗ್ರೆಸ್ಸಿನ ಪ್ರದೇಶ ಸಮಿತಿ ಅಧ್ಯಕ್ಷ ಶ್ರೀ ದೇವರಾಜ ಅರಸು ಅವರು ವಿಮಾನದಿಂದ ಇಳಿಯುತ್ತಿದ್ದಂತೆ ಇತ್ತ ಯುವ ಕಾಂಗ್ರೆಸ್ಸಿಗರು ಆಡಳಿತ ಕಾಂಗ್ರೆಸ್ ಕಚೇರಿಯಿಂದ ಹೊರಟು ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನಕ್ಕೆ ತೆರಳಿ ಬಲವಂತದಿಂದ ಕಚೇರಿಯನ್ನು ಪ್ರವೇಶಿಸಿದರು.

ನಿನ್ನೆ ರಾತ್ರಿ ಸಂಸ್ಥಾ ಕಾಂಗ್ರೆಸ್ ಭವನವನ್ನು ವಶಕ್ಕೆ ತೆಗೆದುಕೊಳ್ಳುವ ತೀರ್ಮಾನ ಕೈಗೊಂಡ ಯುವ ಕಾಂಗ್ರೆಸ್ಸಿಗರು ಮಧ್ಯಾಹ್ನದವರೆಗೂ ಗುಟ್ಟನಲ್ಲಿಟ್ಟಿದ್ದರು. ಈ ಹಠಾತ್ ಘಟನೆ ಸಂಸ್ಥಾ ಕಾಂಗ್ರೆಸ್ಸಿಗರನ್ನು ಚಕಿತಗೊಳಿಸಿತು.

• ಕೇಂದ್ರ ನೌಕರರಿಗೆ 8ರಿಂದ 20 ರೂ. ಹೆಚ್ಚಿನ ತುಟ್ಟಿಭತ್ಯೆ

ನವದೆಹಲಿ, ನ. 29– ಕೇಂದ್ರ ಸರ್ಕಾರದ ನೌಕರರಿಗೆ ಈ ವರ್ಷದ ಸೆಪ್ಟೆಂಬರ್ ಒಂದರಿಂದ ತಿಂಗಳೊಂದಕ್ಕೆ ರೂ. 8ರಿಂದ ರೂ. 20 ರವರೆಗೆ ಹೆಚ್ಚಿನ ತಾತ್ಕಾಲಿಕ ಪರಿಹಾರ ನೀಡುವಂತೆ ತೃತೀಯ ವೇತನ ಆಯೋಗ ಶಿಫಾರಸು ಮಾಡಿದೆಯೆಂದು ತಿಳಿದುಬಂದಿದೆ.

'ಪದ್ಮ' ಪ್ರಶಸ್ತಿಯ ಆಯ್ಕೆ ವಿಧಾನವು ಪ್ರಮುಖ ನೇಮಕಾತಿ ಒಳಗೊಂಡಂತೆ ಇತರ ಕ್ಷೇತ್ರಗಳಿಗೂ ವಿಸ್ತರಿಸಲಿ

ಜನಪರವಾಗಿ ಹೊಮ್ಮಿದ 'ಪದ್ಮ' ಪ್ರಶಸ್ತಿ

ಸೂರ್ಯ–ನಮಸ್ಕಾರ

ಎ.ಸೂರ್ಯಪ್ರಕಾಶ್

ರಾಷ್ಟ್ರಪತಿ ಭವನದಲ್ಲಿ ಇತ್ತೀಚೆಗೆ ನಡೆದ ಪದ್ಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪರಿಸರಪ್ರೇಮಿ 72 ವರ್ಷದ ತುಳಸಿ ಗೌಡ ಅವರು ಬರಿಗಾಲಲ್ಲಿ ನಡೆದುಬಂದು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಕ್ಷಣವು ಸದಾಕಾಲ ಮನಸ್ಸಿನ ಭಿತ್ತಿಯಲ್ಲಿ ಉಳಿಯುವ ಚಿತ್ರ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಸಮುದಾಯಕ್ಕೆ ಸೇರಿದ ತುಳಸಿ ಗೌಡ ಅವರಿಗೆ ಗಿಡ, ಸಸ್ಯ, ಮೂಲಿಕೆಗಳ ಬಗ್ಗೆ ಇರುವ ವಿಶೇಷ ಜ್ಞಾನದಿಂದಾಗಿ ಅವರನ್ನು 'ಅರಣ್ಯ ವಿಶ್ವಕೋಶ' ಎಂದು ಕರೆಯಲಾಗುತ್ತದೆ. ಪರಿಸರ ಸಂರಕ್ಷಣೆಯ ತಮ್ಮ ಅಭಿಯಾನದಲ್ಲಿ ಅವರು ಸುಮಾರು 30,000 ಸಸಿಗಳನ್ನು ನೆಟ್ಟು ಮರಗಳಾಗಿ ಬೆಳೆಸಿದ್ದಾರೆ.

ಕೆಲವೇ ವರ್ಷಗಳ ಹಿಂದಿನವರೆಗೂ ಆಕೆಯಂತಹ ವ್ಯಕ್ತಿ, ರಾಷ್ಟ್ರಪತಿ ಭವನದ ಹೊಳೆಯುವ ಸಮಾರಂಭದಲ್ಲಿ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಬಹುದು ಎನ್ನುವುದನ್ನು ಯಾರೂ ಕಲ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಭಾರತದ ದೂರದ ಮೂಲೆಮೂಲೆಗಳಲ್ಲಿ ಎಲೆಮರೆಕಾಯಿಗಳಂತಿರುವ ವ್ಯಕ್ತಿಗಳಿಗೂ ಸಿಗುವಂತೆ ಪದ್ಮ ಪ್ರಶಸ್ತಿಗಳನ್ನು ಪ್ರಜಾಸತ್ತಾತ್ಮಕಗೊಳಿಸಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೈಗೊಂಡ ನಿರಂತರ ಯತ್ನಗಳಿಂದ ಇದು ಈಗ ಸಾಧ್ಯವಾಗಿದೆ.

ಸ್ವಾರ್ಥಕ್ಕಿಂತ ಸೇವೆಯನ್ನೇ ಮುಖ್ಯವಾಗಿಸಿಕೊಂಡ ಇಂತಹ ಗಮನಾರ್ಹ ವ್ಯಕ್ತಿಗಳಿಗೆ ಪದ್ಮ ಪ್ರಶಸ್ತಿ ನೀಡುವ ಪ್ರಕ್ರಿಯೆ, ಮೋದಿಯವರು ಪ್ರಧಾನಿಯಾದ ನಂತರ ಆರಂಭವಾಯಿತು. 2017ರ ಜನವರಿ ಹಾಗೂ ನಂತರದಲ್ಲಿ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಿದಾಗಿನಿಂದ ಇಂತಹ ಎಲೆಮರೆಕಾಯಿಗಳಂತಹ ವ್ಯಕ್ತಿಗಳ ಗುರುತಿಸುವಿಕೆ ಗಣನೀಯವಾಗಿ ಹೆಚ್ಚಿತು. ಇಂತಹ ಪ್ರಶಸ್ತಿ ಪುರಸ್ಕೃತರ ಸಂಕ್ಷಿಪ್ತ ಪರಿಚಯವನ್ನು ಅವರ ಸಾಧನೆಗಳೊಂದಿಗೆ 2017ರ ಪಟ್ಟಿಯನ್ನು ಸರ್ಕಾರ ಬಿಡುಗಡೆ ಮಾಡಿದಾಗ ರಾಷ್ಟ್ರದಾದ್ಯಂತ ಅಚ್ಚರಿಯ ಸಂಚಲನ ಮೂಡಿತ್ತು. ಈ ಪಟ್ಟಿಯಲ್ಲಿ ಪಶ್ಚಿಮ ಬಂಗಾಳದ ಜಲ್‌ಪೈಗುರಿ ಜಿಲ್ಲೆಯ ಕರೀಮುಲ್ ಹಕ್ ಅವರ ಹೆಸರಿತ್ತು. ಅವರು ತಮ್ಮ ಜಿಲ್ಲೆಯಲ್ಲಿ 'ಆಂಬುಲೆನ್ಸ್ ದಾದಾ' ಎಂದೇ ಪ್ರಸಿದ್ಧರಾಗಿದ್ದವರು. ಸಮರ್ಪಕ ರಸ್ತೆ, ಸಾರಿಗೆ ಹಾಗೂ ಆರೋಗ್ಯ ಸೇವೆಗಳಂತಹ ಮೂಲ ಸೌಕರ್ಯಗಳಿಲ್ಲದ ದೂರದ ಗ್ರಾಮದಲ್ಲಿ ಹಕ್ ಅವರ ವಾಸ್ತವ್ಯ. ಹೀಗಾಗಿ, ಕಾಯಿಲೆಯಿಂದ ನರಳುತ್ತಿದ್ದ ತಾಯಿಯನ್ನು ಸಕಾಲದಲ್ಲಿ ಆಸ್ಪತ್ರೆಗೆ ಸಾಗಿಸಲಾಗಲಿಲ್ಲ ಅವರಿಗೆ. ಈ ವೈಯಕ್ತಿಕ ದುರಂತವು ವೈದ್ಯಕೀಯ ಗಮನದ ತುರ್ತು ಅಗತ್ಯ ಇರುವ ವ್ಯಕ್ತಿಗಳಿಗೆ ತಾವು ಯಾವ ನೆರವು ನೀಡಬಹುದು ಎಂಬುದರ ಕುರಿತಾಗಿ ಆಲೋಚಿಸುವಂತೆ ಮಾಡಿತು. ಪರಿಣಾಮವಾಗಿ, ದೂರದ ಪ್ರದೇಶಗಳಲ್ಲಿ ವಾಸಿಸುವ ವಿಶೇಷವಾಗಿ ಮಹಿಳೆಯರಿಗೆ ನೆರವು ನೀಡಲು ತಮ್ಮ ಮೋಟರ್ ಸೈಕಲ್ ಅನ್ನೇ ಆಂಬುಲೆನ್ಸ್ ಆಗಿ ಪರಿವರ್ತಿಸುವ ನಿರ್ಧಾರ ಕೈಗೊಂಡರು. ಹೆರಿಗೆಗಾಗಿ ಹತ್ತಿರದ ಆಸ್ಪತ್ರೆಗೆ ತೆರಳಬೇಕಿರುವ ಗರ್ಭಿಣಿಯರಿಗೆ ಉಚಿತವಾಗಿ ತಮ್ಮ ಬೈಕ್ ಆಂಬುಲೆನ್ಸ್ ಸೇವೆ ಒದಗಿಸುವುದಾಗಿ ಅವರು ಪ್ರಕಟಿಸಿದರು. ಆ ಜಿಲ್ಲೆಯಲ್ಲಿ ಮಹಿಳೆಯರಿಗೆ ಇದು ನಿಜಕ್ಕೂ ಒಂದು ವರವಾಗಿ ಪರಿಣಮಿಸಿತ್ತು.

ಎಲೆಮರೆಕಾಯಿಗಳಂತೆ ಇರುವವರನ್ನು ಹುಡುಕಿ ಗೌರವಿಸಬೇಕೆಂದು ಪ್ರಧಾನಿಯವರು ಪದ್ಮ ಪ್ರಶಸ್ತಿ ಸಮಿತಿಗೆ ಪ್ರೇರಣೆ ನೀಡಿದಾಗಲಿಂದ, ಸಂಶೋಧಕ ತಂಡವೊಂದು ಮಾಹಿತಿಗಳನ್ನು ಎಲ್ಲಿಂದೆಲ್ಲಾ ಹುಡುಕಿ ತೆಗೆದು ಸಮಿತಿಯ ಪರಿಶೀಲನೆಗೆ ನೀಡುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಇಂತಹವರು ಯಾರಿಂದಲೂ ಅಧಿಕೃತವಾಗಿ ನಾಮಕರಣಗೊಂಡೂ ಇರುವುದಿಲ್ಲ. ಪ್ರಶಸ್ತಿ ಲಭಿಸಿದ ಬಗ್ಗೆ ಸರ್ಕಾರದ ನಿರ್ಧಾರವನ್ನು ಇಂತಹ ಪ್ರಶಸ್ತಿ ಪುರಸ್ಕೃತರಿಗೆ ತಿಳಿಸಿದಾಗ ಅವರಿಗೆ ಅದು ದೊಡ್ಡ ಅಚ್ಚರಿಯೇ ಆಗಿರುತ್ತದೆ. ಇಂತಹ ಒಬ್ಬರು ವ್ಯಕ್ತಿ, ದಾರಿಪಲ್ಲಿ ರಾಮಯ್ಯ. ಅರಣ್ಯ ಸಂಪತ್ತು ಸುಧಾರಿಸುವುದಕ್ಕಾಗಿ, ತಮ್ಮ ಸೈಕಲ್‌ನಲ್ಲಿ ವ್ಯಾಪಕವಾಗಿ ಸಂಚರಿಸಿ ಸಸಿಗಳನ್ನು ನೆಟ್ಟವರು ಅವರು.

2019ರಲ್ಲಿ, 66 ವರ್ಷದ ಮದುರೆ ಚಿನ್ನ ಪಿಳ್ಳೈ ಅವರನ್ನು ಪ್ರಶಸ್ತಿ ಸಮಿತಿ ಆಯ್ಕೆ ಮಾಡಿತು. ಐದು ದಶಕಗಳ ಹಿಂದೆಯೇ ಸಮುದಾಯ ಆಧಾರಿತ ಕಿರು ಹಣಕಾಸು ಯೋಜನೆಯನ್ನು ಈ ಅನಕ್ಷರಸ್ಥ ಮಹಿಳೆ ಜನಪ್ರಿಯಗೊಳಿಸಿದ್ದರು. ಅದೇ ವರ್ಷ ಗೌರವಿಸಲಾದ ಮತ್ತೊಬ್ಬರು ಉನ್ನತ ಸಾಧಕರು, ಲಡಾಖ್‌ನ 'ಅದ್ಭುತ ಸರ್ಜನ್' ಡಾ. ತ್ಸೆರಿಂಗ್ ನೋರ್ಬೂ. ಕಳೆದ 50 ವರ್ಷಗಳಿಂದ ಈ ವೈದ್ಯರು ಪ್ರತೀ ವರ್ಷ 500 ಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದಾರೆ. ಯಾವುದೇ ಶುಲ್ಕ ತೆಗೆದುಕೊಳ್ಳದೆ 15,000 ಮಹಿಳೆಯರ ಹೆರಿಗೆಗೆ ಸಹಾಯ ಮಾಡಿದಂತಹ ಕರ್ನಾಟಕದ ತುಮಕೂರು ಜಿಲ್ಲೆಯ ಸೂಲಗಿತ್ತಿ ನರಸಮ್ಮ ಅವರು 2018ರ ಪದ್ಮ ಪುರಸ್ಕೃತರ ಪಟ್ಟಿಯಲ್ಲಿದ್ದರು.

ಇತ್ತೀಚಿನ ಪದ್ಮ ಪ್ರಶಸ್ತಿ ಪಟ್ಟಿಯಲ್ಲಿ, ತುಳಸಿ ಗೌಡ ಅವರಲ್ಲದೆ ಹರೇಕಳ ಹಾಜಬ್ಬ ಅವರ ಹೆಸರೂ ಇತ್ತು. ಪ್ರಾಥಮಿಕ ಶಾಲೆ ಕಟ್ಟಿಸುವುದಕ್ಕಾಗಿ ಕಿತ್ತಳೆ ಹಣ್ಣು ಮಾರಿ ಸಂಪಾದಿಸಿದ ಗಳಿಕೆಯನ್ನು ಮೀಸಲಿಟ್ಟ ವ್ಯಕ್ತಿ ಅವರು. ಇಂತಹ ಸಾಧನೆಗಳನ್ನು ಹೇಳುತ್ತಲೇ ಹೋಗಬಹುದು. ಆದರೆ ಕೆಲವು ಕತೆಗಳು ಮಾದರಿಯಾಗುವಂತಹವು ಹಾಗೂ ಮನ ಕಲಕುವಂತಹವು. ಒಡಿಶಾದ ಚಹಾ ಮಾರಾಟಗಾರ ದೇವರಪಲ್ಲಿ ಪ್ರಕಾಶ ರಾವ್ ಅವರ ಕತೆ ಅಂತಹದ್ದು. ಅವರನ್ನು 'ಚಹಾ ಮಾರುವ ಗುರು' ಎಂದೇ ಕರೆಯಲಾಗುತ್ತದೆ. ಕೊಳೆಗೇರಿಗಳಲ್ಲಿ ಬದುಕುತ್ತಿರುವ ಮಕ್ಕಳ ಶಿಕ್ಷಣಕ್ಕಾಗಿ, ತಮ್ಮ ಚಹಾ ಅಂಗಡಿಯಿಂದ ಬಂದ ವರಮಾನದಲ್ಲಿ ಅರ್ಧದಷ್ಟನ್ನು ಎತ್ತಿಡುತ್ತಾರೆ. 'ಆಶಾ ಓ ಆಶ್ವಾಸನ' ಎಂಬ ಹೆಸರಿನ ಶಾಲೆಯನ್ನು ಅವರು ಆರಂಭಿಸಿದ್ದಾರೆ. ಸೇವೆ ಮಾಡುವುದರ ಬಗ್ಗೆ ಉತ್ಕಟ ಕಳಕಳಿ ಇರುವಂತಹ ವ್ಯಕ್ತಿಗಳು ಇವರು. ಆದರೆ ಇದಕ್ಕೆ ಮಾನ್ಯತೆ ದೊರೆಯಬೇಕೆಂಬ ನಿರೀಕ್ಷೆ ಇಟ್ಟುಕೊಂಡ ವ್ಯಕ್ತಿಗಳಲ್ಲ. ಅದೂ ರಾಷ್ಟ್ರ ಮಟ್ಟದ ಮಾನ್ಯತೆಯನ್ನಂತೂ ಬಯಸಿದವರೇ ಅಲ್ಲ.

ಜಗದೀಶ್ ಲಾಲ್ ಅಹುಜಾ ಅವರ ಹೆಸರು 2020ರ ಪದ್ಮ ಪ್ರಶಸ್ತಿ ಪುರಸ್ಕೃತರ ಪಟ್ಟಿಯಲ್ಲಿತ್ತು. ಚಂಡೀಗಡದ ಪ್ರಮುಖ ಆಸ್ಪತ್ರೆಯೊಂದರ ಹೊರಗೆ ರೋಗಿಗಳು ಹಾಗೂ ಅವರ ಬಂಧುಗಳಿಗೆ ಉಚಿತ ಆಹಾರ ಪೂರೈಕೆ ಮಾಡುತ್ತಾರೆ 84 ವರ್ಷದ ಈ ಹಿರಿಯರು.

ಏಳು ವರ್ಷಗಳ ಹಿಂದೆ, ಮೋದಿಯವರು ಪ್ರಧಾನಿಯಾದಾಗ, ತಾವು ದೆಹಲಿಯ ಅಧಿಕಾರ ಮೊಗಸಾಲೆಗಳಿಗೆ 'ಹೊರಗಿನವರು' ಎಂದು ಹೇಳಿಕೊಂಡಿದ್ದರು. ಏಕೆಂದರೆ ತಮ್ಮ ಬದುಕಿನ ಬಹು ಭಾಗವನ್ನು ಅವರು ಗುಜರಾತ್‌ನಲ್ಲಿ ಹಾಗೂ ಆರ್‌ಎಸ್‌ಎಸ್ ಪ್ರಚಾರಕರಾಗಿ ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಕಳೆದಿದ್ದರು. ದೇಶದ ಉದ್ದಗಲಕ್ಕೆ ಮೋದಿಯವರು ನಡೆಸಿದ ಸಂಚಾರಗಳಿಂದಾಗಿ, ತಾವೇ ಎಲ್ಲರಿಗಿಂತ ಮೇಲೆಂದುಕೊಳ್ಳುವಂತಹ ದೆಹಲಿಯ ಲುಟೆನ್ಸ್ ಮಂದಿಯ ಪ್ರತಿಷ್ಠೆ ಹಾಗೂ ರಾಷ್ಟ್ರದ ಯಾವುದೋ ಮೂಲೆಯಲ್ಲಿ ಪ್ರಚಾರದ ಬೆಳಕಿಲ್ಲದೆ ಅರ್ಥಪೂರ್ಣ ಕೆಲಸ ಮಾಡುವ ಲಕ್ಷಾಂತರ ಜನರ ಮುಗ್ಧತೆಯ ನಡುವಿನ ವೈರುಧ್ಯಗಳನ್ನು ಗ್ರಹಿಸುವುದು ಅವರಿಗೆ ಸಾಧ್ಯವಾಗಿತ್ತು. ಬಹುಶಃ ಈ ಗ್ರಹಿಕೆಯು ರಾಷ್ಟ್ರ ನಿರ್ಮಾಣಕ್ಕೆ ಸದ್ದಿಲ್ಲದೆ ಕೊಡುಗೆ ಸಲ್ಲಿಸುತ್ತಿರುವ ಒಳ್ಳೆಯ ವ್ಯಕ್ತಿಗಳನ್ನು ಗುರುತಿಸಲು ಪದ್ಮ ಪ್ರಶಸ್ತಿ ತೀರ್ಪುಗಾರ ಮಂಡಳಿಗೆ ಉತ್ತೇಜನ ನೀಡಲು ಮೋದಿಯವರಿಗೆ ಪ್ರೇರಣೆಯಾಗಿರಬೇಕು. ಇದರಿಂದಾಗಿ, ಕನಿಷ್ಠ ಶೇಕಡ 20ರಷ್ಟು ಪ್ರಶಸ್ತಿಗಳು ಇಂತಹ ವ್ಯಕ್ತಿಗಳಿಗೆ ಹೋಗುತ್ತವೆ.

ಹೀಗೆಂದಾಗ, ದೆಹಲಿ ಮತ್ತು ಮುಂಬೈಗಳ ಉನ್ನತ ಸಾಧಕರನ್ನು ಪ್ರಶಸ್ತಿಯಿಂದ ಹೊರಗಿಡಬೇಕು ಎಂದು ಅರ್ಥವಲ್ಲ. ರಾಷ್ಟ್ರೀಯ ಮಹತ್ವದ ಪ್ರತಿಷ್ಠಿತ ಸಂಸ್ಥೆಗಳು ದೆಹಲಿಯಲ್ಲಿವೆ. ಇಂತಹ ಸಂಸ್ಥೆಗಳ ನೇತೃತ್ವ ವಹಿಸಿರುವವರನ್ನು ಗುರುತಿಸಬೇಕು. ಉದಾಹರಣೆಗೆ, ಕೋವಿಡ್-19ರ ವಿರುದ್ಧದ ಹೋರಾಟದ ಸಂದರ್ಭದಲ್ಲಿ ಏಮ್ಸ್ ಹಾಗೂ ಐಸಿಎಂಆರ್‌ಗಳಂತಹ ಸಂಸ್ಥೆಗಳು ಸಾಂಕ್ರಾಮಿಕವನ್ನು ನಿಯಂತ್ರಿಸಲು ನಿಸ್ವಾರ್ಥವಾಗಿ ಶ್ರಮಿಸಿದ್ದು ಮಾನ್ಯತೆಗೆ ಅರ್ಹವಾಗಿವೆ.

ಐದು ವರ್ಷಗಳ ಹಿಂದೆ ಈ ಪರಿವರ್ತನೆ ಉಂಟಾದಾಗ, ದೆಹಲಿಯ ಲುಟೆನ್ಸ್ ಮಂದಿಗೆ ಪದ್ಮ ಪ್ರಶಸ್ತಿಯ ಕ್ಷಣವನ್ನು ಸಾಧಾರಣ ಪೋಷಾಕಿನಲ್ಲಿ, ಕೆಲವೊಮ್ಮೆ ಚಪ್ಪಲಿಯನ್ನೂ ಧರಿಸದೆ ಬರುವ ಸಾಧಾರಣ ವ್ಯಕ್ತಿಗಳೊಂದಿಗೆ ಹಂಚಿಕೊಳ್ಳುವುದು ಕಷ್ಟವಾದಂತಿತ್ತು. ಜನಪರ ಪದ್ಮ ಪ್ರಶಸ್ತಿಯ ಈ ವಿಧಾನವು ಸರ್ಕಾರ ಮಾಡುವ ಪ್ರಮುಖ ನೇಮಕಾತಿಗಳಂತಹ ಇತರ ಕ್ಷೇತ್ರಗಳಿಗೂ ವಿಸ್ತರಣೆಗೊಂಡು ರಾಷ್ಟ್ರದ ವಿವಿಧ ಭಾಗಗಳ ವ್ಯಕ್ತಿಗಳ ಸಮರ್ಪಕ ಪ್ರಾತಿನಿಧ್ಯಕ್ಕೆ ಅನುವು ಮಾಡಿಕೊಡುವಂತಾಗಲಿ ಎಂಬುದು ಎಲ್ಲರ ಆಶಯ.

ಚುರುಮುರಿ



ಹುಯ್ಯೋ ಮಳೆರಾಯ!

• ಲಿಂಗರಾಜು ಡಿ.ಎಸ್.

'ಹುಯ್ಯೋ ಹುಯ್ಯೋ ಮಳೆರಾಯ ಹೂವಿನಗಿಡಕೆ ನೀರಿಲ್ಲ' ಅಂತ ತುರೇಮಣೆ ಗುನುಗ್ತಿದ್ದರು.

'ಅಲ್ಲಾ ಸಾ, ಮಳೆ ತಾರಾಮಾರ ಹೂದು ಭಾಳಾ ಜನದ ಬಾಯಿಗೆ ಮಣ್ಣಾಕ್ಯದೆ. ನಿಮ್ಮ ಹಾಡು ಕೇಳಿದ್ರೆ ಅವರೆಲ್ಲಾ ಬಂದು ಕುತ್ತಿಗೆ ಮ್ಯಾಲೆ ಮಿದಿತರೆ ಅಷ್ಟೇಯ!' ಅಂತ ಎಚ್ಚರಿಕೆ ಕೊಟ್ಟೆ.

'ಅದ್ಯಾಕೆ ಮಿದಿತರ್ಲಾ? ತಗ್ಗಾಗಿರ ಕಡೆಗೆ ನೀರು ಹರಿದೋಗ್ಯದೆ. ನಾನು-ನೀನು ಏನು ಮಾಡಕ್ಕಾದದು! ಅಗ್ನಿಶಾಮಕದೋರು, ಪಾಪದ ಪೋಲೀಸಿನೋರು ಕಷ್ಟ ಬೀಳ್ತಾವ್ರೆ' ಅಂದರು.

'ಅಲ್ಲಾ ಸಾ, ಹಿಂಗೆ ಮನೆ ಒಳಿಕೆ ನೀರು ನುಗ್ಗಿದ್ರೆ ಕಷ್ಟ ಅಲ್ಲುವ್ರಾ? ಸರ್ಕಾರ ಏನು ಮಾಡ್ತಾ ಅದೆ?'

'ಸರ್ಕಾರದ ಬಡ್ಡೇಲೆ ಇರೋ ಲ್ಯಾಂಡುರೋಗಿಗಳು ಬಂದು ರಾಜಾಕಾಲುವೆ ಅತ್ತಗೆ ನೂಕಿ ಕೆರೆ ಕಟ್ಟೆನೆಲ್ಲಾ ಬೊಗಸೇಲಿ ತಗಂಡು ಬಾಯಿಗಾಕ್ಕಂಡು ಬಾಳಗೆಡಿಸವ್ರೆ. ಈಗ ಹಳ್ಳದ ಕಡೆಗೆ ನೀರು ನುಗ್ಗಿ ತೊಂದ್ರಾಗ್ಯದೆ ಅಂದ್ರೆ, ಕೆರೆಲೆಲ್ಲಾ ಅಪಾರ್ಟ್‌ಮೆಂಟ್ ಕಟ್ಟಕೆ ಪರ್ಮಿಶನ್ ಕೊಟ್ಟು ಪರ್ಸೆಂಟೇಜ್ ತಗಂಡಿರ ಎಂಜಿನೀರುಗಳನ್ನ ತರುಮಿಕ್ಯಬಂದು ಅದೇ ನೀರಗೆ ಮೂರು ಸಲ ಮುಳುಗಿಸಿ ಎರಡು ಸಲ ತಗೀಬೇಕು!' ತಮ್ಮ ವಾದ ಮುಂದಿಟ್ಟರು.

'ಕೋರ್ಟು ಕೆಂಡಾಗ್ಯದಂತೆ!' ಅಂತಂದೆ.

'ಕೋರ್ಟು ಎಷ್ಟೆಲ್ಲಾ ಮಕ್ಕುಗಿದರೂ ಬೇಜಾರು ಮಾಡಿಕ್ಯದೆ ಅಕ್ರಮ ಕಟ್ಟಡಕೆ ಅನುಮತಿ ಕೊಡ್ತಿರೋ ದುಡ್ಡಪ್ಪಗಳ ಇನ್‌ಕಂ ಜಾಸ್ತಿಯಾಗಿ ಟಾಯ್ಲೆಟ್ ಪೈಪಲ್ಲಿ ಹೆಂಗೆ ಔಟ್‌ಕಂ ಆಯ್ತಿತ್ತು ಅಂತ ನೋಡ್ದಲ್ಲಾ!'

'ಸಿಗೆಬಿದ್ದೋರು ಇನ್ನು ದೂಟಿ ಮಾಡಂಗಿಲ್ಲವಲ್ಲ ಬುಡಿ ಸಾ!'

'ನೋಡ್ಲಾ, ಇವುರ ಕರಪ್ಶನ್ ಡಿಕ್ಷನರೀಲಿ ಸರ್ಕಾರಿ ಕೆಲಸ ಅಂದ್ರೆ ಸ್ವಂತ ಲಾಭಕ್ಕೆ ನಿರಂತರವಾಗಿ ಪ್ರೇರೇಪಿಸೋ ಆಸೆಯ ಹಸಿವು. ಅದುನ್ನ ಪುರ್ಸ್ಯಸ್ಗಣಕೆ ಮತ್ತೆ ಬೇಗನೆ ವಾಪಾಸ್ ಬಂದು ಉಣ್ಣಕೆ ಮುದ್ದೇಗೆ ಎಸರಿಟ್ಟು ನಮ್ಮ ಕಂಠಕ್ಕೆ ಕವೆಗೋಲಾಕಿ ತಿರುವ್ತರೆ ಕನೋ' ಅಂದು ಮಾತಲ್ಲೇ ಓಮಿಕ್ರಾನ್ ತೋರಿಸಿದರು! ಅಂದ್ರೆ ಮಾಸ್ಕಾಕ್ಯಂಡು ಬಾಯಿಮುಚ್ಕಂಡಿರ ಬೇಕು ಅಂತ ಅರ್ಥ!

ಸಂಗತ

ದೌರ್ಜನ್ಯದ ವಿವಿಧ ಆಯಾಮ

ಮಹಿಳೆಯರು ಆತ್ಮಾಭಿಮಾನದಿಂದ ಬದುಕಲು ಪೂರಕವಾದ ವಾತಾವರಣ ನಿರ್ಮಿಸಬೇಕಾಗಿದೆ

• ಡಾ. ಜ್ಯೋತಿ

ಪ್ರತಿವರ್ಷ ನವೆಂಬರ್ 25ರಂದು 'ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನ'ವನ್ನು ಆಚರಿಸಲಾಗುತ್ತದೆ. ಲಿಂಗ ಸಮಾನತೆ ಹಾಗೂ ಮಹಿಳಾ ಸಬಲೀಕರಣದ ಕುರಿತು ಜನಸಾಮಾನ್ಯರಲ್ಲಿ ಅರಿವು ಹೆಚ್ಚಿಸುವ ಸಲುವಾಗಿ ವಿಶ್ವಸಂಸ್ಥೆಯು 1999ರಿಂದ ಈ ದಿನವನ್ನು ಆಚರಿಸುತ್ತಾ ಬಂದಿದೆ. ಡೊಮಿನಿಕನ್ ರಿಪಬ್ಲಿಕ್‌ನ ಸರ್ವಾಧಿಕಾರದ ಸರ್ಕಾರವು 'ಮಿರಾಬಲ್ ಸಹೋದರಿಯರು' ಎಂದೇ ಹೆಸರಾಗಿದ್ದ ಮೂವರು ಮಹಿಳಾ ರಾಜಕೀಯ ಕಾರ್ಯಕರ್ತರನ್ನು 1960ರ ನ. 25ರಂದು ಬರ್ಬರವಾಗಿ ಹತ್ಯೆ ಮಾಡಿದ್ದರ ನೆನಪಿನಲ್ಲಿ ಈ ದಿನವನ್ನು ಆಯ್ಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ, ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ವಿವಿಧ ಆಯಾಮಗಳು ಯಾವುವು? ಅವು ನಿರಾತಂಕವಾಗಿ ನಡೆಯುತ್ತಿರುವುದರ ಹಿನ್ನೆಲೆಯೇನು? ಅವುಗಳನ್ನು ತಡೆಗಟ್ಟುವ ಸೂಕ್ತ ಕ್ರಮಗಳೇನು ಎಂಬಂಥ ಮುಖ್ಯ ಪ್ರಶ್ನೆಗಳು ಎದುರಾಗುತ್ತವೆ.

ಮಹಿಳೆಯರ ಮೇಲಿನ ದೌರ್ಜನ್ಯ ಕೇವಲ ದೈಹಿಕ ಹಿಂಸೆಗೆ ಅನ್ವಯಿಸುವುದಿಲ್ಲ. ಇದು ಲೈಂಗಿಕ, ಭಾವನಾತ್ಮಕ, ಮಾನಸಿಕ ಮತ್ತು ಆರ್ಥಿಕ ದೌರ್ಜನ್ಯಗಳನ್ನು ಕೂಡ ಒಳಗೊಂಡಿದೆ. ಜೊತೆಗೆ ಸಾರ್ವಜನಿಕ ವಲಯ ಹಾಗೂ ಖಾಸಗಿ ಬದುಕಿಗೂ ಅನ್ವಯಿಸುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ, ಈ ದೌರ್ಜನ್ಯಗಳು ಅಪರಿಚಿತರಿಗಿಂತ ಮಹಿಳೆಯ ನಿಕಟ ಸಂಬಂಧಿಗಳಿಂದಲೇ ನಡೆಯುತ್ತವೆ. ಉದಾಹರಣೆಗೆ, ಭಯ ಸೃಷ್ಟಿಸುವ ಮೂಲಕ ಆಕೆಯ ಮೇಲೆ ನಿಯಂತ್ರಣ ಸಾಧಿಸಲು ಹಾಗೂ ಅಧಿಕಾರ ಚಲಾಯಿಸಲು ವಿವಿಧ ಹಿಂಸಾತ್ಮಕ ನಡವಳಿಕೆಗಳನ್ನು ಅನುಸರಿಸಲಾಗುತ್ತದೆ.

ಪುರುಷರಲ್ಲಿ ಕಂಡುಬರುವ ಕೋಪ ಅಥವಾ ಲೈಂಗಿಕ ಪ್ರಚೋದನೆಗಳು ಸಹಜ ಹಾಗೂ ಸ್ವನಿಯಂತ್ರಣ ಮೀರಿದವಾಗಿದ್ದು, ಮಹಿಳೆ ತಾನು ಬಯಸಿದರೆ ಈ ದೌರ್ಜನ್ಯದಿಂದ ಮುಕ್ತಿ ಪಡೆಯುವುದು ಕಷ್ಟವೇನಲ್ಲ, ಮದ್ಯಸೇವನೆಯಿಂದ ಮಾತ್ರ ಪುರುಷ ಹಿಂಸಾತ್ಮಕವಾಗಿ ವರ್ತಿಸುತ್ತಾನೆ ಎಂಬಂತಹ ಪೂರ್ವಗ್ರಹಗಳು ಸಮಾಜದಲ್ಲಿವೆ.

ಪುರುಷರು ಮತ್ತು ಮಹಿಳೆಯರ ನಡುವೆ ಅಧಿಕಾರ ಹಾಗೂ ಸಂಪನ್ಮೂಲ ಹಂಚಿಕೆಯ ನಡುವೆ ಇರುವ ಅಸಮತೋಲನವು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಪ್ರಮುಖ ಕಾರಣ ಎಂಬುದು ಮಹತ್ತರವಾದ ಅಂಶ. ಪುರುಷ ಮತ್ತು ಮಹಿಳೆ ಹೀಗೆಯೇ ನಡೆದುಕೊಳ್ಳಬೇಕು ಎಂಬಂಥ ನಿಖರ ವ್ಯಾಖ್ಯಾನಗಳು ಸಹ ಇದಕ್ಕೆ ಕೊಡುಗೆ ನೀಡುತ್ತವೆ. ಮಹಿಳೆ ಮೂಲತಃ 'ಸಹನಾಮಯಿ' ಎನ್ನುವ ಬಿರುದು, ಪುರುಷ ಮಾಡುವ ಎಂತಹ ಘೋರ ಅವಮಾನ, ದೌರ್ಜನ್ಯವನ್ನೂ ಆಕೆ ಸಹಿಸಬಲ್ಲಳು ಎಂಬ ಸಾಮಾಜಿಕ ನಿಲುವಿಗೆ ಕಾರಣವಾಗಿ, ದೌರ್ಜನ್ಯಗಳು ನಿರಂತರವಾಗಿ ಮುಂದುವರಿಯಲು ಕಾರಣವಾಗಿದೆ.

ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊದ ವರದಿ ಅನುಸಾರ, ದೇಶದ ಶೇ 26ರಷ್ಟು ಮಹಿಳೆಯರು ಜೀವನ ಸಂಗಾತಿಯಿಂದ ದೈಹಿಕ ಹಿಂಸೆಯನ್ನು ಅನುಭವಿಸಿದ್ದಾರೆ ಹಾಗೂ ಗರ್ಭಿಣಿಯರೂ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಹಾಗೆಯೇ, ಪ್ರತೀ ಮೂರು ನಿಮಿಷಗಳಿಗೊಮ್ಮೆ ಮಹಿಳೆಯರ ಮೇಲೆ ಅಪರಾಧ ಎಸಗಲಾಗುತ್ತಿದೆ. ಪ್ರತೀ ಗಂಟೆಗೆ ಕನಿಷ್ಠ ಇಬ್ಬರು ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಪ್ರತೀ ಆರು ಗಂಟೆಗಳಿಗೊಮ್ಮೆ ಒಬ್ಬ ಯುವ ವಿವಾಹಿತ ಮಹಿಳೆಯನ್ನು ಹಿಂಸಿಸಿ ಸಾಯಿಸಲಾಗುತ್ತಿದೆ ಅಥವಾ ಆತ್ಮಹತ್ಯೆಗೆ ಪ್ರಚೋದಿಸಲಾಗುತ್ತಿದೆ.

ದೌರ್ಜನ್ಯದ ಪರಿಣಾಮವಾಗಿ ಮಹಿಳೆಯರು ಉದ್ಯೋಗ, ಆರ್ಥಿಕತೆ, ಸ್ವಆರೈಕೆ ಹಾಗೂ ಶಿಶುಪಾಲನೆಯಲ್ಲಿ ತೀವ್ರ ಕೊರತೆಯನ್ನು ಅನುಭವಿಸುತ್ತಾರೆ. ವಿಪರ್ಯಾಸವೆಂದರೆ, ಮಹಿಳೆಯರ ಮೇಲೆ ನಡೆಯುವ ಹೆಚ್ಚಿನ ದೌರ್ಜನ್ಯಗಳು ದೌರ್ಜನ್ಯಗಳೆಂದೇ ಪರಿಗಣಿತವಾಗಿಲ್ಲ. ವಿಶೇಷವಾಗಿ, ಕೌಟುಂಬಿಕ ಹಿಂಸಾಚಾರವು ಮಹಿಳೆ ಸಹಿಸಿಕೊಳ್ಳಬೇಕಾದ ಸಹಜ ನಡವಳಿಕೆ ಎಂಬಂತೆ ಬಿಂಬಿಸಲ್ಪಟ್ಟಿದೆ. ಒಂದು ವೇಳೆ ಮಹಿಳೆ ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ಹೇಳಿಕೊಂಡರೂ ಸಾಮಾನ್ಯವಾಗಿ 'ಹೊಂದಾಣಿಕೆ' ಮಾಡಿಕೊಳ್ಳಲು ಉಪದೇಶ ನೀಡಲಾಗುತ್ತದೆ.

ಕೌಟುಂಬಿಕ ಹಿಂಸಾಚಾರದಿಂದ ಬದುಕುಳಿದವರ ಮಾನಸಿಕ ಹಾಗೂ ದೈಹಿಕ ಆರೋಗ್ಯವು ಜೀವನದುದ್ದಕ್ಕೂ ಬಿಕ್ಕಟ್ಟಿನಲ್ಲಿ ಇರುತ್ತದೆ. ಇದು, ಅವರ ಮಕ್ಕಳ ಮೇಲೂ ಪರಿಣಾಮ ಬೀರಬಹುದು. ಈ ದಿಸೆಯಲ್ಲಿ ಸಾಮಾಜಿಕ ಸಂಘಟನೆಗಳ ಒತ್ತಾಸೆಯ ಮೇರೆಗೆ ಸರ್ಕಾರಗಳು ಕಳೆದ ಕೆಲವು ದಶಕಗಳಲ್ಲಿ ಬಲವಾದ ಕಾನೂನುಗಳು, ತ್ವರಿತ ನ್ಯಾಯಾಲಯಗಳು, ಪೊಲೀಸ್ ಸಹಾಯವಾಣಿಗಳು ಹಾಗೂ ಠಾಣೆಗಳನ್ನು ಸ್ಥಾಪಿಸಿವೆ. ಇದರೊಂದಿಗೆ, ನಾಗರಿಕ ಸೇವಾ ಸಂಸ್ಥೆಗಳು ಕೂಡ ಜನಜಾಗೃತಿ ಮೂಡಿಸಲು ಶ್ರಮಿಸುತ್ತಿವೆ. ಆದರೂ ದೌರ್ಜನ್ಯ ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಕಡಿಮೆಯಾಗುತ್ತಿಲ್ಲ.

ಕೌಟುಂಬಿಕ ಹಿಂಸಾಚಾರವನ್ನು ಖಾಸಗಿ ವಿಚಾರವೆಂದು ಪರಿಗಣಿಸದೆ, ಸಂತ್ರಸ್ತರಿಗೆ ದೈಹಿಕ ಆರೈಕೆಯೊಂದಿಗೆ ಮಾನಸಿಕ ಸ್ಥೈರ್ಯ, ಸಾಂತ್ವನ, ಭರವಸೆ ಸಿಗುವ ದಿಸೆಯಲ್ಲಿ ಸರ್ಕಾರಗಳು, ಸಾಮಾಜಿಕ ಸಂಘಟನೆಗಳು ಹೆಚ್ಚು ಕಾರ್ಯಪ್ರವೃತ್ತವಾಗಬೇಕಾಗಿದೆ. ಬಾಹ್ಯ ಪ್ರಪಂಚದಲ್ಲಿ ಕೂಡ ಮಹಿಳೆಯರಿಗೆ ಆತ್ಮಾಭಿಮಾನದಿಂದ ಬದುಕಲು ಹಾಗೂ ತಮ್ಮ ಮೇಲಾದ ದೌರ್ಜನ್ಯವನ್ನು ನಿರ್ಭೀತರಾಗಿ ಹಂಚಿಕೊಳ್ಳಲು ಆತ್ಮಸ್ಥೈರ್ಯ ತುಂಬಬೇಕಾಗಿದೆ. 'ನಿಮ್ಮ ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ, ಇವುಗಳನ್ನು ಮೀರಿದ ಸ್ವಂತ ಬದುಕೊಂದು ನಿಮಗಿದೆ ಹಾಗೂ ಉನ್ನತ ಭವಿಷ್ಯದ ಸಾಧ್ಯತೆಗಳಿವೆ' ಎನ್ನುವ ಮನವರಿಕೆಯನ್ನು ಮಹಿಳೆಯರಿಗೆ ಮಾಡಿಕೊಡಬೇಕಾದ ಅಗತ್ಯವಿದೆ.

ವಾಚಕರ ವಾಣಿ

ಜಾತೀಯತೆಯ ಹೊಂಡದಲ್ಲಿ ಆಶಾದಾಯಕ ಬೆಳವಣಿಗೆ

ಸ್ವಾತಂತ್ರ್ಯ ಲಭಿಸಿ 75 ವರ್ಷ ಗತಿಸಿದರೂ ಜಾತೀಯತೆ ಅಳಿದಿಲ್ಲವೆಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ (ಪ್ರ.ವಾ., ನ. 29). ಜಾತೀಯತೆ ಅಳಿದಿಲ್ಲವಷ್ಟೇ ಅಲ್ಲ ಜಾತೀಯತೆಯಿಂದ ಉಂಟಾಗುತ್ತಿರುವ ಶ್ರೇಷ್ಠತೆಯ ಅಹಂಕಾರವು ದಮನಿತ ಜನಾಂಗಕ್ಕೆ ಮಾಡುತ್ತಿರುವ ಅವಮಾನ ನಿಜಕ್ಕೂ ಅಸಹನೀಯವಾಗಿದೆ. ಅಷ್ಟೇ ಅಲ್ಲದೆ ರಾಜಕಾರಣಿಗಳು ಕೂಡ ಜಾತಿಯ ದಳ್ಳುರಿಗೆ ತುಪ್ಪ ಸುರಿಯುತ್ತಿರುವುದು ಒಂದು ದುರಂತವೇ ಆಗಿದೆ.

ಭಕ್ತರೆಲ್ಲ ಸಮಾನರು ಎಂದೇ ಬೋಧಿಸಬೇಕಿದ್ದ ಧಾರ್ಮಿಕ ಸಂಸ್ಥೆಗಳು ಕೂಡ ಜಾತೀಯತೆಗೆ ನೀರೆರೆಯುತ್ತಿರುವುದನ್ನು ನೋಡಿದರೆ ನಾವು ಯಾವ ದಿಕ್ಕಿನತ್ತ ಹೊರಟಿದ್ದೇವೆಂದು ಬೇಸರವಾಗುತ್ತಿದೆ. ಈ ಎಲ್ಲದರ ಮೊತ್ತ ನಮ್ಮ ಶ್ರೇಷ್ಠ ಸಂವಿಧಾನವನ್ನು ಬದಿಗೆ ಸರಿಸುವುದೇ ಆಗಿದೆ. ಈ ಕುರಿತು ನಮ್ಮ ನ್ಯಾಯಪೀಠಗಳಾದರೂ ಎಚ್ಚರಿಕೆ ನೀಡುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಒಲಿಂಪಿಕ್ಸ್: ಕಬಡ್ಡಿ, ಕೊಕ್ಕೊ ಸೇರಲಿ

ಈಚೆಗೆ ಕೊನೆಗೊಂಡ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಒಟ್ಟು 7 ಪದಕಗಳೊಂದಿಗೆ ಭಾರತ 48ನೇ ಸ್ಥಾನ ಪಡೆದುದು ನಮಗೆ ತಿಳಿದ ಸಂಗತಿ. ಭವಿಷ್ಯದಲ್ಲಿ ಭಾರತದ ಪದಕ ಬೇಟೆಯನ್ನು ಹೆಚ್ಚಿಸಬೇಕಿದ್ದರೆ ದೇಶದ ನೆಚ್ಚಿನ ಕ್ರೀಡೆಗಳಾದ ಕಬಡ್ಡಿ, ಕೊಕ್ಕೊ, ಚೆಸ್, ಬಿಲಿಯರ್ಡ್ಸ್, ಸ್ನೂಕರ್‌ನಂತಹ ಕ್ರೀಡೆಗಳನ್ನೂ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಗೊಳ್ಳುವಂತೆ ಮಾಡಬೇಕು. ಇದು ಸಾಧ್ಯವಾಗಬೇಕಿದ್ದರೆ ಒಟ್ಟು 40 ದೇಶಗಳ ಕ್ರೀಡಾ ಸಚಿವರು ಒಮ್ಮತದ ಅಭಿಪ್ರಾಯ ನೀಡಿ, ಈ ಕ್ರೀಡೆಗಳನ್ನು ಒಲಿಂಪಿಕ್ಸ್‌ನಲ್ಲಿ ಸೇರಿಸಬೇಕು ಎಂದು ಮನವಿ ಸಲ್ಲಿಸಬೇಕು. ಹೀಗೆ ಮಾಡಿದಾಗ ಈ ಕ್ರೀಡೆಗಳೂ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆಯುತ್ತವೆ.

ಕೇಂದ್ರ ಸರ್ಕಾರ ಇದೀಗ ಈ ದಿಸೆಯಲ್ಲಿ ವಿಶೇಷವಾಗಿ ಚಿಂತನೆ ನಡೆಸಿ, ಸಮಾನಮನಸ್ಕ 40 ದೇಶಗಳ ಸರ್ಕಾರಗಳೊಂದಿಗೆ ಸಂಪರ್ಕ ಸಾಧಿಸಬೇಕು. ದೇಶದ ಜಿಡಿಪಿ ಮಟ್ಟ ಸುಧಾರಿಸುತ್ತಿರುವುದರಿಂದ ಕ್ರೀಡಾ ಮೂಲಸೌಲಭ್ಯ ಮುಂದಿನ ದಿನಗಳಲ್ಲಿ ಹೆಚ್ಚಬಹುದು, 2050ರ ವೇಳೆಗೆ ಭಾರತದ ಪದಕ ಪಟ್ಟಿಯೂ ಬೆಳೆಯಬಹುದು. ಆದರೆ ತಕ್ಷಣಕ್ಕೆ, ಅಂದರೆ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೇ ಭಾರತವು ಅತಿ ಹೆಚ್ಚಿನ ಪದಕ ಗಳಿಸಬೇಕು ಎಂದಾದರೆ ದೇಶದ ನೆಚ್ಚಿನ ಕ್ರೀಡೆಗಳನ್ನು ಒಲಿಂಪಿಕ್ಸ್‌ನಲ್ಲಿ ಸೇರಿಸುವ ಪ್ರಯತ್ನ ನಡೆಸಬೇಕು. ಈ ವಿಷಯದಲ್ಲಿ ಕ್ರೀಡಾಪ್ರೇಮಿಗಳು, ರಾಜ್ಯ ಸರ್ಕಾರಗಳು, ಸಂಘ ಸಂಸ್ಥೆಗಳು ಕೇಂದ್ರದ ಮೇಲೆ ಒತ್ತಡ ಹೇರಲು ಮುಂದಾಗಬೇಕು.

ಡಾ. ಭೂಪಾಳಂ ಸುನಿಲ್, ಬೆಂಗಳೂರು

ಹೊಸ ಆವೃತ್ತಿ?

'ಪೋಷಕರ ಸಾಲ ತೀರಿಸಲು
ಮಗುವಿಗೆ ನೋಟಿಸ್'
(ಪ್ರ.ವಾ., ನ. 12). ಭೇಷ್!
ತೋಳ ಮತ್ತು ಕುರಿಮರಿ ಕತೆಯ
ಹೊಸ ಆವೃತ್ತಿಯೆ?
ಅಲ್ಲಿ: 'ನೀನಲ್ಲದಿದ್ದರೆ ನಿಮ್ಮಪ್ಪ'!
ಇಲ್ಲಿ: 'ನಿಮ್ಮಪ್ಪ ಅಲ್ಲದಿದ್ದರೆ, ನೀನು'!
ಕಾದು ನೋಡೋಣ, ಮುಂದೇನು?

ಸಿ.ಪಿ.ಕೆ., ಮೈಸೂರು

ಏನು ಸಂದೇಶ ರವಾನೆಯಾಗುತ್ತದೆ?

ಟೀಕೆಗಳಿಗೆ ಹೆದರದೇ ಮುಂದಡಿ ಇಡಬೇಕು ಎಂದು ತಮ್ಮ ಲೇಖನದಲ್ಲಿ (ಸಂಗತ, ನ. 29) ಹೇಳಿರುವ ಮಲ್ಲಿಕಾರ್ಜುನ ಹೆಗ್ಗಳಗಿ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಿಟ್‌ಕಾಯಿನ್ ವಿಚಾರವಾಗಿ ತಲೆಕೆಡಿಸಿಕೊಳ್ಳಬೇಡಿ ಎಂದು ಹೇಳಿರುವುದನ್ನು ಉದಾಹರಿಸಿದ್ದಾರೆ. ಆದರೆ ಪ್ರಧಾನಿಯವರು ಈ ರೀತಿ ಹೇಳಿರುವುದು ಸರಿ ಅಲ್ಲವೇನೋ ಎಂದೆನಿಸುವುದಿಲ್ಲವೇ?! ಜನಪ್ರತಿನಿಧಿಗಳು ತಮ್ಮ ಮೇಲೆ ಆರೋಪ ಬಂದಾಗ ತಾವು 'ನಿರಪರಾಧಿಗಳು' ಎಂಬುದನ್ನು ಸಾಬೀತುಪಡಿಸಲು ಏನು ಬೇಕೋ ಅದನ್ನೆಲ್ಲಾ ಮಾಡಬೇಕೇ ವಿನಾ ಅದಕ್ಕೆ ತಲೆಕೆಡಿಸಿಕೊಳ್ಳದೇ ಮುನ್ನಡೆದರೆ ಜನರಿಗೆ ಏನು ಸಂದೇಶ ರವಾನೆಯಾಗುತ್ತದೆ? ಹಿಂದೆ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ಮೇಲೆ ಎರಡು ಹಗರಣಗಳ ಆರೋಪ ಕೇಳಿಬಂತು. ತಕ್ಷಣ ಹೆಗಡೆ ಅವರು ರಾಜೀನಾಮೆ ನೀಡಿ ಜನರ ಬಳಿಗೆ ಹೋದರು. ಜನ ಅವರನ್ನು ಅಧಿಕ ಬೆಂಬಲದಿಂದ ಮತ್ತೆ ಆರಿಸಿದರು. ಇದು ರಾಜಕೀಯ ಮುತ್ಸದ್ದಿತನದ ಒಂದು ಮುಖ. ಏನೇ ಆದರೂ ತಲೆಕೆಡಿಸಿಕೊಳ್ಳ ಬೇಡಿ ಅಂದರೆ ಅದರ ಅರ್ಥ ಏನು?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಕಾರಂತರ 'ಸ್ಮೃತಿಚಿತ್ರ'ಕ್ಕೆ ಬೇಕು ಆರೈಕೆಯ ಚೌಕಟ್ಟು

ಕಾರಂತರ ಹುಟ್ಟೂರಾದ ಕೋಟಾದಲ್ಲಿರುವ ಡಾ. ಶಿವರಾಮ ಕಾರಂತ ಥೀಮ್ ಪಾರ್ಕ್‌ಗೆ ಇತ್ತೀಚೆಗೆ ಭೇಟಿ ನೀಡಿದ್ದೆ. ಕಾರಂತರ ನೆನಪನ್ನು ಚಿರಸ್ಥಾಯಿಯಾಗಿಸಲು ಇಂತಹ ಥೀಮ್ ಪಾರ್ಕ್ ಅನ್ನು ನಿರ್ಮಿಸಿದವರು ಅಭಿನಂದನಾರ್ಹರು. ಆದರೆ ಇಲ್ಲಿನ ನಿರ್ವಹಣೆಯನ್ನು ಸ್ಥಳೀಯ ಕೋಟತಟ್ಟು ಗ್ರಾಮ ಪಂಚಾಯಿತಿಗೆ ವಹಿಸಲಾಗಿದೆ. ಅದು ತನ್ನ ಸೀಮಿತ ಸಂಪನ್ಮೂಲದಲ್ಲಿ ಇಂತಹ ಪ್ರತಿಷ್ಠಿತ ಸಂಸ್ಥೆಯನ್ನು ನಿರ್ವಹಿಸುವುದು ಕಷ್ಟಸಾಧ್ಯ. ಆದ್ದರಿಂದ ರಾಜ್ಯ ಸರ್ಕಾರವೇ ಇದರ ಹೊಣೆಗಾರಿಕೆ ವಹಿಸಿಕೊಂಡು, ಮತ್ತಷ್ಟು ಅರ್ಥಪೂರ್ಣವಾಗಿ ನಿರ್ವಹಿಸುವುದು ಸೂಕ್ತ.

ಸಮೀಪದ ಸಾಲಿಗ್ರಾಮದಲ್ಲಿ ಕಾರಂತರು ತಮ್ಮ ಜೀವನದ ಸಂಧ್ಯಾಕಾಲವನ್ನು ಕಳೆದರು. ಅವರು ತಮ್ಮ ಕೊನೆಯ ವರ್ಷಗಳಲ್ಲಿ ವಾಸಿಸಿ, ಇಹಲೋಕ ತ್ಯಜಿಸಿದ ಮನೆಯನ್ನು ಇದೀಗ ಡಾ. ಶಿವರಾಮ ಕಾರಂತ ಸ್ಮೃತಿಚಿತ್ರ ಶಾಲೆಯಾಗಿ ಪರಿವರ್ತಿಸಲಾಗಿದೆ. ಇಲ್ಲಿ ಕಾರಂತರ ವೈಯಕ್ತಿಕ ಬದುಕಿಗೆ ಸಂಬಂಧಿಸಿದ ಎಲ್ಲ ವಸ್ತುಗಳನ್ನು ಅಚ್ಚುಕಟ್ಟಾಗಿ ಪ್ರದರ್ಶನ ಮಾಡಲಾಗಿದೆ. ಮೂರು ಅಂತಸ್ತಿನ ಬೃಹತ್ ಕಟ್ಟಡದ ಈ ಸಂಸ್ಥೆಯನ್ನು ಹಿಂದೆ ಕಾರಂತರ ಸಹಾಯಕಿಯಾಗಿ ಕೆಲಸ ಮಾಡಿದ್ದ ಮಾಲಿನಿ ಮಲ್ಯ ಅವರು ಅಪರಿಮಿತ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದಾರೆ. ಈ ಸಂಸ್ಥೆಯನ್ನು ಏಕಾಂಗಿಯಾಗಿ ನಿಭಾಯಿಸುತ್ತಿರುವ ಮಾಲಿನಿ ಅವರಿಗೆ ಇದೀಗ 71 ವರ್ಷ ವಯಸ್ಸು ಹಾಗೂ ಅನಾರೋಗ್ಯ. ಈ ಕಾರಣದಿಂದ ಸಂಸ್ಥೆಯ ನಿರ್ವಹಣೆ ಸಹಜವಾಗಿ ಅವರಿಗೆ ಕಷ್ಟವಾದ ಹಿನ್ನೆಲೆಯಲ್ಲಿ, ಇದನ್ನು ಯಾವುದಾದರೂ ಸಂಘ–ಸಂಸ್ಥೆಗೆ ವಹಿಸಿಕೊಡಲು ಮಾತುಕತೆ ನಡೆಸಿರುವುದಾಗಿ ತಿಳಿಸಿದರು. ಕಲಾವಿದರು, ಸಾಹಿತಿಗಳು ನೈಸರ್ಗಿಕ ಸಂಪತ್ತಿನಂತೆ ನಾಡಿನ ಆಸ್ತಿ. ಅವರ ನೆನಪನ್ನು ಕಾಪಾಡುವುದು ಸಮಾಜದ, ಸರ್ಕಾರದ ಕರ್ತವ್ಯ. ಪ್ರಸ್ತುತ ಸಂದರ್ಭದಲ್ಲಿ ಮಾಲಿನಿ ಅವರೊಂದಿಗೆ ಚರ್ಚಿಸಿ, ರಾಜ್ಯ ಸರ್ಕಾರವೇ ಇದರ ನಿರ್ವಹಣೆಯನ್ನು ವಹಿಸಿಕೊಂಡಲ್ಲಿ ಕಡಲ ತೀರದ ಭಾರ್ಗವ ಕಾರಂತರಿಗೆ ಸೂಕ್ತ ಗೌರವ ಸಲ್ಲಿಸಿದಂತಾಗುತ್ತದೆ.

ಡಾ. ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್ ಆಘಾತ ಮಕ್ಕಳು, ಸರ್ಕಾರಿ ಶಾಲೆಯತ್ತ

ದೇಶದ ಗ್ರಾಮೀಣ ಪ್ರದೇಶದಲ್ಲಿ, ಕೋವಿಡ್ ಲಾಕ್‌ಡೌನ್‌ನ ನಂತರ ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಪ್ರಮಾಣ ಏರಿಕೆಯಾಗಿದೆ. ಖಾಸಗಿ ಶಾಲೆ ತೊರೆಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಖಾಸಗಿ ಶಾಲೆ ತೊರೆದ ಎಲ್ಲಾ ಮಕ್ಕಳು ಸರ್ಕಾರಿ ಶಾಲೆಗಳಿಗೆ ಸೇರಿಲ್ಲ. ಬದಲಿಗೆ ಹಲವು ಮಕ್ಕಳು ಶಾಲೆಯನ್ನು ತೊರೆದಿದ್ದಾರೆ. ಶಾಲೆಯನ್ನು ಸೇರದ ಮಕ್ಕಳ ಸಂಖ್ಯೆಯು ಒಂದು ಪಟ್ಟು ಹೆಚ್ಚಾಗಿದೆ. ಕೋವಿಡ್ ಲಾಕ್‌ಡೌನ್‌ನಿಂದ ದೇಶದ ಜನರ ಆರ್ಥಿಕ ಸ್ಥಿತಿಯಲ್ಲಿ ವ್ಯಾಪಕ ಬದಲಾವಣೆಯಾಗಿದೆ. ಇದು ಮಕ್ಕಳ ಶಿಕ್ಷಣದ ಮೇಲೂ ಪರಿಣಾಮ ಬೀರಿದೆ ಎಂದು 'ಶಿಕ್ಷಣದ ಸ್ಥಿತಿಗತಿ ವಾರ್ಷಿಕ ವರದಿ (ಗ್ರಾಮೀಣ)– 2021'ರಲ್ಲಿ ವಿವರಿಸಲಾಗಿದೆ.

ಸರ್ಕಾರಿ ಶಾಲೆ: ಹೆಚ್ಚಿದ ನೋಂದಣಿ (ಶೇಕಡಾವಾರು ಪ್ರಮಾಣ)



- ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಪ್ರಮಾಣವು 2018ಕ್ಕೆ ಹೋಲಿಸಿದರೆ 2021ರಲ್ಲಿ ಶೇ 64.3ರಿಂದ ಶೇ 70.3ಕ್ಕೆ ಏರಿಕೆಯಾಗಿದೆ. ಈ ಅವಧಿಯಲ್ಲಿ ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಪ್ರಮಾಣವು 6 ಶೇಕಡಾವಾರು ಅಂಶಗಳಷ್ಟು ಹೆಚ್ಚಳವಾಗಿದೆ
- ಖಾಸಗಿ ಶಾಲೆಗೆ ಸೇರುವ ಮಕ್ಕಳ ಪ್ರಮಾಣವು 2018ಕ್ಕೆ ಹೋಲಿಸಿದರೆ 2021ರಲ್ಲಿ ಶೇ 32.5ರಿಂದ ಶೇ 24.4ಕ್ಕೆ ಇಳಿಕೆಯಾಗಿದೆ. ಈ ಅವಧಿಯಲ್ಲಿ ಖಾಸಗಿ ಶಾಲೆ ಸೇರುವ ಮಕ್ಕಳ ಪ್ರಮಾಣವು 8.1 ಶೇಕಡಾವಾರು ಅಂಶಗಳಷ್ಟು ಇಳಿಕೆಯಾಗಿದೆ

ನೋಂದಣಿ: ಲಿಂಗ ತಾರತಮ್ಯ ಇಳಿಕೆ

ಕೋವಿಡ್‌ಪೂರ್ವದಲ್ಲಿ ಹೆಣ್ಣುಮಕ್ಕಳನ್ನು ಸರ್ಕಾರಿ ಶಾಲೆಗೆ ಮತ್ತು ಗಂಡು ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವ ಪರಿಪಾಟವಿತ್ತು. ಕೋವಿಡ್‌ನಿಂದ ಆರ್ಥಿಕ ಸ್ಥಿತಿ ಕುಸಿದಿರುವ ಕಾರಣ, ಅನಿವಾರ್ಯವಾಗಿ ತಮ್ಮ ಗಂಡುಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಪೋಷಕರ ಪ್ರಮಾಣ ಏರಿಕೆಯಾಗಿದೆ. ಪರಿಣಾಮವಾಗಿ ಶಿಕ್ಷಣ ನೀಡುವಲ್ಲಿ ಇದ್ದ ಲಿಂಗ ತಾರತಮ್ಯವು ಇಳಿಕೆಯಾಗಿದೆ.

2018ರಲ್ಲಿ, ಸರ್ಕಾರಿ ಶಾಲೆಗೆ ಸೇರುವ ಹೆಣ್ಣುಮಕ್ಕಳ ಪ್ರಮಾಣವು ಸರ್ಕಾರಿ ಶಾಲೆ ಸೇರುವ ಗಂಡುಮಕ್ಕಳ ಪ್ರಮಾಣಕ್ಕಿಂತ ಹೆಚ್ಚು ಇತ್ತು. 2018ರಲ್ಲಿ, ಸರ್ಕಾರಿ ಶಾಲೆ ಸೇರುವ ಹೆಣ್ಣು ಮತ್ತು ಗಂಡು ಮಕ್ಕಳ ಪ್ರಮಾಣದಲ್ಲಿನ ಅಂತರವು 7.2 ಶೇಕಡಾವಾರು ಅಂಶಗಳಷ್ಟು ಇತ್ತು. 2021ರಲ್ಲಿ ಈ ಅಂತರದ ಪ್ರಮಾಣವು 4.5 ಶೇಕಡಾವಾರು ಅಂಶಗಳಿಗೆ ಇಳಿಕೆಯಾಗಿದೆ.



ಶಾಲೆ ಸೇರದವರು ಒಂದು ಪಟ್ಟು ಹೆಚ್ಚು

ಶಾಲೆ ಸೇರದ ಮಕ್ಕಳ ಪ್ರಮಾಣವು 2018ರಲ್ಲಿ ಕಡಿಮೆ ಇತ್ತು. ಆದರೆ ಆ ಪ್ರಮಾಣವು 2020ರಲ್ಲಿ ಒಂದು ಪಟ್ಟು ಹೆಚ್ಚಾಗಿದೆ. ಶಾಲೆ ಸೇರದ ಮಕ್ಕಳ ಪ್ರಮಾಣವು 2021ರಲ್ಲೂ ಅದೇ ಮಟ್ಟದಲ್ಲಿ ಉಳಿದಿದೆ. ಹಣಕಾಸಿನ ಸಮಸ್ಯೆ ಮತ್ತು ದುಡಿಮೆಯ ಕಾರಣದಿಂದ ಮಕ್ಕಳು ಶಾಲೆ ಸೇರಲು ಸಾಧ್ಯವಾಗಿಲ್ಲ. ಜತೆಗೆ ಕೋವಿಡ್ ಹರಡುತ್ತದೆ ಎಂಬ ಭಯವೂ ಮಕ್ಕಳು ಶಾಲೆಗೆ ಸೇರದೇ ಇರಲು ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ.



ಟ್ಯೂಷನ್‌ಗೆ ಬೇಡಿಕೆ ಹೆಚ್ಚಳ

ಶಾಲೆಗೆ ದಾಖಲಾಗಿರುವ ಮಕ್ಕಳು ಟ್ಯೂಷನ್‌ಗೆ ಸೇರುವ ಪ್ರಮಾಣ ಕಳೆದ ಮೂರು ವರ್ಷಗಳಲ್ಲಿ ಏರಿಕೆಯಾಗಿದೆ. 1ನೇ ತರಗತಿಯಿಂದ ಹಿಡಿದು 10ನೇ ತರಗತಿವರೆಗೂ ಈ ಪ್ರವೃತ್ತಿ ಕಂಡುಬಂದಿದೆ. 2018ಕ್ಕೆ ಹೋಲಿಸಿದರೆ, 2021ರಲ್ಲಿ ಟ್ಯೂಷನ್‌ಗೆ ದಾಖಲಾದ ಮಕ್ಕಳ ಪ್ರಮಾಣ ಸರಿಸುಮಾರು ಶೇ 10ರಿಂದ ಶೇ 12ರಷ್ಟು ಅಧಿಕವಾಗಿದೆ. ಕೋವಿಡ್ ಕಾರಣದಿಂದ ಭೌತಿಕ ತರಗತಿಗಳು ನಿಗದಿಯಂತೆ ನಡೆದಿಲ್ಲ. ಆದರೆ ಇದಕ್ಕೆ ಪರ್ಯಾಯವಾಗಿ ಆರಂಭಿಸಿದ ಆನ್‌ಲೈನ್ ಕಲಿಕೆ ಪರಿಣಾಮಕಾರಿ ಆಗಿಲ್ಲ ಎಂಬ ಅಂಶವು ಟ್ಯೂಷನ್ ದಾಖಲಾತಿ ಹೆಚ್ಚಳವಾಗಿರುವ ಈ ಪ್ರವೃತ್ತಿಯಿಂದ ತಿಳಿಯುತ್ತದೆ.

ಸರ್ಕಾರಿ ಹಾಗೂ ಖಾಸಗಿ ಶಾಲೆಗಳೆನ್ನದೆ ಎಲ್ಲೆಡೆಯೂ ಈ ಟ್ಯೂಷನ್ ಪ್ರವೃತ್ತಿ ಬೆಳೆದಿದೆ. 2018ರಲ್ಲಿ ಸರ್ಕಾರಿ ಶಾಲೆಯ ಶೇ 29.6ರಷ್ಟು ಮಕ್ಕಳು ಮನೆಪಾಠಕ್ಕೆ ಹೋಗುತ್ತಿದ್ದರು, ಅವರ ಪ್ರಮಾಣ 2021ರಲ್ಲಿ ಶೇ 39.5ಕ್ಕೆ ಏರಿಕೆ ಕಂಡಿದೆ. ಅಂತೆಯೇ ಖಾಸಗಿ ಶಾಲೆಗಳ ಶೇ 26.7ರಷ್ಟು ಮಕ್ಕಳು ಟ್ಯೂಷನ್‌ಗೆ ದಾಖಲಾಗಿದ್ದರು. ಇವರ ಪ್ರಮಾಣ 2021ರಲ್ಲಿ ಶೇ 38.2ಕ್ಕೆ ಏರಿಕೆಯಾಗಿದೆ.

ಸ್ಮಾರ್ಟ್‌ಫೋನ್ ಕೊಳ್ಳುವ ಅನಿವಾರ್ಯ ಸೃಷ್ಟಿಸಿದ ಸಾಂಕ್ರಾಮಿಕ

ದೇಶದಲ್ಲಿ ಕೋವಿಡ್ ಸಾಂಕ್ರಾಮಿಕ ಅಡಿಯಿಡುತ್ತಿದ್ದಂತೆಯೇ ಭೌತಿಕ ಶಾಲಾ ತರಗತಿಗಳು ಬಂದ್ ಆದವು. ಆನ್‌ಲೈನ್ ತರಗತಿಗೆ ಹೊಂದಿಕೊಳ್ಳಬೇಕಾದ ಅನಿವಾರ್ಯವು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಎದುರಾಯಿತು. ಆದರೆ ಅದಕ್ಕೆ ಅಗತ್ಯವಾಗಿ ಬೇಕಿದ್ದ ಸ್ಮಾರ್ಟ್‌ಫೋನ್ ಲಭ್ಯತೆ ಆ ವೇಳೆ ಅಷ್ಟಾಗಿ ಇರಲಿಲ್ಲ. 2018ರಲ್ಲಿ ಅಂದರೆ ಕೋವಿಡ್‌ಗೂ ಮೊದಲು, ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಶೇ 36.5ರಷ್ಟು ಮನೆಗಳಲ್ಲಿ ಸ್ಮಾರ್ಟ್‌ಫೋನ್ ಇತ್ತು. 2021ರ ವೇಳೆಗೆ ಈ ಪ್ರಮಾಣ ಶೇ 67.6ಕ್ಕೆ ಏರಿಕೆಯಾಯಿತು. ಆನ್‌ಲೈನ್ ತರಗತಿ ಕಾರಣಕ್ಕೆ ಮೂರು ವರ್ಷಗಳಲ್ಲಿ ಈ ಪ್ರಮಾಣವು ಬಹುತೇಕ ದುಪ್ಪಟ್ಟಾಗಿದೆ.

ಮನೆಯಲ್ಲಿ ಸ್ಮಾರ್ಟ್‌ಫೋನ್ ಲಭ್ಯತೆ (ರಾಜ್ಯವಾರು) (%)



ಟ್ಯೂಷನ್ ಪಡೆಯುತ್ತಿರುವ ಮಕ್ಕಳು



ಆಧಾರ: ಶಿಕ್ಷಣದ ಸ್ಥಿತಿಗತಿ ವಾರ್ಷಿಕ ವರದಿ (ಗ್ರಾಮೀಣ)– 2021 (ಅಸರ್)

ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ., ಪ್ರವಾ ಗ್ರಾಫಿಕ್ಸ್: ಶಶಿಧರ ಹಳೇಮನಿ

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 17

ಆನೆಯ ತಲೆ ಜೋಡಿಸಿದ ಶಿವ

ಗಣಪತಿಯು ಈಶ್ವರನಿಂದ ಹತನಾದಮೇಲೆ ದೇವತೆಗಳು ಗಣಗಳೂ ಹರ್ಷಚಿತ್ತರಾಗಿದ್ದರೆ, ತಲೆ ಕತ್ತರಿಸಿದ ಈಶ್ವರ ಹೆಚ್ಚು ದುಃಖಿತನಾಗಿದ್ದ. ಸ್ಥಳಕ್ಕೆ ಧಾವಿಸಿದ ಗಿರಿಜೆ ಮಗನ ಶಿರಚ್ಛೇದ ಕಂಡು ದುಃಖ ಮತ್ತು ಕೋಪ ದಿಂದ ಕುದಿದುಹೋದಳು. ಪಾರ್ವತಿ ಅತ್ಯಂತ ಕೋಪದಿಂದ ಸಾವಿರಾರು ಶಕ್ತಿದೇವತೆಗಳನ್ನು ಸೃಷ್ಟಿಸಿ, ದೇವತೆಗಳನ್ನು, ಗಣಗಳನ್ನು ನಾಶಮಾಡುವಂತೆ ಆದೇಶಿಸಿದಳು. ದೇವಿಯ ಮಾತಿನಂತೆ ಸಮಸ್ತ ಶಕ್ತಿದೇವಿಯರು ಕೋಪಾವಿಷ್ಟ ರಾಗಿ ಸಮಸ್ತರನ್ನೂ ನಾಶಮಾಡತೊಡಗಿದರು. ಗಣಗಳ ಅಧಿಪತಿ ವಿಷ್ಣು, ಬ್ರಹ್ಮ, ಶಂಕರ, ಇಂದ್ರ, ಕುಬೇರ, ಸ್ಕಂದ, ಸೂರ್ಯ ಮೊದಲಾದ ಸಮಸ್ತ ದೇವತೆಗಳನ್ನೂ ಸಹ ಲಕ್ಷಿಸದೇ ಶಕ್ತಿದೇವಿಯರು ಧ್ವಂಸಮಾಡುತ್ತಾ ಬಂದರು.

ಪಾರ್ವತಿ ಸೃಷ್ಟಿಸಿದ ಕರಾಲೀ, ಕುಬ್ಜಕಾ, ಖಂಜಾ, ಲಂಬಶೀರ್ಷಾ ಮುಂತಾದ ಶಕ್ತಿದೇವಿಯರ ಕ್ರೂರಸಂಹಾರವನ್ನು ವಿಷ್ಣುಬ್ರಹ್ಮಾದಿಗಳು ನೋಡಿ ಕಳವಳಗೊಂಡರು. ಕೊನೆಗೆ ದೇವತೆಗಳೆಲ್ಲರೂ ಪಾರ್ವತಿಗೆ ಶರಣಾಗಿ ತಮ್ಮನ್ನು ಕಾಪಾಡುವಂತೆ ಆರ್ತನಾದ ಮಾಡತೊಡಗಿದರು. ಆಗ ಶಂಕರನೂ ಸಹ ಸಾಮಾನ್ಯ ಮನುಷ್ಯನಂತೆ ದುಃಖಿಸತೊಡಗಿದ.

ದೇವಿಯ ಉಗ್ರ ಕೋಪ ಕಂಡು ದೇವತೆಗಳೆಲ್ಲರೂ ಭಯದಿಂದ ದೂರ ದಲ್ಲಿ ನಿಂತಿರುವಾಗ ನಾರದ ಮಧ್ಯಪ್ರವೇಶಿಸಿದ. ನಾರದನ ಸಲಹೆಯಂತೆ ದೇವತೆಗಳೆಲ್ಲಾ ಸೇರಿ ಪಾರ್ವತಿಯು ಪ್ರಸನ್ನಳಾಗುವವರೆಗೂ ಮುನಿಗಳೊಡನೆ ವಿಧವಿಧವಾಗಿ ಸ್ತುತಿಸಲು ತೀರ್ಮಾನಿಸಿದರು. 'ಓ ಲೋಕಮಾತೆಯೇ, ನಿನಗೆ ನಮಸ್ಕಾರ. ಸರ್ವಮಂಗಳೆಯೇ, ನಿನಗೆ ವಂದನೆ. ನೀನು ಆದಿಶಕ್ತಿ. ಸರ್ವಲೋಕಗಳನ್ನೂ ಸೃಷ್ಟಿಸುವವಳು. ಅವುಗಳನ್ನು ಪಾಲಿಸುವವಳು. ಕೊನೆಗೆ ನಾಶಮಾಡುವವಳೂ ನೀನೆ. ನಿನ್ನ ಕೋಪಕ್ಕೆ ಮೂರು ಲೋಕಗಳೂ ನಾಶವಾಗುತ್ತಿವೆ. ಆದುದರಿಂದ ನಮ್ಮ ಮೇಲೆ ಅನುಗ್ರಹಮಾಡಿ ಪ್ರಸನ್ನಳಾಗು. ಲೋಕವನ್ನುದ್ಧಾರಮಾಡ' ಎಂದು ಸ್ತೋತ್ರ ಮಾಡಿದರು.

ದೇವಋಷಿಗಳೆಲ್ಲರೂ ಪ್ರಾರ್ಥಿಸಿದರೂ, ಪಾರ್ವತಿ ಕೋಪ ಶಮನವಾಗಲಿ ಲ್ಲ. ಇದರಿಂದ ದೇವರ್ಷಿಗಳು ಪುನಃ ದೇವಿಯನ್ನು ಸ್ಮರಿಸುತ್ತಾ 'ಎಲೈ ದೇವಿ, ಈಗ ನೀನು ಸಂಹರಿಸಬೇಕೆಂದಿರುವವರ ಗುಂಪಿನಲ್ಲಿ ನಿನ್ನ ಪತಿಯಾದ ಶಂಕರನೂ ಇರುವನು. ಹರಿ, ಬ್ರಹ್ಮ, ಇಂದ್ರಾದಿಗಳೂ ಸಹ ನಿಮ್ಮ ಮಕ್ಕಳ ಲ್ಲವೇ? ನಿನ್ನವರನ್ನೇ ಕೋಪದಿಂದ ನಾಶಮಾಡುದುಚಿತವೇ?' ಎಂದು ಋಷಿಗಳೆಲ್ಲರೂ ದೈನ್ಯದಿಂದ ಪ್ರಾರ್ಥಿಸಿದರು.

ಇದರಿಂದ ದೇವಿಯು ಸ್ವಲ್ಪಮಟ್ಟಿಗೆ ಪ್ರಸನ್ನಳಾಗಿ 'ಬ್ರಹ್ಮರ್ಷಿಗಳೇ, ನನ್ನ ಈ ಸಂಹಾರಕೃತ್ಯವು ನಿಲ್ಲಬೇಕಾದರೇ ಮೊದಲು ನನ್ನ ಮಗನು ಬದುಕಬೇಕು. ಅವನೇ ಮುಂದೇ ನಿಮ್ಮೆಲ್ಲರಿಗೂ ನಾಯಕನಾಗಬೇಕು. ಅಲ್ಲಿಯವರೆಗೂ ನೀವು ನನ್ನಿಂದ ಶಾಂತಿಯನ್ನು ಪಡೆಯಲಾರಿರಿ. ನಿಮಗೆ ಸುಖವು ದೊರೆಯಲಾರದು' ಎಂದಳು. ಆಗ ದೇವತೆಗಳು ಶಂಕರನಲ್ಲಿಗೆ ಹೋಗಿ ದೇವಿಯ ಮನೋಭಿಪ್ರಾಯವನ್ನು ತಿಳಿಸಿದರು. ಆಗ ಶಂಕರನು ಹೇಗಾದರೂ ಪಾರ್ವತಿಯ ಕೋಪದಿಂದ ಲೋಕಗಳನ್ನು ರಕ್ಷಿಸಬೇಕೆಂದು 'ದೇವತೆಗಳೆ, ಈಗಲೇ ಉತ್ತರ ದಿಕ್ಕಿಗೆ ಹೋಗಿ, ಮೊದಲು ನೀವು ಯಾವ ಪ್ರಾಣಿಯನ್ನು ಕಾಣು ವಿರೋ ಅದರ ತಲೆಯನ್ನು ಕತ್ತರಿಸಿ ತಂದು, ಈ ಬಾಲಕನ ಮೃತದೇಹಕ್ಕೆ ಸೇರಿಸಿರಿ' ಎಂದು ಅಪ್ಪಣೆ ಮಾಡಿದ. ಅದರಂತೆ ದೇವತೆಗಳೂ ಉತ್ತರ ದಿಕ್ಕಿಗೆ ಹೋಗಿ, ಆನೆಯೊಂದರ ತಲೆಯನ್ನು ಕಡಿದು ಪಾರ್ವತೀಪುತ್ರನ ಕಳೇವರವಕ್ಕೆ ಜೋಡಿಸಿ ವಿಧಿವತ್ತಾಗಿ ಅರ್ಚನೆ ಮಾಡಿದರು.

ಆಗ ಅಲ್ಲಿ ನೆರೆದಿದ್ದ ಬ್ರಹ್ಮ-ವಿಷ್ಣು ದೇವತೆಗಳೂ ಗಣಗಳೂ ಶಂಕರನಿಗೆ ನಮಸ್ಕರಿಸಿ ಹೀಗೆ ಕೇಳಿಕೊಂಡರು: 'ಎಲೈ ಪರಶಿವನೇ, ನಿನ್ನ ತೇಜಸ್ಸಿನಿಂದಲೇ ನಾವೆಲ್ಲರೂ ಜನಿಸಿದ್ದೇವೆ. ಈಗಲೂ ನಮ್ಮ ಮಂತ್ರಪ್ರಭಾವದಿಂದ ಅದೇ ತೇಜಸ್ಸು ಈ ಜಲದಲ್ಲಿ ಬಂದು ನಿಲ್ಲಲಿ' ಎಂದು ಪ್ರಾರ್ಥಿಸಿದರು. ಆ ಅಭಿಮಂತ್ರಿತವಾದ ನೀರನ್ನು ಬಾಲಕನ ಮೃತದೇಹದ ಮೇಲೆ ಶಿವಸಹಿತರಾಗಿ ಸರ್ವರೂ ಪ್ರೋಕ್ಷಿಸಿದರು. ಜಲಪ್ರೋಕ್ಷಣೆಯಾದೊಡನೆಯೇ ಬಾಲಕನು ಎದ್ದು ಕುಳಿತನು. ಗಜಮುಖನಾಗಿಯೂ ಸುಂದರಗಾತ್ರನಾಗಿಯೂ ಅತಿ ತೇಜಸ್ವಿಯೂ ಆಗಿ ಕಂಗೊಳಿಸುತ್ತಿದ್ದ ಬಾಲಕನನ್ನು ಕಂಡು ಪಾರ್ವತಿ ಸಂತುಷ್ಟಳಾದಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಗುಂಪೊಂದು ವೇದಿಕೆಗೆ ಹತ್ತಿ, ವೇದಿಕೆಯನ್ನು ಧ್ವಂಸಗೊಳಿಸುವ ಮತ್ತು ಬಿಜೆಪಿ ಬ್ಯಾನರನ್ನು ಹರಿಯುತ್ತಿರುವ ವಿಡಿಯೊವೊಂದು ವೈರಲ್ ಆಗಿದೆ. ಮೂರು ಕೃಷಿ ಕಾನೂನುಗಳನ್ನು ಹಿಂಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ ಬಳಿಕ ಹರಿಯಾಣದಲ್ಲಿ ರೈತರು ನಡೆದುಕೊಂಡ ರೀತಿ ಇದು ಎಂದು ಹೇಳಲಾಗಿದೆ. 'ಕೃಷಿ ಕಾನೂನುಗಳನ್ನು ಹಿಂಪಡೆಯುವುದಾಗಿ ಹೇಳಿದ ಬಳಿಕ ಈ ರೀತಿಯ ಘಟನೆಗಳು ನಡೆಯುತ್ತಿವೆ. ಮಾಧ್ಯಮಗಳು ಇವನ್ನು ತೋರಿಸುವುದಿಲ್ಲ' ಎಂಬ ಅಡಿ ಬರಹ ನೀಡಲಾಗಿದೆ.

ಈ ಘಟನೆ ನಡೆದಿರುವುದು 2021ರ ಜನವರಿಯಲ್ಲಿ ಎಂದು ಲಾಜಿಕಲ್ ಇಂಡಿಯನ್ ಹೇಳಿದೆ. ಈ ಕುರಿತು ಎಬಿಪಿ ನ್ಯೂಸ್ 2021ರ ಜ.10ರಂದು ವರದಿ ಮಾಡಿದೆ. ಈ ಘಟನೆ ಹರಿಯಾಣದ ಕರ್ನಾಲ್‌ನಲ್ಲಿ ನಡೆದಿದೆ. ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಆಯೋಜಿಸಿದ್ದ ಮಹಾಪಂಚಾಯಿತಿಗೆ ರೈತರು ಅಡ್ಡಿಪಡಿಸಿದ್ದರು. ಈ ಪ್ರತಿಭಟನೆ ನಡೆಸಿದ್ದಕ್ಕಾಗಿ ಕಾಂಗ್ರೆಸ್ ವಿರುದ್ಧ ಖಟ್ಟರ್ ಹರಿಹಾಯ್ದಿರುವುದಾಗಿ ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ನವೆಂಬರ್ 30, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಅನೂರಾಧ ಏಕಾದಶಿ ಗಂ. 37-48 (ರಾ. 9-39) ಮಂಗಳವಾರ ನಿತ್ಯ ನಕ್ಷತ್ರ ಹಸ್ತ ಗಂ. 25-51 (ಹ. 4-52) ಆಯುಃ ನಾಮ ಯೋಗ ಗಂ. 37-6 ಬವ ಕರಣ ಗಂ. 9-24 ವಿಷ ಗಂ. 45-8 ಅಮೃತ ಗಂ 10-37: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-26 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 2, 6

ಮೇಷ: ಹಿರಿಯರ ಆಶೀರ್ವಾದದಿಂದಾಗಿ ಬಯಸಿದ ಎಲ್ಲ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಉನ್ನತ ವ್ಯಾಸಂಗಕ್ಕಾಗಿ ವಿದೇಶದಲ್ಲಿ ಅವಕಾಶ ದೊರಕಲಿದೆ. ಸ್ಪರ್ಧಾಳುಗಳಿಗೆ ಯಶಸ್ಸಿನ ಗರಿ ಮುಡಿಗೇರಲಿದೆ.

ವೃಷಭ: ಉನ್ನತ ಪರೀಕ್ಷೆಗಳಲ್ಲಿ ನಿರೀಕ್ಷೆಯಂತೆ ಉತ್ತಮ ಫಲಿತಾಂಶ. ಮಕ್ಕಳ ಮುಂದಿನ ವ್ಯಾಸಂಗಕ್ಕಾಗಿ ಹಣಕಾಸಿನ ಹೊಂದಾಣಿಕೆಯಾಗಲಿದೆ. ಮಕ್ಕಳ ಪ್ರಗತಿಯಿಂದಾಗಿ ಮನೆಯಲ್ಲಿ ಸಂಭ್ರಮದ ವಾತಾವರಣ.

ಮಿಥುನ: ಅಪರೂಪದ ವ್ಯಕ್ತಿಯೊಬ್ಬರ ಭೇಟಿಯಿಂದ ಮಹತ್ತರ ಬದಲಾವಣೆ. ಬಂಧುಗಳ ಮಂಗಳಕಾರ್ಯಗಳನ್ನು ನಡೆಸಲಿದ್ದೀರಿ. ವಾಹನ ವ್ಯಾಪಾರಿಗಳಿಗೆ ವಿಶೇಷ ಲಾಭದ ಸಾಧ್ಯತೆ. ಅನಾರೋಗ್ಯ ಸಾಧ್ಯತೆ.

ಕರ್ಕಾಟಕ: ಮನೆಯಲ್ಲಿ ಪರಿಸ್ಥಿತಿ ತಿಳಿಗೊಳ್ಳುವುದು. ಎಂಜಿನಿಯರ್‌ಗಳಿಗೆ, ವಿನ್ಯಾಸಕಾರರಿಗೆ ಒಳ್ಳೆಯ ಸುದ್ದಿಯೊಂದು ಕೇಳಿಬರಲಿದೆ. ನಿಮ್ಮ ಮುಂದಿನ ನಡೆ ಸರಿಯಾದ ಮಾರ್ಗದಲ್ಲಿ ಸಾಗಿ ಯಶಸ್ಸನ್ನು ಕಂಡುಕೊಳ್ಳಲಿದ್ದೀರಿ.

ಸಿಂಹ: ಬಹುದಿನಗಳ ನಿಮ್ಮ ಕನಸುಗಳು ನನಸಾಗುವ ದಿನವಾಗಿದೆ. ಅಧಿಕಾರಿ ಹಾಗೂ ಹಿರಿಯರ ಸಹಕಾರದಿಂದ ಅನುಕೂಲ. ದೂರದ ಊರಿಗೆ ಪ್ರಯಾಣ ಸಾಧ್ಯತೆ. ಶುಭ ಕಾರ್ಯಗಳಿಗಾಗಿ ಖರ್ಚು ಸಂಭವ.

ಕನ್ಯಾ: ಬಾಲ್ಯ ಸ್ನೇಹಿತರಿಂದಾಗುವ ಹೊಸ ವ್ಯಕ್ತಿಗಳ ಪರಿಚಯದಿಂದಾಗಿ ವ್ಯಾಪಾರ ವ್ಯವಹಾರದಲ್ಲಿ ಹೆಚ್ಚಿನ ಲಾಭವಾಗಲಿದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ಅವಕಾಶ ಹುಡುಕಿಕೊಂಡು ಬರಲಿದೆ. ಜೀವನದಲ್ಲಿ ಸ್ಥಿರತೆ.

ತುಲಾ: ಪ್ರತಿಭೆಗೆ ತಕ್ಕ ಪ್ರತಿಫಲ ಸಿಗಲಿದೆ. ಚಿನ್ನಾಭರಣ ಮಾರಾಟಗಾರರಿಗೆ ಶುಭದಿನ. ಮದುವೆ ವಿಷಯ ಪ್ರಸ್ತಾಪ ಮಾಡಲಿದ್ದೀರಿ. ವೈದ್ಯಕೀಯ ಸಿಬ್ಬಂದಿಗೆ ಸೌಲಭ್ಯಗಳು ದೊರಕುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಗೊಂದಲದ ಮನಸ್ಥಿತಿ.

ವೃಶ್ಚಿಕ: ಕೈಬಿಟ್ಟುಹೋಗಿದ್ದ ಆಸ್ತಿಯು ಇಂದು ಗುರುಹಿರಿಯರ ಆಶೀರ್ವಾದದಿಂದಾಗಿ ನಿಮ್ಮ ಕೈಸೇರಲಿದೆ. ಆರೋಗ್ಯ ಉತ್ತಮಗೊಳ್ಳಲಿದೆ. ಉದ್ವೇಗಕ್ಕೆ ಅವಕಾಶ ಇಲ್ಲ. ಸಂಗಾತಿಯ ಸಕಾಲಿಕ ಸಲಹೆ ಪಡೆಯುವಿರಿ.

ಧನು: ದಿನವಿಡೀ ಉತ್ಸಾಹ, ಉಲ್ಲಾಸದಿಂದ ಕಾರ್ಯನಿರ್ವಹಿಸಲಿದ್ದೀರಿ. ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳ ಅಧಿಕಾರಿಗಳಿಗೆ ವರ್ಗಾವಣೆಯ ಸಾಧ್ಯತೆ. ಹವ್ಯಾಸಿ ಬರಹಗಾರರು, ಪತ್ರಕರ್ತರುಗಳಿಗೆ ಶುಭ ಸಮಾಚಾರ.

ಮಕರ: ರಾಜಕೀಯ ರಂಗಕ್ಕೆ ಇಳಿಯುವ ಸುದಿನ. ಸಾಮಾಜಿಕ ಸೇವೆಯಲ್ಲಿ ನಿಮಗಿದ್ದ ಕಾಳಜಿ ಹಾಗೂ ನಿಷ್ಠೆಯಿಂದ ಎಲ್ಲರ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಅದೃಷ್ಟ ಖುಲಾಯಿಸಿ ಉತ್ತಮ ಸ್ಥಾನವನ್ನು ಹೊಂದುವ ಅವಕಾಶ.

ಕುಂಭ: ಹೊಸ ಮನೆ ಅಥವಾ ನಿವೇಶನ ಖರೀದಿಗೆ ಚಾಲನೆ ದೊರೆಯುವುದು. ಸಾಮಾಜಿಕ ಕಾರ್ಯಕ್ರಮಗಳಲ್ಲಿರುವವರಿಗೆ ಯಶಸ್ಸು. ನೇಕಾರರಿಗೆ, ದರ್ಜಿಗಳಿಗೆ ಉತ್ತಮ ಆದಾಯ. ಹೊರಗುತ್ತಿಗೆ ಕೆಲಸಗಳಿಂದ ಆದಾಯ.

ಮೀನ: ವಿದೇಶದಿಂದ ಬಂಧುಗಳ ಆಗಮನ. ಹೊಸ ವರಮಾನದ ಮಾರ್ಗ ಕಂಡುಕೊಳ್ಳುವಿರಿ. ಕೆಲಸದಲ್ಲಿ ಪ್ರಮುಖ ಬೆಳವಣಿಗೆ ನಿಮ್ಮ ಗಮನಕ್ಕೆ ಬರಲಿದೆ. ಮದುವೆ ಮುಂತಾದ ಶುಭ ಸಮಾರಂಭಕ್ಕೆ ಚಿಂತನೆ ನಡೆಸಲಿದ್ದೀರಿ.

ನಿಮ್ಮ ಜನ್ಮದಿನ 30-ನವೆಂಬರ್ ಈ ದಿನ ಅತ್ಯಂತ ಶುಭಕರ. ನಿಮ್ಮ ಜನರಿಂದಲೇ ನಿಮಗೆ ಯಶಸ್ಸು ಹಾಗೂ ಕೀರ್ತಿ ದೊರೆಯಲಿದೆ. ಪರಿಸರ ಪ್ರೇಮಿಗಳಿಗೆ ಹೋರಾಟದ ವರ್ಷ. ಅವಿವಾಹಿತರಿಗೆ ವಿವಾಹ ಯೋಗವಿದೆ. ನೌಕರರಿಗೆ ಉನ್ನತ ಶ್ರೇಣಿಯು ಲಭಿಸಿ ಆದಾಯವನ್ನು ಹೆಚ್ಚಿಸಿಕೊಳ್ಳುವ ಅವಕಾಶ. ನಿಮಗೆ ಹೆಚ್ಚು ಪ್ರಿಯವಾದವರಿಂದ ಸಂತಸದ ಸುದ್ದಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪಾಪ - ಪುಣ್ಯದ ತಕ್ಕಡಿ

ತಕ್ಕಡಿಯದೈವ ಪಿಡಿದದರೊಂದು ತಟ್ಟೆಯಲಿ |
ಒಕ್ಕುವುದು ಬಿಡದೆ ಜೀವಿಯ ಪಾಪಚಯವ ||
ಇಕ್ಕುವುದು ಸುಕೃತಗಳನಿನ್ನೊಂದರೊಳಗಲ್ಲಿ |
ಭಕ್ತಿ ಪಶ್ಚಾತ್ತಾಪ-ಮಂಕುತಿಮ್ಮ || 508 ||

ಪದ-ಅರ್ಥ: ಪಿಡಿದದರೊಂದು = ಪಿಡಿದು(ಹಿಡಿದು) + ಅದರ + ಒಂದು, ಒಕ್ಕುವುದು = ಗುಡ್ಡೆ ಹಾಕುವುದು, ಪಾಪಚಯ = ಪಾಪದ ರಾಶಿ, ಇಕ್ಕುವುದು = ಇಡುವುದು, ಸುಕೃತಗಳನಿನ್ನೊಂದರೊಳಗಲ್ಲಿ = ಸುಕೃತಗಳನ್ನು (ಒಳ್ಳೆಯ ಕಾರ್ಯಗಳನ್ನು) + ಇನ್ನೊಂದರೊಳಗೆ + ಅಲ್ಲಿ

ವಾಚ್ಯಾರ್ಥ: ದೈವ ತಕ್ಕಡಿಯನ್ನು ಹಿಡಿದುಕೊಂಡು, ಒಂದು ತಟ್ಟೆಯಲ್ಲಿ ಜೀವಿಯ ಪಾಪರಾಶಿಯನ್ನು ಬಿಡದೆ ತುಂಬುತ್ತದೆ. ಇನ್ನೊಂದು ತಟ್ಟೆಯಲ್ಲಿ ಅವನ ಪುಣ್ಯ ಕಾರ್ಯಗಳನ್ನು ಪೇರಿಸುತ್ತದೆ. ಪಶ್ಚಾತ್ತಾಪವೇ ಭಕ್ತಿ.

ವಿವರಣೆ: ಬದುಕಿನಲ್ಲಿ ಕರ್ಮ ಮಾಡದೆ ಇರುವುದು ಸಾಧ್ಯವಿಲ್ಲ. ಪ್ರತಿಯೊಂದು ಕರ್ಮಕ್ಕೂ ಕರ್ಮಫಲವನ್ನು ಅನುಭವಿಸಲೇಬೇಕೆನ್ನುವುದು ಕರ್ಮಸಿದ್ಧಾಂತ. ಒಳ್ಳೆಯ ಕರ್ಮಗಳನ್ನು ಮಾಡಿದಾಗ ಪುಣ್ಯವೂ, ಕೆಟ್ಟ ಕಾರ್ಯಗಳನ್ನು ಮಾಡಿದಾಗ ಪಾಪವೂ ಬರುತ್ತವೆಂದೂ, ಸುಖದುಃಖಗಳು ಈ ಪುಣ್ಯ-ಪಾಪಗಳ ಫಲವೆಂದೂ, ಜನರು ನಂಬಿದ್ದಾರೆ. ಪುರಾಣಗಳಲ್ಲಿ, 'ಪರೋಪಕಾರಃ ಪುಣ್ಯಾಯ, ಪಾಪಾಯ ಪರಿಪೀಡನಂ' ಎಂದಿದೆ. ಪರೋಪಕಾರ ಮಾಡಿದರೆ ಪುಣ್ಯವೂ, ಪರರಿಗೆ ಹಿಂಸೆ ಮಾಡಿದರೆ ಪಾಪವೂ ಲಭಿಸುತ್ತವೆ. ಎಲ್ಲರೂ ಪುಣ್ಯದ ಫಲವಾದ ಸುಖವನ್ನು ಅಪೇಕ್ಷಿಸುತ್ತಾರೆಯೇ ವಿನಃ ಪುಣ್ಯಕಾರ್ಯಗಳನ್ನು ಮಾಡುವುದಿಲ್ಲ. ಪಾಪದ ಫಲವಾದ ದುಃಖವನ್ನು ಯಾರೂ ಬಯಸುವುದಿಲ್ಲ. ಆದರೆ ಪಾಪಕಾರ್ಯಗಳನ್ನು ಬಿಡುವುದಿಲ್ಲ, ಎನ್ನುತ್ತದೆ ಪುರಾಣದ ನುಡಿ.

ಈ ಕಗ್ಗ ಪ್ರತಿಮೆಯೊಂದನ್ನು ಸೃಷ್ಟಿಸುತ್ತದೆ. ದೈವ ಒಬ್ಬ ವ್ಯಾಪಾರಿಯಂತೆ ತಕ್ಕಡಿಯನ್ನು ಹಿಡಿದುಕೊಂಡು ಕುಳಿತಿದೆ. ನಾವು ಮಾಡಿದ ಪ್ರತಿಯೊಂದು, ಚಿಕ್ಕ ಪಾಪವನ್ನು ಬಿಡದೆ ತಂದು ತಕ್ಕಡಿಯ ಒಂದು ತಟ್ಟೆಯಲ್ಲಿ ಪೇರಿಸುತ್ತದೆ. ಅಂತೆಯೇ ನಾವು ಮಾಡಿದ ಚಿಕ್ಕಪುಟ್ಟ ಒಳ್ಳೆಯ ಕಾರ್ಯಗಳನ್ನು ತಂದು ಮತ್ತೊಂದು ತಟ್ಟೆಯಲ್ಲಿ ಹಾಕುತ್ತದೆ. ಎರಡನ್ನು ತೂಕಕ್ಕೆ ಹಾಕಿ, ಪಾಪ-ಪುಣ್ಯಗಳಿಗೆ ತಕ್ಕಂತೆ ಕೃಪೆಯನ್ನೋ, ಶಿಕ್ಷೆಯನ್ನೋ ನೀಡುತ್ತದೆ. ಅದರಿಂದ ಬಿಡುಗಡೆ ಸಾಧ್ಯವಿಲ್ಲ. ಹಾಗಾದರೆ ಪಾಪ ಪರಿಹಾರಕ್ಕೆ ಏನು ಉಪಾಯ? ಬಸವಣ್ಣನವರು ಒಂದು ಉಪಾಯವನ್ನು ಸೂಚಿಸುತ್ತಾರೆ. 'ಕೂಡಲ ಸಂಗಯ್ಯನ ನೆನೆದಡೆ ಪಾಪವು ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ' ಎನ್ನುತ್ತಾರೆ. ಅಂದರೆ ಭಕ್ತಿಯಿಂದ ಪಾಪನಾಶ ಸಾಧ್ಯ. 'ಪ್ರಾಣಿಹತ್ಯೆ ಮಾಡುವ ಸೂನೆಗಾರನ ಕತ್ತಿ ಪರುಷವ ಮುಟ್ಟಲೊಡನೆ ಹೊನ್ನಾಗದೆ?' ಎಂದು ಕೇಳುತ್ತಾರೆ. ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತ ಪಡುವುದೇ ಭಕ್ತಿಯ ದಾರಿ. ಹಿಂದೆ ಮಾಡಿದ ತಪ್ಪಿಗೆ ಪಶ್ಚಾತ್ತಾಪಪಟ್ಟು, ಮತ್ತೊಮ್ಮೆ ಅಂಥ ತಪ್ಪುಗಳನ್ನು ಮಾಡದಿರುವುದೆ ಪಾಪನಾಶದ ಪಥ.

ಆದರೆ ಪ್ರಶ್ನೋಪನಿಷತ್ತು ಪಾಪ-ಪುಣ್ಯಗಳೆರಡೂ ಬಂಧವೇ ಎನ್ನುತ್ತದೆ. ಪುಣ್ಯ ಚಿನ್ನದ ಸರಪಳಿ, ಪಾಪ ಕಬ್ಬಿಣದ ಸರಪಳಿ ಎರಡೂ ಬಂಧಗಳೇ. ಪುಣ್ಯಸಂಪಾದನೆ ಪಾಪದ ಸಾಲವನ್ನು ತೀರಿಸಲಿಕ್ಕಾಗಿ. ಸಾಲ ತೀರಿದ ಮೇಲೆ ಪುಣ್ಯಕ್ಕೆ ದಾಸನಾಗಬೇಕಿಲ್ಲ. ಉಪನಿಷತ್ತು ಹೇಳುತ್ತದೆ, 'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ'. ವಿದ್ವಾಂಸನು ಪುಣ್ಯ-ಪಾಪಗಳಿಂದ ಪಾರಾಗಿ ನಿರಂಜನನಾಗಿ ಪರಮಶಾಂತಿಯನ್ನು ಪಡೆಯುತ್ತಾನೆ.

ಪದಬಂಧ 4793

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತೊದಲು ಮಾತಲ್ಲ! ಪ್ರತ್ಯುತ್ತರ! (5)
3.ಮೊಸರು ಮಾರುವವನ ನಾಮ (3)
5.ಇದು ಕನ್ನಡಿಗನ ಟೈಟಲ್! (5)
7.ದಾಖಲೆಗಳ ಕೊನೆಯಲ್ಲಿ ಸೇರಿಸಿರುವ ವಿಶೇಷಾಂಶ (2)
9.ಪ್ರಾತಃಕಾಲದಿಂದ ಸಂಜೆವರೆಗಿನ ಕಾಲ (3)
11.ಕಲಾವಿದನ ಮನೆ ಬಾಗಿಲು (2)
13.ಲೋಹದ ಹಕ್ಕಿಯಲ್ಲಿನ ಪಯಣ (5)
15.ಅವನಿರುವ ಭೂಮಿ (3)
16.ವರದಿಯನ್ನು ಸಿದ್ಧಪಡಿಸುವವನು (5)

ಮೇಲಿಂದ ಕೆಳಕ್ಕೆ

1.ಕಡುಹಗೆತನಕ್ಕೊಂದು ಪರ್ಯಾಯ ಪದ (4)
2.ಈತ ಆನೆ ನಡೆಸುವವ (3)
4.ಸನಿಹದಲ್ಲೇ ನಡೆಸಿರುವ ಸಿದ್ಧತೆ (3)
6.ಬೈಯ್ಯಲು ಸೂಕ್ತವೆನಿಸಿದ ವಿಸ್ತಾರ ಜಾಗ (3)
8.ಸುರಾಸುರರ ಬಳಿಯಿರುವ ಜಾನುವಾರು (2)
9.ವನದಲ್ಲಿ ಮಾಡಿರುವ ಯಜ್ಞ (3)
10.ಕಟ್ಟಬೇಕಾದ ತೆರಿಗೆ (2)
12.ಬೆಲೆ ಮೊದಲಿದ್ದಾಗಿನ ಅಗತ್ಯ! (4)
13.ಆಂದೋಲನವನ್ನು ಹೀಗೆ ಹೇಳಿ (3)
14.ನರನು ನೋಡುತ್ತಿರುವ ಶಹರು (3)



4792ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಿವೇಕ 2.ತಹನಾಮೆ
4.ವಿಯೋಗ 5.ಅಪವಾದ
7.ತಿದ್ದುಪಡಿ 9.ಅತಿರೇಕ
11.ಅನುಮತಿ 12.ರಶೀತಿ
14.ಆಪ್ತಮಿತ್ರ 15.ಮಲಯಜ

ಮೇಲಿಂದ ಕೆಳಕ್ಕೆ:
1.ಅಲೆ 2.ಕಲಾವಿದ
3.ತರಗತಿ 6.ಪದ್ಧತಿ
8.ಪರಮ 10.ಕರಪತ್ರ
11.ಅತಿಕ್ರಮ 13.ಬೀಜ

ಸುಡೊಕು 5179

	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5178 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರ: ಹಣ, ಜಾತಿ ಸಮೀಕರಣ, ಅಧಿಕಾರ ಬಲ

ಕೈ, ಕಮಲ ಹುಮ್ಮಸ್ಸು; ಜೆಡಿಎಸ್‌ಗೆ ಸವಾಲು

• ಕೆ.ಓಂಕಾರ ಮೂರ್ತಿ

ಗ್ರಾ.ಪಂ ಅಧ್ಯಕ್ಷ, ತಾ.ಪಂ ಸದಸ್ಯನಾಗಿ ಕೆಲಸ ಮಾಡಿದ್ದು, 2008ರಲ್ಲಿ ಬಿಜೆಪಿಯಿಂದ ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸಿದ್ದೆ. ಕುಮಾರಣ್ಣನ ಹೆಸರು, ಅವರ ಕೆಲಸವೇ ಶ್ರೀರಕ್ಷೆ
ಸಿ.ಎನ್.ಮಂಜೇಗೌಡ, ಜೆಡಿಎಸ್ ಅಭ್ಯರ್ಥಿ



ನಾನು ಎಡಗೈ ಸಮುದಾಯಕ್ಕೆ ಸೇರಿದವನು. ದಲಿತರಿಗೆ ಸಾಮಾಜಿಕ ನ್ಯಾಯ ಒದಗಿಸಲು ಪಕ್ಷ ನನ್ನನ್ನು ಅಭ್ಯರ್ಥಿ ಮಾಡಿದ್ದು, ಈ ಅಂಶವೂ ನೆರವಿಗೆ ಬರಲಿದೆ
ಡಾ.ಡಿ.ತಿಮ್ಮಯ್ಯ, ಕಾಂಗ್ರೆಸ್ ಅಭ್ಯರ್ಥಿ

2015ರಿಂದಲೇ ಕ್ಷೇತ್ರದಲ್ಲಿ ನಿರಂತರ ಸಂಪರ್ಕ ಇಟ್ಟುಕೊಂಡಿದ್ದೇನೆ. ಗ್ರಾ.ಪಂ ಸದಸ್ಯರ ಕುಂದುಕೊರತೆಗೆ ಕಿವಿಯಾಗಿದ್ದೇನೆ. ಪ್ರಬುದ್ಧ ಮತದಾರರು ನನ್ನ ಕೈಹಿಡಿಯಲಿದ್ದಾರೆ
ಆರ್.ರಘು, ಬಿಜೆಪಿ ಅಭ್ಯರ್ಥಿ

ಮೈಸೂರು: ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಸತತ ಗೆಲುವಿನ ಇತಿಹಾಸದ ಬಲ, ಬಿಜೆಪಿಗೆ ಅಧಿಕಾರದ ಬಲವಿದ್ದು, ಎರಡೂ ಪಕ್ಷಗಳು ಗೆಲ್ಲುವ ಹುಮ್ಮಸ್ಸಿನಲ್ಲಿ ಪ್ರಚಾರ ನಡೆಸಿವೆ. ಜೆಡಿಎಸ್‌ಗೆ ಇತಿಹಾಸದ ಬಲವಿದ್ದರೂ ಶಾಸಕ ಜಿ.ಟಿ.ದೇವೇಗೌಡರಂಥ ಪ್ರಮುಖ ಮುಖಂಡರು ಪಕ್ಷದಿಂದ ದೂರ ಸರಿದಿರುವುದು ಸವಾಲಾಗಿ ಪರಿಣಮಿಸಿದೆ.

ಕ್ಷೇತ್ರದ 33 ವರ್ಷಗಳ ಇತಿಹಾಸದಲ್ಲಿ ಜನತಾ ಪರಿವಾರ ಹಾಗೂ ಕಾಂಗ್ರೆಸ್‌ನದ್ದೇ ಪಾರುಪತ್ಯ. ಬಿಜೆಪಿ ಒಮ್ಮೆ ಮಾತ್ರ ಗೆಲುವಿನ ರುಚಿ ಕಂಡಿದೆ.

ಈಗಿನ ಪರಿಸ್ಥಿತಿ ಭಿನ್ನವಾಗಿದೆ. ಎರಡು ಬಾರಿ ಗೆದ್ದಿದ್ದ ಸಂದೇಶ್ ನಾಗರಾಜ್ ಹಾಗೂ ಆರ್. ಧರ್ಮಸೇನ ಅವರನ್ನು ಕೈಬಿಟ್ಟು ಜೆಡಿಎಸ್ ಮತ್ತು ಕಾಂಗ್ರೆಸ್ ಕ್ರಮವಾಗಿ ಹೊಸಮುಖಗಳಾದ ಸಿ.ಎನ್. ಮಂಜೇಗೌಡ ಹಾಗೂ ಡಾ.ಡಿ.ತಿಮ್ಮಯ್ಯ ಅವರಿಗೆ ಮಣೆ ಹಾಕಿದ್ದರೆ, ಕಳೆದ ಸಲ ಸೋತಿದ್ದ ಆರ್.ರಘು (ಕೌಟಿಲ್ಯ) ಅವರಿಗೆ ಬಿಜೆಪಿ ಮತ್ತೊಂದು ಅವಕಾಶ ನೀಡಿದೆ.

ಪಕ್ಷದೊಳಗೇ ಅಸಮಾಧಾನ ಎದ್ದಿದ್ದರಿಂದ ಕಾಂಗ್ರೆಸ್ ಮೊದಲ ಬಾರಿ ಎನ್.ರಾಚಯ್ಯ ಕುಟುಂಬದವರಿಗೆ ಟಿಕೆಟ್ ನೀಡಿಲ್ಲ. ಆರೋಗ್ಯಾಧಿಕಾರಿಯಾಗಿ ಮೈಸೂರು–ಚಾಮರಾಜನಗರ ಅವಳಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿರುವ ಡಾ.ತಿಮ್ಮಯ್ಯ, ಸಿದ್ದರಾಮಯ್ಯ ಹೆಸರು ಜಪಿಸುತ್ತಲೇ ಪ್ರಚಾರ ನಡೆಸುತ್ತಿದ್ದಾರೆ. ತವರು ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಸಿದ್ದರಾಮಯ್ಯ, ಸಭೆ ಮೇಲೆ ಸಭೆ ನಡೆಸುವುದರ ಜೊತೆಗೆ ಅಭ್ಯರ್ಥಿ ಗೆಲ್ಲಿಸಿಕೊಂಡು ಬರಬೇಕೆಂದು ಸ್ಥಳೀಯ ಮುಖಂಡರಿಗೆ ಕಟ್ಟಪ್ಪಣೆ ಹೊರಡಿಸಿದ್ದಾರೆ.

ಮುಖ್ಯಾಂಶಗಳು

- ಕಾಂಗ್ರೆಸ್‌ಗೆ ಇತಿಹಾಸ ಬಲ, ಬಿಜೆಪಿಗೆ ಅಧಿಕಾರ ಬಲ
- ಕೋಟ್ಯಧಿಪತಿ ಅಭ್ಯರ್ಥಿಗಳ 'ಸಾಮರ್ಥ್ಯ' ಪ್ರದರ್ಶನ
- ಜಿಟಿಡಿ ತಟಸ್ಥ; ಸಂದೇಶ್ ನಾಗರಾಜ್ ಬಿಜೆಪಿಗೆ ಬೆಂಬಲ

ಗೆದ್ದ ಮೇಲೆ ತಿರುಗಿಯೂ ನೋಡಲ್ಲ!

'ಗ್ರಾಮೀಣಾಭಿವೃದ್ಧಿಯೇ ಗುರಿ ಎಂದು ಬೊಬ್ಬಿಡುತ್ತಾರೆ. ಗೆದ್ದ ಮೇಲೆ ಪಂಚಾಯಿತಿಯತ್ತ ತಿರುಗಿಯೂ ನೋಡಲ್ಲ. ಎಷ್ಟು ಅನುದಾನ ತರುತ್ತಾರೆ? ಯಾವ ಕೆಲಸಕ್ಕೆ ಕೊಡುತ್ತಾರೆ ಎಂಬುದೇ ಗೊತ್ತಾಗುವುದಿಲ್ಲ'!

–ಚಿಲ್ಕುಂದ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಅಸಮಾಧಾನದಿಂದ ಹೀಗೆ ನುಡಿದರು. ಕ್ಷೇತ್ರದ ಬಹುತೇಕ ಪಂಚಾಯ್ತಿಗಳಲ್ಲಿ ಇಂಥ ಅಭಿಪ್ರಾಯಗಳೇ ದಟ್ಟವಾಗಿವೆ.

ಮೂರೂ ಪಕ್ಷದ ಅಭ್ಯರ್ಥಿಗಳು ಸದ್ಯ 'ಅಭಿವೃದ್ಧಿ' ಬಗ್ಗೆ ತಲೆಕೆಡಿಸಿಕೊಳ್ಳದೆ ಗ್ರಾಮ ಪಂಚಾಯಿತಿ ಸದಸ್ಯರ 'ಸಬಲೀಕರಣ'ದ ಬಗ್ಗೆ ಮಾತನಾಡುತ್ತಾ 'ಮತ ಬೇಟೆ' ಮುಂದುವರಿಸಿದ್ದಾರೆ.

'2009ರಲ್ಲಿ ಯಡಿಯೂರಪ್ಪ ನೇತೃತ್ವದ ಸರ್ಕಾರವಿದ್ದಾಗ ಈ ಕ್ಷೇತ್ರ ಬಿಜೆಪಿಗೆ ಒಲಿದಿತ್ತು. ಈಗಲೂ ಬಿಜೆಪಿ ಸರ್ಕಾರವಿದ್ದು, ಈ ಬಾರಿ ಗೆಲುವು ತಮ್ಮದೇ' ಎನ್ನುತ್ತಿದ್ದಾರೆ ಈ ಪಕ್ಷದ ಅಭ್ಯರ್ಥಿ ರಘು. ಹಿಂದೆ ಈ ಭಾಗದಲ್ಲಿ ದುರ್ಬಲ ಎನಿಸಿಕೊಂಡಿದ್ದ ಬಿಜೆಪಿ ಸಂಘಟನೆಯು ಈಗ ಬಹಳಷ್ಟು ಸುಧಾರಿಸಿದೆ.

ಜೆಡಿಎಸ್ ಪಾಲಿಗೆ ಸದ್ಯದ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಚಾಮುಂಡೇಶ್ವರಿ, ಹುಣಸೂರು ಕ್ಷೇತ್ರದಲ್ಲಿ ಪ್ರಭಾವ ಹೊಂದಿರುವ ಜಿ.ಟಿ.ದೇವೇಗೌಡ ತಟಸ್ಥವಾಗಿದ್ದಾರೆ. ಸಂದೇಶ್ ನಾಗರಾಜ್ ಬಿಜೆಪಿಗೆ ಬಹಿರಂಗ ಬೆಂಬಲ ಘೋಷಿಸಿದ್ದಾರೆ. ಚಾಮರಾಜನಗರದಲ್ಲಿ ಈ ಪಕ್ಷದ ಸಂಘಟನೆ ಇಲ್ಲ. ಹೀಗಾಗಿ, ಪಕ್ಷದ ಅಭ್ಯರ್ಥಿ ಮಂಜೇಗೌಡ ಬಹಳಷ್ಟು 'ಕಸರತ್ತು' ನಡೆಸಬೇಕಿದೆ. ಅವರು ಕಾಂಗ್ರೆಸ್ ಟಿಕೆಟ್ ಸಿಗದೆ ಜೆಡಿಎಸ್ ಸೇರಿದ ದಿನವೇ ಟಿಕೆಟ್ ಗಿಟ್ಟಿಸಿಕೊಂಡಿದ್ದರು.

'ಕೆಲವರು ಪಕ್ಷದ ಹೆಸರು ಹೇಳಿಕೊಂಡು ಗೆದ್ದು, ಬೆನ್ನಿಗೆ ಚೂರಿ ಹಾಕಿದ್ದಾರೆ. ಈ ಎಲ್ಲಾ ಸವಾಲನ್ನು ಮೆಟ್ಟಿ ನಿಂತು ಅಭ್ಯರ್ಥಿ ಗೆಲ್ಲಿಸಿಕೊಡುವ ವಿಶ್ವಾಸವಿದೆ' ಎನ್ನುತ್ತಾರೆ ಶಾಸಕ ಸಾ.ರಾ.ಮಹೇಶ್.

ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಸ್ಪರ್ಧಾ ಕಣದಲ್ಲಿದ್ದು, 'ಹೋರಾಟ'ವೊಂದೇ ಅವರಿಗೆ ಶ್ರೀರಕ್ಷೆ!

ಅಭ್ಯರ್ಥಿಗಳು ಕೋಟ್ಯಧಿಪತಿಗಳಾಗಿದ್ದು, ಜಾತಿ ಸಮೀಕರಣದ ಜೊತೆ 'ಧನಶಕ್ತಿ'ಮಹಿಮೆಯೂ ಜೋರಾಗಿದೆ. ಪ್ರತಿ ವೋಟಿನ ರೇಟು ₹ 30 ಸಾವಿರದಿಂದ ₹ 50 ಸಾವಿರಕ್ಕೇರಿರುವ ಬಗ್ಗೆ ಕಾರ್ಯಕರ್ತರು ಮಾತನಾಡಿಕೊಳ್ಳುತ್ತಿದ್ದಾರೆ. ಮತ ಲೆಕ್ಕಾಚಾರದಲ್ಲಿ ಮೇಲ್ನೋಟಕ್ಕೆ ಕಾಂಗ್ರೆಸ್, ಜೆಡಿಎಸ್ ಮುಂಚೂಣಿಯಲ್ಲಿದ್ದರೂ, ಬಿಜೆಪಿ ಅಧಿಕಾರ ಬಲವು ನಿದ್ದೆಗೆಡಿಸಿದೆ.

ತ್ರಿಕೋನ ಸ್ಪರ್ಧೆಯ ಚುನಾವಣಾ ಪ್ರಚಾರ ಕಾವೇರಿದ್ದು, ಅಭ್ಯರ್ಥಿಗಳಿಗೆ ಮಾತ್ರವಲ್ಲ; ಮೂರೂ ಪಕ್ಷದ ಸ್ಥಳೀಯ ನಾಯಕರಿಗೆ ಪ್ರತಿಷ್ಠೆ ಹಾಗೂ ಸವಾಲಾಗಿ ಪರಿಣಮಿಸಿದೆ. ಕ್ಷೇತ್ರ ಹಂಚಿಕೊಂಡಿರುವ ಚಾಮರಾಜನಗರ ಜಿಲ್ಲೆಯಿಂದ ಒಬ್ಬರೂ ಸ್ಪರ್ಧಿಗಳಿಲ್ಲ. ಈ ಬಗ್ಗೆ ಆ ಭಾಗದಲ್ಲಿ ಅಸಮಾಧಾನವೂ ಇದೆ. ಅಲ್ಲಿ ಹೆಚ್ಚಿನ ರಾಜಕೀಯ ಚಟುವಟಿಕೆಗಳು ಕಂಡು ಬಂದಿಲ್ಲ.

ಮೈಸೂರು–ಚಾಮರಾಜನಗರ ಮತದಾರರು	
ಪುರುಷರು	3,275
ಮಹಿಳೆಯರು	3,517
ಒಟ್ಟು	6,792
ಮತಗಟ್ಟೆ	393
ಮೈಸೂರು–ಚಾಮರಾಜನಗರ: ಮತದಾರರಿರುವ ಸ್ಥಳೀಯ ಸಂಸ್ಥೆ	
ಗ್ರಾ.ಪಂ	279
ಪಾಲಿಕೆ	1
ನಗರಸಭೆ	4
ಪುರಸಭೆ	6
ಪಟ್ಟಣ ಪಂಚಾಯಿತಿ	3

ಪರಿಷತ್ ಚುನಾವಣೆ
ಕ್ಷೇತ್ರ ಸಮೀಕ್ಷೆ

ಹೊಸಮುಖಗಳ ಪೈಪೋಟಿ

ಕೊಪ್ಪಳ–ರಾಯಚೂರು ಸ್ಥಳೀಯ ಸಂಸ್ಥೆಗಳ ಕ್ಷೇತ್ರ

• ನಾಗರಾಜ ಚಿನಗುಂಡಿ

ಎಲ್ಲ ಕಡೆಯಲ್ಲೂ ಉತ್ತಮ ಪ್ರತಿಕ್ರಿಯೆ ಸಿಗುತ್ತಿದ್ದು, ಬಿಜೆಪಿ ಎಲ್ಲ ಶಾಸಕರು ಹಾಗೂ ಮುಖಂಡರು ಒಟ್ಟಾಗಿ ಪ್ರಚಾರ ನಡೆಸಿದ್ದು, ಗೆಲ್ಲುವ ವಿಶ್ವಾಸವಿದೆ.
ವಿಶ್ವನಾಥ ಎ.ಬನಹಟ್ಟಿ, ಬಿಜೆಪಿ ಅಭ್ಯರ್ಥಿ

ಎರಡೂ ಜಿಲ್ಲೆಗಳ ಜನರಿಗೆ ನಾನು ಚಿರಪರಿಚಿತ. ಬಿಜೆಪಿ ಹೊರ ಜಿಲ್ಲೆಯ ಅಭ್ಯರ್ಥಿಗಿಂತಲೂ ಸ್ವಂತ ಜಿಲ್ಲೆಯ ಅಭ್ಯರ್ಥಿಯನ್ನು ಕೈಬಿಡಲ್ಲ
ಶರಣಗೌಡ ಬಯ್ಯಾಪೂರ, ಕಾಂಗ್ರೆಸ್ ಅಭ್ಯರ್ಥಿ

ರಾಯಚೂರು: ಕೊಪ್ಪಳ-ರಾಯಚೂರು ಸ್ಥಳೀಯ ಸಂಸ್ಥೆಗಳ ವಿಧಾನ ಪರಿಷತ್ ಕ್ಷೇತ್ರದಿಂದ ಹಿಂದೊಮ್ಮೆ ಬಿಜೆಪಿ ಜಯ ಸಾಧಿಸಿದ್ದು ಹೊರತುಪಡಿಸಿದರೆ, ಕಾಂಗ್ರೆಸ್ ಪಕ್ಷವೇ ಇದನ್ನು ತನ್ನ ಭದ್ರಕೋಟೆ ಮಾಡಿಕೊಂಡಿದೆ. ಈ ಸಲವೂ ಎರಡೂ ಪಕ್ಷಗಳ ಮಧ್ಯೆ ನೇರ ಪೈಪೋಟಿ ಏರ್ಪಟ್ಟಿದೆ.

ಮತದಾರರು ಪಕ್ಷ ಅಥವಾ ಅಭ್ಯರ್ಥಿಗೆ ಒಲವು ತೋರಿ ಮತ ಕೊಡುತ್ತಾರೆ ಎಂಬ ವಾತಾವರಣ ಕಾಣುತ್ತಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ಪಕ್ಷದ ಚಿಹ್ನೆಯಿಂದ ಆಯ್ಕೆಯಾದವರನ್ನು ಮನವೊಲಿಸಿ ಹಿಡಿದಿಟ್ಟುಕೊಳ್ಳುವ ಅನಿವಾರ್ಯತೆ ಎದುರಾಗಿದೆ.

'ವಿಧಾನ ಪರಿಷತ್ ಚುನಾವಣೆಯಲ್ಲಿ ಯಾವುದೇ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳ ಸದಸ್ಯ ಸುಮ್ಮನೇ ಮತ ಹಾಕುವುದಿಲ್ಲ. ಸದಸ್ಯರು ತಮ್ಮ ಒಂದು ಮತಕ್ಕೆ ಎಷ್ಟು ಹಣ ಸಿಗುತ್ತದೆ ಎಂಬ ಲೆಕ್ಕಾಚಾರ ಹಾಕುತ್ತಿದ್ದಾರೆ. ಈ ಚುನಾವಣೆಯ ಗೆಲುವು ಹಣದಿಂದ ನಿರ್ಧಾರವಾಗುತ್ತದೆ' ಎಂಬ ಮಾತು ಜೋರಾಗಿ ಕೇಳಿ ಬರುತ್ತಿದೆ.

'ಹಣವೊಂದೇ ಮಾನದಂಡ ವಾಗದು. ಸಮಸ್ಯೆಗಳಿಗೆ ಯಾರು, ಹೇಗೆ ಸ್ಪಂದಿಸುವರು ಎಂಬುದನ್ನೂ ಮತದಾರರು ನೋಡುತ್ತಾರೆ. ವಿಧಾನ ಪರಿಷತ್ತಿಗೆ ಆಯ್ಕೆಯಾದವರು, ಮತ್ತೆ ಮತದಾರರ ಎದುರು ಬರುವುದಿಲ್ಲ. ಈಗಲೇ ಅಭ್ಯರ್ಥಿಗಳು ತಮ್ಮಲ್ಲ ಶಕ್ತಿ, ಸಾಮರ್ಥ್ಯ ಪ್ರದರ್ಶಿಸಬೇಕು' ಎಂದು ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಹೇಳುತ್ತಾರೆ.

ಪ್ರತಿಸ್ಪರ್ಧಿಗಳಿಬ್ಬರೂ ಕೋಟ್ಯಧೀಶರು: ಕೊಪ್ಪಳ-ರಾಯಚೂರು ಎರಡೂ ಜಿಲ್ಲೆಗಳ ವ್ಯಾಪ್ತಿಯ ವಿಧಾನ ಪರಿಷತ್ ಕ್ಷೇತ್ರಕ್ಕೆ ನಾಲ್ವರು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಶರಣಗೌಡ ಬಯ್ಯಾಪುರ ಮತ್ತು ಬಿಜೆಪಿ ಅಭ್ಯರ್ಥಿ ವಿಶ್ವನಾಥ ಎ.ಬನಹಟ್ಟಿ ಅವರ ಮಧ್ಯೆ ನೇರ ಹಣಾಹಣಿ ಇದೆ. ಆಸ್ತಿ ವಿವರದ ಪ್ರಕಾರ, ಇಬ್ಬರೂ ಕೋಟ್ಯಧೀಶರು. ಜನಹಿತ ಪಾರ್ಟಿ ಅಭ್ಯರ್ಥಿ ತಿರುಪತಿ ನರಸಪ್ಪ ಮತ್ತು ಪಕ್ಷೇತರ ಅಭ್ಯರ್ಥಿ ನರೇಂದ್ರ ಆರ್ಯ ಕಣದಲ್ಲಿದ್ದಾರೆ.

ಉದ್ಯಮಿ ವಿಶ್ವನಾಥ ಬನಹಟ್ಟಿ ಅವರು ದೇವದುರ್ಗ ಶಾಸಕ ಶಿವನಗೌಡ ನಾಯಕ ಅವರ ಸೂಚಿತ ಅಭ್ಯರ್ಥಿ ಎಂಬುದು ಸ್ಪಷ್ಟ. 'ಬಿಜೆಪಿ ಪ್ರಾಥಮಿಕ ಸದಸ್ಯತ್ವ ಪಡೆಯದ ವ್ಯಕ್ತಿಗೆ ಟಿಕೆಟ್ ನೀಡಲಾಗಿದೆ' ಎಂಬ ಚರ್ಚೆ ಬಿಜೆಪಿ ನಾಯಕರಲ್ಲಿ ನಡೆದಿದೆ.

ಕಾಂಗ್ರೆಸ್ ಅಭ್ಯರ್ಥಿ ಶರಣಗೌಡ ಬಯ್ಯಾಪುರ ಅವರು, ಕುಷ್ಟಗಿ ಶಾಸಕ ಅಮರೇಗೌಡ ಬಯ್ಯಾಪುರ ಅವರ ಸಹೋದರನ ಪುತ್ರ. ಸಹಕಾರ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಅವರಿಗೆ ರಾಜಕೀಯ ಅನುಭವ ಇದೆ.

ಎರಡೂ ಜಿಲ್ಲೆಗಳ 12 ಶಾಸಕರ ಪೈಕಿ ಐವರು ಶಾಸಕರು ಹಾಗೂ ಇಬ್ಬರು ಸಂಸದರು ಬಿಜೆಪಿಯಿಂದ ಆಯ್ಕೆಯಾದವರು. ಐವರು ಶಾಸಕರು ಕಾಂಗ್ರೆಸ್‌ನವರು. ಇಬ್ಬರು ಜೆಡಿಎಸ್ ಶಾಸಕರಿದ್ದು, ಇವರು ಯಾರನ್ನು ಬೆಂಬಲಿಸುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ.

ಸ್ಪರ್ಧೆಗೆ ನಿರಾಕರಣೆ

ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಬಸವರಾಜ ಪಾಟೀಲ ಇಟಗಿ ಅವರು ಮತ್ತೆ ಸ್ಪರ್ಧಿಸಲು ನಿರಾಕರಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಪರ ಈಗ ಪ್ರಚಾರ ನಡೆಸಿದ್ದಾರೆ. 'ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದಿಂದ ಸಾಕಷ್ಟು ಅನುದಾನ ಬರುವುದಿಲ್ಲ. ವಿಧಾನ ಪರಿಷತ್ ಸದಸ್ಯನಾಗಿ ಸಮಸ್ಯೆಗಳಿಗೆ ಸ್ಪಂದಿಸದೆ ಇರಲು ನನ್ನಿಂದ ಆಗುವುದಿಲ್ಲ. ಹೀಗಾಗಿ ಟಿಕೆಟ್ ಬೇಡ ಎಂದು ವರಿಷ್ಠರಿಗೆ ಮೊದಲೇ ತಿಳಿಸಿದ್ದೆ' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮತದಾರರು 6,165	
ರಾಯಚೂರು	3,408,
ಕೊಪ್ಪಳ	2,757
ಒಟ್ಟು ಗ್ರಾಮ ಪಂಚಾಯಿತಿಗಳು	
ರಾಯಚೂರು	173
ಕೊಪ್ಪಳ	153
ನಗರಸಭೆ/ಪಟ್ಟಣ ಪಂಚಾಯಿತಿ/ಪುರಸಭೆ	
ರಾಯಚೂರು	12
ಕೊಪ್ಪಳ	4

ಕೊಳೆ ಈಗ ನಮ್ಮೊಂದಿಗಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕೊಳೆ ಈಗ ನಮ್ಮೊಂದಿಗಿಲ್ಲ. ದೂರ ಹೋಗಿದೆ. ಅಂಥವರನ್ನು ಇಟ್ಟುಕೊಂಡಿದ್ದರೆ ಕಷ್ಟ ಆಗುತ್ತಿತ್ತು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ವಾಗ್ದಾಳಿ ನಡೆಸಿದರು.

ಸೋಮವಾರ ನಡೆದ ಮುಖಂಡರು ಹಾಗೂ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಕಾಂಗ್ರೆಸ್ ನಾಯಕ ಭರಮಗೌಡ (ರಾಜು) ಕಾಗೆ ಮನೆಗೆ ರಮೇಶ ಜಾರಕಿಹೋಳಿ ಭೇಟಿ ನೀಡಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. 'ಬೇರೆ ಪಕ್ಷದವರನ್ನು ಪಕ್ಷದ ನಾಯಕರು ಮನೆಗೆ ಸೇರಿಸಬಾರದು' ಎಂದೂ ಹೇಳಿದರು.

'ಬೆಳಗಾವಿ ಚುನಾವಣೆಯನ್ನು ಇಡೀ ರಾಜ್ಯ ನೋಡುತ್ತಿದೆ. ಕಳೆದ ಚುನಾವಣೆಯಲ್ಲಿ ನಾವು ಶಿಸ್ತುಕ್ರಮ ವಹಿಸಲಿಲ್ಲ. ಹೀಗಾಗಿ ಈಗ ತೊಂದರೆ ಅನುಭವಿಸುತ್ತಿದ್ದೇವೆ' ಎಂದರು.

ಅವರ‍್ಯಾವ ದೊಡ್ಡ ಸಾಹುಕಾರ?: 'ನಮ್ಮ ನಾಯಕರು ಬಿಜೆಪಿಯವರ ಜೊತೆ ಏಕೆ ನೆಂಟಸ್ತಿಕೆ ಇಟ್ಟುಕೊಂಡಿದ್ದೀರಿ? ಮನೆಗೆ ಸೇರಿಸುತ್ತಿದ್ದೀರೇಕೆ, ವಾಹನ ಕಳುಹಿಸಿದರೆಂದು ಹೋಗುತ್ತೀರೇಕೆ? ಅವರ‍್ಯಾವ ದೊಡ್ಡ ಸಾಹುಕಾರ? ನೆಂಟಸ್ತನ ಅಥವಾ ವಿಶ್ವಾಸವನ್ನು ಚುನಾವಣೆ ವೇಳೆ ಇಟ್ಟುಕೊಳ್ಳಬೇಡಿ' ಎಂದು ತಿಳಿಸಿದರು.

'ವಿಡಿಯೊ ವ್ಯವಸ್ಥೆ ಮಾಡಬೇಕು'

'ಮತದಾರರಿಗೆ ಬಿಜೆಪಿಯವರು ತಲಾ ₹ 10ಸಾವಿರ ಮುಂಗಡ ಕೊಟ್ಟಿದ್ದಾರೆ ಎಂಬ ಮಾಹಿತಿ ಇದೆ' ಎಂದು ಶಿವಕುಮಾರ್ ದೂರಿದರು.

'ಗೋಕಾಕ, ಅರಭಾವಿ, ರಾಯಬಾಗದಲ್ಲಿ ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆ ಅಕ್ರಮ ನಡೆಯುತ್ತಿದೆ. ಮತದಾನ ಸಂದರ್ಭದಲ್ಲಿ ವಿಡಿಯೊ ವ್ಯವಸ್ಥೆ ಮಾಡಬೇಕು. ಹೆಚ್ಚಿನ ಪೊಲೀಸರನ್ನು ನಿಯೋಜಿಸಬೇಕು' ಎಂದು ಒತ್ತಾಯಿಸಿದರು. 'ಜಿಲ್ಲಾ ಚುನಾವಣಾಧಿಕಾರಿ ಮತ್ತು ಚುನಾವಣಾ ಆಯೋಗಕ್ಕೆ ಈ ಬಗ್ಗೆ ದೂರು ನೀಡಲಾಗುವುದು' ಎಂದು ತಿಳಿಸಿದರು.

'ಶಕ್ತಿ ಕುಂದಿದ್ದಕ್ಕೆ, ಬಿಜೆಪಿ ಬೆಂಬಲ ಕೇಳುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲ ಕೇಳುವುದರೊಂದಿಗೆ ಬಿಜೆಪಿಯ ಶಕ್ತಿ ಕುಂದಿರುವುದು ಸಾಬೀತಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್.ಯಡಿಯೂರಪ್ಪ ಜೆಡಿಎಸ್ ಬೆಂಬಲ ಕೇಳಿದ್ದಾರೆ. ಹಾಗಾದರೆ ಮುಳುಗುತ್ತಿರುವ ಹಡಗು ಯಾವುದು?' ಎಂದರು.

'ಬಿಜೆಪಿಯಲ್ಲಿ ಸ್ವಾಭಿಮಾನ, ಶಿಸ್ತು ಇದ್ದರೆ ಬೆಳಗಾವಿಯಲ್ಲಿನ ಬೆಳವಣಿಗೆಗಳ ಬಗ್ಗೆ ಉತ್ತರ ಕೊಡಲಿ. ಬ್ಲಾಕ್‌ಮೇಲರ್‌ಗಳಿಗೆ ಹೆದರಿ ಸರ್ಕಾರ ನಡೆಸುತ್ತಿರುವುದು ನನಗಂತೂ ಸಂತೋಷ ತಂದಿದೆ' ಎಂದು ಕುಟುಕಿದರು.

'ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಬಗ್ಗೆ ರಮೇಶ ಜಾರಕಿಹೊಳಿ ಥೂ ಎಂದೆಲ್ಲಾ ಮಾತನಾಡಿರುವುದು ಬಿಜೆಪಿ ಸಂಸ್ಕೃತಿಯ ಪ್ರತಿಬಿಂಬ. ನನ್ನ ಪಕ್ಷದಲ್ಲಾಗಿದ್ದರೆ ಅಂಥವರನ್ನು ಒಂದು ಗಂಟೆಯೂ ಇಟ್ಟುಕೊಳ್ಳುತ್ತಿರಲಿಲ್ಲ' ಎಂದು ಹೇಳಿದರು.

ಬೆಂಬಲ ಕೇಳಿದರೆ ತಪ್ಪಿಲ್ಲ: ಕಾರಜೋಳ

ವಿಜಯಪುರ: 'ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯು ಜೆಡಿಎಸ್ ಬೆಂಬಲ ಕೇಳಿರುವುದರಲ್ಲಿ ತಪ್ಪಿಲ್ಲ. ಜೆಡಿಎಸ್‌ನವರು ಕಾಂಗ್ರೆಸ್ ಅನ್ನು ಯಾವಾಗಲೂ ಲೈಕ್ ಮಾಡುವುದಿಲ್ಲ. ಜೆಡಿಎಸ್‌ನವರು ಬಿಜೆಪಿಯನ್ನು ಹೆಚ್ಚು ಪ್ರೀತಿ ಮಾಡುತ್ತಾರೆ'ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸಮರ್ಥಿಸಿಕೊಂಡರು.

'ಪಕ್ಷ ಸೂಚಿಸಿದರೆ ಮತ್ತೆ ಸ್ಪರ್ಧೆ'

ಮಳವಳ್ಳಿ (ಮಂಡ್ಯ): 'ಪಕ್ಷ ಸೂಚಿಸಿದರೆ ಮಂಡ್ಯದಲ್ಲಿ ಮತ್ತೆ ಸ್ಪರ್ಧಿಸುವೆ. ಜಿಲ್ಲೆಯ ಜನರ ಜೊತೆಗೆ ನಿರಂತರವಾಗಿ ಜತೆಗಿರುತ್ತೇನೆ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

'ಮುಖ್ಯಮಂತ್ರಿ' ಬದಲು ವದಂತಿಗೆ ರೆಕ್ಕೆಪುಕ್ಕ ನೀಡಿದ ಸಚಿವ ಈಶ್ವರಪ್ಪ ?

ಹೊಣೆ ನಿಭಾಯಿಸುವೆ– ನಿರಾಣಿ; ಅಪ್ರಸ್ತುತ– ಕಾರಜೋಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಆದಷ್ಟು ಬೇಗ ಮುಖ್ಯಮಂತ್ರಿ ಆಗಲಿದ್ದಾರೆ' ಎಂಬ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರ ಹೇಳಿಕೆಯಿಂದ, ಮುಖ್ಯಮಂತ್ರಿ ಬದಲಾಗಲಿದ್ದಾರೆ ಎಂಬ ವದಂತಿಗೆ ಮತ್ತೆ ರೆಕ್ಕಪುಕ್ಕ ಬಂದಿದೆ.

ಬಿಟ್ ಕಾಯಿನ್ ಹಗರಣ, ವಿವಿಧ ಕಾಮಗಾರಿಗಳ ಟೆಂಡರ್ ಮೊತ್ತದಲ್ಲಿ ಶೇ 40ರಷ್ಟು ಕಮಿಷನ್ ಹೋಗುತ್ತಿದೆ ಎಂದು ಆರೋಪಿಸಿ ಪ್ರಧಾನಿಗೆ ಗುತ್ತಿಗೆದಾರರ ಸಂಘ ಬರೆದ ಪತ್ರ ಬಹಿರಂಗಗೊಂಡ ಬೆನ್ನಲ್ಲೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬದಲಿಸಲಾಗುತ್ತದೆ ಎಂಬ ಚರ್ಚೆ ಬಿಜೆಪಿ ಪಡಸಾಲೆಯಲ್ಲಿ ಶುರುವಾಗಿದೆ ಎಂಬ ಸುದ್ದಿ ಹರಡಿತ್ತು. ಈಗ ಈಶ್ವರಪ್ಪ ಆಡಿರುವ ಮಾತು, ಈ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಮುರುಗೇಶ ನಿರಾಣಿ, 'ಹಿರಿಯರಾದ ಈಶ್ವರಪ್ಪನವರು ನಾನು ಮುಖ್ಯಮಂತ್ರಿ ಆಗುತ್ತೇನೆಂದು ಅಭಿಮಾನ ಪೂರ್ವಕವಾಗಿ ಹೇಳಿರಬಹುದು. ಅವರು ಹಾಗೆ ಹೇಳಿದ್ದಕ್ಕೆ ಖುಣಿ. ಆದರೆ, ನನ್ನ ಹಿರಿಯ ಅಣ್ಣನಂತಿರುವ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ' ಎಂದರು.

'ಬಸವರಾಜ ಬೊಮ್ಮಾಯಿ ಅವರು ನಮಗೆ ಸಹಕಾರ ಕೊಡುತ್ತಿದ್ದಾರೆ. ಅವರನ್ನು ಬದಲಿಸುವ ಪ್ರಶ್ನೆಯೇ ಇಲ್ಲ. ಬಿಜೆಪಿಯಲ್ಲಿ ನಾವೆಲ್ಲರೂ ಒಟ್ಟಾಗಿಯೇ ಇದ್ದೇವೆ. 2023ಕ್ಕೆ 150 ಸ್ಥಾನಗಳ ಗೆದ್ದು ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮ ಗುರಿ' ಎಂದರು.

'2023ರಲ್ಲಾದ್ರೂ ನಿರಾಣಿ ಸಿಎಂ ಆಗಬಹುದಾ' ಎಂಬ ಪ್ರಶ್ನೆಗೆ, 'ಹಾಗೊಂದು ವೇಳೆ ಮುಂದೆ ನನ್ನನ್ನು ಮುಖ್ಯಮಂತ್ರಿ ಮಾಡಿದರೂ 2028ರ ನಂತರವೇ. ಪಕ್ಷದ ಹಿರಿಯರು ಕೊಡುವ ಜವಾಬ್ದಾರಿಯನ್ನು ನಿಭಾಯಿಸಲು ಸಿದ್ಧನಿದ್ದೇನೆ' ಎಂದರು.

ಅಪ್ರಸ್ತುತ: ವಿಜಯಪುರದಲ್ಲಿ ಮಾತನಾಡಿದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, 'ಮುಖ್ಯಮಂತ್ರಿ ಬದಲಾವಣೆ ವಿಷಯ ಅಪ್ರಸ್ತುತ. ಬೊಮ್ಮಾಯಿ ದಕ್ಷವಾಗಿ ಆಡಳಿತ ನಡೆಸುತ್ತಿದ್ದಾರೆ' ಎಂದರು.

'ಕೋವಿಡ್', ನೆರೆ ಸೇರಿದಂತೆ ಸಂಕಷ್ಟಗಳಿವೆ. ಈಗ ಜನರಿಗೆ ನೆರವಾಗಬೇಕಾಗಿರುವುದು ಮುಖ್ಯವೇ ಹೊರತು, ಮುಖ್ಯಮಂತ್ರಿ ಬದಲಾವಣೆ ವಿಷಯವಲ್ಲ' ಎಂದು ಈಶ್ವರಪ್ಪ ಅವರಿಗೆ ಕಿವಿಮಾತು ಹೇಳಿದರು.

'ಬೊಮ್ಮಾಯಿ ರಾಜೀನಾಮೆ ಕೊಡಲಿ'

ವಿಜಯಪುರ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ಸಂಪುಟದ ಸಚಿವರಿಗೇ ವಿಶ್ವಾಸ ಇಲ್ಲ ಎಂದಾದ ಮೇಲೆ ಅವರು ರಾಜೀನಾಮೆ ಕೊಟ್ಟು ಹೊರಬರಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

ಈಶ್ವರಪ್ಪ ಹೇಳಿಕೆ ಪ್ರತಿಕ್ರಿಯಿಸಿದ ಅವರು, 'ಯಡಿಯೂರಪ್ಪ ಅವರ ಮೇಲೆ ಬಿಜೆಪಿ ಶಾಸಕರು, ಸಚಿವರು ವಿಶ್ವಾಸ ಇಲ್ಲ ಎಂದಾಗ ಅವರು ರಾಜೀನಾಮೆ ನೀಡಿದರು. ಅದೇ ರೀತಿ ಬೊಮ್ಮಾಯಿ ಮೇಲೂ ಸಚಿವರು, ಶಾಸಕರಿಗೆ ವಿಶ್ವಾಸ ಇಲ್ಲ ಎಂದಾದ ಮೇಲೆ ಅವರು ಆ ಜಾಗದಲ್ಲಿ ಇರಬಾರದು' ಎಂದರು.

'ಮೊದಲಿನಿಂದಲೂ ಬಿಜೆಪಿಯವರಿಗೆ ಆಡಳಿತ ನಡೆಸಲು ಬರುವುದಿಲ್ಲ. ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಜನರ ನೋವು ಗೊತ್ತಿಲ್ಲ. ಬಿಜೆಪಿಯಲ್ಲಿ ಒಬ್ಬರಿಗಿಂತ ಒಬ್ಬರಿಗೆ ಅಧಿಕಾರ ದಾಹ ಜಾಸ್ತಿ ಇದೆ' ಎಂದು ಟೀಕಿಸಿದರು.

'ಮುಂದಿನ ಚುನಾವಣೆ ಬಳಿಕ ಮುಖ್ಯಮಂತ್ರಿ ಬದಲಾವಣೆ ಸಾಧ್ಯತೆ ಇದೆ ಹೊರತು ಈಗಲೇ ಅಲ್ಲ. ನಾಳೆಯೇ ಆಗುತ್ತಾರೆ ಎಂದು ಹೇಳಿಲ್ಲ
ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಸಚಿವ

ಮುಂದಿನ ಮುಖ್ಯಮಂತ್ರಿ ಮುರುಗೇಶ ನಿರಾಣಿ ಎಂದು ತಮಾಷೆಗೆ ಹೇಳಿರುವುದಾಗಿ ಈಶ್ವರಪ್ಪ ಅವರೇ ತಿಳಿಸಿದ್ದಾರೆ. ಅದರ ಬಗ್ಗೆ ಮತ್ಯಾಕೆ ಪ್ರತಿಕ್ರಿಯೆ
ಬಿ.ಎಸ್. ಯಡಿಯೂರಪ್ಪ, ಶಾಸಕ

'ಪರ್ಸೆಂಟೇಜ್ ಸರ್ಕಾರದ ಪಿತಾಮಹರು ಕಾಂಗ್ರೆಸಿಗರು'

ಚಳ್ಳಕೆರೆ: 'ದೇಶದ ಭಯೋತ್ಪಾದಕರು ಕಾಂಗ್ರೆಸ್ ನಾಯಕರೇ ಹೊರತು ನಾವಲ್ಲ' ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪರ್ಸೆಂಟೇಜ್ ಸರ್ಕಾರದ ಪಿತಾಮಹರು ಕಾಂಗ್ರೆಸಿಗರು' ಎಂದರು. ನಾವು ವಿರೋಧ ಪಕ್ಷದಲ್ಲಿದ್ದಾಗ ಕಾಂಗ್ರೆಸ್‌ನವರು ಶೇ 10 ಕಮಿಷನ್ ತೆಗೆದುಕೊಳ್ಳುತ್ತಾರೆ ಎಂದು ಆರೋಪ ಮಾಡುತ್ತಿದ್ದೆವು. ಅದಕ್ಕೇ ಈಗ ನಮ್ಮ ಮೇಲೆ ಸುಮ್ಮನೆ ಆರೋಪ ಮಾಡುತ್ತಿದ್ದಾರೆ' ಎಂದು ತಿರುಗೇಟು ನೀಡಿದರು.

ಚುನಾವಣೆ ನಡೆಯಲಿರುವ ಸಂಸ್ಥೆಗಳಲ್ಲಿ ಡಿ.8ರಿಂದ ನೀತಿ ಸಂಹಿತೆ ಜಾರಿ

58 ಸ್ಥಳೀಯ ಸಂಸ್ಥೆಗಳಿಗೆ ಡಿ.27ರಂದು ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರಸಭೆಗಳೂ ಸೇರಿದಂತೆ ಚುನಾಯಿತ ಪ್ರತಿನಿಧಿಗಳ ಅವಧಿ ಪೂರ್ಣಗೊಂಡಿರುವ 58 ನಗರ ಸ್ಥಳೀಯ ಸಂಸ್ಥೆಗಳ 1,185 ವಾರ್ಡ್‌ಗಳ ಪ್ರತಿನಿಧಿಗಳ ಆಯ್ಕೆಗೆ ಡಿಸೆಂಬರ್ 27ರಂದು ಚುನಾವಣೆ ನಡೆಯಲಿದೆ.

19 ಪುರಸಭೆಗಳು ಮತ್ತು 34 ಪಟ್ಟಣ ಪಂಚಾಯಿತಿಗಳಿಗೂ ಚುನಾವಣೆ ಘೋಷಣೆಯಾಗಿದೆ. ಅದರ ಜತೆಯಲ್ಲೇ ವಿವಿಧ ಕಾರಣಗಳಿಂದ ತೆರವಾಗಿರುವ ನಗರಸಭೆಗಳ ಐದು ವಾರ್ಡ್‌ಗಳು, ಪುರಸಭೆಗಳ ಮೂರು ಮತ್ತು ಪಟ್ಟಣ ಪಂಚಾಯಿತಿಯ ಒಂದು ವಾರ್ಡ್‌ಗಳಿಗೂ ಅದೇ ದಿನ ಉಪ ಚುನಾವಣೆ ನಡೆಯಲಿದೆ.

ಚಿಕ್ಕಮಗಳೂರು, ಗದಗ–ಬೆಟಗೇರಿ, ಹೊಸಪೇಟೆ, ಶಿರಾ ನಗರಸಭೆಗಳು ಹಾಗೂ ಅಥಣಿ, ಅಣ್ಣಿಗೇರಿ ಮತ್ತು ಬಂಕಾಪುರ ಪುರಸಭೆಗಳ ಚುನಾಯಿತ ಸದಸ್ಯರ ಅಧಿಕಾರ ಅವಧಿ 2019ರ ಮಾರ್ಚ್‌ನಲ್ಲಿ ಅಂತ್ಯಗೊಂಡಿತ್ತು. ಉಳಿದ 51 ಸ್ಥಳೀಯ ಸಂಸ್ಥೆಗಳ ಸದಸ್ಯರ ಅವಧಿ ಈ ವರ್ಷದ ವಿವಿಧ ತಿಂಗಳಲ್ಲಿ ಮುಕ್ತಾಯಗೊಂಡಿತ್ತು. ಈ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೂ ಡಿಸೆಂಬರ್ 30ರೊಳಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಆದೇಶಿಸಿತ್ತು.

2011ರ ಜನಗಣತಿ ಆಧಾರದಲ್ಲೇ ಕ್ಷೇತ್ರ ಪುನರ್ವಿಂಗಡಣೆ ನಡೆಸಿ, ಮೀಸಲಾತಿ ನಿಗದಿಪಡಿಸಲಾಗಿದೆ. ರಾಜ್ಯ ಸರ್ಕಾರ ಒದಗಿಸಿದ ಮೀಸಲಾತಿ ಪಟ್ಟಿಯ ಆಧಾರದಲ್ಲಿ ರಾಜ್ಯ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿಯನ್ನು ಸೋಮವಾರ ಪ್ರಕಟಿಸಿದೆ.

ಡಿ.8ರಿಂದ ನೀತಿ ಸಂಹಿತೆ ಜಾರಿ: ಚುನಾವಣೆ ನಡೆಯುತ್ತಿರುವ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಡಿ.8ರಿಂದ ಡಿ.30ರವರೆಗೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ ಎಂದು ಆಯೋಗ ತಿಳಿಸಿದೆ.

ವೆಚ್ಚದ ಮಿತಿ: ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ನಗರಸಭೆಗಳಲ್ಲಿ ತಲಾ 2 ಲಕ್ಷ, ಪುರಸಭೆಗಳಲ್ಲಿ 1.5 ಲಕ್ಷ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ 1 ಲಕ್ಷ ವೆಚ್ಚದ ಮಿತಿ ನಿಗದಿಪಡಿಸಲಾಗಿದೆ.

57 ಗ್ರಾ.ಪಂ.ಗಳಿಗೂ ಚುನಾವಣೆ: ಚುನಾಯಿತ ಪ್ರತಿನಿಧಿಗಳ ಅವಧಿ ಪೂರ್ಣಗೊಂಡಿರುವ ವಿವಿಧ ಜಿಲ್ಲೆಗಳ 57 ಗ್ರಾಮ ಪಂಚಾಯಿತಿಗಳ 878 ಸದಸ್ಯ ಸ್ಥಾನಗಳು ಮತ್ತು ವಿವಿಧ ಕಾರಣಗಳಿಂದ ತೆರವಾಗಿರುವ ಹಲವು ಗ್ರಾಮ ಪಂಚಾಯಿತಿಗಳ 386 ಸ್ಥಾನಗಳಿಗೂ ಡಿ.27ರಂದೇ ಚುನಾವಣೆ ನಡೆಯಲಿದೆ.

ಗ್ರಾಮ ಪಂಚಾಯಿತಿಗಳ ಚುನಾವಣೆಗೆ ಡಿ.13ರಂದು ಅಧಿಸೂಚನೆ ಪ್ರಕಟವಾಗಲಿದೆ. ಡಿ.17ರವರೆಗೂ ನಾಮಪತ್ರ ಸಲ್ಲಿಸಲು ಅವಕಾಶವಿದೆ. ಡಿ.18ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಡಿ.20 ನಾಮಪತ್ರ ಹಿಂಪಡೆಯಲು ಕೊನೆಯ ದಿನ. ಡಿ.27ಕ್ಕೆ ಮತದಾನ ಹಾಗೂ ಅಗತ್ಯಬಿದ್ದರೆ ಡಿ.29ಕ್ಕೆ ಮರು ಮತದಾನ ನಡೆಯಲಿದೆ. ಡಿ.30ಕ್ಕೆ ಮತ ಎಣಿಕೆ ನಡೆಯಲಿದೆ ಎಂದು ಆಯೋಗ ತಿಳಿಸಿದೆ.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ವೇಳಾಪಟ್ಟಿ	
ಚುನಾವಣಾ ಅಧಿಸೂಚನೆ	ಡಿ.8
ನಾಮಪತ್ರ ಸಲ್ಲಿಸಲು ಕೊನೆಯ ದಿನ	ಡಿ.15
ನಾಮಪತ್ರಗಳ ಪರಿಶೀಲನೆ	ಡಿ.16
ನಾಮಪತ್ರ ಹಿಂಪಡೆಯಲು ಕೊನೆಯ ದಿನ	ಡಿ.18
ಮತದಾನ	ಡಿ.27 (ಬೆಳಿಗ್ಗೆ 7ರಿಂದ ಸಂಜೆ 5)
ಅಗತ್ಯವಿದ್ದಲ್ಲಿ ಮರು ಮತದಾನ	ಡಿ.29 (ಬೆಳಿಗ್ಗೆ 7ರಿಂದ ಸಂಜೆ 5)
ಮತ ಎಣಿಕೆ	ಡಿ.30 (ಬೆಳಿಗ್ಗೆ 8ರಿಂದ)

ಇದು ಇಎಸ್‌ಐ ಆಸ್ಪತ್ರೆಯ ಶೈತ್ಯಾಗಾರದ ದುಃಸ್ಥಿತಿ

15 ತಿಂಗಳ ಬಳಿಕ ಕೋವಿಡ್ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶವಾಗಾರ ಸ್ವಚ್ಛಗೊಳಿಸುವ ವೇಳೆ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಕೋವಿಡ್ ಮೃತದೇಹಗಳು ಪತ್ತೆಯಾಗಿವೆ. 15 ತಿಂಗಳಿನಿಂದ ಶೈತ್ಯಾಗಾರದಲ್ಲಿಯೇ ಇದ್ದ ಶವಗಳು ಕೊಳೆತ ಸ್ಥಿತಿಯಲ್ಲಿ ಸಿಕ್ಕಿದ್ದು, ಅವುಗಳನ್ನು ಕಂಡು ಕುಟುಂಬದವರು ದಿಗ್ಭ್ರಾಂತರಾಗಿದ್ದಾರೆ.

ಮೃತದೇಹಗಳನ್ನು ಚಾಮರಾಜಪೇಟೆಯ ದುರ್ಗಾ ಸುಮಿತ್ರಾ (40) ಹಾಗೂ ಕೆ.ಪಿ.ಅಗ್ರಹಾರದ ಎನ್. ಎಲ್.ಮುನಿರಾಜು (67) ಎಂದು ಗುರುತಿಸಲಾಗಿದೆ. ಇವರು 2020ರ ಜುಲೈನಲ್ಲಿ ಅಸುನೀಗಿದ್ದರು.

'ಆಸ್ಪತ್ರೆ ಆವರಣದಲ್ಲಿರುವ ಹಳೆಯ ಶೈತ್ಯಾಗಾರದಲ್ಲಿ ಮೃತದೇಹಗಳನ್ನು ಇಡಲಾಗಿತ್ತು. ಅವುಗಳನ್ನು ವಿಲೆ ಮಾಡಲು ಸಿಬ್ಬಂದಿ ಮರೆತಿದ್ದರು. ಕೋವಿಡ್ ಮರಣ ಪ್ರಕರಣಗಳು ಕಡಿಮೆಯಾಗಿದ್ದರಿಂದ ಶೈತ್ಯಾಗಾರದತ್ತ ಸಿಬ್ಬಂದಿ ತಿರುಗಿಯೂ ನೋಡಿರಲಿಲ್ಲ. 2021ರ ಆಗಸ್ಟ್‌ನಲ್ಲಿ ಅದಕ್ಕೆ ಬೀಗ ಹಾಕಲಾಗಿತ್ತು. ಆಗಲೂ ಒಳಗೆ ಹೋಗಿ ಪರೀಕ್ಷಿಸಿರಲಿಲ್ಲ. ಹೋದ ಶನಿವಾರ ಸ್ವಚ್ಛತಾ ಸಿಬ್ಬಂದಿ ಬಾಗಿಲು ತೆರೆದು ನೋಡಿದಾಗ ಮೃತದೇಹಗಳು ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿವೆ. ಆಸ್ಪತ್ರೆಯ ಸಿಬ್ಬಂದಿಯ ನಿರ್ಲಕ್ಷಕ್ಕೆ ಇದು ನಿದರ್ಶನ' ಎಂದು ಆಸ್ಪತ್ರೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದುರ್ಗಾ ಸುಮಿತ್ರ ಅವರ ಅಕ್ಕ ಜಿ.ಬಿ.ಸುಜಾತ (ಎಡ) ಹಾಗೂ ಮುನಿರಾಜು ಪುತ್ರಿ ರಾಜೇಶ್ವರಿ ಅವರು ಮೃತ ದೇಹಗಳನ್ನು ಪಡೆಯಲು ವಿಕ್ಟೋರಿಯಾ ಆಸ್ಪತ್ರೆಯ ಎದುರು ನಿಂತಿದ್ದ ದೃಶ್ಯ –ಪ್ರಜಾವಾಣಿ ಚಿತ್ರ

'ಶೈತ್ಯಾಗಾರದಲ್ಲಿ ಶವ ಇಟ್ಟ ನಂತರ ಅದರ ಮೇಲೆ ಸ್ಟಿಕ್ಕರ್ ಅಂಟಿಸುವ ಪ್ರತೀತಿ ಇದೆ. ಈಗ ಪತ್ತೆಯಾಗಿರುವ ದೇಹಗಳನ್ನು ಇಡಲಾಗಿದ್ದ ಶೈತ್ಯಗಾರಗಳ ಮೇಲೆ ಸ್ಟಿಕ್ಕರ್ ಅಂಟಿಸಿರಲಿಲ್ಲ' ಎಂದು ಅವರು ಹೇಳಿದ್ದಾರೆ.

'2020ರ ಜುಲೈನಲ್ಲಿ ದುರ್ಗಾಳಿಗೆ ಕೆಮ್ಮು ಬಾಧಿಸಿತ್ತು. ಉಸಿರಾಟದ ಸಮಸ್ಯೆಯೂ ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಿದ್ದೆವು. ಆಗ ಹಾಸಿಗೆ ಸಮಸ್ಯೆ ತಲೆದೋರಿತ್ತು. ವರದಿಗಾರರೊಬ್ಬರ ನೆರವಿನಿಂದ ಇಎಸ್‌ಐ ಆಸ್ಪತ್ರೆಗೆ ಸೇರಿಸಿದ್ದೆವು. 15 ತಿಂಗಳಾದರೂ ಆಕೆಯ ಮೃತದೇಹ ವಿಲೆ ಮಾಡಿಲ್ಲ. ಇದು ಆಸ್ಪತ್ರೆಯ ನಿರ್ಲಕ್ಷಕ್ಕೆ ಸಾಕ್ಷಿ. ಆಕೆಯನ್ನು ಆಸ್ಪತ್ರೆಗೆ ಸೇರಿಸುವ ಬದಲು ಮನೆಯಲ್ಲೇ ಇಟ್ಟುಕೊಂಡಿದ್ದರೆ ಚೆನ್ನಾಗಿತ್ತು ಎಂದು ಈಗ ಅನಿಸುತ್ತಿದೆ' ಎಂದು ದುರ್ಗಾ ಅವರ ಸಹೋದರ ನರೇಂದ್ರ ಕುಮಾರ್ ಬೇಸರ ವ್ಯಕ್ತಪಡಿಸಿದರು.

'ಅಪ್ಪ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ಎದೆ ನೋವು ಹಾಗೂ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ 2020ರ ಜುಲೈ 2ರಂದು ಇಎಸ್‌ಐ ಆಸ್ಪತ್ರೆಗೆ ದಾಖಲಿಸಿದ್ದೆವು. ಆಸ್ಪತ್ರೆ ಸಿಬ್ಬಂದಿಯೊಬ್ಬರು ಕೊರೊನಾ ಸೋಂಕು ತಗುಲಿರಬಹುದೆಂಬ ಶಂಕೆ ವ್ಯಕ್ತಪಡಿಸಿದ್ದರಿಂದ ಕೂಡಲೇ ಚಿಕಿತ್ಸೆಗೆ ದಾಖಲಿಸಿದ್ದೆವು' ಎಂದು ಮುನಿರಾಜು ಅವರ ಪುತ್ರಿ ಚೇತನಾ ಸತೀಶ್‌ಕುಮಾರ್ ತಿಳಿಸಿದರು.

'ಇಎಸ್‌ಐ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುತ್ತಿರಲಿಲ್ಲ. ಅಪ್ಪನ ಆರೋಗ್ಯ ಸ್ಥಿತಿಯ ಕುರಿತು ಮಾಹಿತಿಯನ್ನೂ ಕೊಡುತ್ತಿರಲಿಲ್ಲ. ಚಿಕಿತ್ಸೆಗೆ ದಾಖಲಿಸಿ ಮೂರು ದಿನದ ನಂತರ ಅವರು ನಿಧನರಾದರು. ಅವರಿಗೆ ಕೋವಿಡ್ ಇತ್ತು ಎಂಬುದನ್ನು 10 ದಿನಗಳ ನಂತರ ನಮಗೆ ತಿಳಿಸಿದರು. ಮೃತದೇಹ ಕೇಳಲು ಹೋದಾಗ ಅದನ್ನು ಅದಾಗಲೇ ಬಿಬಿಎಂಪಿಯವರಿಗೆ ಹಸ್ತಾಂತರಿಸಿದ್ದಾಗಿ ಹೇಳಿದ್ದರು. ನಮ್ಮ ಸಹಿ ಇಲ್ಲದೆ ಹೇಗೆ ಕೊಟ್ಟಿದ್ದೀರಿ ಎಂದು ಪ್ರಶ್ನಿಸಿದ್ದಾಗ ಪರವಾಗಿಲ್ಲ ಈಗ ಸಹಿ ಹಾಕಿ ಎಂದಿದ್ದರು. ಇದು ಸಿಬ್ಬಂದಿಯ ಬೇಜವಾಬ್ದಾರಿಗೆ ನಿದರ್ಶನ' ಎಂದು ಕಿಡಿಕಾರಿದರು.

ಪ್ರಕರಣದ ಕುರಿತು ಪ್ರತಿಕ್ರಿಯೆ ಪಡೆಯಲು ಆಸ್ಪತ್ರೆಯ ಡೀನ್ ಇಮ್ತಿಹಾನ್ ಹುಸೇನ್ ಅವರನ್ನು ಸಂಪರ್ಕಿಸಿದರೆ, ಅವರು ಲಭ್ಯವಾಗಲಿಲ್ಲ.

ಕಾರ್ಮಿಕ ಇಲಾಖೆಯ ಅಧೀನಕ್ಕೊಳಪಡುವ ಆಸ್ಪತ್ರೆಯು ಮೃತದೇಹಗಳ ಕುರಿತು ಬಿಬಿಎಂಪಿಗೆ ಯಾವುದೇ ಮಾಹಿತಿ ನೀಡಿರಲಿಲ್ಲ.
ಡಿ.ರಂದೀಪ್, ಆರೋಗ್ಯ ಇಲಾಖೆ ಆಯುಕ್ತ.

ಇಎಸ್‌ಐ ಆಸ್ಪತ್ರೆಯಲ್ಲಿ ಕೊಳೆತ ಸ್ಥಿತಿಯಲ್ಲಿ 15 ತಿಂಗಳ ಬಳಿಕ ಶವ ಪತ್ತೆಯಾಗಿರುವುದನ್ನು ತನಿಖೆ ನಡೆಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿದೆ
ಶಿವರಾಮ ಹೆಬ್ಬಾರ್, ಕಾರ್ಮಿಕ ಸಚಿವ

ಬಿಎಸ್‌ಪಿ ಮತಬ್ಯಾಂಕ್‌ಗೆ ಕನ್ನ ಹಾಕಲು ಎಸ್‌ಪಿ ಯತ್ನ

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರೀಗ, ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರ ಮತ ಬ್ಯಾಂಕ್ ಆಗಿರುವ ಜಾಟವ (ಎಸ್‌ಸಿ) ಸಮುದಾಯದ ಮೇಲೆ ಕಣ್ಣು ನೆಟ್ಟಿದ್ದಾರೆ.

ಇತರ ಹಿಂದುಳಿದ ಸಮುದಾಯದ (ಒಬಿಸಿ) ಮತದಾರರ ಮೇಲೆ ಪ್ರಭಾವ ಬೀರಬಲ್ಲ ಸಣ್ಣಪುಟ್ಟ ಪಕ್ಷಗಳೊಂದಿಗೆ ಈಗಾಗಲೇ ಮೈತ್ರಿ ಗಟ್ಟಿಮಾಡಿಕೊಂಡಿರುವ ಅಖಿಲೇಶ್, ಈಗ 'ದಲಿತ' ಮತಗಳನ್ನು ಸೆಳೆಯುವ ಪ್ರಯತ್ನ ನಡೆಸಿದ್ದಾರೆ. ಈ ದಿಸೆಯಲ್ಲಿ 'ದಲಿತ' ಮುಖಂಡ, ಭೀಮ್ ಆರ್ಮಿ ಸಂಸ್ಥಾಪಕ ಚಂದ್ರಶೇಖರ್ ಅಲಿಯಾಸ್ ರಾವಣ್ ಅವರೊಂದಿಗೆ ಭಾನುವಾರ ಒಂದು ಗಂಟೆ ಮಾತುಕತೆ ನಡೆಸಿದ್ದಾರೆ.

ಚಂದ್ರಶೇಖರ್, 'ದಲಿತ' ಮತದಾರರ ಮೇಲೆ ಅದರಲ್ಲೂ ವಿಶೇಷವಾಗಿ ಉತ್ತರಪ್ರದೇಶದ ಪಶ್ಚಿಮ ಭಾಗದ ಸಹರನ್‌ಪುರ, ಮುಜಫ್ಫರ್‌ನಗರ, ಬುಲಂದ್‌ಶಹರ್ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಪ್ರಭಾವ ಹೊಂದಿದ್ದಾರೆ.

ಅಖಿಲೇಶ್ ಜತೆಗಿನ ಮಾತುಕತೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಚಂದ್ರಶೇಖರ್, ಈ ಸರ್ಕಾರವು ದಲಿತ ವಿರೋಧಿಯಾಗಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿರುದ್ಧ ಸ್ಪರ್ಧಿಸುವುದಾಗಿ ಹೇಳಿದ್ದಾರೆ.

'ಮೈತ್ರಿ ವಿಷಯವಾಗಿ ಅಖಿಲೇಶ್ ಅವರೊಂದಿಗೆ ಮಾತುಕತೆಯಾಗಿದ್ದು, ಇನ್ನೂ ಯಾವುದೇ ನಿರ್ಧಾರವಾಗಿಲ್ಲ. ನಮಗೆ ಸಮಾನ ಶತ್ರು ಎಂದರೆ ಬಿಜೆಪಿ. ಹೀಗಾಗಿ, ಬರಲಿರುವ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಬಗ್ಗೆ ಚರ್ಚೆಯಾಯಿತು' ಎಂದರು.

ಕಳೆದ ವರ್ಷ ನಡೆದ ವಿಧಾನಸಭಾ ಉಪ ಚುನಾವಣೆಯಲ್ಲಿ, ಬಿಎಸ್‌ಪಿ ಬಹುವಾಗಿ ನಿರೀಕ್ಷೆ ಇಟ್ಟುಕೊಂಡಿದ್ದ ಕ್ಷೇತ್ರದಲ್ಲಿ ಚಂದ್ರಶೇಖರ್ ಅವರ ಸಂಘಟನೆಯ ಆಜಾದ್ ಸಮಾಜ್ ಪಕ್ಷದ (ಕಾನ್ಶಿರಾಂ) ಅಭ್ಯರ್ಥಿಯು 13,500ಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದರು. ಈ ಮೂಲಕ ಬಿಎಸ್‌ಪಿಗೆ ಎಚ್ಚರಿಕೆಯನ್ನೂ ರವಾನಿಸಿದ್ದರು.

ಈ ಕ್ಷೇತ್ರದಲ್ಲಿ 21 ಸಾವಿರ ಮತಗಳ ಅಂತರದೊಂದಿಗೆ ಬಿಜೆಪಿ ಗೆಲುವು ಸಾಧಿಸಿತ್ತು. ಎರಡನೇ ಸ್ಥಾನದಲ್ಲಿ ಬಿಎಸ್‌ಪಿ ಇದ್ದರೆ, ಚಂದ್ರಶೇಖರ್ ಅವರ ಸಂಘಟನೆಯ ಅಭ್ಯರ್ಥಿ ಮೂರನೇ ಸ್ಥಾನದಲ್ಲಿದ್ದು, ಕಾಂಗ್ರೆಸ್ ಪಕ್ಷವನ್ನು ನಾಲ್ಕನೇ ಸ್ಥಾನಕ್ಕೆ ತಳ್ಳಿದ್ದರು.

ಚಂದ್ರಶೇಖರ್ ಬಣವು ತಮ್ಮ ಪಕ್ಷಕ್ಕೆ ದೊಡ್ಡ ಹೊಡೆತ ಎಂಬುದನ್ನು ಬಿಎಸ್‌ಪಿ ನಾಯಕರು ಕೂಡ ಒಪ್ಪುತ್ತಾರೆ. ಮಾಯಾವತಿ ಅವರು 'ದಲಿತ'ರ ಹಿತ ಕಾಯಲಿಲ್ಲ ಎಂದು ಚಂದ್ರಶೇಖರ್ ವಾಗ್ದಾಳಿ ನಡೆಸುತ್ತಲೇ ಬಂದಿದ್ದಾರೆ. ಚಂದ್ರಶೇಖರ್ ಪ್ರವೇಶದಿಂದಾಗಿ, ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಗೆಲುವಿನ ನಿರೀಕ್ಷೆಯ ಕ್ಷೇತ್ರಗಳಲ್ಲಿ ಖಂಡಿತ ಹೊಡೆತ ಬೀಳುತ್ತದೆ ಎಂದು ಬಿಎಸ್‌ಪಿ ನಾಯಕರು ಹೇಳುತ್ತಾರೆ.

ಚಂದ್ರಶೇಖರ್ ಬಣದ ಸಖ್ಯವು, ಸಮಾಜವಾದಿ ಪಕ್ಷಕ್ಕೆ ಖಂಡಿತವಾಗಿಯೂ ಪ್ರಯೋಜನಕ್ಕೆ ಬರಲಿದೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು. ಬಿಎಸ್‌ಪಿಯ ಮತ ಬ್ಯಾಂಕ್ ಅನ್ನು ಕಸಿಯುವ ಸಾಮರ್ಥ್ಯವನ್ನು ಅವರು ಈಗಾಗಲೇ ಸಾಬೀತುಪಡಿಸಿದ್ದು, ದಲಿತರ ಮತಗಳು ಅಖಿಲೇಶ್‌ಗೆ ಬೋನಸ್ ಆಗಿ ಪರಿಣಮಿಸಬಲ್ಲವು ಎನ್ನುತ್ತಾರೆ ಲಖನೌದ ರಾಜಕೀಯ ವಿಶ್ಲೇಷಕರೊಬ್ಬರು.

ಅಖಿಲೇಶ್, ಈಗಾಗಲೇ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷ (ಎಸ್‌ಬಿಎಸ್‌ಪಿ), ರಾಜಭರ್ ಪಕ್ಷ, ಮಹಾನ್ ದಲ್ (ಒಬಿಸಿ ಸಂಘಟನೆ), ಅಪ್ನಾ ದಲ್ (ಕೆ), ಕುರ್ಮಿ ಸೇರಿದಂತೆ ಹಲವು ಪಕ್ಷಗಳೊಂದಿಗೆ ಮೈತ್ರಿಯನ್ನು ಪಕ್ಕಾ ಮಾಡಿಕೊಂಡಿದ್ದಾರೆ.

ಕೋವಿಡ್ ಇನ್ನೂ ಹೋಗಿಲ್ಲ...

ಡಾ. ಕಿರಣ್ ವಿ. ಎಸ್.

ಜಾಗತಿಕ ವಿದ್ಯಮಾನಗಳನ್ನು ಗಮನಿಸುವ ಜನರನ್ನು ಒಂದು ಮಹತ್ವದ ಪ್ರಶ್ನೆ ಕಾಡುತ್ತಿದೆ: ಈಗ ಯುರೋಪನ್ನು ಬಾಧಿಸುತ್ತಿರುವ ನವೀನ ಕೋವಿಡ್-19 ವೈರಸ್ ತಳಿ ಭಾರತದಲ್ಲೂ ಮೂರನೆಯ ಅಲೆಗೆ ಕಾರಣವಾಗಬಹುದೇ? ‘ಹೌದು’ ಅಥವಾ ‘ಇಲ್ಲ’ ಎನ್ನುವುದು ಪ್ರಜೆಗಳ ನಿಯಂತ್ರಣದಲ್ಲಿದೆ ಎಂಬುದು ಸತ್ಯ. ಪ್ರಪಂಚದ ಯಾವುದೇ ಸರ್ಕಾರವೂ ಎಷ್ಟೇ ಕಟ್ಟುನಿಟ್ಟಿನ ಕಾಯಿದೆಗಳನ್ನು ಮಾಡಿದರೂ, ಜನರ ಸಹಕಾರವಿಲ್ಲದೆ ಅದು ಸಫಲವಾಗದು. ಒಂದು ಜಾಗತಿಕ ಪಿಡುಗಿನ ನಿಯಂತ್ರಣದಲ್ಲಿ ಸರ್ಕಾರದ ಪಾತ್ರಕ್ಕಿಂತಲೂ ಜನರ ಶಿಸ್ತುಬದ್ಧ ನಡವಳಿಕೆಯೇ ಮುಖ್ಯ.

> ಕೋವಿಡ್-19 ಅಲೆಗಳು ತಾವಾಗಿಯೇ ಬರುವುದಿಲ್ಲ. ಬೇಜವಾಬ್ದಾರಿ ಸಮಾಜ ಅದನ್ನು ಬರಮಾಡಿಕೊಳ್ಳುತ್ತದೆ. ಅವಜ್ಞೆ ಹೆಚ್ಚಿದಷ್ಟೂ ಅವು ವೇಗವಾಗಿ, ತೀಕ್ಷ್ಣವಾಗಿ ಬರುತ್ತವೆ.

ತಳಿರೂಪಾಂತರಯಾವುದೇವೈರಸ್‌ನಸಹಜಗುಣ.ಇಂತಹ ರೂಪಾಂತರಿ ತಳಿ ಅಧಿಕ ರೋಗಕಾರಕವೂ ಆಗಿರಬಹುದು; ಇಲ್ಲವೇ ಶಕ್ತಿಹೀನವೂ ಆಗಬಹುದು. ಕೋವಿಡ್-19 ರೂಪಾಂತರಗೊಳ್ಳುವುದು ಮನುಷ್ಯರ ದೇಹದಲ್ಲಿ. ಹೀಗಾಗಿ, ಅಧಿಕ ಮಂದಿ ಕಾಯಿಲೆಗೆ ಈಡಾದರೆ ವೈರಸ್ ರೂಪಾಂತರದ ಸಾಧ್ಯತೆಗಳು ಹೆಚ್ಚಾಗುತ್ತವೆ. ಒಮ್ಮೆ ರೂಪಾಂತರ ಹೊಂದಿದರೆ ಇನ್ನೂ ಹೆಚ್ಚು ಜನರು ಕಾಯಿಲೆಗೆ ತುತ್ತಾಗುತ್ತಾರೆ. ಆಗ ವೈರಸ್ ಮತ್ತೊಮ್ಮೆ ರೂಪಾಂತರ ಹೊಂದಬಹುದು. ಇದೊಂದು ವಿಷಮ ಆವರ್ತನ ಚಕ್ರ. ಯಾವುದೋ ಒಂದು ಹಂತದಲ್ಲಿ ಈ ಚಕ್ರವನ್ನು ಮುರಿಯಬೇಕು. ಅತ್ಯಂತ ಸಫಲವಾಗಿ ಈ ಚಕ್ರವನ್ನು ಭಿನ್ನ ಮಾಡುವ ಸಾಧ್ಯತೆ ಇರುವುದು ಕಾಯಿಲೆಯ ಪ್ರಮಾಣವನ್ನು ಕಡಿಮೆ ಮಾಡುವುದರಲ್ಲಿ. ಅಂದರೆ ಎಷ್ಟು ಕಡಿಮೆ ಜನರಿಗೆ ಕಾಯಿಲೆ ತಗಲುತ್ತದೋ ವೈರಸ್ ರೂಪಾಂತರ ಹೊಂದುವ ಸಾಧ್ಯತೆ ಅಷ್ಟೇ ಕಡಿಮೆಯಾಗುತ್ತದೆ. ಹೀಗಾಗಿ, ವೈರಸ್ ಹರಡುವಿಕೆಯನ್ನು ಮಿತಗೊಳಿಸುವುದು ಬಹಳ ಮುಖ್ಯ. ಇದಕ್ಕೆ ಸಂಯಮಶೀಲ ವರ್ತನೆ ಅಗತ್ಯ. ಮೂರನೆಯ ಅಲೆಯನ್ನು ತಡೆಯಬೇಕೆಂದರೆ ಕೆಲವು ಹೆಜ್ಜೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ.

ಕೋವಿಡ್-19 ಪಿಡುಗು ಈಗಲೂ ಜೀವಂತವಾಗಿದೆ ಎಂಬ ಎಚ್ಚರಿಕೆ ಇರಬೇಕು. ಕೋವಿಡ್-ಪೂರ್ವ ಕಾಲ ಇನ್ನೂ ಬಂದಿಲ್ಲ. ಹೀಗಾಗಿ, ಹೆಚ್ಚು ಜನಸಂದಣಿ ಸರಿಯಲ್ಲ; ಜಾತ್ರೆಗಳು, ಸಮಾರಂಭಗಳು, ಮಾಲ್‌ಗಳು ಮೊದಲಾದುವುಗಳಿಗೆ ಈಗ ಸಮಯ ಉಚಿತವಲ್ಲ ಎಂಬುದನ್ನು ಜನರೇ ಅರಿಯಬೇಕು. ಸರ್ಕಾರದ ಒತ್ತಾಯಗಳಿಂದ ಜನರ ಪ್ರತಿರೋಧ ಬೆಳೆಯುತ್ತದೆ. ಅದನ್ನು ಮನಗಂಡ ಸರ್ಕಾರಗಳು ಈ ವಿಷಯಗಳಲ್ಲಿ ಮೃದುಧೋರಣೆ ತಳೆಯುತ್ತವೆ. ಆದರೆ ಸರ್ಕಾರದ ಮೃದುಧೋರಣೆ ಅಶಿಸ್ತಿಗೆ ಆಹ್ವಾನವಾಗಬಾರದು.

ಮೂರನೆಯ ಅಲೆ ಬಂದರೆ ಅತ್ಯಂತ ಅಧಿಕ ಸಂಕಟಕ್ಕೆ ಒಳಗಾಗುವವರು ಸಾಮಾನ್ಯಪ್ರಜೆಗಳೇ ಎಂಬುದು ನಮ್ಮ ಗಮನದಲ್ಲಿರಬೇಕು. ಸರ್ಕಾರದ ನೀತಿ ಹೇಗೆಯೇ ಇದ್ದರೂ, ನಾವು ವೈಯಕ್ತಿಕ ಮತ್ತು ಸಮಷ್ಟಿ ಶಿಸ್ತನ್ನು ಪಾಲಿಸುವುದು ಬಹಳ ಮುಖ್ಯ.

ಪ್ರಯಾಣ ಮಾಡದಿರುವುದು ಲೇಸು

ಸಾಂಕ್ರಾಮಿಕ ಕಾಯಿಲೆಯೊಂದು ಸಾಕಷ್ಟು ವ್ಯಾಪಿಸಿರುವಾಗ, ಪ್ರತಿಯೊಬ್ಬರನ್ನೂ ಕಾಯಿಲೆಯ ವಾಹಕರಂತೆಯೇ ಪರಿಗಣಿಸಬೇಕು. ಯಾರಿಂದ ರೋಗ ಹರಡಬಹುದು ಎಂದು ನಿಖರವಾಗಿ ಹೇಳಲಾಗದು. ಆದ್ದರಿಂದ, ಪರಕೀಯರೊಡನೆ ಬೆರೆಯದಿರುವುದು ಸೂಕ್ತ. ತೀರಾ ಅಗತ್ಯವಲ್ಲದಿದ್ದರೆ ಯಾವುದೇ ಪ್ರಯಾಣವೂ ಸಲ್ಲದು. ಮನೆಯಿಂದಲೇ ಕೆಲಸ ಮಾಡುವ ಅವಕಾಶವಿದ್ದರೆ, ಅದನ್ನು ಬಳಸಿಕೊಳ್ಳಬೇಕು.

ಕೋವಿಡ್-19 ಆರಂಭದಿಂದಲೂ ವೈಯಕ್ತಿಕ ಸ್ವಚ್ಛತೆಗೆ ಇಂಬು ನೀಡಲಾಗಿದೆ. ಈಗಲೂ ಅದನ್ನು ತಪ್ಪದೇ ಪಾಲಿಸಬೇಕು. ಬಿರುಸಾದ ಮಳೆಯಲ್ಲಿ ಸಂಚರಿಸುವ ವೇಳೆ ನಮ್ಮನ್ನು ಅತ್ಯಂತ ಹೆಚ್ಚು ಕಾಪಾಡುವುದು ನಾವು ಹಿಡಿದಿರುವ ಕೊಡೆ. ಅಂತೆಯೇ, ಸಮಾಜದಲ್ಲಿ ಕಾಯಿಲೆ ಎಷ್ಟೇ ವ್ಯಾಪಿಸಿದ್ದರೂ, ವೈಯಕ್ತಿಕ ರಕ್ಷಣೆ ಕಾಯಿಲೆಯಿಂದ ನಮ್ಮನ್ನು ದೂರವಿಡಬಲ್ಲದು. ಬಾಯಿ ಮತ್ತು ಮೂಗನ್ನು ಮುಚ್ಚುವಂತೆ ಕಡ್ಡಾಯ ಮಾಸ್ಕ್ ಧಾರಣೆ; ಆರು ಅಡಿ ವೈಯಕ್ತಿಕ ಅಂತರ; ಕೈಗಳನ್ನು ಸಾಬೂನು ಮತ್ತು ನೀರಿನಿಂದ ಆಗಾಗ ತೊಳೆದು ಸ್ವಚ್ಛವಿಡುವುದು; ವೈಯಕ್ತಿಕ ನೈರ್ಮಲ್ಯ; ಇತರರನ್ನು ಸುರಕ್ಷಿತವಾಗಿ ಇರುವಂತೆ ಪ್ರೇರೇಪಿಸುವುದು; ಎಚ್ಚರಿಕೆಯ ಅಂಶಗಳನ್ನು ಕುಟುಂಬ ಸದಸ್ಯರ ಜೊತೆ ಕಾಲಕಾಲಕ್ಕೆ ಚರ್ಚಿಸುತ್ತಾ ಅವರನ್ನು ಸನ್ನದ್ಧರಾಗಿ ಇಡುವುದು; ರೋಗದ ಮೊದಲ ಲಕ್ಷಣಗಳು ಕಂಡ ಒಡನೆಯೇ ಅಂತಹವರನ್ನು ಇತರರಿಂದ ಪ್ರತ್ಯೇಕಿಸುವುದು; ವೈದ್ಯರ ಸಲಹೆ ಪಡೆದು ಪರೀಕ್ಷೆ, ಚಿಕಿತ್ಸೆ ಮಾಡಿಸುವುದು – ಮೊದಲಾದ ಎಚ್ಚರಗಳು ಸದಾ ಇರಬೇಕು. ಇದರಲ್ಲಿ ಯಾವ ರೀತಿಯ ವಿನಾಯತಿಯೂ ಸಲ್ಲದು.

ಲಸಿಕೆ

ಕೋವಿಡ್-19 ಲಸಿಕೆ ಪ್ರಮುಖವಾದ ಹೆಜ್ಜೆ. ಇದು ರೂಪಾಂತರ ತಳಿಯ ಮೇಲೆ ಸಂಪೂರ್ಣ ಪರಿಣಾಮ ಬೀರುತ್ತದೆಯೋ ಇಲ್ಲವೋ ಎಂಬುದು ಮುಖ್ಯವಲ್ಲ; ಲಸಿಕೆಗಳು ಕೋವಿಡ್-19 ವೈರಸ್ ಹರಡುವಿಕೆಯನ್ನು ನಿಯಂತ್ರಿಸುತ್ತವೆ ಎಂಬುದು ನಿರ್ವಿವಾದ. ಲಸಿಕೆಯಿಂದ ಉತ್ಪತ್ತಿಯಾದ ಸಂರಕ್ಷಣೆ ಹೊಸ ತಳಿಯ ವಿರುದ್ಧವೂ ಸಾಕಷ್ಟು ಪ್ರಭಾವ ಬೀರಬಲ್ಲದು ಎಂದು ತಜ್ಞರ ಅಭಿಮತ. ಲಸಿಕಾಕರಣ ಅಧಿಕವಾದಷ್ಟೂ ಮೂರನೆಯ ಅಲೆಯ ಸಾಧ್ಯತೆ ಕಡಿಮೆಯಾಗುತ್ತದೆ. ಹೀಗಾಗಿ, ಪ್ರತಿಯೊಬ್ಬರೂ ಸಾಧ್ಯವಾದಷ್ಟೂ ಶೀಘ್ರವಾಗಿ ಎರಡು ಬಾರಿ ಕೋವಿಡ್-19 ಲಸಿಕೆಯನ್ನು ಹಾಕಿಸಿಕೊಳ್ಳುವುದು ಅತ್ಯಗತ್ಯ.

ಮಕ್ಕಳನ್ನು ಶಾಲೆಗೆ ಕಳುಹಿಸಬಹುದೇ?

ವಿಶ್ವ ಆರೋಗ್ಯ ಸಂಸ್ಥೆ ಇದಕ್ಕೆ ಕೆಲವು ಮಾರ್ಗಸೂಚಿಗಳನ್ನು ನೀಡಿದೆ. ಆಯಾ ದೇಶದ, ಪ್ರಾಂತ್ಯದಲ್ಲಿ ಇರುವ ಕಾಯಿಲೆಯ ಮಟ್ಟವನ್ನು ಅನುಸರಿಸಿ ಇದಕ್ಕೆ ಪರಿಹಾರ ಕಂಡುಕೊಳ್ಳಲು ಸಲಹೆ ನೀಡಿದೆ. ಕಾಯಿಲೆಯ ಹರಡುವಿಕೆ ಯಾವ ಪ್ರಾಂತ್ಯಗಳಲ್ಲಿ ಅಧಿಕವೋ, ಅಂತಹ ಎಡೆಗಳಲ್ಲಿ ಶಾಲೆಗಳು ತೆರೆಯದಿರುವುದೇ ಲೇಸು. ಇಂತಹ ಪ್ರದೇಶಗಳಲ್ಲಿ ದೂರಶಿಕ್ಷಣ, ಆನ್‌ಲೈನ್ ತರಗತಿಗಳು ಯಾವ ಕಾರಣಕ್ಕೂ ಕೊನೆಯಾಗಬಾರದು ಎಂಬ ಕಳಕಳಿಯಿದೆ. ಶಾಲೆಯ ನಿರ್ವಾಹಕರಿಗೆ, ಶಿಕ್ಷಕರಿಗೆ ಕೋವಿಡ್-19 ಕಾಯಿಲೆಯ ಪ್ರಸರಣದ ಬಗ್ಗೆ ಸೂಕ್ತ ಶಿಕ್ಷಣ, ಮಾರ್ಗದರ್ಶನ, ಸಹಾಯವಾಣಿ ಸೌಲಭ್ಯ ನೀಡಿ, ಶಾಲೆಯನ್ನು ಕಾಯಿಲೆರಹಿತ ಪ್ರಾಂತ್ಯವನ್ನಾಗಿ ಪರಿವರ್ತಿಸುವಲ್ಲಿ ಸಹಕಾರ ನೀಡಬೇಕಿದೆ. ಇದನ್ನು ಆಯಾ ಪ್ರಾಂತ್ಯದ ಶಿಕ್ಷಣಾಧಿಕಾರಿಗಳು, ಶಾಲೆಗಳ ನಿರ್ವಾಹಕರು ವಿಶ್ಲೇಷಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು.

ಕೋವಿಡ್-19 ಇನ್ನೂ ಕೊನೆಯಾಗಿಲ್ಲ; ಸದ್ಯದಲ್ಲೇ ಕೊನೆಯಾಗುವುದೂ ಇಲ್ಲ; ಮೂರನೆಯ ಅಲೆಗೆ ಮುಕ್ತಾಯವೂ ಅಲ್ಲ. ಕೋವಿಡ್-19 ಅಲೆಗಳು ತಾವಾಗಿಯೇ ಬರುವುದಿಲ್ಲ. ಬೇಜವಾಬ್ದಾರಿ ಸಮಾಜ ಅದನ್ನು ಬರಮಾಡಿಕೊಳ್ಳುತ್ತದೆ. ಅವಜ್ಞೆ ಹೆಚ್ಚಿದಷ್ಟೂ ಅವು ವೇಗವಾಗಿ, ತೀಕ್ಷ್ಣವಾಗಿ ಬರುತ್ತವೆ. ಶಿಸ್ತನ್ನು ಪಾಲಿಸದಿದ್ದರೆ ಮತ್ತೆಮತ್ತೆ ಬರುತ್ತಲೇ ಇರುತ್ತವೆ. ಈ ಮಾತಿಗೆ ಈಗಾಗಲೇ ಯುರೋಪಿನ ಅನೇಕ ದೇಶಗಳು ಸಾಕ್ಷಿಯಾಗಿವೆ; ಸಂಯಮರಹಿತ ಸಮಾಜಗಳು ತಮ್ಮ ಸರದಿಗಾಗಿ ಕಾದಿವೆ. ನಮ್ಮ ದೇಶ ಮತ್ತೊಂದು ಅಲೆಗೆ ತುತ್ತಾಗದಿರುವುದು ಸಾರ್ವಜನಿಕರ ಕಟ್ಟೆಚ್ಚರದಲ್ಲಿದೆ. ❖

ಬಣ್ಣಗಳು ಎಂದರೆ ಚಿತ್ರಕಲೆಯೇ ಆಗಬೇಕಿಲ್ಲ; ನಮ್ಮ ಮನೆಯ ಕಿಟಕಿ, ಬಾಗಿಲಿನ ಪರದೆಗಳು, ನೆಲಕ್ಕೆ ಹಾಸುವ ಕಾರ್ಪೆಟ್, ಟೇಬಲ್ ಕ್ಲಾತ್, ಗೋಡೆಯ ಬಣ್ಣಗಳು, ಮನೆಯೊಳಗೆ ಬರುವ ಬೆಳಕು ಎಲ್ಲವೂ ನಮ್ಮ ಮನಸ್ಸನ್ನು ಪ್ರಭಾವಿಸುತ್ತಲೇ ಇರುತ್ತವೆ.

ಬಣ್ಣಗಳಿಗೂ ಇದೆ ಮನಸ್ಸು

ರಮ್ಯಾ ಶ್ರೀಹರಿ

ಸೌಂದರ್ಯ ಮನಸ್ಸಿನ ಸಂತೋಷಕ್ಕೆ, ಶಾಂತಿಗೆ ಕಾರಣವಾಗುವುದರಿಂದಲೇ ಅದು ಮಾನವ ಜೀವನದ ಉತ್ಕೃಷ್ಟ ಮೌಲ್ಯವಾಗಿದೆ. ಒತ್ತಡದಲ್ಲಿದ್ದಾಗ ಪ್ರಯತ್ನಪಟ್ಟು ಸ್ವಲ್ಪವಾದರೂ ಮನಸ್ಸಿಗೆ ಸಮಾಧಾನ ತಂದುಕೊಂಡು ಕಲೆಯ ಕಡೆ ತಿರುಗಿಸಿದಾಗ ಸೌಂದರ್ಯವು ಮನಸ್ಸನ್ನು ತಿಳಿಯಾಗಿಸಿ ಸಂಸ್ಕರಿಸುತ್ತದೆ. ಹೀಗೆ ತಿಳಿಯಾದ ಮನಸ್ಸು ಸೌಂದರ್ಯಾನುಭವದಲ್ಲಿ ಮತ್ತಷ್ಟು ಪರಿಪಕ್ವಗೊಳ್ಳುತ್ತ ಅಂತಿಮವಾಗಿ ಶಾಂತಿಯನ್ನೇ ಅನುಭವಿಸುತ್ತದೆ. ಮನಃಶಾಂತಿಯೂ ಸೌಂದರ್ಯೋಪಾಸನೆಯೂ ಜೊತೆಜೊತೆಗೇ ಹೆಜ್ಜೆಯಿಡುತ್ತಾ ಒಂದನ್ನೊಂದು ಪೋಷಿಸುತ್ತಿರುತ್ತದೆ.

ಕಣ್ಣು ಎನ್ನುವ ಬೆರಗಿನ ಬಾಗಿಲನ್ನು ತಟ್ಟುವ ಆಕಾರಗಳು, ಬಣ್ಣಗಳು ಮನಸ್ಸಿನ ಮನೆಯೊಳಗೆ ನುಸುಳಿ ಸೌಂದರ್ಯದ ದರ್ಶನವನ್ನು ನೀಡುವ ಪ್ರಕ್ರಿಯೆಯೇ ಸೋಜಿಗದ್ದು. ಅದರಲ್ಲೂ ಆಕಾರಗಳಾದರೂ ತಮ್ಮದು ಎನ್ನುವಂತಹ ಯಾವುದೋ ಕಥೆಯನ್ನಾದರೂ ಹೇಳಲು ಪ್ರಯತ್ನಿಸುತ್ತಿರುತ್ತವೆ. ಆದರೆ ಬಣ್ಣಗಳಂತಹ ಅಮೂರ್ತ, ಮಾತಿಲ್ಲದ ಮಾಧ್ಯಮವೊಂದು ನಮ್ಮದೇ ಮನಸ್ಸಿನ ಮಾತನ್ನಾಲಿಸಲು ಸಾಧ್ಯವಾಗಿಸುವಂತಹ ಶಕ್ತಿ ಹೊಂದಿರುವುದು ಆಶ್ಚರ್ಯವನ್ನೇ ತರುತ್ತದೆ. ಒಂದೊಂದು ಬಣ್ಣಕ್ಕೂ ಮನಸ್ಸಿನ ಒಂದೊಂದು ಭಾವದ ಛಾಯೆಯಿದೆ. ಇದನ್ನು ಪರೀಕ್ಷಿಸಲು ಆರ್ಟ್ ಗ್ಯಾಲರಿಗಳಿಗೇ ಹೋಗಬೇಕಿಲ್ಲ, ಮೋಡ ಮುಸುಕಿದ ಒಂದು ಇಳಿ ಸಂಜೆಯ ನೇರಳೆಬಣ್ಣ ತರುವ ದುಗುಡವನ್ನು, ಒಂಟಿತನವನ್ನು ಅನುಭವಿಸಿದ್ದರೂ ಸಾಕು, ಬಣ್ಣಗಳು ನಮ್ಮ ಮನಸ್ಸನ್ನು ಪ್ರಭಾವಿಸುವುದರ ಅರಿವಾಗುತ್ತದೆ.

ಪ್ರಕೃತಿ ದಯಪಾಲಿಸುವ ಸುಂದರ ನೋಟಗಳನ್ನು, ಅದು ಮನಸ್ಸಿನಲ್ಲಿ ಉಕ್ಕಿಸುವ ಭಾವಗಳನ್ನು ಹೇಗಾದರೂ ಸೆರೆಹಿಡಿದು ದಕ್ಕಿಸಿಕೊಂಡು ನಾವು ಬಯಸಿದಾಗಲೆಲ್ಲ ನೋಡಿ ಸುಖಿಸುವುದು ಸಾಧ್ಯವಾಗಬೇಕು ಎಂಬ ಆಕಾಂಕ್ಷೆ ಪ್ರಕೃತಿಯಾಧಾರಿತ ವರ್ಣಚಿತ್ರಗಳ ಮೂಲವಿದ್ದಿರಲೂಬಹುದು. ಗಡಿಯಾರದ ಮುಳ್ಳುಗಳೊಂದಿಗೆ ಸ್ಪರ್ಧೆಗಿಳಿದಂತೆ ಓಡಿ, ಕ್ಷಣದೊಳಗೆ ಬದಲಾಗಿಬಿಡುವ ಪ್ರಕೃತಿಯಲ್ಲಿನ ಬಣ್ಣಗಳನ್ನು ಭಿತ್ತಿಯ ಮೇಲೆ ಮೂಡಿಸುವ ಆಸೆ ಒಂದು ಕಡೆಯಾದರೆ, ಹೊರಗಿನ ಪ್ರಪಂಚದಲ್ಲೆಲ್ಲೂ ಕಾಣಸಿಗದ ಒಳಲೋಕದ್ದೇ ವಿಶಿಷ್ಟ ಅನುಭವದ ಮೂರ್ತರೂಪವಾದ ಆಕಾರ, ಪ್ರತಿಮೆ ಇವುಗಳನ್ನು ಗ್ರಹಿಸಿ ಪ್ರಸ್ತುತಪಡಿಸುವ ಸಾಹಸ ಮತ್ತೊಂದು ಕಡೆ. ಒಟ್ಟಿನಲ್ಲಿ ಪ್ರಕೃತಿಯಲ್ಲಿನ ಮತ್ತು ಮನಸ್ಸಿನಾಳದ ಕ್ಷಣ ಕ್ಷಣದ ಬದಲಾವಣೆಗಳಿಗೆ ಬಣ್ಣಗಳದ್ದೇ ಸಾಕ್ಷಿ. ಪ್ರಕೃತಿಯಲ್ಲಿ ಕಾಣಸಿಗುವ ವರ್ಣವೈಭವವನ್ನು ಆಸ್ವಾದಿಸುತ್ತ ಇರಬಹುದಾದರೂ, ನಮ್ಮ ಅನುಭವದ ಮೂಲಕ ಹಾದುಬಂದಾಗ ಆ ದೃಶ್ಯ ಹೇಗೆ ಮೂಡಿಬರಬಹುದು ಎನ್ನುವ ಕುತೂಹಲ ಸಹಜವೇ. ಭಾಷೆಯಲ್ಲಿ ನಿರೂಪಿಸಲು ಸಾಧ್ಯವಾಗದ ಅನುಭವಗಳಾದ ಸಂವೇದನೆಗಳನ್ನು, ಹೀಗೇ ಎಂದು ಹೇಳಿಕೊಳ್ಳಲಾಗದ ಮನದ ಭಾವಗಳನ್ನು, ಮನಃಪಟಲದ ಮೇಲೆ ಹಾದುಹೋಗುವ ಮಾನಸಿಕ ಪ್ರತಿಮೆಗಳನ್ನು ಬಣ್ಣಗಳ ಸಹಾಯದಿಂದ ದೃಶ್ಯವಾಗಿಸುವುದನ್ನು ಬಿಟ್ಟು ಅನ್ಯಮಾರ್ಗವಿದೆಯೇ? ಬಣ್ಣಗಳೊಂದಿಗೆ ಆಟವಾಡುತ್ತಾ, ಅವುಗಳು ಮೈಕೈಗೆ ಮೆತ್ತಿಕೊಂಡಿರುವ ಪರಿವೆಯಿಲ್ಲದೆ ಯಾವುದೋ ಲಹರಿಯಲ್ಲಿ ಲೀನವಾಗಿ ಅಭಿವ್ಯಕ್ತಿಸುವ ತುಡಿತದಿಂದ ಚಡಪಡಿಸುತ್ತಾ, ಪ್ರಪಂಚದ ಗೊಡವೆಯಿಲ್ಲದೆ, ನಮ್ಮಲ್ಲಿಯೇ ನಾವು ಗಹನವಾಗಿ ತೊಡಗಿಕೊಳ್ಳುವುದರಲ್ಲಿರುವ ಸೊಗಸು, ತೃಪ್ತಿಯನ್ನು ಅನುಭವಿಸಿಯೇ ತಿಳಿಯಬೇಕು.

ಚಿತ್ರ ಬಿಡಿಸಲು, ಬಣ್ಣ ತುಂಬಿಸಲು ‘ನಾನೇನು ಕಲಾವಿದಳಲ್ಲ, ನನಗೆ ಪರಿಣತಿ, ತರಬೇತಿ ಯಾವುದೂ ಇಲ್ಲ ಎಂದು ಕೊರಗುವ ಮುಂಚೆ ನಾವೆಲ್ಲರೂ ಒಮ್ಮೆ ಬಾಲ್ಯವನ್ನು ನೆನಪಿಸಿಕೊಳ್ಳಬೇಕು. ಯಾವ ತರಬೇತಿಯೂ ಇರದೇ, ಯಾವ ಕಲಾ ಶಾಲೆಗೂ ಹೋಗದೆ, ಸ್ವಲ್ಪವೂ ಸಂಕೋಚ ಪಡದೆ ಎಂತೆಂತಹ ಚಿತ್ರಗಳನ್ನು ರಚಿಸಿ, ಅದಕ್ಕೆ ಸಂಬಂಧವೇ ಇರದ ಹೆಸರೊಂದನ್ನು ಇಟ್ಟು, ತೋಚಿದ್ದನ್ನೆಲ್ಲಾ ಆ ಚಿತ್ರದ ವಿವರಣೆಯಂತೆ ಹೇಳುತ್ತಿದ್ದೆವಲ್ಲ, ಅದು ಹೇಗೆ? ನಾವು ರಚಿಸಿದ ಚಿತ್ರ ಕಲೆಯಾಗಬಲ್ಲದೋ ಇಲ್ಲವೋ ಎನ್ನುವ ಚಿಂತೆ ಬಿಟ್ಟು ನಮ್ಮ ಸಂತೋಷಕ್ಕಾಗಿಯಷ್ಟೇ ಚಿತ್ರ ಬಿಡಿಸಿ ಬಣ್ಣ ತುಂಬಬಹುದು, ಬೇರೆಯವರ ಮೆಚ್ಚುಗೆ, ಟೀಕೆಗಳ ಚಿಂತೆ ನಮಗೇಕೆ?

ಜಾನಪದ ಕಲೆಗಳಾದ ಚಿತ್ತಾರ, ವಾರ್ಲಿ, ಮಧುಬನಿ, ಕಲಮ್ ಕಾರಿ ಮುಂತಾದವುಗಳಲ್ಲಿ ಉಪಯೋಗಿಸುವ ನೈಸರ್ಗಿಕ ಬಣ್ಣಗಳು ಆ ಕಲೆಗಳ ಚಿತ್ತಾಕರ್ಷಕ ವಿನ್ಯಾಸಗಳಿಗೆ ಅದ್ಭುತವಾಗಿ ಹೊಂದಿಕೊಳ್ಳುತ್ತ ನೋಡುಗರನ್ನು ಮತ್ತೊಂದೇ ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಬಣ್ಣಗಳ ಸಹವಾಸವನ್ನು ಕೇವಲ ಚಿತ್ರಕಲೆಯ ಮೂಲಕವಷ್ಟೇ ಹೊಂದಬೇಕಿಲ್ಲ. ನಮ್ಮ ಮನೆಯ ಕಿಟಕಿ, ಬಾಗಿಲಿನ ಪರದೆಗಳು, ನೆಲಕ್ಕೆ ಹಾಸುವ ಕಾರ್ಪೆಟ್, ಟೇಬಲ್ ಕ್ಲಾತ್, ಗೋಡೆಯ ಬಣ್ಣಗಳು, ಮನೆಯೊಳಗೆ ಬರುವ ಬೆಳಕು ಎಲ್ಲವೂ ನಮ್ಮ ಮನಸ್ಸನ್ನು ಪ್ರಭಾವಿಸುತ್ತಲೇ ಇರುತ್ತವೆ. ವಿವಿಧ ಒಳ ಆವರಣಗಳು ಅಲ್ಲಿನ ಬಣ್ಣಗಳು ನಮ್ಮ ಮನಸ್ಸಿನ ಮೇಲೆ, ಆಲೋಚನೆಗಳ ಮೇಲೆ ಪ್ರಭಾವ ಬೀರುತ್ತಿದೆಯಾದರೆ ಹೇಗೆ ಎಂಬ ಕುತೂಹಲ ಬಣ್ಣಗಳೊಟ್ಟಿಗಿನ ಅನೇಕ ಪ್ರಯೋಗಗಳನ್ನು ಮಾಡಲು ಪ್ರೋತ್ಸಾಹಿಸುತ್ತದೆ, ಸೃಜನಶೀಲವಾಗಿ, ಕ್ರಿಯಾಶೀಲವಾಗಿ ಇರುವಂತೆ ಪ್ರಚೋದಿಸುತ್ತದೆ. ❖

ವ್ಯಾಯಾಮದಲ್ಲಿ ಆಹಾರದ ವಿಹಾರ

ರಘು ಕೆ. ಸಿ.

ಮಾರ್ಕ್‌ಟ್ವೈನ್ ‘To eat is human; to digest is divine’ ಎಂದಿದ್ದ. ಒಂದು ರೀತಿಯಲ್ಲಿ ರಸ-ರುಚಿಯ ಅನುಭವ ಮಾತ್ರ ನಿಮ್ಮದಾಗಿರಲಿ, ಉಳಿದದ್ದಕ್ಕೆ ತಲೆಕೆಡಿಸಿಕೊಳ್ಳದಿರಿ ಎನ್ನುವ ಅರ್ಥ. ಇನ್ನೊಬ್ಬ ತತ್ವಶಾಸ್ತ್ರಜ್ಞ ಜಾರ್ಜ್ ಸಂತಯಾನ ‘ವ್ಯಾಯಾಮವೆನ್ನುವುದು ಕೆಲಸವಿಲ್ಲದ ತಿಂಡಿಪೋತರು ಮತ್ತು ಸೋಮಾರಿಗಳು ಹುಟ್ಟುಹಾಕಿದ ಮೂಢನಂಬಿಕೆ’ ಎಂದು ಮೂದಲಿಸುತ್ತಾನೆ. ನಮ್ಮಲ್ಲಿ ಲಾಲ್‌ಭಾಗ್‌ನಲ್ಲಿ ಒಂದು ಗಂಟೆ ಓಡಾಡಿ ವ್ಯಾಯಾಮ ಮಾಡಿ ಪಕ್ಕದಲ್ಲೇ ಇರುವ ಎಂಟಿಆರ್‌ಗೆ ಹೋಗಿ ಬಜ್ಜಿ ಬೋಂಡ ತಿನ್ನುವುದಾಗಿದೆ. ಅನೇಕ ಕಡೆ ಕೆಳಗಡೆ ಕೆಎಫ್‌ಸಿ, ಅಲ್ಲಿಯೇ ಮೇಲುಗಡೆ ಜಿಮ್‌ಗಳನ್ನು ಕಾಣಬಹುದಾಗಿದೆ. ಲಘುಪೇಯ ತಯಾರು ಮಾಡುವ ಕೋಕ್ ಮತ್ತು ಪೆಪ್ಸಿ ಕಂಪನಿಯವರ ವಾದ ನಮ್ಮ ಪಾನೀಯಗಳಲ್ಲಿ ಯಾವುದೇ ದೋಷವಿಲ್ಲ, ನೀವು ಎರಡು ಕಿಲೋಮೀಟರ್ ಓಡಬೇಕಷ್ಟೇ. ನೀವು ಸೋಮಾರಿಗಳಾಗಿ ನಮ್ಮ ಆಹಾರವನ್ನು ದೂಷಣೆಮಾಡಬೇಡಿ ಎಂದು. ಜಂಕ್ ಫುಡ್ ಅನ್ನು ತಿಂದಿದ್ದರಿಂದ ಬೊಜ್ಜು ಕರಗಿಸಲು ವ್ಯಾವಾಮ ಮಾಡುವುದೋ ಅಥವಾ ಜಂಕ್ ಫುಡ್ ತಿನ್ನುವುದಕ್ಕಾಗಿಯೇ ವ್ಯಾಯಾಮ ಮಾಡುವುದೋ ಎನ್ನುವ ಕಾರ್ಯಕಾರಣ ಸಂಬಂಧ ಹೇಗೆ ನೋಡಿದರೂ ಸರಿ ಎಂದು ತೋರುತ್ತದೆ. ನಮ್ಮಲ್ಲಿ ಯೋಗವೆಂದರೆ ‘ಸ್ಥಿರಸುಖಂ ಆಸನಂ’ ಎನ್ನುವುದುಂಟು. ಆದರೆ ಇಂದು ಯೋಗಪ್ರಕ್ರಿಯೆಯನ್ನು ಗಮನಿಸಿದರೆ ಸಂಪೂರ್ಣವಾಗಿ ಭೌತಿಕ ಮತ್ತು ದೇಹದಂಡನೆಯ ಅಸ್ತ್ರವಾಗಿ ಮಾತ್ರ ಉಳಿದಿದೆ. ಹೇಗೆಂದರೆ ಆಯುರ್ವೇದವೆಂದರೆ ಬಾಡಿ ಮಸಾಜ್ ಎನ್ನುವಂತೆ.

ಇದುವರೆಗೆ ನಾವು ಆಹಾರದ ಕ್ಯಾಲರಿ ಮತ್ತು ಬೊಜ್ಜನ್ನು ಸರಳ ಸೂತ್ರವಾಗಿ ನೋಡುತ್ತಿದ್ದೆವು. ಹೆಚ್ಚು ತಿಂದರೆ ಖರ್ಚು ಮಾಡದ ಶಕ್ತಿ ಬೊಜ್ಜಾಗಿ ಪರಿಣಮಿಸುತ್ತದೆ. ಸುಮಾರು ಎಂಟು ಸಾವಿರ ಕ್ಯಾಲರಿ ಹೆಚ್ಚಾದರೆ ಒಂದು ಕೆಜಿ ತೂಕ ಹೆಚ್ಚಾಗುತ್ತದೆ ಎಂದು. ಆದರೆ ಇಂದು ಇದು ಅತ್ಯಂತ ಸರಳೀಕೃತವಾದ ಅಸತ್ಯ ಎಂದು ತಿಳಿದುಬಂದಿದೆ. ಹರ್ಮನ್ ಪಾಂಡ್ಸರ್ ತನ್ನ ಅನೇಕ ವರ್ಷಗಳ ಸಂಶೋಧನೆಯನ್ನು ತನ್ನ ‘ಬರ್ನ್’ ಎಂಬ ಪುಸ್ತಕದಲ್ಲಿ ದಾಖಲಿಸಿರುವುದು ಹೀಗೆ: ‘ಆಫ್ರಿಕಾದ ಹಡ್ಜಾ ಬುಡಕಟ್ಟು ಜನಾಂಗದವರು ನಗರಗಳಲ್ಲಿ ಕಚೇರಿಗಳಲ್ಲಿ ಕೆಲಸ ಮಾಡುವವರಿಗಿಂತ ಸುಮಾರು ಐದರಿಂದ ಹತ್ತು ಪಟ್ಟು ಹೆಚ್ಚು ಶಿಕಾರಿ ಮಾಡುತ್ತಾ ಆಹಾರ ಹುಡುಕುತ್ತಾ ದೇಹವನ್ನು ದಂಡಿಸುತ್ತಾರೆ. ಆದರೆ ಅವರ ಶಕ್ತಿಯ ಬಳಕೆ ಕಚೇರಿ ಕೆಲಸ ಮಾಡುವವರಿಗಿಂತ ವ್ಯತ್ಯಾಸ ಕಂಡುಬರುವುದಿಲ್ಲ’. ಇದು ನಮ್ಮ ಸಾಮಾನ್ಯಜ್ಞಾನಕ್ಕೆ ಮತ್ತು ಇದುವರೆಗೂ ನಾವು ತಿಳಿದ ವೈಜ್ಞಾನಿಕ ಮಾಹಿತಿಗೆ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ. ಹಾಗಾಗಿ ಅವನು ತನ್ನ ಪುಸ್ತಕದ ಶೀರ್ಷಿಕೆಯನ್ನು ‘ಬರ್ನ್: ದಿ ಮಿಸ್ ಅಂಡರ್‌ಸ್ಟುಡ್ ಸೈನ್ಸ್ ಆಫ್ ಮೆಟಬಾಲಿಸಂ’, ಅಂದರೆ ’ಪಚನಕ್ರಿಯೆಯ ಪರಿಚಯದ ಪ್ರಮಾದ’ ಎನ್ನಬಹುದು. ಆತ ಈ ಬುಡಕಟ್ಟು ಜನಾಂಗದವರ ಹಿಂದೆಬಿದ್ದು ಅವರ ಉಸಿರಿನಲ್ಲಿರುವ ಇಂಗಾಲದ ಡೈಆಕ್ಸೈಡ್ ವಿಶ್ಲೇಷಣೆ ಮಾಡುವುದರ ಮೂಲಕ ದೇಹದ ಒಟ್ಟು ಶಕ್ತಿಯ ಬಳಕೆಯನ್ನು ತಿಳಿದುಕೊಳ್ಳುವುದಾಯಿತು. ಇದಕ್ಕೆ ಇಂದು ವಿಜ್ಞಾನದಲ್ಲಿ ಡಬ್ಲಿ ಲೇಬಲ್ಡ್ ವಾಟರ್ ಅಥವಾ ಕೋಲ್ಡ್ ಐಸೋಟೋಪ್‌ಗಳನ್ನು ಬಳಸಿ ಉಸಿರಿನಲ್ಲಿಯೇ ದೇಹ ಬಳಸಿದ ಶಕ್ತಿಯನ್ನು ಅಳೆಯಬಹುದು. ಹಾಗಾದರೆ ಅಷ್ಟು ಹೆಚ್ಚು ಹೆಲಸ ಮಾಡಿದರೂ ಶಕ್ತಿ ಏಕೆ ಬಳಕೆಯಾಗಲಿಲ್ಲ?

ನಾವು ಅನೇಕ ಆಸ್ಪತ್ರೆಗಳಲ್ಲಿ ಮತ್ತು ಪಠ್ಯಪುಸ್ತಕಗಳಲ್ಲಿ ನಾವು ಇಷ್ಟು ಓಡಿದರೆ ಇಂತಹ ಕೆಲಸ ಮಾಡಿದರೆ ಇಷ್ಟು ಶಕ್ತಿ ಎಂದೆಲ್ಲಾ ಕಂಡಿದ್ದೆವಲ್ಲಾ? ಅಥವಾ ನಮ್ಮ ಫಿಟ್‌ನೆಸ್ ವಾಚ್‌ಗಳು ಮತ್ತು ಗ್ಯಾಜೆಟ್‌ಗಳು ತೋರಿಸುವ ಮಾಹಿತಿ ತಪ್ಪಾಗಿದೆಯಾ? ಈ ಪ್ರಶ್ನೆಗಳು ಸಹಜವಾಗಿಯೇ ಬರುವಂತವು. ಪಾಂಡ್ಸರ್‌ನ ಸಂಶೋಧನೆ ಪ್ರಕಾರ ದೇಹ ತನ್ನ ಶಕ್ತಿಯ ಬಳಕೆಯನ್ನು ತನ್ನದೇ ಆದ ರೀತಿಯಲ್ಲಿ ನಿರ್ವಹಿಸತ್ತದೆ. ಹೆಚ್ಚು ವ್ಯಾವಾಮ ಮಾಡಿದಂತೆಲ್ಲಾ ದೇಹ ತನ್ನದೇ ದಾರಿಯನ್ನು ಬಳಸಿ ಶಕ್ತಿಯನ್ನು ಉಳಿಸುವ ಪ್ರಯತ್ನಕ್ಕೆ ಇಳಿಯುತ್ತದೆ. ಅಲ್ಲದೆ ತಿಂದ ಆಹಾರ ಪರಿಪೂರ್ಣವಾಗಿದ್ದು, ನಾರು ಬೇರಿನಿಂದ ಕೂಡಿದ್ದರೆ ಸಂಸ್ಕರಣೆ ಕಡಮೆಯಾಗಿದ್ದಲ್ಲಿ ಆಹಾರದ ಪಚನಕ್ರಿಯೆಗೇ ಹೆಚ್ಚು ಶಕ್ತಿ ವ್ಯಯವಾಗುತ್ತದೆ. ಈ ರೀತಿ ಆಹಾರ ಪ್ರಕೃತಿದತ್ತವಾಗಿ ಇಡಿತನವನ್ನು ಬಿಡದಿದ್ದರೆ ವ್ಯಾಯಾಮದ ಮೂಲಕ ಖರ್ಚುಮಾಡುವ ಶಕ್ತಿಯನ್ನು ಸುಮಾರಷ್ಟು ಜೀರ್ಣಿಸುವುದಕ್ಕೇ ಬಳಕೆಯಾದರೆ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದಂತಾಗುತ್ತದೆ. ಬಾಳೆದಿಂಡಿನಂತಹ ಆಹಾರವನ್ನು ಜೀರ್ಣಿಸಲು ಖರ್ಚಾಗುವ ಶಕ್ತಿ ಸುಮಾರಷ್ಟು ಅದು ಕೊಡುವ ಶಕ್ತಿಯಷ್ಟೇ ಆಗಬಹುದು. ಅಂತಹ ಆಹಾರಗಳಿಂದ ಬೊಜ್ಜು ಬರುವ ಸಾಧ್ಯತೆಯೇ ಇಲ್ಲ. ಇದು ಬಾಳೆದಿಂಡನ್ನೇ ತಿನ್ನಿರಿ ಎನ್ನುವ ಡಯಟ್ ಸಲಹೆ ಅಲ್ಲ. ಜೀವನಶೈಲಿಯಲ್ಲಿಯೇ ನಿತ್ಯದ ಕೆಲಸಗಳಲ್ಲಿಯೇ ವ್ಯಾಯಾಮ ಹಾಸುಹೊಕ್ಕಾಗಿದ್ದಲ್ಲಿ ಅತ್ಯಂತ ಉತ್ತಮ.

ದೇಹದ ದುಡಿಮೆಯಲ್ಲಿರುವ ಆರೋಗ್ಯಕ್ಕೆ ಪೂರಕವಾದ ಹಲವು ಅಂಶಗಳನ್ನು ಅಲ್ಲಗಳೆಯುವಂತಿಲ್ಲ. ಅದರಲ್ಲಿಯೂ ಸರಳ ಸುಲಭ ಯೋಗಾಭ್ಯಾಸಗಳನ್ನು ಯಂತ್ರತಂತ್ರಗಳ ಬಳಕೆ ಇಲ್ಲದೆ ಸುಲಭವಾಗಿ ಮಾಡಬಹುದಾಗಿದೆ. Man proposes, God disposes ಎನ್ನುವುದನ್ನು ನಮ್ಮ ಆಹಾರ ಬಳಕೆ ಮತ್ತು ಶಕ್ತಿಯ ವ್ಯಯಕ್ಕೂ ಒಂದು ರೀತಿಯಲ್ಲಿ ಸಂಬಂಧಿಸಬಹುದು. ಬುದ್ಧ ಹೇಳಿದಂತೆ, ನೆಲದ ಮೇಲೆ ಮಲಗಿರುವವನು ಕೆಳಕ್ಕೆ ಬೀಳನು. ❖

‘ಪತ್ರಕರ್ತ ವಿನೋದ್ ದುವಾ ಸ್ಥಿತಿ ಗಂಭೀರ’

ನವದೆಹಲಿ (ಪಿಟಿಐ): ಕೋವಿಡ್ ಬಾಧಿಸಿ ಆಸ್ಪತ್ರೆಗೆ ದಾಖಲಾಗಿರುವ ಹಿರಿಯ ಪತ್ರಕರ್ತ ವಿನೋದ್ ದುವಾ ಅವರು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪುತ್ರಿ ನಟಿ ಮಲ್ಲಿಕಾ ದುವಾ ಸೋಮವಾರ ತಿಳಿಸಿದ್ದಾರೆ.

ದೂರದರ್ಶನ ಮತ್ತು ಎನ್‌ಡಿಟಿವಿಯಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿರುವ ದುವಾ (67) ಅವರನ್ನು ಕೋವಿಡ್ ಬಾಧಿಸಿದ ಕಾರಣ ಈ ವರ್ಷದ ಆರಂಭದಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಪತ್ನಿ ಡಾ.ಪದ್ಮಾವತಿ ಅವರು ಜೂನ್‌ನಲ್ಲಿ ಕೋವಿಡ್‌ನಿಂದ ಮೃತಪಟ್ಟಿದ್ದರು.

11ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಕಮಲ ಮರಣ:30.11.2010
ಪತಿ: ಎಂ.ನಂಜೇಗೌಡ ಮತ್ತು
ಶ್ರೀಮತಿ, ಶ್ರೀ. ಪ್ರಶಾಂತ್ ಮತ್ತು ಮಕ್ಕಳು,
ಶ್ರೀಮತಿ, ಶ್ರೀ. ಡಾ|| ಅರುಣ್ ಮತ್ತು ಮಕ್ಕಳು

ಚಿರಸ್ಮರಣೆ



ದಿವಂಗತ ಶ್ರೀ ಕೆ. ವೆಂಕಟಪ್ಪ
(ಅಕ್ಕೂರ್ ಮಾಸ್ಟರ್) ಬ್ಯಾಂಕಿನ ಪ್ರಥಮ ಸ್ಥಾಪಕರು
ನಿಧನ : 30-11-1993
ಸದಾ ತಮ್ಮನ್ನು ಸ್ಮರಿಸುವ:
ಆಡಳಿತ ಮಂಡಳಿಯವರು,
ಸಿಬ್ಬಂದಿವರ್ಗ ಹಾಗೂ ಸದಸ್ಯರು,
ಶ್ರೀ ಲಕ್ಷ್ಮಿ ನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಬೆಂಗಳೂರು.

‘ಕೃಷ್ಣಾ’ ವಿವಾದ: 2 ವಾರ ಸಮಯ ಕೇಳಿದ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷ್ಣಾ ನದಿ ನೀರು ವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪಿನ ಕುರಿತು ಅಧಿಸೂಚನೆ ಹೊರಡಿಸುವಂತೆ ಕೋರಿ ಕರ್ನಾಟಕ ಮತ್ತು ಮಹಾರಾಷ್ಟ್ರ ಸಲ್ಲಿಸಿರುವ ಅರ್ಜಿಯ ಬಗ್ಗೆ ನಿರ್ಧರಿಸಲು ತನಗೆ ಎರಡು ವಾರಗಳ ಸಮಯ ನೀಡಬೇಕು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಅನ್ನು ಕೇಳಿಕೊಂಡಿದೆ.

ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠದ ಎದುರು ಸೋಮವಾರ ಈ ವಿಚಾರ ಬಂದಾಗ, ಸರ್ಕಾರದ ಪರ ಹಿರಿಯ ವಕೀಲ ವಾಸೀಂ ಖಾದ್ರಿ ಅವರು ಕೇಂದ್ರ ಜಲ ಶಕ್ತಿ ಸಚಿವಾಲಯದಿಂದ ಸೂಚನೆ ಪಡೆಯಲು ಎರಡು ವಾರ ಬೇಕು ಎಂದರು. ಈ ವಿಷಯ ಸರ್ಕಾರದ ಪರಿಗಣನೆಯಲ್ಲಿದೆ ಎಂದು ಅವರು ತಿಳಿಸಿದರು. ನ್ಯಾಯಪೀಠ ಮುಂದಿನ ವಿಚಾರಣೆಯನ್ನು ಡಿ.13ಕ್ಕೆ ಮುಂದೂಡಿತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಓಮೈಕ್ರಾನ್ ಕಳವಳ: ಕೋವಿಡ್ ಇರುವವರ ಮಾದರಿ ವೈರಾಣು ಸಂರಚನೆ ವಿಶ್ಲೇಷಣೆಗೆ ಕ್ರಮ

‘ದೇಶದಲ್ಲಿ ಒಂದು ಪ್ರಕರಣವೂ ದೃಢಪಟ್ಟಿಲ್ಲ’

ನವದೆಹಲಿ (ಪಿಟಿಐ): ‘ಭಾರತದಲ್ಲಿ ಈವರೆಗೆ ಓಮೈಕ್ರಾನ್ ರೂಪಾಂತರ ತಳಿಯಿಂದ ಕೋವಿಡ್ ಬಂದಿರುವ ಒಂದು ಪ್ರಕರಣವೂ ದೃಢಪಟ್ಟಿಲ್ಲ’ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈಚಿನ ದಿನಗಳಲ್ಲಿ ದಕ್ಷಿಣ ಆಫ್ರಿಕಾ ಮತ್ತು ಸುತ್ತಮುತ್ತಲಿನ ದೇಶಗಳಿಂದ ಭಾರತಕ್ಕೆ ಬಂದಿರುವ ವ್ಯಕ್ತಿಗಳನ್ನು ಪತ್ತೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ದಕ್ಷಿಣ ಆಫ್ರಿಕಾದಿಂದ ಕಳೆದ ವಾರ ಮಹಾರಾಷ್ಟ್ರಕ್ಕೆ ವಾಪಸಾಗಿದ್ದ ವ್ಯಕ್ತಿಯೊಬ್ಬರಿಗೆ ಕೋವಿಡ್ ತಗುಲಿದೆ. ಆ ವ್ಯಕ್ತಿಯನ್ನು ಪ್ರತ್ಯೇಕವಾಸದಲ್ಲಿ ಇರಿಸಲಾಗಿದೆ

‘ಈಚಿನ ದಿನಗಳಲ್ಲಿ ವಿದೇಶಗಳಿಂದ ಬಂದವರಲ್ಲಿ ಕೋವಿಡ್ ದೃಢಪಟ್ಟವರ ಗಂಟಲು ಮತ್ತು ಮೂಗಿನ ದ್ರವದ ಮಾದರಿಯನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸ್) ಕಳುಹಿಸಲಾಗಿದೆ’ ಎಂದು ಅಧಿಕಾರಿಯು ಹೇಳಿದ್ದಾರೆ.

‘ದಕ್ಷಿಣ ಆಫ್ರಿಕಾದಿಂದ ಕಳೆದ ವಾರ ಮಹಾರಾಷ್ಟ್ರಕ್ಕೆ ವಾಪಸಾಗಿದ್ದ ವ್ಯಕ್ತಿಯೊಬ್ಬರಿಗೆ ಕೋವಿಡ್ ತಗುಲಿದೆ. ಆದರೆ ಅವರಿಗೆ ಓಮೈಕ್ರಾನ್ ರೂಪಾಂತರ ತಳಿಯಿಂದಲೇ ಕೋವಿಡ್ ಬಂದಿದೆಯೇ ಎಂಬುದು ಇನ್ನೂ ದೃಢಪಟ್ಟಿಲ್ಲ. ಅವರ ಗಂಟಲು ಮತ್ತು ಮೂಗಿನ ದ್ರವದ ಮಾದರಿಯನ್ನು ವೈರಾಣು ಸಂರಚನೆ ವಿಶ್ಲೇಷಣೆಗೆ ಕಳಹಿಸಲಾಗಿದೆ. ಅದರ ವರದಿ ಬರಲು ಇನ್ನೂ ಒಂದ ವಾರ ಬೇಕಾಗುತ್ತದೆ. ಆ ವ್ಯಕ್ತಿಯನ್ನು ಪ್ರತ್ಯೇಕ ವಾಸದಲ್ಲಿ ಇರಿಸಲಾಗಿದೆ’ ಎಂದು ಮಹಾರಾಷ್ಟ್ರ ಸರ್ಕಾರ ಹೇಳಿದೆ.

‘ಆ ವ್ಯಕ್ತಿಯು ತನ್ನ ಕುಟುಂಬದ ಇನ್ನೂ ಐವರ ಜತೆಗೆ ದಕ್ಷಿಣ ಆಫ್ರಿಕಾದಿಂದ ಬಂದಿದ್ದರು. ಆರು ಜನರೂ ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಿಸಿದ್ದಾರೆ. ಅವರಲ್ಲಿ ಒಬ್ಬರಲ್ಲಿ ಮಾತ್ರವೇ ಕೋವಿಡ್ ಇರುವುದು ಪತ್ತೆಯಾಗಿದೆ. ಆ ವ್ಯಕ್ತಿಯಲ್ಲಿ ಕೋವಿಡ್‌ನ ಯಾವುದೇ ಲಕ್ಷಣಗಳು ಇಲ್ಲ. ಆದರೆ ಮಾನಸಿಕವಾಗಿ ಅವರು ಕುಗ್ಗಿದ್ದಾರೆ. ಅವರಿಗೆ ಆಪ್ತ ಸಮಾಲೋಚನೆ ನೀಡಲಾಗುತ್ತಿದೆ. ಅವರ ಆರೋಗ್ಯ ಸ್ಥಿತಿಯ ಮೇಲೆ ನಿಗಾ ಇರಿಸಲಾಗಿದೆ. ಮತ್ತು ಅವರು ವಾಪಸಾದ ದಿನದಿಂದ ಅವರ ಸಂಪರ್ಕಕ್ಕೆ ಬಂದಿದ್ದ ವ್ಯಕ್ತಿಗಳನ್ನು ಪತ್ತೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಮಹಾರಾಷ್ಟ್ರ ಸರ್ಕಾರದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೋಟ್ಸ್‌ವಾನ ಮಹಿಳೆ ಪತ್ತೆ: ಬೋಟ್ಸ್‌ವಾನದಿಂದ ದೆಹಲಿಗೆ, ಅಲ್ಲಿಂದ ಜಬಲ್‌ಪುರಕ್ಕೆ ಬಂದಿದ್ದ ಮಹಿಳೆಯನ್ನು ಜಬಲ್‌ಪುರ ಆರೋಗ್ಯ ಇಲಾಖೆಯು ಸೋಮವಾರ ಪತ್ತೆ ಮಾಡಿದೆ.

ಬೋಟ್ಸ್‌ವಾನದಿಂದ ಮಹಿಳೆಯೊಬ್ಬರು ದೆಹಲಿ ಮೂಲಕ ಜಬಲ್‌ಪುರಕ್ಕೆ ಬಂದಿದ್ದಾರೆ. ಅವರನ್ನು ಪತ್ತೆ ಮಾಡಿ, ಕೋವಿಡ್ ಇದೆಯೇ ಎಂಬುದನ್ನು ಪರಿಶೀಲಿಸಿ ಎಂದು ಕೇಂದ್ರ ಸರ್ಕಾರವು ಮಧ್ಯಪ್ರದೇಶ ಸರ್ಕಾರಕ್ಕೆ ಭಾನುವಾರ ಸೂಚನೆ ನೀಡಿತ್ತು. ಹೀಗಾಗಿ ಆ ಮಹಿಳೆಯನ್ನು ಪತ್ತೆ ಮಾಡಲು ಭಾನುವಾರ ಕಾರ್ಯಾಚರಣೆ ಆರಂಭಿಸಲಾಗಿತ್ತು. ಒಂದು ದಿನವಾದರೂ ಅವರು ಪತ್ತೆಯಾಗದೇ ಇದ್ದುದ್ದಕ್ಕೆ ಭಾರಿ ಕಳವಳ ವ್ಯಕ್ತವಾಗಿತ್ತು. ಆದರೆ ಸೋಮವಾರ ಸಂಜೆ ವೇಳೆಗೆ ಅವರು ಪತ್ತೆಯಾಗಿದ್ದಾರೆ ಮತ್ತು ಅವರಿಗೆ ಕೋವಿಡ್ ಇಲ್ಲ ಎಂಬುದು ದೃಢಪಟ್ಟಿದೆ.

‘ಆ ಮಹಿಳೆಯು ಬೋಟ್ಸ್‌ವಾನ ಸೇನೆಯಲ್ಲಿ ಕ್ಯಾಪ್ಟನ್ ಆಗಿದ್ದಾರೆ. ತರಬೇತಿಯ ಕಾರಣಕ್ಕೆ ಜಬಲ್‌ಪುರದಲ್ಲಿರುವ ಭಾರತೀಯ ಸೇನೆಯ ‘ಮೆಟೀರಿಯಲ್ಸ್ ಮ್ಯಾನೇಜ್‌ಮೆಂಟ್ ಕಾಲೇಜ್’ಗೆ ಬಂದಿದ್ದಾರೆ. ಇಲ್ಲಿಗೆ ಬಂದ ನಂತರ ಅವರನ್ನು 10 ದಿನಗಳ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ಅವರ ಆರೋಗ್ಯದಲ್ಲಿ ಯಾವುದೇ ಸಮಸ್ಯೆ ಇಲ್ಲ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ಜಬಲ್‌ಪುರ ಸೇನಾ ಕಾಲೇಜ್‌ನಲ್ಲಿ ಬೋಟ್ಸ್‌ವಾನ ಮಹಿಳೆ ಪತ್ತೆ
- ತರಬೇತಿಗಾಗಿ ಇಲ್ಲಿಗೆ ಬಂದಿದ್ದ ಬೋಟ್ಸ್‌ವಾನ ಸೇನಾ ಕ್ಯಾಪ್ಟನ್
- ಮಹಿಳೆಗೆ ಕೋವಿಡ್ ಇಲ್ಲ, ಅವರು ಆರೋಗ್ಯವಾಗಿ ಇದ್ದಾರೆ– ಆರೋಗ್ಯ ಇಲಾಖೆ

ಅತಿ ಹೆಚ್ಚು ಅಪಾಯದ ಸಾಧ್ಯತೆ- ವಿಶ್ವ ಆರೋಗ್ಯ ಸಂಸ್ಥೆ

ಜಿನೀವಾ (ರಾಯಿಟರ್ಸ್): ಕೋವಿಡ್‌ನ ಹೊಸ ರೂಪಾಂತರ ತಳಿ ಓಮೈಕ್ರಾನ್ ಜಾಗತಿಕವಾಗಿ ಹರಡುವ ಸಾಧ್ಯತೆಯಿದ್ದು, ಕೆಲವು ಸ್ಥಳಗಳಲ್ಲಿ ಹೆಚ್ಚಿನ ಅಪಾಯವನ್ನು ಉಂಟುಮಾಡುವ ಸಾಧ್ಯತೆಯಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ.

ಓಮೈಕ್ರಾನ್‌ನಿಂದ ಮೃತಪಟ್ಟ ಪ್ರಕರಣಗಳು ಜಗತ್ತಿನ ಎಲ್ಲಿಯೂ ಈವರೆಗೆ ವರದಿಯಾಗಿಲ್ಲ. ಆದರೂ, ಸೋಂಕಿನಿಂದ ಅಥವಾ ಲಸಿಕೆಯಿಂದ ಸೃಷ್ಟಿಯಾಗಿರುವ ಮನುಷ್ಯನ ರೋಗನಿರೋಧಕ ಶಕ್ತಿಯನ್ನು ಭೇದಿಸುವ ಶಕ್ತಿಯನ್ನು ಇದು ಹೊಂದಿದೆ ಎಂಬ ಕಾರಣಕ್ಕೆ ಈ ಕುರಿತ ಇನ್ನಷ್ಟು ಅಧ್ಯಯನ ಅಗತ್ಯ ಎಂದು ಅಭಿಪ್ರಾಯಪಟ್ಟಿದೆ.

ದಿನೇ ದಿನೇ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸಂಸ್ಥೆಯು, ಆದ್ಯತೆಯ ಗುಂಪುಗಳಿಗೆ ಲಸಿಕೆ ನೀಡಿಕೆಯ ವೇಗ ಹೆಚ್ಚಿಸುವಂತೆ ಹಾಗೂ ಆರೋಗ್ಯ ವ್ಯವಸ್ಥೆಯನ್ನು ಸನ್ನದ್ಧವಾಗಿ ಇರಿಸುವಂತೆ ತನ್ನ 194 ಸದಸ್ಯ ದೇಶಗಳಿಗೆ ಕರೆ ನೀಡಿದೆ.

‘ಓಮೈಕ್ರಾನ್ ತಳಿಯು ಅತಿಹೆಚ್ಚು ಸ್ಪೈಕ್ ಪ್ರೊಟೀನ್‌ಗಳನ್ನು ಹೊಂದಿದ್ದು, ಈ ಪೈಕಿ ಕೆಲವು ಸ್ಪೈಕ್ ಪ್ರೊಟೀನ್‌ಗಳು ಪ್ರಸ್ತುತ ಸಾಂಕ್ರಾಮಿಕದ ಮೇಲೆ ಉಂಟುಮಾಡಬಲ್ಲ ಸಂಭಾವ್ಯ ಪರಿಣಾಮ ಕಳವಳಕಾರಿ. ಈ ರೂಪಾಂತರಕ್ಕೆ ಸಂಬಂಧಿಸಿದ ಒಟ್ಟಾರೆ ಜಾಗತಿಕ ಸ್ಥಿತಿಯನ್ನು ಅತಿಹೆಚ್ಚು ಅಪಾಯಕಾರಿ ಎಂದು ನಿರ್ಣಯಿಸಲಾಗಿದೆ’ ಎಂದು ಸಂಸ್ಥೆ ತಿಳಿಸಿದೆ.

ಹೊಸ ತಳಿ ಕಾಣಿಸಿಕೊಂಡಿರುವ ವಿವಿಧ ದೇಶಗಳಿಗೆ ಅಂತರರಾಷ್ಟ್ರೀಯ ವಿಮಾನಯಾನ ನಿರ್ಬಂಧಿಸುವ ಪ್ರವೃತ್ತಿ ಬಗ್ಗೆ ಪ್ರತಿಕ್ರಿಯಿಸಿರುವ ಸಂಸ್ಥೆ, ಅಂತರರಾಷ್ಟ್ರೀಯ ಪ್ರಯಾಣ ವ್ಯವಸ್ಥೆಯನ್ನು ಸಮಯೋಚಿತವಾಗಿ ಸರಿಹೊಂದಿಸಿಕೊಳ್ಳಬೇಕು ಎಂದು ಸಲಹೆ ನೀಡಿದೆ.

ಡಬ್ಲ್ಯುಎಚ್‌ಒ ಮಹಾನಿರ್ದೇಶಕ ಟೆಡ್ರೊಸ್ ಅಧಾನಮ್ ಗೇಬ್ರಿಯಸಸ್ ಅವರು ಆರೋಗ್ಯ ಸಚಿವರ ಸಭೆಯಲ್ಲಿ ಓಮೈಕ್ರಾನ್ ಬಗ್ಗೆ ದನಿ ಎತ್ತಿದ್ದಾರೆ. ಭವಿಷ್ಯದ ಸಾಂಕ್ರಾಮಿಕಗಳ ತಡೆ ಕುರಿತ ಅಂತರರಾಷ್ಟ್ರೀಯ ಒಪ್ಪಂದ ಮಾತುಕತೆಯನ್ನು ಈ ಸಭೆ ಆರಂಭಿಸುವ ನಿರೀಕ್ಷೆಯಿದೆ. 2024ರ ಮೇ ತಿಂಗಳ ಹೊತ್ತಿಗೆ ಹೊಸ ಜಾಗತಿಕ ಒಪ್ಪಂದ ಏರ್ಪಡಲಿದೆ. ದತ್ತಾಂಶ, ವೈರಾಣುವಿನ ಸಂರಚನೆ ವಿಶ್ಲೇಷಣೆ (ಜಿನೋಮ್ ಸೀಕ್ವೆನ್ಸಿಂಗ್) ಮತ್ತು ಲಸಿಕೆಯ ಮಾಹಿತಿಯನ್ನು ದೇಶಗಳು ಪರಸ್ಪರ ಹಂಚಿಕೊಳ್ಳಬೇಕು ಎಂಬದನ್ನು ಈ ಒಪ್ಪಂದ ಒಳಗೊಂಡಿದೆ.

‘ಕೇಂದ್ರ ಮಾಹಿತಿ ಹಂಚಿಕೊಳ್ಳಲಿ’

ಉದ್ಧವ್ ಠಾಕ್ರೆ

‘ವಿದೇಶಗಳಿಂದ ಬಂದ ಪ್ರಯಾಣಿಕರ ಮಾಹಿತಿಯನ್ನು ಕೇಂದ್ರ ಸರ್ಕಾರವು ನಿಯಮಿತವಾಗಿ ರಾಜ್ಯ ಸರ್ಕಾರಗಳಿಗೆ ನೀಡಿದರೆ ಮಾತ್ರ, ಅಂತಹ ಪ್ರಯಾಣಿಕರನ್ನು ಪತ್ತೆ ಮಾಡಲು ಸಾಧ್ಯ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದ್ದಾರೆ.

‘ಮುಂಬೈ ಮತ್ತು ಮಹಾರಾಷ್ಟ್ರದ ಬೇರೆ ವಿಮಾನ ನಿಲ್ದಾಣಗಳಿಗೆ ಬಂದಿಳಿದ ವಿದೇಶಿ ಪ್ರಯಾಣಿಕರನ್ನು ಪತ್ತೆ ಮಾಡಲು ನಮಗೆ ಸಾಧ್ಯವಾಗುತ್ತದೆ. ಆದರೆ ಬೇರೆ ರಾಜ್ಯದ ವಿಮಾನ ನಿಲ್ದಾಣಗಳಿಗೆ ಬಂದಿಳಿದು ಆನಂತರ ಬಸ್, ರೈಲು, ಕಾರು, ದೇಶೀಯ ವಿಮಾನದ ಮೂಲಕ ಮಹಾರಾಷ್ಟ್ರಕ್ಕೆ ಬರುವ ವಿದೇಶಿ ಪ್ರಯಾಣಿಕರನ್ನು ಪತ್ತೆ ಮಾಡಲು ಸಾಧ್ಯವಿಲ್ಲ. ಅವರಿಗೆ ಓಮೈಕ್ರಾನ್ ತಳಿಯಿಂದ ಕೋವಿಡ್ ತಗುಲಿದ್ದರೆ, ಅದನ್ನು ಪತ್ತೆ ಮಾಡುವುದೂ ಸಾಧ್ಯವಿಲ್ಲ’ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

‘ಈ ಅಪಾಯವನ್ನು ತಡೆಯಬೇಕೆಂದರೆ, ವಿದೇಶಗಳಿಂದ ಬರುವ ಎಲ್ಲಾ ಪ್ರಯಾಣಿಕರ ವಿವರವನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನೀಡಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಇದನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ಚರ್ಚೆ ಇಲ್ಲದೆ ಮಸೂದೆಗೆ ಒಪ್ಪಿಗೆ

ಒಂದನೇ ಪುಟದಿಂದ

ರಾಜ್ಯಸಭೆಯ ಸಭಾಪತಿ ವೆಂಕಯ್ಯ ನಾಯ್ಡು ಅವರು ಮಸೂದೆ ಮಂಡನೆ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳಲಿಲ್ಲ. ಆದರೆ, ಮಸೂದೆಯು ಲೋಕಸಭೆಯಲ್ಲಿ ಅಂಗೀಕಾರವಾದ ಬಳಿಕ ರಾಜ್ಯಸಭೆಯಲ್ಲಿಯೂ ಮಂಡಿಸುವ ನಿರ್ಧಾರವನ್ನು ಸರ್ಕಾರ ಕೈಗೊಂಡಿತು.

ಮೂರು ಕಾಯ್ದೆಗಳನ್ನು 2020ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ತರಲಾಗಿತ್ತು. ಕಾಯ್ದೆಯನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ರೈತರು ಭಾರಿ ಪ್ರತಿಭಟನೆ ನಡೆಸಿದ್ದರು. ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿಯವರು ನವೆಂಬರ್ 19ರಂದು ಘೋಷಿಸಿದ್ದರು. ವರ್ಷದ ಬಳಿಕವೂ ರೈತರು ಪ್ರತಿಭಟನೆಯನ್ನು ಮುಂದುವರಿಸಿದ್ದಾರೆ. ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಬೇಕು ಎಂಬ ಬೇಡಿಕೆಯನ್ನು ಅವರು ಮುಂದಿಟ್ಟಿದ್ದಾರೆ.

12 ಸದಸ್ಯರ ಅಮಾನತು: ಅಧಿವೇಶನ ಬಹಿಷ್ಕಾರ?

ಒಂದನೇ ಪುಟದಿಂದ

ಸಂಸದರನ್ನು ಅಮಾನತು ಮಾಡಿದ ಕ್ರಮವನ್ನು ವಿರೋಧ ಪಕ್ಷಗಳು ಖಂಡಿಸಿವೆ.

‘ಅನಪೇಕ್ಷಿತ ಮತ್ತು ಪ್ರಜಾಸತ್ತಾತ್ಮಕವಲ್ಲದ ರೀತಿಯಲ್ಲಿ, ನಿಯಮಗಳನ್ನು ಉಲ್ಲಂಘಿಸಿ ಸಂಸದರನ್ನು ಅಮಾನತು ಮಾಡಿದ್ದಕ್ಕೆ ಖಂಡನೆ’ ಎಂದು ಕಾಂಗ್ರೆಸ್, ಡಿಎಂಕೆ, ಎಸ್‌ಪಿ, ಎನ್‌ಸಿಪಿ ಸೇರಿ 13 ಪಕ್ಷಗಳು ಜಂಟಿ ಹೇಳಿಕೆ ನೀಡಿವೆ.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಮಂಗಳವಾರ ಬೆಳಿಗ್ಗೆ ನಡೆಯಲಿರುವ ಸಭೆಯಲ್ಲಿ ಇಡೀ ಅಧಿವೇಶನ ಬಹಿಷ್ಕಾರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಟಿಎಂಸಿಯನ್ನು ಬಿಟ್ಟು ಉಳಿದ ವಿರೋಧ ಪಕ್ಷಗಳ ನಾಯಕರು ಖರ್ಗೆ ಅವರ ನಿವಾಸದಲ್ಲಿ ಸೋಮವಾರ ಸಂಜೆಯೂ ಸಭೆ ನಡೆಸಿದ್ದಾರೆ.

ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ ಅವರು ಕೃಷಿ ಕಾಯ್ದೆ ಹಿಂದಕ್ಕೆ ಪಡೆಯುವ ಮಸೂದೆಗೆ ಅಂಗೀಕಾರ ಸಿಕ್ಕ ಕೂಡಲೇ 12 ಸದಸ್ಯರನ್ನು ಅಮಾನತು ಮಾಡುವ ನಿರ್ಣಯ ಮಂಡಿಸಿದರು.

ಹಿಂದಿನ ಅಧಿವೇಶನದಲ್ಲಿ ತೋರಿದ ‘ದುರ್ನಡತೆ’ಗೆ ನಂತರದ ಅಧಿವೇಶನದಲ್ಲಿ ಶಿಕ್ಷೆ ವಿಧಿಸುತ್ತಿರುವುದು ಇದೇ ಮೊದಲು. ಮುಂಗಾರು ಅಧಿವೇಶನದ ಸಂದರ್ಭದಲ್ಲಿ ಈ ಸಂಸದರು ವರದಿಗಾರರ ಮೇಜಿನ ಮೇಲೆ ಏರುವ ಯತ್ನ ಮಾಡಿದ್ದರು. ಮಾರ್ಷಲ್‌ಗಳ ಜತೆಗೆ ಹೊಡೆದಾಟಕ್ಕೆ ಇಳಿದಿದ್ದರು ಎಂದು ಆರೋಪಿಸಲಾಗಿದೆ.

ಕೇಂದ್ರ, ತ್ರಿಪುರಾ ಸರ್ಕಾರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ತ್ರಿಪುರಾದಲ್ಲಿ ನಡೆದ ಕೋಮುಗಲಭೆಯ ಬಗ್ಗೆ ಎಸ್‌ಐಟಿಯಿಂದ ಸ್ವತಂತ್ರ ತನಿಖೆ ನಡೆಸುವಂತೆ ಕೋರಿ ವಕೀಲರೊಬ್ಬರು ಸಲ್ಲಿಸಿರುವ ಅರ್ಜಿಗೆ ಎರಡು ವಾರದಲ್ಲಿ ಪ್ರತಿಕ್ರಿಯಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಮತ್ತು ತ್ರಿಪುರಾ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ತನಿಖೆ ನಡೆಸಲು ಪೊಲೀಸರು ವಿಳಂಬ ಧೋರಣೆ ಅನುಸರಿಸುತ್ತಿರುವ ಕಾರಣ ಸ್ವತಂತ್ರ ತನಿಖೆ ನಡೆಸುವಂತೆ ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠವು ಸಮ್ಮತಿಸಿ, ವಿಚಾರಣೆಯನ್ನು ಡಿಸೆಂಬರ್ 13ಕ್ಕೆ ಮುಂದೂಡಿತು.

ಲಸಿಕೆ ಕಡ್ಡಾಯ ಪ್ರಶ್ನಿಸಿ ಅರ್ಜಿ: ಡಿ.13ಕ್ಕೆ ವಿಚಾರಣೆ

ನವದೆಹಲಿ: ಕೋವಿಡ್‌ಗೆ ಲಸಿಕೆ ಪಡೆಯಲು ಹಿಂಜರಿಕೆ ಬೇಡ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂ ಕೋರ್ಟ್, ಲಸಿಕೆ ಕಡ್ಡಾಯ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಡಿಸೆಂಬರ್ 13ಕ್ಕೆ ಮುಂದೂಡಿದೆ.

ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ ಸೇರಿದಂತೆ ಕೆಲವು ರಾಜ್ಯಗಳು ಲಸಿಕೆ ಕಡ್ಡಾಯಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಲ್.ನಾಗೇಶ್ವರ್ ರಾವ್, ಬಿ.ಆರ್.ಗವಳಿ ಅವರನ್ನು ಒಳಗೊಂಡ ಪೀಠ ನಡೆಸಿತು.

ಮಾಹಿತಿ ಹಕ್ಕು ಕಾಯ್ದೆಯಡಿ ಕೇಂದ್ರ ಸರ್ಕಾರ ನೀಡಿರುವ ಉತ್ತರದಲ್ಲಿ ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಿಲ್ಲ ಎಂದು ತಿಳಿಸಲಾಗಿದೆ. ಆದರೂ, ಮಧ್ಯಪ್ರದೇಶದಲ್ಲಿ ಲಸಿಕೆ ಪಡೆಯದವರಿಗೆ ಪಡಿತರ ನೀಡುತ್ತಿಲ್ಲ. ಅಲ್ಲದೆ ದೆಹಲಿಯಲ್ಲಿ ಲಸಿಕೆ ಪಡೆಯದವರು ಕಚೇರಿಗೆ ಬರುವಂತಿಲ್ಲ ಎಂದು ತಿಳಿಸಲಾಗಿದೆ. ಇದು ಸರಿಯಲ್ಲ ಎಂದು ಅರ್ಜಿದಾರರ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ವಾದಿಸಿದರು.

ಪರಿಹಾರ: ವ್ಯಾಪಕ ಪ್ರಚಾರಕ್ಕೆ ಸೂಚನೆ

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ಪರಿಹಾರ ನೀಡುವ ಯೋಜನೆ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ

‘ಆರ್ಥಿಕತೆ: ಅನೌಪಚಾರಿಕ ವಲಯದ ಕೊಡುಗೆಯೂ ದೊಡ್ಡದು’

ಹೈದರಾಬಾದ್: ‘ಅನೌಪಚಾರಿಕ ಕ್ಷೇತ್ರದ ಡಿಜಿಟಲ್ ಸ್ಥಿತ್ಯಂತರ: ಶಿಕ್ಷಣ, ತಂತ್ರಜ್ಞಾನ ಕ್ಷೇತ್ರದ ಸವಾಲು ಮತ್ತು ಅವಕಾಶಗಳು’ ವಿಷಯ ಕುರಿತ ವಿಚಾರಗೋಷ್ಠಿಯನ್ನು ಐಸಿಎಫ್‌ಎಐ ಪ್ರತಿಷ್ಠಾನ ಮತ್ತು ಫ್ರೈಡ್‌ರಿಚ್ ಎಬರ್ಟ್ ಸ್ಟಿಫ್‌ಟಂಗ್ ಜಂಟಿಯಾಗಿ ಏರ್ಪಡಿಸಿತ್ತು.

ನವೆಂಬರ್ 27ರಂದು ನಡೆದ ವಿಚಾರಗೋಷ್ಠಿಯಲ್ಲಿ ಶಿಕ್ಷಣ, ತಂತ್ರಜ್ಞಾನ ಮತ್ತು ನೀತಿಗೆ ಸಂಬಂಧಿಸಿದ ವಿವಿಧ 50 ಮಂದಿ ಪರಿಣತರು ಭಾಗವಹಿಸಿದ್ದು, ಡಿಜಿಟಲ್ ಸ್ಥಿತ್ಯಂತರ ಸಂಬಂಧ ಭಾಗಿದಾರರು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ವಿಷಯ ಮಂಡಿಸಿದರು.

ಮುಖ್ಯ ಅತಿಥಿಯಾಗಿದ್ದ ತೆಲಂಗಾಣದ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಜಯೇಶ್ ರಂಜನ್ ಅವರು, ದೇಶದ ಆರ್ಥಿಕತೆಗೆ ಅನೌಪಚಾರಿಕ ವಲಯದ ಕೊಡುಗೆಯೂ ಸಾಕಷ್ಟಿದೆ. ಆದರೆ, ಇದನ್ನು ಕಡೆಗಣಿಸಲಾಗಿದೆ. ಈ ಕ್ಷೇತ್ರದ ಮಹತ್ವವನ್ನು ಅರಿಯುವ ಅಗತ್ಯವಿದೆ ಎಂದು ಹೇಳಿದರು.

ಫ್ರೈಡ್‌ರಿಚ್ ಎಬರ್ಟ್ ಸ್ಟಿಫ್‌ಟಂಗ್ ಸಂಸ್ಥೆಯ ನಿರ್ದೇಶಕ ಉಲ್ರಿಚ್ ಸ್ಟಾರ್ಕ್ ವಿಚಾರಗೋಷ್ಠಿಯಲ್ಲಿ ಮಾತನಾಡಿದರು

ಐಸಿಎಫ್‌ಎಐ ಕುಲಪತಿ ಪ್ರೊ.ಜೆ.ಮಹೇಂದರ್ ರೆಡ್ಡಿ, ಫ್ರೈಡ್‌ರಿಚ್ ಎಬರ್ಟ್ ಸ್ಟಿಫ್‌ಟಂಗ್ ನಿರ್ದೇಶಕ ಉಲ್ರಿಚ್ ಸ್ಟಾರ್ಕ್ ಅವರು ಮಾತನಾಡಿದರು.

ಐಸಿಎಫ್‌ಎಐನ ಹಿರಿಯ ಸಲಹೆಗಾರ ಪ್ರೊ.ಎ.ವಿ.ವೆದ್‌ಪುರಿಶ್ವರ್, ಎಫ್‌ಇಎಸ್ ಇಂಡಿಯಾದ ಕಾರ್ಯಕ್ರಮ ಸಲಹೆಗಾರ ಮಾಂಡ್ವಿ ಕುಲ್‌ಶ್ರೇಶಾಂತ ಅವರು ಸೇರಿದಂತೆ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದರು.

ಎಲ್ಲವನ್ನೂ ನಾವು ನಿರ್ವಹಿಸಲು ಆಗದು: ‘ಸುಪ್ರೀಂ’

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಿಗದಿಯಾಗಿರುವ ಸಿಎ ಪರೀಕ್ಷೆ ಕುರಿತು ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ (ಐಸಿಎಐ) ಹೊರಡಿಸಿರುವ ಸುತ್ತೋಲೆ ಸಂಬಂಧ ಸಲ್ಲಿಕೆಯಾಗಿರುವ ಅರ್ಜಿಯನ್ನು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

‘ಎಲ್ಲ ವಿಷಯಗಳನ್ನು ನಿರ್ವಹಣೆ ಮಾಡಲು ನಾವು ಇಲ್ಲಿಲ್ಲ’ ಎಂದು ಹೇಳಿದೆ.

ಈ ಹಿಂದೆ ಅರ್ಜಿ ವಜಾ ಮಾಡಲಾಗಿದ್ದರೂ ಮತ್ತೆ ಅರ್ಜಿ ಸಲ್ಲಿಸಿದ್ದರ ಔಚಿತ್ಯವೇನು ಎಂದು ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ಸಿ.ಟಿ. ರವಿಕುಮಾರ್ ಅವರ ಪೀಠ ಪ್ರಶ್ನಿಸಿತು. ಕೋವಿಡ್‌ನಿಂದ ತೊಂದರೆಗೆ ಈಡಾಗಿರುವ ಪರೀಕ್ಷಾರ್ಥಿಗಳು ಪರೀಕ್ಷೆಯಿಂದ ಹೊರಗುಳಿಯಲು ಅವಕಾಶ ನೀಡಿ ಸುಪ್ರೀಂ ಕೋರ್ಟ್ ಇದೇ ಜೂನ್‌ನಲ್ಲಿ ಆದೇಶ ನೀಡಿತ್ತು.

ಕ್ಷಮೆ ಕೋರಿದ ಸಂಸದ ಶಶಿ ತರೂರ್

‘ಆಕರ್ಷಕ’ ಟ್ವೀಟ್‌ಗೆ ನೆಟ್ಟಿಗರ ಆಕ್ರೋಶ

ನವದೆಹಲಿ (ಪಿಟಿಐ): ಆರು ಮಂದಿ ಸಂಸದೆಯರ ಜೊತೆಗೆ ತೆಗೆಸಿಕೊಂಡಿದ್ದ ಸೆಲ್ಫಿ ಚಿತ್ರವೊಂದನ್ನು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಶಶಿ ತರೂರ್ ಸೋಮವಾರ ಟ್ವೀಟ್ ಮಾಡಿದ್ದಾರೆ. ಇದು, ವಿವಾದಕ್ಕೆ ಆಸ್ಪದವಾಗಿದ್ದು ತೀವ್ರ ಟೀಕೆ ವ್ಯಕ್ತವಾಗಿದೆ.

ಚಿತ್ರದೊಂದಿಗೆ ಶಶಿ ತರೂರ್ ಅವರು, ‘ಕೆಲಸ ಮಾಡಲು ಲೋಕಸಭೆಯು ಆಕರ್ಷಕವಾದ ತಾಣವಲ್ಲ ಎಂದು ಯಾರು ಹೇಳುತ್ತಾರೆ’ ಎಂದು ಅಡಿಬರಹವನ್ನು ಕೊಟ್ಟಿದ್ದರು. ಈ ಅಡಿಬರಹವು ನೆಟ್ಟಿಗರ ಆಕ್ರೋಶಕ್ಕೆ ಕಾರಣವಾಗಿತ್ತು.

‘ಕೆಲವರಿಗೆ ನೋವಾಗಿದೆ’ ಎಂದು ತರೂರ್ ಬಳಿಕ ಕ್ಷಮೆ ಕೋರಿದ್ದರು. ‘ಸಂಸದೆಯರ ಆಸಕ್ತಿಯಿಂದಲೇ ಸೆಲ್ಫಿ ತೆಗೆದುಕೊಳ್ಳಲಾಗಿತ್ತು. ಅದೇ ಹಾಸ್ಯಪ್ರಜ್ಞೆ ಮತ್ತು ಉತ್ಸಾಹದಿಂದ ಟ್ವೀಟ್ ಮಾಡುವಂತೆಯೂ ಅವರು ತಿಳಿಸಿದ್ದರು’ ಎಂದು ತರೂರ್ ಹೇಳಿದ್ದಾರೆ.

‘ಲೋಕಸಭೆಯು ಕೆಲಸ ಮಾಡಲು ಆಕರ್ಷಕ ತಾಣ’ ಎಂಬ ಶೀರ್ಷಿಕೆ ಜೊತೆಗೆ ಬಳಸಿದ್ದ ಸೆಲ್ಫಿಯಲ್ಲಿ ಸಂಸದೆಯರಾದ ಸುಪ್ರಿಯಾ ಸುಳೆ, ಪ್ರಣೀತ್ ಕೌರ್, ತಮಿಚಾಚಿ ತಂಗಪಾಂಡಿಯನ್, ಮಿಮಿ ಚಕ್ರವರ್ತಿ, ನುಸ್ರತ್ ಜಹಾನ್ ರೂಹಿ ಮತ್ತು ಜ್ಯೋತಿಮಣಿ ಇದ್ದರು.

ಶಶಿ ತರೂರ್ ಅವರು ಟ್ವೀಟ್‌ನಲ್ಲಿ ಹಂಚಿಕೊಂಡಿದ್ದ ಸೆಲ್ಫಿ

‘ಈ ಶೀರ್ಷಿಕೆಯು ಲೈಂಗಿಕ ದೃಷ್ಟಿಕೋನ ಹೊಂದಿದೆ ಮತ್ತು ಆಕ್ಷೇಪಾರ್ಹವಾದುದು’ ಎಂದು ಅನೇಕ ನೆಟ್ಟಿಗರು ಕಿಡಿಕಾರಿದ್ದರು.

ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ, ‘ಸಂಸತ್ತು, ರಾಜಕಾರಣಕ್ಕೆ ಸಂಸದೆಯರ ಕೊಡುಗೆಯನ್ನು ಲಘುವಾಗಿ ಪರಿಗಣಿಸಿ, ಅವರನ್ನು ‘ಆಕರ್ಷಕ ವಸ್ತು’ವಾಗಿ ಬಿಂಬಿಸುತ್ತಿದ್ದೀರಿ. ಇಂತಹ ನಡೆಯನ್ನು ನಿಲ್ಲಿಸಿ’ ಎಂದು ಕಟುವಾಗಿ ಪ್ರತಿಕ್ರಿಯಿಸಿದ್ದರು.

‘ಅಸಮಾನತೆ ಕಾರಣಕ್ಕೆ ಚರ್ಚೆಗೆ ಆಸ್ಪದವಾಗಿದ್ದ ವ್ಯಕ್ತಿ, ಶಶಿ ತರೂರ್ ಅವರು ಚುನಾಯಿತ ಸಂಸದೆಯರನ್ನು ಅವರ ನೋಟಕ್ಕಷ್ಟೇ ಸೀಮಿತಗೊಳಿಸಿ ತಾವೇ ಕೇಂದ್ರಬಿಂದುವಾಗಿದ್ದಾರೆ’ ಎಂದು ಸುಪ್ರೀಂ ಕೋರ್ಟ್ ವಕೀಲೆ ಕರುಣಾ ನಂದಿ ಟ್ವೀಟ್ ಮಾಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಬ್ಯಾಡ್ಮಿಂಟನ್ ಆಟಗಾರ್ತಿ ಜ್ವಾಲಾ ಗುಟ್ಟಾ ಅವರು, ‘ವಾಸ್ತವ ಸ್ಥಿತಿ ಹಾಗಿಲ್ಲ ಕರುಣಾ. ಕೆಲ ಸಂಗತಿಗಳನ್ನು ಲಘುವಾಗಿಯೇ ಗಮನಿಸಬೇಕಾಗುತ್ತದೆ. ಸಂಸದೆಯರಿಗೆ ಇದೊಂದು ಶ್ಲಾಘನೆ. ಇದು ನನ್ನ ಅಭಿಪ್ರಾಯವಷ್ಟೇ’ ಎಂದಿದ್ದಾರೆ.

ತರೂರ್ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ನೆಟ್ಟಿಗರೊಬ್ಬರು, ಲೋಕಸಭೆಯ ಮಹಿಳಾ ಸದಸ್ಯರು, ಕೆಲಸದ ಸ್ಥಳವನ್ನು ಆಕರ್ಷಕಗೊಳಿಸುವ ಅಲಂಕೃತ ವಸ್ತುಗಳಲ್ಲ. ಅವರು ಸಂಸದರು. ಅವರನ್ನು ಅಗೌರವದಿಂದ ಕಾಣುತ್ತಿದ್ದೀರಿ’ ಎಂದು ಟೀಕಿಸಿದ್ದಾರೆ.

ತರೂರ್ ಅವರನ್ನು ಸಮರ್ಥಿಸಿಕೊಂಡಿರುವ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ‘ಈ ಟ್ರೋಲ್‌ಗಳು ಆಶ್ಚರ್ಯ ಮೂಡಿಸಿಲ್ಲ. ಸರ್ಕಾರದ ಆಕರ್ಷಕವಲ್ಲದ ತೀರ್ಮಾನಗಳ ಬಗ್ಗೆ ಚರ್ಚೆಯನ್ನು ಮರೆಮಾಚಿಸಲು ಇಂತಹ ಚರ್ಚೆಗೆ ಒತ್ತು ನೀಡಲಾಗಿದೆ’ ಎಂದಿದ್ದಾರೆ.

ಶಶಿ ತರೂರ್ ಅವರ ಟ್ವೀಟ್ ಕುರಿತ ಲಿಂಕ್ ಇಲ್ಲಿದೆ: https://bit.ly/3HZ3EEy

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Business

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.8792252077, ಶಿವಮೊಗ್ಗ.9008013895

ಭವಿಷ್ಯ
Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓಂ ಶ್ರೀಹೊರನಾಡು ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ. ಶ್ರೀ ವಾಸುದೇವ ಗುರೂಜಿ Ph:9606064461. ಫೋನಿನ ಮೂಲಕವೇ ಪರಿಹಾರ ತಿಳಿಸುತ್ತಾರೆ. ಜೀವನದ ಹಲವಾರು ಸಮಸ್ಯೆಗಳಿಗೆ ಕೇರಳ ಮಹಾರಾಷ್ಟ್ರ ಮಾಂತ್ರಿಕಶಕ್ತಿಯಿಂದ 2ಗಂಟೆಯಲ್ಲಿ ಪರಿಹಾರ. ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಕೆಲಸವಾಗದಿದ್ದಲ್ಲಿ ಹಣವಾಪಾಸ್.

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶಿಕರಣ 27ನಿಮಿಷಗಳಲ್ಲಿ ಪರಿಹಾರ. 9900511008

★||ಶ್ರೀಕಬ್ಬಾಳಮ್ಮ ದೇವಿ||★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ನಾವುದೇ_ಕಠಿಣ ಸಮಸ್ಯೆಗಳಿಗೆ_ಕೇವಲ 30_ನಿಮಿಷದಲ್ಲಿ ಶಾಶ್ವತಪರಿಹಾರ. ''ಸ್ತ್ರೀಯರಿಗೆ ಕಡಿಮೆ_ಖರ್ಚಿನಲ್ಲಿ ವಿಶೇಷ_ಪರಿಹಾರ'' ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ. 9886755306

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Ph: 9538811200, 9538811211

URGENTLY REQD delivery riders with/without bikes Bangalore.Attractive salary+incentive. Female riders can also apply. Call 7892076087

ಬೇಕಾಗಿದ್ದಾರೆ ಟಯೋಟಾ, ಟಾಟಾ ಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಐಟಿಐ,ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ನೇರನೇಮಕಾತಿ ಟಾಟಾ ಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ, ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಡಿಪ್ಲೋಮಾದವರು 18,000-56,000/- ವಸತಿಯೂಟದೊಂದಿಗೆ 7204853296, 7204396011

ತಕ್ಷಣ ಬೇಕಾಗಿದ್ದಾರೆ MNC ಕಂಪನಿಗಳಿಗೆ SSLC,PUC,ITI Diploma ದವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿಯೂಟದೊಂದಿಗೆ: 15,800/- 45000/-.ಕೀರ್ತನ. 8884812156, 8884517968

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಪ್ರವಾಸ
Travel

19.01.2022 ಶ್ರೀಲಂಕಾ 8 ದಿನಗಳು. 10.12.2021, 05.01.2022 ಗುಜರಾತ್ 8 ದಿನಗಳು. 02.12.2021, 14.12.2021 ಕಾಶಿ, ಗಯಾ, ಅಯೋಧ್ಯ 7 ದಿನಗಳು. 14.12.2021, 11.01.2022 ದೆಹಲಿ, ಆಗ್ರಾ, ಜೈಪುರ್ 6 ದಿನಗಳು. 24.11.2021, 25.12.2021 ರಾಮೇಶ್ವರ, ಕನ್ಯಾಕುಮಾರಿ 5 ದಿನಗಳು. ಇತರ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವಲ್ಸ್ ಬೆಂಗಳೂರು-3. 9448402248, 7022547922, 9342483417

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇಂದಿನಿಂದ ವಿಶ್ವ ಮಹಿಳಾ ಟೆನಿಸ್ ಟೂರ್ ಚಾಂಪಿಯನ್‌ಶಿಪ್: ಮುಖ್ಯ ಸುತ್ತು ಪ್ರವೇಶಿಸಿದ ಪ್ರತಿಭಾ

ಅಗ್ರ ಶ್ರೇಯಾಂಕ ಗಳಿಸಿದ ಋತುಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಋತುಜಾ ಭೋಸಲೆ ಇಲ್ಲಿ ನಡೆಯಲಿರುವ ಮಹಿಳೆಯರ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಶಿಪ್‌ನಲ್ಲಿ ಅಗ್ರ ಶ್ರೇಯಾಂಕ ಗಳಿಸಿದ್ದಾರೆ.

ರಾಜ್ಯ ಟೆನಿಸ್ ಸಂಸ್ಥೆಯ ಸಹಯೋಗದಲ್ಲಿ ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್ ಆಯೋಜಿಸಿರುವ ಚಾಂಪಿಯನ್‌ಶಿಪ್‌ನ ಮುಖ್ಯ ಸುತ್ತಿನ ಪಂದ್ಯಗಳು ಮಂಗಳವಾರ ಆರಂಭವಾಗಲಿವೆ.

ಅಲ್ಪ ಕಾಲದ ವಿರಾಮದ ನಂತರ ಸ್ಪರ್ಧಾತ್ಮಕ ಟೆನಿಸ್‌ಗೆ ಮರಳಿದ್ದ ಋತುಜಾ ಕಳೆದ ವರ್ಷ ಈಜಿಪ್ಟ್‌ನಲ್ಲಿ ನಡೆದಿದ್ದ ಐಟಿಎಫ್ ಮಹಿಳಾ ಟೂರ್ನಿಯಲ್ಲಿ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿದ್ದರು.

ಕಾಮನ್‌ವೆಲ್ತ್ ಯೂತ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿರುವ ಜೀಲ್ ದೇಸಾಯಿ ಅವರಿಗೆ ಎರಡನೇ ಶ್ರೇಯಾಂಕ ನೀಡಲಾಗಿದೆ. ಅವರು ಈಗಾಗಲೇ ನಾಲ್ಕು ಐಟಿಎಫ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿದ್ದಾರೆ. ಇತ್ತೀಚೆಗೆ ನಡೆದ ರಾಷ್ಟ್ರೀಯ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದ ಸೌಜನ್ಯ ಬಾವಿಸೆಟ್ಟಿ ಅವರಿಗೆ ಮೂರನೇ ಶ್ರೇಯಾಂಕ ನೀಡಲಾಗಿದೆ.

ಅಗ್ರ ಐದರಲ್ಲಿ ಕೊನೆಯ ಎರಡು ಸ್ಥಾನಗಳನ್ನು ಗಳಿಸುವಲ್ಲಿ ಪ್ರಾಂಜಲಿ ಎಡಲಪಲ್ಲಿ ಮತ್ತು ಮಿಹಿಕಾ ಯಾದವ್ ಯಶಸ್ವಿಯಾಗಿದ್ದಾರೆ. ವೈದೇಹಿ ಚೌಧರಿ, ಕೊರಿಯಾದ ಸೊ ರಾ ಲೀ, ಸಾತ್ವಿಕಾ ಸಮಾ ಅವರು ಅಗ್ರ ಎಂಟರಲ್ಲಿ ಸ್ಥಾನ ಗಳಿಸಿದ್ದಾರೆ.

ಡೆನ್ಮಾರ್ಕ್‌ನ ಎಲಿನಾ ಜಮ್ಮಿದಿ, ಅಮೆರಿಕದ ಶ್ರಿಯಾ ಅಟ್ಟುರಾ ಮತ್ತು ರಷ್ಯಾದ ಲಾಟಾ ಯಂಕೊವಸ್ಕಯ ಅಗ್ರ ಹತ್ತರಲ್ಲಿರುವ ಇತರ ಆಟಗಾರ್ತಿಯರು.

ಪ್ರತಿಭಾ ಪ್ರಸಾದ್

ಪ್ರತಿಭಾ ನಾರಾಯಣನ್ ಮೇಲುಗೈ

ಸ್ಥಳೀಯ ಆಟಗಾರ್ತಿ ಪ್ರತಿಭಾ ನಾರಾಯಣನ್ ಪ್ರಸಾದ್ ಅವರು ಅರ್ಹತಾ ಹಂತದ ಮೂಲಕ ಮುಖ್ಯ ಸುತ್ತು ಪ್ರವೇಶಿಸಿದರು. ಸೋಮವಾರ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಅವರು 6-7 (7-3), 6-2, 10-6ರಲ್ಲಿ ತೆಲಂಗಣದ ಅದಿತಿ ವಿರುದ್ಧ ಜಯ ಗಳಿಸಿದರು.

ಮುಖ್ಯ ಸುತ್ತಿನ ಮೊದಲ ಪಂದ್ಯದಲ್ಲಿ ಅವರು ಸಾಯಿ ದೇದೀಪ್ಯ ಎದುರು ಆಡಲಿದ್ದಾರೆ. 20 ವರ್ಷದ ಪ್ರತಿಭಾ ಆರಂಭದಲ್ಲಿ ಸ್ವಲ್ಪ ಹಿನ್ನಡೆ ಕಂಡರೂ ನಂತರ ಚೇತರಿಸಿಕೊಂಡು ಆಧಿಪತ್ಯ ಸ್ಥಾಪಿಸಿದರು. ವಾಕ್ ಓವರ್ ಮೂಲಕ ಕೊನೆಯ ಘಟ್ಟಕ್ಕೆ ಬಂದಿದ್ದ ಎದುರಾಳಿ ವಿರುದ್ಧ ಆಕ್ರಮಣಕಾರಿ ಆಟವಾಡಿ ಅವರು ಗಮನ ಸೆಳೆದರು.

ಮೊದಲ ಸೆಟ್‌ನಲ್ಲಿ ಹೋರಾಡಿ ಸೋತ ಅವರು ಎರಡನೇ ಸೆಟ್‌ನ ಆರಂಭದಲ್ಲೇ 4-1ರ ಮುನ್ನಡೆ ಸಾಧಿಸಿದರು. ಅದೇ ಲಯವನ್ನು ಮುಂದುವರಿಸಿ ಸೆಟ್ ತಮ್ಮದಾಗಿಸಿಕೊಂಡರು. ಮೂರನೇ ಸೆಟ್‌ನಲ್ಲಿ ಪ್ರತಿರೋಧ ಮೆಟ್ಟಿನಿಂತು ಗೆಲುವು ಸಾಧಿಸಿದರು.

ಸಾಯಿ ಸಂಹಿತಾ 6-4, 6-7 (3), 10-4ರಲ್ಲಿ ಪೂಜಾ ಇಂಗಳೆ ವಿರುದ್ಧ, ರೆನಿ ಸಿಂಗ್ಲಾ 6-4, 6-2ರಲ್ಲಿ ಬೇಲ ತಮಾಂಕರ್ ವಿರುದ್ಧ, ಪ್ರತ್ಯೂಷಾ ರಾಚಪುಡಿ 7-6 (1), 6-1ರಲ್ಲಿ ಯತಿಕಾ ಜೇನಾ ವಿರುದ್ಧ, ಶ್ರೇಯಾ ತಟವರ್ತಿ 6-4, 7-6 (4)ರಲ್ಲಿ ಸೋನಾಕ್ಷ ಘಟ್ಟಾಗ್ ವಿರುದ್ಧ, ಸಾಯಿ ದೇದೀಪ್ಯ 7-6 (5), 5-7, 10-1ರಲ್ಲಿ ಲಾಲಿತ್ಯ ಕಲ್ಲೂರಿ ಎದುರು, ಆಕಾಂಕ್ಷ ದಿಲೀಪ್ 6-2, 6-7 (3), 10-5ರಲ್ಲಿ ಕಾಶಿಶ್ ಭಾಟಿಯಾ ವಿರುದ್ಧ, ಶ್ರೀವಲ್ಲಿ ರಶ್ಮಿಕಾ 6-0, 6-0ರಲ್ಲಿ ದಕ್ಷತಾ ಗಿರೀಶ್ ಕುಮಾರ್ ಎದುರು ಜಯ ಗಳಿಸಿದರು.

ಚೆಸ್: ಸುಜಯ್‌ಗೆ ಚಾಂಪಿಯನ್ ಪಟ್ಟ

ಬೆಂಗಳೂರು: ಪೂರ್ಣ ಅಂಕಗಳನ್ನು ಗಳಿಸಿದ ಬೆಂಗಳೂರಿನ ಸುಜಯ್ ಬಿ.ಎಂ ಅವರು ಚಾಂಪಿಯನ್ ಚೆಸ್ ಅಕಾಡೆಮಿ ಆಯೋಜಿಸಿದ್ದ ಬ್ಲಿಟ್ಜ್ ಚೆಸ್ ಟೂರ್ನಿಯ ಮುಕ್ತ ವಿಭಾಗದ ಚಾಂಪಿಯನ್ ಆದರು. ಐದರಲ್ಲಿ ಐದು ಪಾಯಿಂಟ್‌ಗಳನ್ನು ಅವರು ಗಳಿಸಿದರು. ನಾಲ್ಕು ಪಾಯಿಂಟ್ ಕಲೆ ಹಾಕಿದ ಸಂತೋಷ್ ಕುಮಾರ್ ಬಿ.ಎಸ್ ಎರಡನೇ ಸ್ಥಾನ ಗಳಿಸಿದರೆ ಅನುದೀಪ್ ಕೆ.ಎಸ್ ಕೂಡ ನಾಲ್ಕು ಪಾಯಿಂಟ್ ಗಳಿಸಿ ಮೂರನೇ ಸ್ಥಾನ ಗಳಿಸಿದರು.

ಫಲಿತಾಂಶಗಳು: ಮುಕ್ತ ವಿಭಾಗ: ಸುಜಯ್ ಬಿ.ಎಂ-1, ಸಂತೋಷ್ ಕುಮಾರ್-2, ಅನುದೀಪ್-3; 16 ವರ್ಷದೊಳಗಿನವರು: ಚಿನ್ಮಯ್-1, ಶಾನ್ ಪಿಂಟೊ-2, ಸಮರ್ಥ್ ದೇಸಾಯಿ-3; 10 ವರ್ಷದೊಳಗಿನವರ ವಿಭಾಗ: ಫಯಾಜ್ ಅಹ್ಮದ್-1, ಹಾರುಷ್-2, ಸುಜನ್ ಶೆಣಾಯ್-3.

ಬ್ಯಾಡ್ಮಿಂಟನ್: ವಿಶ್ವ ಟೂರ್ ಫೈನಲ್ಸ್‌ಗೆ ಸಾತ್ವಿಕ್–ಚಿರಾಗ್

ಬಾಲಿ, ಇಂಡೊನೇಷ್ಯಾ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್‌ಶೆಟ್ಟಿ ಪುರುಷರ ಬ್ಯಾಡ್ಮಿಂಟನ್ ಡಬಲ್ಸ್ ವಿಭಾಗದಲ್ಲಿ ವಿಶ್ವ ಟೂರ್ ಫೈನಲ್ಸ್‌ಗೆ ಅರ್ಹತೆ ಗಳಿಸುವ ಮೂಲಕ ಈ ಶ್ರೇಯ ಗಳಿಸಿದ ದೇಶದ ಮೊದಲ ಜೋಡಿ ಎನಿಸಿಕೊಂಡಿದೆ. ಬುಧವಾರ ಇಲ್ಲಿ ಟೂರ್ನಿ ಆರಂಭವಾಗಲಿದೆ.

ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿರುವ ಭಾರತದ ಜೋಡಿಯು, ಹೋದ ವಾರ ಕೊನೆಗೊಂಡ ಇಂಡೊನೇಷ್ಯಾ ಓಪನ್ ಸೂಪರ್ 1000 ಟೂರ್ನಿಯ ಸೆಮಿಫೈನಲ್ ತಲುಪಿದ್ದರು. ಇದೇ ಟೂರ್ನಿಯಲ್ಲಿ ಕಣಕ್ಕಿಳಿದಿದ್ದ ಜಪಾನ್‌ನ ಅಕಿರಾ ಕೋಗಾ ಮತ್ತು ತೈಚಿ ಸೈಟೊ ಕೂಡ ನಾಲ್ಕರ ಘಟ್ಟದ ಪಂದ್ಯದಲ್ಲಿ ಸೋಲು ಅನುಭವಿಸಿದ್ದರಿಂದ ಭಾರತದ ಜೋಡಿಗೆ ವರ್ಷಾಂತ್ಯದ ಬಿಡಬ್ಲ್ಯುಎಫ್ ಟೂರ್ ಫೈನಲ್ಸ್‌ಗೆ ಪ್ರವೇಶ ಸಿಕ್ಕಿದೆ.

ಲಸಿಕೆ ಹಾಕಿಸಿಕೊಂಡ ಪ್ರಯಾಣಿಕರಿಗಾಗಿ ಸಿಂಗಪುರ ಮತ್ತು ಮಲೇಷ್ಯಾಗಳನ್ನು ಸಂಪರ್ಕಿಸುವ ಸೇತುವೆಯನ್ನು ಸೋಮವಾರ ಮತ್ತೆ ತೆರೆಯಲಾಯಿತು –ರಾಯಿಟರ್ಸ್ ಚಿತ್ರ

ಮಲೇಷ್ಯಾ– ಸಿಂಗಪುರ ಗಡಿ ಮುಕ್ತ

ಜೋಹರ್ ಬಹ್ರು (ಮಲೇಷ್ಯಾ) (ಎಪಿ): ಕೋವಿಡ್ ಸಂಕಷ್ಟದ ಕಾರಣ ಸುಮಾರು ಎರಡು ವರ್ಷಗಳಿಂದ ಮುಚ್ಚಿದ್ದ ಮಲೇಷ್ಯಾ- ಸಿಂಗಪುರ ಗಡಿಯನ್ನು ಸೋಮವಾರ ಪುನಃ ತೆರೆಯಲಾಗಿದ್ದು, ಜನರು ಇದನ್ನು ಸಂಭ್ರಮದಿಂದ ಸ್ವಾಗತಿಸಿದರು.

ಹೊರಡುವ ಮೊದಲು ಮತ್ತು ತಲುಪಿದ ನಂತರ ಕಟ್ಟುನಿಟ್ಟಿನ ಕೋವಿಡ್ ತಪಾಸಣೆಗೆ ಒಳಪಡಿಸುವ ಕ್ರಮಗಳೊಂದಿಗೆ ಮಲೇಷ್ಯಾ ಹಾಗೂ ಸಿಂಗಪುರ ನಡುವೆ ಜನಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

2020ರ ಮಾರ್ಚ್‌ನಲ್ಲಿ ಸಿಂಗಪುರವು ಮಲೇಷ್ಯಾ ಜತೆಗಿನ ತನ್ನ ಗಡಿಯನ್ನು ಮುಚ್ಚಿತ್ತು. ಇದರಿಂದ ಸುಮಾರು 1 ಲಕ್ಷ ಮಲೇಷ್ಯಾದ ನಾಗರಿಕರು ಸಿಂಗಪುರದಲ್ಲಿ ಉಳಿಯಬೇಕಾಗಿ ಬಂದಿತ್ತು. ಪ್ರಯಾಣ ನಿರ್ಬಂಧವನ್ನು ಹಂತ ಹಂತವಾಗಿ ಸಡಿಲಿಸಲಾಗುವುದು ಎಂದು ಎರಡೂ ದೇಶಗಳು ತಿಳಿಸಿವೆ. ಸಿಂಗಪುರ ಜನಸಂಖ್ಯೆಯ ಶೇ 85ರಷ್ಟು ಮತ್ತು ಮಲೇಷ್ಯಾದ ಶೇ 80ರಷ್ಟು ಮಂದಿಗೆ ಲಸಿಕೆ ಹಾಕಿಸಲಾಗಿದೆ.

ಉದ್ಯಮಿಯ ಸುಲಿಗೆ ಯತ್ನ ಭಾರತ ಮೂಲದ ವ್ಯಕ್ತಿಗೆ ಸಜೆ

ಸಿಂಗಪುರ (ಪಿಟಿಐ): ವಿವಾಹಿತ ಉದ್ಯಮಿಯೊಬ್ಬ ಸಲಿಂಗಕಾಮ ನಡೆಸುತ್ತಿದ್ದುದನ್ನು ಚಿತ್ರಿಸಿ, ₹33 ಲಕ್ಷ ಸುಲಿಗೆಗೆ ಯತ್ನಿಸಿದ್ದ ಭಾರತ ಮೂಲದ ಸಿಂಗಪುರ ನಿವಾಸಿಗೆ ಸ್ಥಳೀಯ ನ್ಯಾಯಾಲಯ 18 ತಿಂಗಳು ಸಜೆ ವಿಧಿಸಿದೆ.

2019ರಲ್ಲಿ ಕೃತ್ಯ ನಡೆದಿತ್ತು. ಸುಲಿಗೆಗೆ ಯತ್ನಿಸಿದ್ದ ಕೃತ್ಯದಲ್ಲಿ ಉದ್ಯಮಿಯ ಆಪ್ತ ಸಹಾಯಕ ಸೇರಿ ಮೂವರು ಭಾಗಿಯಾಗಿದ್ದರು. ಬಳಿಕ 50 ಸಾವಿರ ಸಿಂಗಪುರ ಡಾಲರ್ ನೀಡುವಂತೆ ಉದ್ಯಮಿಗೆ ಒತ್ತಾಯಿಸಿದ್ದರು. ಆದರೆ, ಹಣ ವರ್ಗಾವಣೆಗೆ ಮುನ್ನವೇ ಮೂವರನ್ನೂ ಪೊಲೀಸರು ಬಂಧಿಸಿದ್ದರು. ಬಳಿಕ ಇವರು ಜಾಮೀನು ಮೇಲೆ ಬಿಡುಗಡೆಯಾಗಿದ್ದರು.

ಮಹಿಳಾ ಫುಟ್‌ಬಾಲ್: ಚಿಲಿಗೆ ಮಣಿದ ಭಾರತ

ಮನೌಸ್, ಬ್ರೆಜಿಲ್ (ಪಿಟಿಐ): ತೀವ್ರ ಪೈಪೋಟಿಯ ನಡುವೆಯೂ ಭಾರತ ಮಹಿಳಾ ಫುಟ್‌ಬಾಲ್ ತಂಡವು ಚಿಲಿ ಎದುರು ನಿರಾಸೆ ಅನುಭವಿಸಿತು. ಇಲ್ಲಿ ನಡೆಯುತ್ತಿರುವ ನಾಲ್ಕು ರಾಷ್ಟ್ರಗಳ ಟೂರ್ನಿಯಲ್ಲಿ ಸೋಮವಾರ 0–3ರಿಂದ ಎದುರಾಳಿಗೆ ಮಣಿಯಿತು.

ಚಿಲಿ ತಂಡಕ್ಕೆ ಮರಿಯಾ ಉರುಟಿಯಾ (14ನೇ ನಿಮಿಷ) ಮೊದಲಾರ್ಧದಲ್ಲಿ ಗೋಲು ಗಳಿಸಿ ಮುನ್ನಡೆ ಗಳಿಸಿಕೊಟ್ಟರೆ, ಪಂದ್ಯದ ಕೊನೆಯ ಹಂತದಲ್ಲಿ ಸಬ್‌ಸ್ಟಿಟ್ಯೂಟ್ ಆಟಗಾರ್ತಿ ಇಸಿದೊರಾ ಹೆರ್ನಾಂಡೆಜ್ (84) ಮತ್ತು ಕರೆನ್ ಅರಾಯಾ (85ನೇ ನಿಮಿಷ) ಕಾಲ್ಚಳಕ ತೋರಿದರು.

ಭಾರತ ಈ ಪಂದ್ಯದಲ್ಲಿ ಮೂರು ಬದಲಾವಣೆ ಮಾಡಿತ್ತು. ಬ್ರೆಜಿಲ್ ಎದುರು ಆಡಿದ್ದ ಅದಿತಿ ಚೌಹಾನ್ ಬದಲಿಗೆ ಎಂ. ಲಿಂಟೊಯಿಂಗಂಬಿ ದೇವಿ ಅವರಿಗೆ ಅವಕಾಶ ನೀಡಿದ್ದರೆ, ಕಮಲಾದೇವಿ ಮತ್ತು ಡ್ಯಾಂಗ್ಮೆ ಗ್ರೇಸ್ ಸ್ಥಾನಕ್ಕೆ ಮಾರ್ಟಿನಾ ತೋಕ್‌ಚೊಮ್ ಮತ್ತು ಮನೀಷಾ ಪನ್ನಾ ಅವರನ್ನು ಕಣಕ್ಕಿಳಿಸಲಾಗಿತ್ತು.

ಆರನೇ ಹಾಗೂ 66ನೇ ನಿಮಿಷದಲ್ಲಿ ಭಾರತಕ್ಕೆ ಗೋಲು ಗಳಿಕೆಯ ಅವಕಾಶಗಳಿದ್ದವು. ಆದರೆ ಮನೀಷಾ ಕಲ್ಯಾಣ್ ಮಾಡಿದ ಪ್ರಯತ್ನವನ್ನು ಚಿಲಿ ಗೋಲ್ ಕೀಪರ್ ಎಂಡ್ಲರ್ ವಿಫಲಗೊಳಿಸಿದರು.

ಭಾರತ ಕೊನೆಯ ಪಂದ್ಯದಲ್ಲಿ ಗುರುವಾರ ವೆನೆಜುಯೆಲಾ ಎದುರು ಆಡಲಿದೆ.

ಶೂಟಿಂಗ್: ಅರ್ಜುನ್–ಅರ್ಷದೀಪ್‌ಗೆ ಚಿನ್ನ

ನವದೆಹಲಿ (ಪಿಟಿಐ): ಪಂಜಾಬ್ ಅರ್ಜುನ್ ಸಿಂಗ್ ಚೀಮಾ ಮತ್ತು ಅರ್ಷದೀಪ್ ಜೋಡಿಯು ರಾಷ್ಟ್ರೀಯ ಶೂಟಿಂಗ್ ಟೂರ್ನಿಯ 10 ಮೀಟರ್ಸ್ ಏರ್ ಪಿಸ್ತೂಲು ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡರು.

ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಸೋಮವಾರ ಅರ್ಜುನ್ ಹಾಗೂ ಅರ್ಷದೀಪ್ 17-15ರಿಂದ ಉತ್ತರ ಪ್ರದೇಶದ ಸೌರಭ್ ಚೌಧರಿ ಹಾಗೂ ದೇವಾಂಶಿ ಸವಾಲು ಮೀರಿದರು.

ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ತನಿಷ್ಕಾ, ವೇದಾಂತ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇದಾಂತ್ ವಸಿಷ್ಠ ಮತ್ತು ತನಿಷ್ಕಾ ಕಪಿಲ್ ಕಾಲಭೈರವ್ ಅವರು ಡಾ. ರಾಮಯ್ಯ ಸ್ಮಾರಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ವೇದಾಂತ್ ಅವರು 9-11, 11-6, 11-9, 6-11, 11-4ರಿಂದ ಪ್ರಥಮ್ ವಿ.ರಾವ್ ಅವರನ್ನು ಸೋಲಿಸಿದರು.

ಸೆಮಿಫೈನಲ್‌ಗಳಲ್ಲಿ ವೇದಾಂತ್ 11–3, 14–16, 11–4, 11–13, 11–4ರಿಂದ ರೆಯಾಂಶ್ ಜಲಾನ್ ಎದುರು, ಪ್ರಥಮ್ 11–9, 11–5, 12–10ರಿಂದ ಅಭಿನವ್ ಪ್ರಸನ್ನ ಎದುರು ಗೆದ್ದಿದ್ದರು.

ಬಾಲಕಿಯರ ವಿಭಾಗದಲ್ಲಿ ತನಿಷ್ಕಾ 11–4, 11–4, 7–11, 11–2ರಿಂದ ರಾಶಿ ವಿ. ರಾವ್ ವಿರುದ್ಧ ಜಯಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನಾಲ್ಕರ ಘಟ್ಟದ ಪಂದ್ಯಗಳಲ್ಲಿ ತನಿಷ್ಕಾ 12-10, 11-4, 11-6ರಿಂದ ಅನೆಟ್ ಮರಿಯಾನಾ ಎದುರು, ರಾಶಿ 11-4, 11-9, 13-15, 11-3ರಿಂದ ಯುಕ್ತಾ ಹರ್ಷಾ ವಿರುದ್ಧ ಗೆದ್ದಿದ್ದರು.

ಪ್ರಶಸ್ತಿಗಳೊಂದಿಗೆ ತನಿಷ್ಕಾ ಕಪಿಲ್ ಹಾಗೂ ವೇದಾಂತ್ ವಸಿಷ್ಠ

ಪಿಯು ಕಾಲೇಜು: ಕ್ರೀಡಾಕೂಟ ರದ್ದು

ಬೆಂಗಳೂರು: ರಾಜ್ಯದ ಪದವಿಪೂರ್ವ ಕಾಲೇಜುಗಳಲ್ಲಿ ನಡೆಯಬೇಕಾಗಿದ್ದ ಎಲ್ಲ ಕ್ರೀಡಾ ಸ್ಪರ್ಧೆಗಳನ್ನು ರದ್ದುಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕಿ ಆರ್. ಸ್ನೇಹಲ್ ಅವರು, ಈ ಬಗ್ಗೆ ಸುತ್ತೋಲೆ ಹೊರಡಿಸಿದ್ದಾರೆ.

ಕೊರೊನಾ ರೂಪಾಂತರಿ ತಳಿ ಓಮೈಕ್ರಾನ್ ಹಾಗೂ ಕೋವಿಡ್ ಹರಡುವಿಕೆ ತಡೆಯುವ ಉದ್ದೇಶದಿಂದ, ವಿದ್ಯಾರ್ಥಿಗಳು ಗುಂಪು ಸೇರುವ ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಸರ್ಕಾರ ಈಗಾಗಲೇ ರದ್ದುಪಡಿಸಿದೆ.

ಸಂಕ್ಷಿಪ್ತ ಸುದ್ದಿ

ನೇಪಾಳದಲ್ಲಿ ಶಾಲಾ ಕಟ್ಟಡಗಳಿಗೆ ಭಾರತದ ನೆರವು

ಕಠ್ಮಂಡು (ಪಿಟಿಐ): ಭಾರತದ ಹಣಕಾಸಿನ ನೆರವಿನೊಂದಿಗೆ ನೇಪಾಳದ ದಾರ್ಚುಲಾ ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ 2 ಶಾಲೆಗಳನ್ನು ಸೋಮವಾರ ಉದ್ಘಾಟಿಸಲಾಗಿದೆ ಎಂದು ಭಾರತದ ರಾಯಭಾರ ಕಚೇರಿ ತಿಳಿಸಿದೆ.

‘ಭಾರತದ ನೆರವಿನೊಂದಿಗೆ ತೊಂದರೆಗಳಾದ ವಿದ್ಯಾರ್ಥಿಗಳಿಗಾಗಿ ನೇಪಾಳದಲ್ಲಿ ಎರಡು ಶಾಲೆಗಳನ್ನು ಕಟ್ಟಲಾಗಿದೆ. ಕಳಂಗಾದ ತಿಂಕರ್‌ನಲ್ಲಿ ಮೋತಿ ಮಹಿಳಾ ಸಂಘ ಪ್ರಾಥಮಿಕ ಶಾಲೆ ಮತ್ತು ಮಹಾಕಾಳಿಯಲ್ಲಿ ಮಲ್ಲಿಕಾರ್ಜುನ ಮಾದರಿ ಪ್ರೌಢ ಶಿಕ್ಷಣ ಶಾಲೆಯನ್ನು ಕ್ರಮವಾಗಿ ₹ 1.27 ಕೋಟಿ ಹಾಗೂ ₹ 2.3 ಕೋಟಿ ವೆಚ್ಚದೊಂದಿಗೆ ನಿರ್ಮಿಸಲಾಗಿದೆ’ ಎಂದು ತಿಳಿಸಲಾಗಿದೆ.

ಅಮೆರಿಕದೊಂದಿಗೆ ದ್ವಿಪಕ್ಷೀಯ ಮಾತುಕತೆ ಇಲ್ಲ: ಇರಾನ್

ದುಬೈ(ರಾಯಿಟರ್ಸ್): ವಿಯೆನ್ನಾದಲ್ಲಿ ನಡೆಯುವ ಮಾತುಕತೆ ವೇಳೆ ಅಣ್ವಸ್ತ್ರಕ್ಕೆ ಸಂಬಂಧಿಸಿದಂತೆ ಅಮೆರಿಕದೊಂದಿಗೆ ದ್ವಿಪಕ್ಷೀಯ ಚರ್ಚೆ ನಡೆಸುವ ಪ್ರಶ್ನೆಯೇ ಇಲ್ಲ ಎಂದು ಇರಾನ್ ಸ್ಪಷ್ಟವಾಗಿ ಹೇಳಿದೆ.

ಇರಾನ್‌ನ ವಿದೇಶಾಂಗ ಇಲಾಖೆಯ ವಕ್ತಾರ ಸಯೀದ್ ಖತೀಬ್ಜಾದೆ ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದು, ನಮ್ಮ ಮುಂದೆ ಆ ರೀತಿಯ ಯಾವುದೇ ಪ್ರಸ್ತಾವ ಇಲ್ಲ ಎಂದಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	17,026
ಇಂದಿನ ಅಂತ್ಯ	17,053
▲	27
ದಿನದ ಗರಿಷ್ಠ	17,160

ವಿನಿಮಯ ದರ	
$ ಡಾಲರ್	75.07
£ ಪೌಂಡ್	100.17
€ ಯುರೊ	84.74
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹457

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1320 (1330)
ಸೋಯಾ (ರಿಫೈನ್ಡ್)	₹1225 (1235)
ಸೂರ್ಯಕಾಂತಿ (ರಿಫೈನ್ಡ್)	₹1290 (1300)
ಪಾಮೋಲಿನ್	₹1192 (1187)

ರಾಜ್ಯಕ್ಕೆ ಜಿಎಸ್‌ಟಿ ಪರಿಹಾರ ಬಾಕಿ ₹ 3,528 ಕೋಟಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ವಿವಿಧ ರಾಜ್ಯಗಳಿಗೆ ಬಾಕಿ ಉಳಿಸಿಕೊಂಡಿರುವ ಜಿಎಸ್‌ಟಿ ಪರಿಹಾರ ಮೊತ್ತದಲ್ಲಿ ಕರ್ನಾಟಕ ರಾಜ್ಯಕ್ಕೆ ₹ 3,528 ಕೋಟಿ ಬರಬೇಕಿದೆ. ಅತಿ ಹೆಚ್ಚಿನ ಬಾಕಿ ಮಹಾರಾಷ್ಟ್ರಕ್ಕೆ ಬರಬೇಕಿದೆ.

ಸೆಪ್ಟೆಂಬರ್ ತಿಂಗಳ ಅಂತ್ಯದವರೆಗಿನ ಮಾಹಿತಿಯ ಪ್ರಕಾರ, ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೀಡಬೇಕಿರುವ ಜಿಎಸ್‌ಟಿ ಪರಿಹಾರದ ಬಾಕಿ ಮೊತ್ತವು ಒಟ್ಟು₹ 51,798 ಕೋಟಿಗಳಷ್ಟಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಪರಾಗ್ ಅಗರ್ವಾಲ್ ಟ್ವಿಟರ್ ಸಿಇಒ

ಸ್ಯಾನ್‌ಫ್ರಾನ್ಸಿಸ್ಕೊ (ಎಪಿ): ಟ್ವಿಟರ್‌ನ ಮುಖ್ಯ ತಾಂತ್ರಿಕ ಅಧಿಕಾರಿ, ಭಾರತ ಮೂಲದ ಪರಾಗ್ ಅಗರ್ವಾಲ್ ಅವರನ್ನು ಕಂಪನಿಯ ಹೊಸ ಸಿಇಒ ಆಗಿ ನೇಮಿಸಲಾಗಿದೆ.

ಟ್ವಿಟರ್ ಸಹ ಸ್ಥಾಪಕ ಜಾಕ್ ಡೋರ್ಸಿ ಅವರು ಸಿಇಒ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ಅಗರ್ವಾಲ್ ಅವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ ಎಂದು ಕಂಪನಿಯು ತಿಳಿಸಿದೆ.

ಲೋಕಸಭೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ

ಬಿಟ್‌ಕಾಯಿನ್‌ಗೆ ಕರೆನ್ಸಿ ಮಾನ್ಯತೆ ಇಲ್ಲ

ನವದೆಹಲಿ (ಪಿಟಿಐ): ಬಿಟ್‌ಕಾಯಿನ್‌ಗೆ ಕರೆನ್ಸಿಯ ಮಾನ್ಯತೆ ನೀಡುವ ಯಾವುದೇ ಆಲೋಚನೆಯೂ ಸರ್ಕಾರಕ್ಕೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಗೆ ಸೋಮವಾರ ತಿಳಿಸಿದ್ದಾರೆ.

ಬಿಟ್‌ಕಾಯಿನ್ ವಹಿವಾಟುಗಳ ಮಾಹಿತಿಯನ್ನು ಸರ್ಕಾರ ಸಂಗ್ರಹಿಸುವುದಿಲ್ಲ ಎಂದೂ ಅವರು ಹೇಳಿದ್ದಾರೆ. ಬಿಟ್‌ಕಾಯಿನ್ ಡಿಜಿಟಲ್ ಕರೆನ್ಸಿ ಆಗಿದ್ದು, ಜನರು ಸರಕು ಮತ್ತು ಸೇವೆಗಳನ್ನು ಖರೀದಿಸಲು ಮತ್ತು ಅಲ್ಲದೆ, ಬ್ಯಾಂಕ್‌ಗಳು, ಕ್ರೆಡಿಟ್ ಕಾರ್ಡ್ ನೀಡುವವರು ಅಥವಾ ಇನ್ಯಾವುದೇ ಮೂರನೇ ವ್ಯಕ್ತಿಗಳನ್ನು ಒಳಗೊಳ್ಳದೆ ಹಣವನ್ನು ವಿನಿಮಯ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು ಅವರು ಹೇಳಿದ್ದಾರೆ.

ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ‘ಕ್ರಿಪ್ಟೊಕರೆನ್ಸಿ ಮತ್ತು ಅಧಿಕೃತ ಡಿಜಿಟಲ್ ಕರೆನ್ಸಿ ನಿಯಂತ್ರಣ ಮಸೂದೆ 2021’ ಮಂಡಿಸಲು ಮುಂದಾಗಿದೆ. ಆ ಮೂಲಕ ಖಾಸಗಿ ಕ್ರಿಪ್ಟೊಕರೆನ್ಸಿಗಳನ್ನು ನಿಷೇಧಿಸಲು ಹೊರಟಿದೆ.

ಬಂಡವಾಳ ವೆಚ್ಚ: ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳು ₹ 2.29 ಲಕ್ಷ ಕೋಟಿಗಳಷ್ಟು ಬಂಡವಾಳ ವೆಚ್ಚ ಮಾಡಿವೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಬಂಡವಾಳ ವೆಚ್ಚ ₹ 5.54 ಲಕ್ಷ ಕೋಟಿಗಳಷ್ಟಾಗಲಿದೆ ಎಂದು ಬಜೆಟ್‌ನಲ್ಲಿ ಅಂದಾಜು ಮಾಡಲಾಗಿದೆ. ಇದಕ್ಕೆ ಹೋಲಿಸಿದರೆ ಅಂದಾಜಿನ ಶೇ 41ರಷ್ಟು ವೆಚ್ಚ ಮಾಡಲಾಗಿದೆ ಎಂದು ಅವರು ಮತ್ತೊಂದು ಪ್ರಶ್ನೆಗೆ ಉತ್ತರ ನೀಡಿದ್ದಾರೆ.

ಹಿಂದಿನ ಹಣಕಾಸು ವರ್ಷದಲ್ಲಿ ಆಗಿದ್ದ ವೆಚ್ಚಕ್ಕೆ ಹೋಲಿಸಿದರೆ ಈ ಬಾರಿ ವೆಚ್ಚದಲ್ಲಿ ಶೇ 38ರಷ್ಟು ಏರಿಕೆ ಕಂಡುಬಂದಿದೆ ಎಂದು ತಿಳಿಸಿದ್ದಾರೆ.

ಚೇತರಿಸಿಕೊಂಡ ಷೇರುಪೇಟೆ

ಮುಂಬೈ (ಪಿಟಿಐ): ಕೋವಿಡ್‌ನ ಹೊಸ ತಳಿಯ ಭೀತಿಗೆ ಒಳಗಾಗಿ ಕಳೆದ ವಾರ ತಲ್ಲಣಿಸಿದ್ದ ದೇಶದ ಷೇರುಪೇಟೆಗಳು ಸೋಮವಾರ ಸಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿವೆ.

ಹೂಡಿಕೆದಾರರು ಕೋವಿಡ್‌ನ ಹೊಸ ತಳಿಯ ಬಗ್ಗೆ ಆತಂಕ ಹೊಂದಿದ್ದರು ಸಹ ರಿಲಯನ್ಸ್ ಇಂಡಸ್ಟ್ರೀಸ್, ಬ್ಯಾಂಕ್ ಮತ್ತು ಐಟಿ ವಲಯದ ಷೇರುಗಳ ಮೌಲ್ಯ ಹೆಚ್ಚಳ ಆಗಿದ್ದು ಷೇರುಪೇಟೆಗಳಲ್ಲಿ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 153 ಅಂಶ ಹೆಚ್ಚಾಗಿ 57,260 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 27 ಅಂಶ ಹೆಚ್ಚಾಗಿ 17053ರಲ್ಲಿ ದಿನದ ವಹಿವಾಟು ಅಂತ್ಯವಾಯಿತು.

ಕೋಟಕ್ ಬ್ಯಾಂಕ್ ಷೇರು ಮೌಲ್ಯವು ಶೇ 2.92ರಷ್ಟು ಏರಿಕೆ ಕಂಡಿತು. ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಶೇ 1.26ರಷ್ಟು ಹೆಚ್ಚಾಗಿದೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 18 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 75.07ರಂತೆ ವಿನಿಮಯಗೊಂಡಿತು.

ರಿಲಯನ್ಸ್ ಕ್ಯಾಪಿಟಲ್ ಆಡಳಿತ ಮಂಡಳಿ ರದ್ದು

ಮುಂಬೈ (ಪಿಟಿಐ/ರಾಯಿಟರ್ಸ್): ನಷ್ಟದಲ್ಲಿರುವ ರಿಲಯನ್ಸ್ ಕ್ಯಾಪಿಟಲ್ ಲಿಮಿಟೆಡ್‌ನ (ಆರ್‌ಸಿಎಲ್) ಆಡಳಿತ ಮಂಡಳಿಯನ್ನು ರದ್ದು ಮಾಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

ಸಾಲ ಮರುಪಾವತಿಸದೇ ಇರುವುದು ಹಾಗೂ ಆಡಳಿತಾತ್ಮಕ ವಿಷಯಗಳಲ್ಲಿನ ವೈಫಲ್ಯದಿಂದಾಗಿ ಮಂಡಳಿಯ ವಿರುದ್ಧ ಈ ಕ್ರಮ ಕೈಗೊಳ್ಳಲಾಗಿದೆ. ಕಂಪನಿಯ ಆಡಳಿತಾಧಿಕಾರಿ ಆಗಿ ಬ್ಯಾಂಕ್ ಆಫ್ ಮಹಾರಾಷ್ಟ್ರದ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ನಾಗೇಶ್ವರ ರಾವ್ ಅವರನ್ನು ನೇಮಿಸಲಾಗಿದೆ ಎಂದು ತಿಳಿಸಿದೆ.

ಕಂಪನಿಯ ವಿರುದ್ಧ ಶೀಘ್ರದಲ್ಲೇ ದಿವಾಳಿ ಪ್ರಕ್ರಿಯೆಯನ್ನು ಆರಂಭಿಸಲಾಗುವುದು ಎಂದು ಆರ್‌ಬಿಐನ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಿವಾಳಿ ಪ್ರಕ್ರಿಯೆಯ ನಿರ್ವಹಣೆಗಾಗಿ ಆಡಳಿತಾಧಿಕಾರಿಯನ್ನು ನೇಮಿಸುವಂತೆ ‘ಎನ್‌ಸಿಎಲ್‌ಟಿ’ಯ ಮುಂಬೈ ಪೀಠಕ್ಕೆ ಆರ್‌ಬಿಐ ಕೇಳಲಿದೆ ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸೆಪ್ಟೆಂಬರ್‌ನಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಒಟ್ಟಾರೆ ನಷ್ಟವು ₹ 40 ಸಾವಿರ ಕೋಟಿಗಳಷ್ಟಿದೆ ಎಂದು ಕಂಪನಿಯ ಷೇರುದಾರರಿಗೆ ಮಾಹಿತಿ ನೀಡಿತ್ತು.

ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕಂಪನಿಯ ನಷ್ಟವು ₹ 1,156 ಕೋಟಿಗಳಷ್ಟಾಗಿದೆ. 2020–21ನೇ ಹಣಕಾಸು ವರ್ಷದಲ್ಲಿ ಕಂಪನಿಯು ₹ 9,287 ಕೋಟಿಗಳಷ್ಟು ನಷ್ಟ ಅನುಭವಿಸಿತ್ತು.

ಮುಂಬೈ ಧಾರಣೆ

ಶೇಂಗಾ	29-11-2021
ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9400-9450
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1330 (1340)
ಒಂದು ವಾರದ ಡೆಲಿವರಿ	1325 (1335)
ಸೋಯಾ ಕಚ್ಚಾ	1185 (1190)
ಪಾಮ್ ವಾರದ ಡೆಲಿವರಿ	1190 (1185)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1200)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	47,800 (47,950)
ಬೆಳ್ಳಿ ಕೆ.ಜಿ	62,900 (62,500)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-52000
ಕುಮಟ	
ಚಿಪ್ಪು	23599-40609
ಕೋಕ	21019-35109
ಫ್ಯಾಕ್ಟರಿ	12019-18424
ಹಳೆಚಾಲಿ	47089-50099
ಹೊಸಚಾಲಿ	35609-40611
ಕುಂದಾಪುರ	
ಹಳೆಚಾಲಿ	44000-51500
ಹೊಸಚಾಲಿ	37500-42500
ಪುತ್ತೂರು	
ಕೋಕ	10500-26000
ಹೊಸತು	27500-42500
ಕಾರ್ಕಳ	
ಹಳತು	46000-52500
ಹೊಸತು	35000-42500
ಸಿದ್ದಾಪುರ	
ಬಿಳಿಗೋಟು	30599-43099
ಚಾಲಿ	48499-51091
ಕೋಕ	27090-37569
ಹೊಸಚಾಲಿ	33099-39599
ಕೆಂಪುಗೋಟು	28999-31299
ರಾಶಿ	45099-48189
ತಟ್ಟಿಬೆಟ್ಟೆ	38390-45569
ಶಿರಸಿ	
ಬೆಟ್ಟೆ	30799-44399
ಬಿಳಿಗೋಟು	23899-44726
ಚಾಲಿ	40111-51408
ರಾಶಿ	42699-50919
ಯಲ್ಲಾಪುರ	
ಬಿಳಿಗೋಟು	30899-42700
ಚಾಲಿ	43199-50850
ಕೋಕ	23899-34899
ಕೆಂಪುಗೋಟು	28299-34011
ರಾಶಿ	46109-53499
ತಟ್ಟಿಬೆಟ್ಟೆ	40319-45919
ಶಿವಮೊಗ್ಗ	
ಬೆಟ್ಟೆ	47210-53910
ಗೊರಬಲು	17166-38258
ರಾಶಿ	44869-47159
ಸರಕು	50100-76696
ಸಾಗರ	
ಬಿಳಿಗೋಟು	20100-41099
ಚಾಲಿ	41550-48299
ಕೋಕ	22500-37499
ಕೆಂಪುಗೋಟು	24299-39399
ರಾಶಿ	42605-47599
ಸಿಪ್ಪೆಗೋಟು	8100-27160
ರಾಮನಗರ ರೇಷ್ಮೆ	
ಮಿಶ್ರತಳಿ	158-526
ದ್ವಿತಳಿ	300-658

ಚಿನ್ನದ ದರ ₹ 242 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಹೆಚ್ಚಳ ಆಗಿದೆ. 10ಗ್ರಾಂ ಚಿನ್ನದ ದರ ₹ 242ರಷ್ಟು ಹೆಚ್ಚಾಗಿ ₹ 47,242ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 543ರಷ್ಟು ಹೆಚ್ಚಾಗಿ ₹ 62,248ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಐಪಿಒ ಹೂಡಿಕೆ ಅಂದ್ರೆ ಲಾಟರಿ ಟಿಕೆಟ್ ಅಲ್ಲ!

ಷೇರು ಮಾತು
ಶರತ್ ಎಂ.ಎಸ್.

ಐಪಿಒಗಳಲ್ಲಿ ಹೂಡಿಕೆ ಮಾಡುವ ಮುನ್ನ ಅರಿತುಕೊಂಡು ಮುನ್ನಡೆದರೆ ಲಾಭ, ಆತುರಪಟ್ಟರೆ ನಷ್ಟ ಎಂದು ಕಳೆದ ಅಂಕಣದಲ್ಲಿ ಬರೆದಿದ್ದೆ. ಆ ಮಾತಿಗೆ ಪೂರಕವಾದ ಕೆಲವು ಸಂಗತಿಗಳು ಈಚೆಗೆ ನಡೆದಿವೆ. ಷೇರು ಮಾರುಕಟ್ಟೆಯಲ್ಲಿ ವಹಿವಾಟು ಆರಂಭಿಸಿದ ಕಂಪನಿಯೊಂದರ ಷೇರು ಮೌಲ್ಯ ಒಂದೇ ದಿನದಲ್ಲಿ ದೊಡ್ಡ ಪ್ರಮಾಣದಲ್ಲಿ ಕುಸಿತ ಕಂಡಿತು. ಹಣ ಹೂಡಿಕೆ ಮಾಡಿದ್ದವರು, ಹಣ ಕಳೆದುಕೊಳ್ಳುವಂತೆ ಆಯಿತು. ಲಕ್ಷಾಂತರ ಮಂದಿ ಸಣ್ಣ ಹೂಡಿಕೆದಾರರ ಭರವಸೆಯ ಸೌಧಕ್ಕೆ ಪೆಟ್ಟು ಬಿತ್ತು. ಉತ್ತಮ ವಹಿವಾಟಿನ ಮಾದರಿ ಹೊಂದಿರುವ ಕಂಪನಿಗಳನ್ನು ಆಯ್ಕೆ ಮಾಡಿಕೊಂಡು ಹೂಡಿಕೆ ಮಾಡಬೇಕು ಎಂಬ ಮಾತನ್ನು ಯಾವ ಸಂದರ್ಭದಲ್ಲಿಯೂ ಮರೆಯುವಂತೆ ಇಲ್ಲ.

ಬಹುತೇಕರು ಐಪಿಒಗಳಲ್ಲಿ ಹೂಡಿಕೆ ಮಾಡುವುದನ್ನು ಲಾಟರಿ ಟಿಕೆಟ್ ಖರೀದಿ ಮಾಡಿದಂತೆ ಎಂದು ಭಾವಿಸುತ್ತಾರೆ. ಆದರೆ ಐಪಿಒ ಎನ್ನುವುದು ಹಲವು ರೀತಿಯ ಲೆಕ್ಕಾಚಾರಗಳನ್ನು ಆಧರಿಸಿದ ಹೂಡಿಕೆ. ಅಧ್ಯಯನ ಮತ್ತು ಕಲಿಕೆ ಇದ್ದಾಗ ಮಾತ್ರ ಐಪಿಒಗಳು ದುಡ್ಡು ಬಿತ್ತಿ, ಬೆಳೆಸುವ ಸಾಧನಗಳಾಗುತ್ತವೆ.

ಕಂಪನಿಯ ಆಂತರಿಕ ಮೌಲ್ಯ ಎಷ್ಟು ಎಂದು ಅಂದಾಜು ಮಾಡುವ ಪ್ರಕ್ರಿಯೆ ವ್ಯಾಲ್ಯುವೇಷನ್ ಅಥವಾ ಮೌಲ್ಯಮಾಪನ. ಯಾವುದೇ ವಸ್ತುವಿನ ಬೆಲೆ ನಿಗದಿ ಅದರ ನಿಜ ಮೌಲ್ಯದ ಮೇಲೆ ಆಗಬೇಕು. ಆದರೆ ಮಾರುಕಟ್ಟೆಗೆ ಪ್ರವೇಶ ಮಾಡುವ ಕೆಲವು ಕಂಪನಿಗಳ ಷೇರು ಬೆಲೆಯನ್ನು ನಿಗದಿ ಮಾಡುವಾಗ ನಿಜವಾದ ಮೌಲ್ಯಕ್ಕಿಂತ ಅಧಿಕವಾದ ಮೌಲ್ಯಮಾಪನ ನಡೆದ ನಿದರ್ಶನ ಇದೆ. ಹಣಕಾಸಿನ ಲೆಕ್ಕಾಚಾರದ ಆಯಾಮದಿಂದ ನೋಡಿದಾಗ ಲಾಭದಲ್ಲಿ ಇಲ್ಲದ, ತೆರಿಗೆ ನಂತರದ ಲಾಭ ನಕಾರಾತ್ಮಕವಾಗಿ ಇರುವ, ನಗದು ಹರಿವಿನ ಕೊರತೆ ಮತ್ತು ನಷ್ಟದ ಇತಿಹಾಸ ಹೊಂದಿರುವ ಕಂಪನಿಗಳ ವಿಚಾರದಲ್ಲಿಯೂ ಅಧಿಕ ಮೌಲ್ಯಮಾಪನ ನಡೆದ ಉದಾಹರಣೆಗಳು ನಮ್ಮಲ್ಲಿ ಇವೆ.

ನನ್ನ ಸ್ನೇಹಿತ ಭಾಸ್ಕರ್ (ಹೆಸರು ಬದಲಾಯಿಸಲಾಗಿದೆ) ಷೇರು ಮಾರುಕಟ್ಟೆ ಹೂಡಿಕೆಗೆ ಹೊಸಬ. ತನ್ನ ಸ್ನೇಹಿತರು ‘ನೈಕಾ ಐಪಿಒದಿಂದ ಲಾಭ ಗಳಿಸಿದೆ, ತತ್ವ ಚಿಂತನ್ ಹೂಡಿಕೆಯಿಂದ ಲಾಭ ಗಳಿಸಿದೆ, ಜೊಮ್ಯಾಟೋದಿಂದ ಲಾಭ ಗಳಿಸಿದೆ’ ಎಂದು ಹೇಳುವುದನ್ನು ಕಳೆದ ಕೆಲವು ತಿಂಗಳಿಂದ ಕೇಳುತ್ತಿದ್ದ. ಆತ ಯಾವ ಕಂಪನಿಗಳ ಪೂರ್ವಾಪರವನ್ನೂ ಗಮನಿಸಲಿಲ್ಲ. ಐಪಿಒ ವೇಳೆ ಹೂಡಿಕೆ ಮಾಡಿ, ಷೇರು ಅಲಾಟ್‌ಮೆಂಟ್ ಆದರೆ ಲಾಭ ಸಿಗುವುದು ಖಚಿತ ಎಂಬ ನಿರ್ಧಾರಕ್ಕೆ ಬಂದುಬಿಟ್ಟ. ಎಲ್ಲ ಕಂಪನಿಗಳ ಐಪಿಒಗಳಲ್ಲಿಯೂ ಹೂಡಿಕೆ ಮಾಡಲು ಶುರು ಮಾಡಿದ. ಒಂದರಲ್ಲಿ ಅಲಾಟ್‌ಮೆಂಟ್ ಸಿಗಲಿಲ್ಲವಾದರೆ ಮತ್ತೊಂದರಲ್ಲಿ, ಅದರಲ್ಲೂ ಸಿಗಲಿಲ್ಲವಾದರೆ ಇನ್ನೊಂದರಲ್ಲಿ ಎನ್ನುವಷ್ಟು ಆಸೆಬುರುಕತನ ಆತನ ತಲೆಗೆ ಹೊಕ್ಕಿತು.

ಈಚೆಗೆ ಒಂದು ಕಂಪನಿಯ ಐಪಿಒ ಸಂದರ್ಭದ ಷೇರು ಹಂಚಿಕೆಯಲ್ಲಿ, ಆತನಿಗೆ ಷೇರುಗಳು ದೊರೆತವು. ಕಂಪನಿಯು ಷೇರು ಮಾರುಕಟ್ಟೆ ಪ್ರವೇಶಿಸಿದ ದಿನ ಭರ್ಜರಿ ಲಾಭ ಸಿಗುತ್ತದೆ ಎಂದು ಆತ ಉತ್ಸಾಹದಲ್ಲಿದ್ದ. ಆದರೆ ನಿರೀಕ್ಷೆ ಸುಳ್ಳಾಯಿತು. ಪ್ರತಿ ಷೇರಿಗೆ ಹಾಕಿದ್ದ ಹಣದಲ್ಲಿ ಒಂದಿಷ್ಟು ಪಾಲು ಕರಗಿಹೋಯಿತು. ಈಗ, ‘ಐಪಿಒ ಹೂಡಿಕೆ ಅಂದರೆ ಲಾಟರಿ ಟಿಕೆಟ್ ಖರೀದಿಸಿಷ್ಟು ಸುಲಭದ ವಹಿವಾಟು ಅಲ್ಲ’ ಎಂದು ಆತನೇ ಹೇಳುತ್ತಿದ್ದಾನೆ!

ನೇರ ತೆರಿಗೆಯ ನಿವ್ವಳ ಸಂಗ್ರಹ ಹೆಚ್ಚಳ

ನವದೆಹಲಿ (ಪಿಟಿಐ): ‘ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ 1ರಿಂದ ನವೆಂಬರ್ 23ರವರೆಗೆ ನೇರ ತೆರಿಗೆಯ ನಿವ್ವಳ ಸಂಗ್ರಹವು ₹ 6.92 ಲಕ್ಷ ಕೋಟಿಗಳಷ್ಟಾಗಿದೆ’ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಸೋಮವಾರ ತಿಳಿಸಿದ್ದಾರೆ.

‘2020–21ನೇ ಹಣಕಾಸು ವರ್ಷದಲ್ಲಿ ₹ 4.12 ಲಕ್ಷ ಕೋಟಿ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 68ರಷ್ಟು ಏರಿಕೆ ಆಗಿದೆ. 2019–20ನೇ ಹಣಕಾಸು ವರ್ಷದಲ್ಲಿ ಸಂಗ್ರಹ ಆಗಿದ್ದ ₹ 5.44 ಲಕ್ಷ ಕೋಟಿಗೆ ಹೋಲಿಸಿದರೆ ಶೇ 27.29ರಷ್ಟು ಹೆಚ್ಚಾಗಿದೆ’ ಎಂದು ಅವರು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

‘ನೇರ ತೆರಿಗೆಯ ಸರಾಸರಿ ಸಂಗ್ರಹವು ₹ 8.15 ಲಕ್ಷ ಕೋಟಿಗಳಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 48.11ರಷ್ಟು ಏರಿಕೆ ಕಂಡುಬಂದಿದೆ.

‘ತೆರಿಗೆ ವಂಚನೆ ಪ್ರಕರಣಗಳು ದೆಹಲಿ ಮತ್ತು ಇತರೆ ಭಾಗಗಳಲ್ಲಿ ಹೆಚ್ಚಾಗುತ್ತಿವೆ ಎನ್ನುವುದಕ್ಕೆ ಯಾವುದೇ ಪುರಾವೆಗಳಿಲ್ಲ. ಆದಾಗ್ಯೂ ದೇಶದಾದ್ಯಂತ ಜಿಎಸ್‌ಟಿ ಮತ್ತು ಕಸ್ಟಮ್ಸ್ ವಂಚನೆ ಪ್ರಕರಣಗಳ ಪತ್ತೆಯಲ್ಲಿ ಹೆಚ್ಚಳ ಆಗಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ್ದಾರೆ.

ರಚಿನ್ ರವೀಂದ್ರ, ಎಜಾಜ್ ಪಟೇಲ್ ದಿಟ್ಟ ಆಟ; ಕೊನೆಯ ಅವಧಿಯಲ್ಲಿ ಕೈಜಾರಿದ ಜಯ

ಮುರಿಯದ 'ಬಾಲ'; ಟೆಸ್ಟ್ ರೋಚಕ ಡ್ರಾ

ಪ್ರಜಾವಾಣಿ ವಾರ್ತೆ

ಕಾನ್ಪುರ: ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳನ್ನು ನಿಯಂತ್ರಿಸಿದ ಭಾರತದ ಬೌಲರ್‌ಗಳನ್ನು ನ್ಯೂಜಿಲೆಂಡ್‌ನ ಬಾಲಂಗೋಚಿಗಳು ಕಾಡಿದರು. 52 ಎಸೆತಗಳನ್ನು ಎದುರಿಸಿ ಕೊನೆಯ ವಿಕೆಟ್ ಉಳಿಸಿಕೊಂಡ ಭಾರತ ಮೂಲದ ರಚಿನ್ ರವೀಂದ್ರ ಮತ್ತು ಎಜಾಜ್ ಪಟೇಲ್ ಅವರ ಛಲದ ಆಟದಿಂದಾಗಿ ಮೊದಲ ಟೆಸ್ಟ್ ಪಂದ್ಯ ಡ್ರಾದಲ್ಲಿ ಮುಕ್ತಾಯಗೊಂಡಿತು.

284 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ನಾಲ್ಕನೇ ದಿನವಾದ ಭಾನುವಾರ ಒಂದು ವಿಕೆಟ್ ಕಳೆದುಕೊಂಡು ನಾಲ್ಕು ರನ್ ಗಳಿಸಿತ್ತು. ಸೋಮವಾರ ಮೊದಲ ಅವಧಿಯಲ್ಲಿ ದಿಟ್ಟ ಆಟವಾಡಿದರೂ ನಂತರ ವಿಕೆಟ್‌ಗಳನ್ನು ಕಳೆದುಕೊಂಡಿತು.

90ನೇ ಓವರ್‌ನಲ್ಲಿ ಒಂಬತ್ತನೇ ವಿಕೆಟ್ ಉರುಳಿಸಿದ ಭಾರತ ಗೆಲುವಿನ ಹೊಸ್ತಿಲಿನಲ್ಲಿತ್ತು. ಆದರೆ ಬೆಳಕಿನ ಅಭಾವದಿಂದ ಅಂಪೈರ್‌ಗಳು ಬೇಲ್ಸ್ ತೆಗೆದಾಗ ನ್ಯೂಜಿಲೆಂಡ್ ಒಂಬತ್ತು ವಿಕೆಟ್‌ಗಳಿಗೆ 165 ರನ್ ಗಳಿಸಿ ನಗೆ ಸೂಸಿತು.

ಎಂಟನೇ ಕ್ರಮಾಂಕದಲ್ಲಿ ಕಣಕ್ಕೆ ಇಳಿದ ರಚಿನ್ ರವೀಂದ್ರ ಪದಾರ್ಪಣೆ ಪಂದ್ಯದಲ್ಲಿ ದಿಟ್ಟ ಆಟವಾಡಿದರು. ಕೊನೆಯ ಕ್ರಮಾಂಕದ ಬ್ಯಾಟ-ರ್‌ಗಳೊಂದಿಗೆ ನಿರ್ಣಾಯಕ ಜೊತೆಯಾಟವಾಡಿ ತಂಡವನ್ನು ಸೋಲಿನ ಸುಳಿಯಿಂದ ರಕ್ಷಿಸಿದರು.

ಭಾನುವಾರ ಕ್ರೀಸ್‌ನಲ್ಲಿ ಉಳಿದಿದ್ದ ಆರಂಭಿಕ ಬ್ಯಾಟರ್ ಟಾಮ್ ಲಥಾಮ್ ಸೋಮವಾರ ಬೆಳಿಗ್ಗೆ ವಿಲಿಯಮ್ ಸೋಮರ್‌ವಿಲ್ ಜೊತೆಗೂಡಿ 76 ರನ್ ಸೇರಿಸಿದರು. ಭೋಜನ ವಿರಾಮದ ವರೆಗೂ ಇವರಿಬ್ಬರು ಭಾರತದ ಬೌಲರ್‌ಗಳನ್ನು ಕಾಡಿದರು. ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದ ಲಥಾಮ್ ಈ ಇನಿಂಗ್ಸ್‌ನಲ್ಲೂ 50ರ ಗಡಿ ದಾಟಿದರು.

ಸೋಮರ್‌ವಿಲ್ ಔಟಾದ ನಂತರ ನಾಯಕ ಕೇನ್ ವಿಲಿಯಮ್ಸನ್ ಜೊತೆಗೂ ಲಥಾಮ್ ಉತ್ತಮ ಆಟ ಮೂಡಿಬಂತು. ಲಥಾಮ್ ಮರಳಿದ ನಂತರ ಅನುಭವಿ ರಾಸ್ ಟೇಲರ್ ಮತ್ತು ಹೆನ್ರಿ ನಿಕೋಲ್ಸ್ ವಿಕೆಟ್‌ಗಳು ಬೇಗನೇ ಉರುಳಿದವು. ವಿಲಿಯಮ್ಸನ್ ಮತ್ತು ಬ್ಲಂಡೆಲ್ ವಿಕೆಟ್ ಕೂಡ ಕಬಳಿಸಿದಾಗ ಭಾರತದ ಭರವಸೆ ಹೆಚ್ಚಿತು.

ಆದರೆ ಎಡಗೈ ಬ್ಯಾಟರ್ ರಚಿನ್ ರವೀಂದ್ರ ವೇಗಿ ಕೈಲ್ ಜೆಮೀಸನ್ ಜೊತೆಗೂಡಿ 46 ಎಸೆತಗಳ ಕಾಲ ಬ್ಯಾಟಿಂಗ್ ಮಾಡಿ ನಿರೀಕ್ಷೆ ಮೂಡಿಸಿದರು. ಕಾಡಿದ ಮಂದ ಬೆಳಕಿನ ನಡುವೆಯೇ ಕೊನೆಯ ವಿಕೆಟ್ ಉರುಳಿಸಲು ನಡೆಸಿದ ಭಾರತದ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ರಚಿನ್ ಬೆಂಗಳೂರಿನ ಹುಡುಗ

ಪಂದ್ಯ ಡ್ರಾ ಮಾಡಿಕೊಳ್ಳಲು ನ್ಯೂಜಿಲೆಂಡ್‌ಗೆ ನೆರವಾದ ರಚಿನ್ ರವೀಂದ್ರ ಅವರ ಮೂಲ ಬೆಂಗಳೂರು. ಅವರೊಂದಿಗೆ ಮುರಿಯದ ಕೊನೆಯ ವಿಕೆಟ್‌ಗೆ ಅಮೋಘ ಜೊತೆಯಾಟವಾಡಿದ ಎಜಾಜ್ ಪಟೇಲ್ ಮುಂಬೈ ಮೂಲದವರು.

ಇವರಿಬ್ಬರ ಬಗ್ಗೆ ಮೆಚ್ಚುಗೆಯ ಮಾತನಾಡಿದ ರವಿಚಂದ್ರನ್ ಅಶ್ವಿನ್ 'ಕೊನೆಯ ಅವಧಿಯಲ್ಲಿ, ಪಂದ್ಯದ ಕೊನೆಯ ವರೆಗೂ ದಿಟ್ಟವಾಡಿ ಆಡಿದ ರಚಿನ್ ಮತ್ತು ಎಜಾಜ್ ಅತ್ಯುತ್ತಮ ಕ್ರಿಕೆಟ್ ಪ್ರದರ್ಶಿಸಿದರು' ಎಂದರು.

ಟೆಸ್ಟ್ ಕ್ರಿಕೆಟ್ ವಿಶಿಷ್ಟವಾದದ್ದು. ಇಲ್ಲಿ ಕೇವಲ ನಿಗದಿತ ಓವರ್‌ಗಳ ಬೌಲಿಂಗ್ ಅಥವಾ ಬ್ಯಾಟಿಂಗ್ ಮಾತ್ರ ಇರುವುದಿಲ್ಲ. ಪ್ರತಿ ದಿನವೂ ಸವಾಲಿನದ್ದಾಗಿರು-ತ್ತದೆ. ಏಳು ಬೀಳುಗಳ ನಂತರ ಕೊನೆಗೆ ಕ್ರಿಕೆಟ್‌ನ ಸೊಗಸು ಉಳಿಯುತ್ತದೆ' ಎಂದು ಅಶ್ವಿನ್ ಹೇಳಿದರು.



18 ರನ್
91 ಎಸೆತ
2 ಬೌಂಡರಿ
91 ನಿಮಿಷ

ರಚಿನ್ ರವೀಂದ್ರ ಬ್ಯಾಟಿಂಗ್ ಶೈಲಿ —ಪಿಟಿಐ ಚಿತ್ರ

ಹರಭಜನ್ ಹಿಂದಿಕ್ಕಿದ ಅಶ್ವಿನ್



ಅಶ್ವಿನ್

ಅರ್ಧಶತಕ ಗಳಿಸಿದ ಎಡಗೈ ಬ್ಯಾಟರ್ ಟಾಮ್ ಲಥಾಮ್ ವಿಕೆಟ್ ಉರುಳಿಸುವ ಮೂಲಕ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ಪರ ಅತಿಹೆಚ್ಚು ವಿಕೆಟ್ ಗಳಿಸಿದ ಮೂರನೇ ಬೌಲರ್ ಎನಿಸಿಕೊಂಡರು. ಲಥಾಮ್ ವಿಕೆಟ್ ಗಳಿಸಿದ ಅಶ್ವಿನ್ ಅವರು ಹರಭಜನ್ ಸಿಂಗ್ ಸಾಧನೆಯನ್ನು ಹಿಂದಿಕ್ಕಿದರು.

ಟಾಮ್ ಬ್ಲಂಡೆಲ್ ವಿಕೆಟ್ ಕೂಡ ಅಶ್ವಿನ್ ಪಾಲಾಯಿತು. ಹೆಚ್ಚು ವಿಕೆಟ್ ಗಳಿಸಿದವರ ಪಟ್ಟಿಯಲ್ಲಿ ಅನಿಲ್ ಕುಂಬ್ಳೆ ಮೊದಲ ಸ್ಥಾನದಲ್ಲಿದ್ದಾರೆ.

ಹೆಚ್ಚು ವಿಕೆಟ್ ಗಳಿಸಿದ ಭಾರತದ ಬೌಲರ್‌ಗಳು

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ*	ಶ್ರೇಷ್ಠ**	10 ವಿಕೆಟ್	5 ವಿಕೆಟ್
ಅನಿಲ್ ಕುಂಬ್ಳೆ	132	619	74ಕ್ಕೆ10	149ಕ್ಕೆ14	8	35
ಕಪಿಲ್ ದೇವ್	131	434	83ಕ್ಕೆ9	146ಕ್ಕೆ11	2	23
ರವಿಚಂದ್ರನ್ ಅಶ್ವಿನ್	80	419	59ಕ್ಕೆ7	140ಕ್ಕೆ13	7	30
ಹರಭಜನ್ ಸಿಂಗ್	103	417	84ಕ್ಕೆ8	217ಕ್ಕೆ15	5	25
ಇಶಾಂತ್ ಶರ್ಮಾ	105	311	74ಕ್ಕೆ7	108ಕ್ಕೆ10	1	11

* ಇನಿಂಗ್ಸ್‌ನಲ್ಲಿ ** ಪಂದ್ಯದಲ್ಲಿ

ಟೆಸ್ಟ್ ಕ್ರಿಕೆಟ್‌ನಲ್ಲಿ ಗರಿಷ್ಠ ವಿಕೆಟ್ ಗಳಿಸಿದವರು

ಬೌಲರ್	ದೇಶ	ಪಂದ್ಯ	ವಿಕೆಟ್
ಮುತ್ತಯ್ಯ ಮುರಳೀಧರನ್	ಶ್ರೀಲಂಕಾ	133	800
ಶೇನ್ ವಾರ್ನ್	ಆಸ್ಟ್ರೇಲಿಯಾ	145	708
ಜೇಮ್ಸ್ ಆ್ಯಂಡರ್ಸನ್	ಇಂಗ್ಲೆಂಡ್	166	632
ಅನಿಲ್ ಕುಂಬ್ಳೆ	ಭಾರತ	132	619
ಗ್ಲೆನ್ ಮೆಗ್ರಾ	ಆಸ್ಟ್ರೇಲಿಯಾ	124	563

ಕ್ರೀಡಾಂಗಣ ಸಿಬ್ಬಂದಿಗೆ ರಾಹುಲ್ ಕೊಡುಗೆ

ಐದೂ ದಿನ ಅತ್ಯುತ್ತಮ ಕ್ರಿಕೆಟ್‌ಗೆ ನೆರವಾದ ಸ್ಪರ್ಧಾತ್ಮಕ ಪಿಚ್ ಸಿದ್ಧಪಡಿಸಿದ ಕ್ರೀಡಾಂಗಣದ ಸಿಬ್ಬಂದಿಗೆ ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರು ₹ 35,000 ಕೊಡುಗೆಯಾಗಿ ನೀಡಿದ್ದಾರೆ. ಶಿವಕುಮಾರ್ ನೇತೃತ್ವದ ಸಿಬ್ಬಂದಿಗೆ ಮೊತ್ತ ನೀಡಲು ದ್ರಾವಿಡ್ ಮುಂದಾಗಿರುವ ವಿಷಯವನ್ನು ಪ್ರೆಸ್ ಬಾಕ್ಸ್‌ನಲ್ಲಿ ಉತ್ತರಪ್ರದೇಶ ಕ್ರಿಕೆಟ್ ಸಂಸ್ಥೆಯ ಪ್ರತಿನಿಧಿ ಘೋಷಿಸಿದರು.

ಎಜಾಜ್ ಪಟೇಲ್ —ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 345 (111.1 ಓವರ್)
ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 296 (142.3 ಓವರ್)
ಭಾರತ ಎರಡನೇ ಇನಿಂಗ್ಸ್ 7ಕ್ಕೆ 234 ಡಿಕ್ಲೇರ್ (81 ಓವರ್)
ನ್ಯೂಜಿಲೆಂಡ್ ಎರಡನೇ ಇನಿಂಗ್ಸ್ 9ಕ್ಕೆ 165 (98 ಓವರ್)
(ಭಾನುವಾರ 4 ಓವರ್‌ಗಳಲ್ಲಿ 1ಕ್ಕೆ 4)
ಲಥಾಮ್ ಬಿ ಅಶ್ವಿನ್ 52 (146 ಎ, 4x3), ಸೋಮರ್‌ವಿಲ್ ಸಿ ಶುಭಮನ್ ಬಿ ಯಾದವ್ 36 (110 ಎ, 4x5), ವಿಲಿಯಮ್ಸನ್ ಎಲ್‌ಬಿಡಬ್ಲ್ಯು ಬಿ ಜಡೇಜ 24 (112 ಎ, 4x3), ರಾಸ್ ಟೇಲರ್ ಎಲ್‌ಬಿಡಬ್ಲ್ಯು ಬಿ ಜಡೇಜ 2 (24 ಎ), ನಿಕೋಲ್ಸ್ ಎಲ್‌ಬಿಡಬ್ಲ್ಯು ಅಕ್ಷರ್ 1 (4 ಎ), ಬ್ಲಂಡೆಲ್ ಬಿ ಅಶ್ವಿನ್ 2 (38), ರವೀಂದ್ರ ಔಟಾಗದೆ 18 (91 ಎ, 4x2), ಜೆಮೀಸನ್ ಎಲ್‌ಬಿಡಬ್ಲ್ಯು ಬಿ ಜಡೇಜ 5 (30 ಎ), ಸೌಥಿ ಎಲ್‌ಬಿಡಬ್ಲ್ಯು ಬಿ ಜಡೇಜ 4 (8 ಎ, 4x1) ಎಜಾಜ್ ಪಟೇಲ್ ಔಟಾಗದೆ 2 (23 ಎ)
ಇತರೆ (ಬೈ 12, ಲೆಗ್‌ಬೈ 1, ನೋಬಾಲ್ 4) 17
ವಿಕೆಟ್ ಪತನ: 2-79 (ವಿಲಿಯಮ್ ಸೋಮರ್‌ವಿಲ್, 35.1), 3-118 (ಟಾಮ್ ಲಥಾಮ್, 54.2), 4-125 (ರಾಸ್ ಟೇಲರ್, 63.1), 5-126 (ಹೆನ್ರಿ ನಿಕೋಲ್ಸ್, 64.1), 6-128 (ಕೇನ್ ವಿಲಿಯಮ್ಸನ್, 69.1), 7-138 (ಟಾಮ್ ಬ್ಲಂಡೆಲ್, 78.2), 8-147 (ಕೈಲ್ ಜೆಮೀಸನ್, 85.6), 9-155 (ಟಿಮ್ ಸೌಥಿ, 89.2)
ಬೌಲಿಂಗ್: ರವಿಚಂದ್ರನ್ ಅಶ್ವಿನ್ 30-12-35-3, ಅಕ್ಷರ್ ಪಟೇಲ್ 21-12-23-1, ಉಮೇಶ್ ಯಾದವ್ 12-2-34-1, ಇಶಾಂತ್ ಶರ್ಮಾ 7-1-20-0, ರವೀಂದ್ರ ಜಡೇಜ 28-10-40-4

ಫಲಿತಾಂಶ: ಪಂದ್ಯ ಡ್ರಾ

ಫುಟ್‌ಬಾಲ್: ಎಫ್‌ಸಿಬಿಯುಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್ ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯ ಗಳಿಸಿತು.

ಸೋಮವಾರ ನಡೆದ ನಡೆದ ಹಣಾಹಣಿಯಲ್ಲಿ ಬೆಂಗಳೂರು ಯುನೈಟೆಡ್ 4–0ಯಿಂದ ಕೊಡಗು ಎಫ್‌ಸಿಯನ್ನು ಮಣಿಸಿತು. ವಿಜೇತ ತಂಡದ ಪರ ರೊನಾಲ್ಡೊ ಅಗಸ್ಟೊ ಅಂಟೊನೊ (36ನೇ ನಿಮಿಷ), ತೊಕೊಚೊಮ್ ಜೇಮ್ಸ್ ಸಿಂಗ್ (53ನೇ ನಿ.), ಲೂಕಾ ಮ್ಯಾಜೆನ್ (64ನೇ ನಿ.) ಮತ್ತು ಬೆಡೊಶೊವರ್ ಸಿಂಗ್ ಲಾಯಿಶ್ರಾಮ್ (69ನೇ ನಿ.) ಗೋಲ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು 2–2ರಿಂದ ಬೆಂಗಳೂರು ಈಗಲ್ಸ್ ಎಫ್‌ಸಿಯೊಡನೆ ಡ್ರಾ ಸಾಧಿಸಿತು. ಮತ್ತೊಂದು ಪಂದ್ಯದಲ್ಲಿ ಬೆಂಗ ಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವು 1–1ರಿಂದ ಥಾಂಕೊ ಸ್ಟೂಡೆಂಟ್ಸ್ ಯೂನಿಯನ್ ತಂಡದೊಂದಿಗೆ ಸಮಬಲ ಸಾಧಿಸಿತು.

ಬಿಟಿಸಿ ಸ್ಟೂವರ್ಡ್ ಸ್ಥಾನಕ್ಕೆ ಶಾಂತಕುಮಾರ್ ಆಯ್ಕೆ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ)ನ ಸ್ಟೂವರ್ಡ್ ಆಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಮಾತೃಸಂಸ್ಥೆಯಾದ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಅವರು ಆಯ್ಕೆಯಾಗಿ-ದ್ದಾರೆ.

ಸೋಮವಾರ ನಡೆದ ಚುನಾವಣೆಯಲ್ಲಿ ಮೂವರು ಸ್ಟೂವರ್ಡ್ಸ್‌ಗಳ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ನಾಲ್ವರು ಸ್ಪರ್ಧಿಸಿದ್ದರು. 274 ಸದಸ್ಯರು ಮತ ಹಾಕಿದರು. ಅದರಲ್ಲಿ ಅತಿ ಹೆಚ್ಚು ಮತಗಳನ್ನು ಗಳಿಸಿದ ಶಾಂತಕುಮಾರ್ (228) ಪ್ರಥಮ ಸ್ಟೂವರ್ಡ್ ಆಗಿ ಆಯ್ಕೆಯಾದರು. ಅರವಿಂದ್ ರಾಘವನ್ (220) ಮತ್ತು ಎ.ಸಿ. ಸತೀಶಚಂದ್ರ (189) ಅವರೂ ಆಯ್ಕೆಯಾದರು. ಇದೇ ಸಂದರ್ಭದಲ್ಲಿ ವ್ಯವಸ್ಥಾಪಕ ಸಮಿತಿಯ ಇಬ್ಬರು ಸದಸ್ಯರ ಆಯ್ಕೆಗಾಗಿ ಚುನಾವಣೆ ನಡೆಯಿತು. ಅದರಲ್ಲಿ ಅನಿಶ್ ಸೂದ್ ಮತ್ತು ದರ್ಶನ್ ಲೋಕೇಶ್ ಆಯ್ಕೆಯಾದರು ಎಂದು ಬಿಟಿಸಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಆತಂಕದ ನಡುವೆ ಕ್ರಿಕೆಟ್ 'ಟೆಸ್ಟ್'

ಭಾರತ, ದಕ್ಷಿಣ ಆಫ್ರಿಕಾ 'ಎ' ತಂಡಗಳ ನಡುವಿನ ಪಂದ್ಯ

ಬ್ಲೂಮ್‌ಫೌಂಟೇನ್ (ಪಿಟಿಐ): ಕೊರೊನಾ ವೈರಸ್‌ನ ಹೊಸ ತಳಿ ಪತ್ತೆ-ಯಾಗಿರುವುದರ ಆತಂಕದ ನಡುವೆಯೇ ಭಾರತ ಮತ್ತು ದಕ್ಷಿಣ ಆಫ್ರಿಕಾ 'ಎ' ತಂಡಗಳ ನಡುವಿನ 'ಟೆಸ್ಟ್' ಪಂದ್ಯ ಮಂಗಳವಾರದಿಂದ ನಡೆಯಲಿದೆ.

ನಾಲ್ಕು ದಿನಗಳ ಮೊದಲ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತ್ತು. ಓಮೈಕ್ರಾನ್ ತಂದಿರುವ ಆತಂಕದಿಂದಾಗಿ ನೆದರ್ಲೆಂಡ್ಸ್ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಏಕದಿನ ಸರಣಿಯ ಕೊನೆಯ ಎರಡು ಪಂದ್ಯಗಳನ್ನು ರದ್ದುಗೊಳಿಸಲಾಗಿತ್ತು.

ಭಾರತ 'ಎ' ತಂಡದ ಆಟಗಾರರು ಬಯೊಬಬಲ್‌ನಲ್ಲಿದ್ದು ಪಂದ್ಯಕ್ಕೆ ಪ್ರೇಕ್ಷಕರಿಗೆ ಅವಕಾಶ ನೀಡದೇ ಇರಲು ನಿರ್ಧರಿಸಲಾಗಿದೆ. ಇದೆಲ್ಲದರ ನಡುವೆ ಉತ್ತಮ ಆಟವಾಡುವತ್ತ ಗಮನ ನೀಡಲು ಭಾರತ 'ಎ' ತಂಡ ಮುಂದಾಗಬೇಕಿದೆ.ಮೊದಲ ಪಂದ್ಯ ದಲ್ಲಿ ಭಾರತದ ಯುವ ಆಟಗಾರರು ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದ್ದ-ರು. ಅಭಿಮನ್ಯು ಈಶ್ವರನ್ ಅವರು ಅಮೋಘ ಶತಕ ಸಿಡಿಸಿದ್ದರು. ನಾಯಕ ಪ್ರಿಯಾಂಕ್ ಪಾಂಚಾಲ್ 96 ರನ್ ಗಳಿಸಿ 4 ವಿಕೆಟ್‌ಗಳಿಗೆ 308 ರನ್ ಗಳಿಸಲು ನೆರವಾಗಿದ್ದರು. ಆರಂಭಿಕ ಬ್ಯಾಟರ್ ಪೃಥ್ವಿ ಶಾ 48 ರನ್ ಗಳಿಸಿದ್ದರು. ದಕ್ಷಿಣ ಆಫ್ರಿಕಾ 'ಎ' ತಂಡ ಮೊದಲ ಇನಿಂಗ್ಸ್‌ನಲ್ಲಿ 509 ರನ್ ಗಳಿಸಿತ್ತು.

ನವದೀಪ್ ಸೈನಿ, ಅರ್ಜಾನ್ ನಾಗಸ್ವಲ ಮತ್ತು ಉಮ್ರನ್ ಮಲಿಕ್ ಬೌಲಿಂಗ್‌ನಲ್ಲಿ ಮಿಂಚಿದ್ದರು. ಆದರೆ ರಾಹುಲ್ ಚಾಹರ್, ಕೆ.ಗೌತಮ್ ಮತ್ತು ಬಾಬಾ ಅಪರಾಜಿತ್ ಇನ್ನಷ್ಟು ಉತ್ತಮ ಸಾಮರ್ಥ್ಯ ತೋರಬೇಕಾಗಿದೆ. ಪೀಟರ್ ಮಲಾನ್ ಮತ್ತು ಟೋನಿ ಡಿ ಜೋರ್ಜಿ ಅವರನ್ನು ಒಳಗೊಂಡ ದಕ್ಷಿಣ ಆಫ್ರಿಕಾ 'ಎ' ಬ್ಯಾಟಿಂಗ್ ಬಳಗ ಬಲಿಷ್ಠ ವಾಗಿದೆ.

ತಂಡಗಳು: ಭಾರತ 'ಎ': ಪ್ರಿಯಾಂಕ್ ಪಾಂಚಾಲ್ (ನಾಯಕ), ಪೃಥ್ವಿ ಶಾ, ಹನುಮ ವಿಹಾರಿ, ಅರ್ಜಾನ್ ನಾಗಸ್ವಲ, ದೇವದತ್ತ ಪಡಿಕ್ಕಲ್, ಸರ್ಫರಾಜ್ ಖಾನ್, ಅಭಿಮನ್ಯು ಈಶ್ವರನ್, ನವದೀಪ್ ಸೈನಿ, ಕೆ.ಗೌತಮ್, ಬಾಬಾ ಅಪರಾಜಿತ್, ರಾಹುಲ್ ಚಾಹರ್, ಇಶಾನ್ ಪೊರೆಲ್, ಸೌರಭ್ ಕುಮಾರ್, ಉಮ್ರಾನ್ ಮಲಿಕ್, ಉಪೇಂದ್ರ ಯಾದವ್.

ದಕ್ಷಿಣ ಆಫ್ರಿಕಾ 'ಎ': ಪೀಟರ್ ಮಲಾನ್ (ನಾಯಕ), ಡೊಮಿನಿಕ್ ಹೆನ್ರಿಕ್ಸ್, ರೇನಾರ್ಡ್ ವ್ಯಾನ್ ತೊಂಡರ್, ಜೇಸನ್ ಸ್ಮಿತ್, ಟೋನಿ ಡಿ ಜೋರ್ಜಿ, ಸರೆನ್ ಎರ್ವಿ, ಸೆನುರಾನ್ ಮುತುಸಾಮಿ, ಜಾರ್ಜ್ ಲಿಂಡೆ, ಮಾರ್ಕೊ ಜಾನ್ಸೆನ್, ಮಿಗೇಲ್ ಪ್ರಿಟೋರಿಯಸ್, ಸಿನೆತೆಂಬಾ ಕ್ವೆಶಿಲೆ, ಬ್ಯೂರನ್ ಹೆನ್ರಿಕ್ಸ್, ಲುಥೊ ಸಿಪಾಮ್ಲ, ಗ್ಲೆಂಟನ್ ಸ್ಟೂರ್‌ಮನ್.

ಆರಂಭ: ಮಧ್ಯಾಹ್ನ 1.30 (ಭಾರತೀಯ ಕಾಲಮಾನ)

ಪ್ರಿಯಾಂಕ್ ಪಾಂಚಾಲ್

ಸಂಕ್ಷಿಪ್ತ ಸುದ್ದಿ

ಬೈಕ್ ಅಪಘಾತ: ವಾರ್ನ್‌ಗೆ ಗಾಯ

ಶೇನ್ ವಾರ್ನ್ – ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದ ಸ್ಪಿನ್ ಮಾಂತ್ರಿಕ ಶೇನ್ ವಾರ್ನ್ ಅವರು ಬೈಕ್ ಅಪಘಾತದಲ್ಲಿ ಗಾಯಗೊಂಡಿದ್ದು ಮೂಳೆಮುರಿತಕ್ಕೆ ಒಳಗಾಗಿದ್ದಾರೆ. ಈ ಘಟನೆಯಿಂದ ಜರ್ಜರಿತರಾಗಿರುವುದಾಗಿ ಅವರು ತಿಳಿಸಿದ್ದಾರೆ.

52 ವರ್ಷದ ಶೇನ್ ವಾರ್ನ್ ಅವರು ಮಗ ಜಾಕ್ಸನ್‌ನಲ್ಲಿ ಕೂರಿಸಿಕೊಂಡು ಬೈಕ್‌ನಲ್ಲಿ ತೆರ-ಳುತ್ತಿದ್ದಾಗ ಬಿದ್ದಿದ್ದಾರೆ. ಅವರಿಗೆ ಗಂಭೀರ ಗಾಯಗಳಾಗಲಿಲ್ಲ ಎಂದು ಆಸ್ಟ್ರೇಲಿಯಾದ ಮಾಧ್ಯಮಗಳು ವರದಿ ಮಾಡಿದ್ದವು. ಆದರೆ ಸೋಮವಾರ ಬೆಳಿಗ್ಗೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು 'ಗಾಯಗಳಾಗಿದ್ದು ತುಂಬಾ ನೊಂದಿದ್ದೇನೆ' ಎಂದು ಹೇಳಿದ್ದಾರೆ.

ಡಿಸೆಂಬರ್ ಎಂಟರಂದು ಗಾಬಾದಲ್ಲಿ ಆರಂಭವಾಗಲಿರುವ ಆ್ಯಷಸ್ ಸರಣಿಯ ಮೊದಲ ಪಂದ್ಯದಲ್ಲಿ ವೀಕ್ಷಕ ವಿವರಣೆಕಾರನಾಗಿ ವಾರ್ನ್ ಅವರು ಪಾಲ್ಗೊಳ್ಳಬೇಕಾಗಿದೆ.

ಬೆಲಿನೆನ್ಸಸ್ ಆಟಗಾರರಿಗೆ ಓಮೈಕ್ರಾನ್

ಲಿಸ್ಬನ್: ಪೋರ್ಚುಗೀಸ್‌ನ ಬೆಲಿನೆನ್ಸಸ್ ಫುಟ್‌ಬಾಲ್ ಕ್ಲಬ್‌ನ 13 ಆಟಗಾರರಲ್ಲಿ ಕಾಣಿಸಿಕೊಂಡಿರುವ ಕೋವಿಡ್ ಸೋಂಕಿಗೆ ಓಮೈಕ್ರಾನ್ ಕಾರಣವಾ-ಗಿರಬೇಕು ಎಂದು ಶಂಕಿಸಲಾಗಿದೆ. ಸೋಂಕು ಕಾಣಿಸಿಕೊಂಡಿರುವ ಕಾರಣ ಬೆನ್ಫಿಕಾ ಎದುರಿನ ಈ ತಂಡದ ಪಂದ್ಯವನ್ನು ರದ್ದುಗೊಳಿಸಲಾಗಿತ್ತು.

ತಂಡದ ಆಟಗಾರರಲ್ಲಿ ಓಮೈಕ್ರಾನ್ ವೈರಸ್ ಸೋಂಕು ಇರುವ ಸಾಧ್ಯತೆ ಇದೆ ಎಂದು ಪೋರ್ಚುಗಲ್‌ನ ರಾಷ್ಟ್ರೀಯ ಆರೋಗ್ಯ ಸಂಸ್ಥೆ ಸೋಮವಾರ ತಿಳಿಸಿದೆ. ಇದು ಖಚಿತವಾದರೆ ಪೋರ್ಚುಗ-ಲ್‌ನಲ್ಲಿ ಕಾಣಿಸಿಕೊಂಡ ಹೊಸ ತಳಿಯ ಮೊದಲ ಪ್ರಕರಣ ಆಗಲಿದೆ. ಬೆಲಿನೆನ್ಸಸ್ ಕ್ಲಬ್‌ನ ಆಟಗಾರರು ಈಚೆಗೆ ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಂಡಿದ್ದು ಅಲ್ಲಿ ಸೋಂಕು ತಗುಲಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಪೋರ್ಚುಗಲ್ ಲೀಗ್‌ನ ಅಧಿಕಾರಿಗಳು ಭಾನುವಾರ ಸಭೆ ಸೇರಿ ಮುಂದಿನ ಪಂದ್ಯಗಳನ್ನು ನಡೆಸುವುದರ ಬಗ್ಗೆ ಚರ್ಚಿಸಿದ್ದಾರೆ. ಓಮೈಕ್ರಾನ್ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಯುರೋಪ್‌ನಿಂದ ಏಷ್ಯಾ ವರೆಗಿನ ಅನೇಕ ರಾಷ್ಟ್ರಗಳು ದಕ್ಷಿಣ ಆಫ್ರಿಕಾ ಮತ್ತು ನೆರೆಯ ರಾಷ್ಟ್ರಗಳಿಂದ ಪ್ರಯಾ-ಣಿಸುವವರ ಮೇಲೆ ನಿರ್ಬಂಧ ಹೇರಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ಹೈದರಾಬಾದ್ ರೇಸ್

ಬ್ರಿಲಿಯಂಟ್ ವ್ಯೂ ಗೆಲ್ಲುವ ನಿರೀಕ್ಷೆ

ದಿ ಸಲಾರ್ ಜಂಗ್ ಕಪ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಬ್ರಿಲಿಯಂಟ್ ವ್ಯೂ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಟಾರ್ ಕ್ರೂಝ್ 5, ಮೋಸ್ಟ್ ಲವಬಲ್ 1, ಆರ್ಕೇಡಿಯನ್ ಏಂಜೆಲ್ 10
2ನೇ ರೇಸ್: ಎನ್.ಆರ್.ಐ ಸನ್ 2, ಬ್ಲೂಮ್ ಬಡ್ಡಿ 4, ಮೊನಾರ್ಕೋಸ್ 3
3ನೇ ರೇಸ್: ಏರಿಯಲ್ ಕಂಬಾಟ್ 2, ಐಬಾಕ್ 8, ಫ್ಲೈಯಿಂಗ್ ಜೆಟ್ 1
4ನೇ ರೇಸ್: ಬ್ರಿಲಿಯಂಟ್ ವ್ಯೂ 3, ಮೆನಿಲಿ 1, ಡಿಫರೆಂಟ್ 6,
5ನೇ ರೇಸ್: ಮಿಸ್ ಮಾರ್ವೆಲಸ್ 1, ಲೈನ್‌ವಿಲರ್ 3, ಡಿಲ್ಲಾನ್ 11
6ನೇ ರೇಸ್: ಗ್ರೀನ್ ಟರ್ಫ್ 9, ಮೈಂಡ್ ರೀಡರ್ 14, ಎನ್.ಆರ್.ಐ ಎಲಿಗೆನ್ಸ್ 5
7ನೇ ರೇಸ್: ಸಿಲ್ಕ್ 2, ಚಾಲೆಂಜರ್ 8, ಮ್ಯಾಜಿಕ್ ಮಾರ್ಕ್ 4

ಉತ್ತಮ ಬೆಟ್: ಸಿಲ್ಕ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
3,4,5,6,7	1,2,3,4	4,5,6,7

1ನೇ ಟ್ರಿಬಲ್	2ನೇ ಟ್ರಿಬಲ್
2,3,4	5,6,7

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ಚೆನ್ನೈಯಿನ್ ಎಫ್‌ಸಿ ಜಯಭೇರಿ

ಪತೋರ್ಡ (ಪಿಟಿಐ): ಮೊದಲಾರ್ಧ ಮತ್ತು ದ್ವಿತೀಯಾರ್ಧದಲ್ಲಿ ಗಳಿಸಿದ ತಲಾ ಒಂದೊಂದು ಗೋಲಿನ ನೆರವಿನಿಂದ ಚೆನ್ನೈಯಿನ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಅಮೋಘ ಜಯ ಸಾಧಿಸಿತು.

ನಾರ್ತ್ ಈಸ್ಟ್ ಯುನೈಟೆಡ್ ತಂಡದ ಎದುರು ಜವಾಹರ್‌ಲಾಲ್ ನೆಹರು ಕ್ರೀಡಾಂಗಣದಲ್ಲಿ ಸೋಮ ವಾರ ರಾತ್ರಿ ನಡೆದ ಪಂದ್ಯದಲ್ಲಿ ಚೆನ್ನೈಯಿನ್ 2–1ರಲ್ಲಿ ಗೆಲುವು ಸಾಧಿಸಿತು. ಲಾಲಿಯಂಗ್ಜ್ವಾಲ ಚಾಂಗ್ಟೆ ಮತ್ತು ಅನಿರುದ್ಧ ಥಾಪ ಗೆಲುವಿನ ರೂವಾರಿಯಾದರು.

ಮೊದಲಾರ್ಧದ ಮುಕ್ತಾಯಕ್ಕೆ ನಿಮಿಷಗಳು ಇರುವ ವರೆಗೂ ಉಭಯ ತಂಡಗಳಿಗೆ ಯಶಸ್ಸು ಸಿಕ್ಕಿರಲಿಲ್ಲ. 41ನೇ ನಿಮಿಷದಲ್ಲಿ ಲಾಲಿಯಂಗ್ಜ್ವಾಲ ಚಾಂಗ್ಟೆ ಚೆಂಡನ್ನು ಗುರಿ ಮುಟ್ಟಿಸಿ ಚೆನ್ನೈಯಿನ್‌ಗೆ ಮುನ್ನಡೆ ತಂದುಕೊಟ್ಟರು.

ಬಲಭಾಗದಲ್ಲಿ ಚೆಂಡಿನ ಮೇಲೆ ಹಿಡಿತ ಸಾಧಿಸಿದ ಚೆನ್ನೈಯಿನ್ ಆಟಗಾರರು ಮುನ್ನುಗ್ಗುತ್ತಿದ್ದಂತೆ ನಾರ್ತ್ ಈಸ್ಟ್ ಯುನೈಟೆಡ್ ತಂಡದ ಆಟಗಾರ ಅದನ್ನು ಕಸಿದುಕೊಂಡರು. ಆದರೆ ನಂತರ ಆಧಿಪತ್ಯ ಸ್ಥಾಪಿಸಿದ ಚೆನ್ನೈಯಿನ್ ಆಟಗಾರರು ಚೆಂಡನ್ನು ಚಾಂಗ್ಟೆ ಬಳಿಗೆ ಅಟ್ಟಿದರು. ಅವರು ಮೋಹಕವಾಗಿ ಅದನ್ನು ಗುರಿಮುಟ್ಟಿಸಿದರು.

ವಿರಾಮದ ನಂತರವೂ ಉಭಯ ತಂಡಗಳ ಆಟಗಾರರು ಉತ್ತಮ ಹೋರಾಟ ತೋರಿದರು. 50ನೇ ನಿಮಿಷದಲ್ಲಿ ಸುಹೇರ್ ಗಳಿಸಿದ ಗೋಲಿನೊಂದಿಗೆ ನಾರ್ತ್ ಈಸ್ಟ್ ಯುನೈಟೆಡ್ ಸಮಬಲ ಸಾಧಿಸಿತು. 74ನೇ ನಿಮಿಷದಲ್ಲಿ ರಹೀಮ್ ಅಲಿ ನೀಡಿದ ಪಾಸ್‌ನಲ್ಲಿ ನಾಯಕ ಅನಿರುದ್ಧ ಥಾಪ ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದರು.

ಈಸ್ಟ್ ಬೆಂಗಾಲ್‌ಗೆ ಜಯದ ಹಂಬಲ: ವಾಸ್ಕೊದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಎಸ್‌ಸಿ ಈಸ್ಟ್ ಬೆಂಗಾಲ್ ಮತ್ತು ಒಡಿಶಾ ಎಫ್‌ಸಿ ತಂಡಗಳು ಸೆಣಸಲಿವೆ. ಎಸ್‌ಸಿ ಈಸ್ಟ್ ಬೆಂಗಾಲ್ ಈ ಆವೃತ್ತಿಯಲ್ಲಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿದೆ. ಸಾಂಪ್ರದಾಯಿಕ ಎದುರಾಳಿ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ವಿರುದ್ಧ ಕಣಕ್ಕಿಳಿದಿದ್ದ ಮೊದಲ ಹಣಾಹಣಿಯಲ್ಲಿ ಈಸ್ಟ್ ಬೆಂಗಾಲ್ ನಿರಾಸೆ ಅನುಭವಿಸಿದ್ದು, ಈ ಪಂದ್ಯದಲ್ಲಿ ಪುಟಿದೇಳುವ ವಿಶ್ವಾಸದಲ್ಲಿದೆ.

ಮೊದಲ ಪಂದ್ಯದಲ್ಲಿ 3–1ರಿಂದ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿರುವ ಒಡಿಶಾ ಅದೇ ಲಯವನ್ನು ಮುಂದುವರಿಸುವ ತವಕದಲ್ಲಿದೆ.

ಎಟಿಕೆಎಂಬಿ ಎದುರಿನ ಪಂದ್ಯದಲ್ಲಿ ಗಾಯಗೊಂಡಿದ್ದ ಈಸ್ಟ್ ಬೆಂಗಾಲ್ ನಾಯಕ ಅರಿಂದಮ್ ಭಟ್ಟಾಚಾರ್ಯ ಈ ಪಂದ್ಯದಲ್ಲಿ ಆಡುವ ಸಾಧ್ಯತೆಯಿಲ್ಲ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್